ವಿಶ್ವವಾಣಿ

ವಿಶ್ವಾಸವೇ ವಿಶ್ವ

ಅಂಕಪಟ್ಟಿಯಲ್ಲಿ ಆರ್‌ಸಿಬಿ ಟಾಪರ್

ಪಂಜಾಬ್ ವಿರುದ್ಧ ಭರ್ಜರಿ ಬ್ಯಾಟಿಂಗ್ ಹಾಗೂ ಬೌಲಿಂಗ್ ಮೂಲಕ 23 ರನ್‌ಗಳ ಜಯ ಸಾಧಿಸುವ ಮೂಲಕ ಆರ್‌ಸಿಬಿ ಪ್ಲೇ ಆಫ್‌ಗೆ ಕ್ವಾಲಿಫೈ ಆಗುವುದಷ್ಟೇ ಅಲ್ಲದೇ, ಅಂಕಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿಯೇ ಮುಂದುವರಿದಿದೆ. ಟೇಬಲ್ ಟಾಪರ್ ಆಗಿಯೇ ಲೀಗ್ ಹಂತವನ್ನು ಆರ್‌ಸಿಬಿ ಮುಗಿಸುವ ಸಾಧ್ಯತೆಯಿದೆ.

ತನಿಖೆಯ ಸಂಪೂರ್ಣ ವರದಿ ಪಡೆದ ಸಿಐಡಿ ಡಿಐಜಿಪಿ ಭೀಮಾಶಂಕರ ಗುಳೇದ್ | ಇಂದು ಕೋರ್ಟ್‌ಗೆ ವರದಿ

ಶಿವಾನಂದ ನೀಲಣ್ಣನವರ ಪ್ರಕರಣ ಸಿಐಡಿ ಹೆಗಲಿಗೆ

ಬೆಳಗಾವಿ: ಕಾನೂನು ಉಲ್ಲಂಘಿಸಿ ಸಾವಿರಾರು ಕೋಟಿ ರು. ಹಣ ಹೂಡಿಕೆ ಮಾಡಿಸಿಕೊಂಡ ಆರೋಪದ ಮೇಲೆ ಬಂಧನಕ್ಕೆ ಒಳಗಾಗಿರುವ ಶಿವಂ ಅಸೋಸಿಯೇಟ್ಸ್ ಮಾಲೀಕ ಶಿವಾನಂದ ನೀಲಣ್ಣನವರ ಪ್ರಕರಣದ ಹೆಚ್ಚಿನ ತನಿಖೆಯ ಹೊಣೆಯನ್ನು ರಾಜ್ಯ ಸರಕಾರ ಸಿಐಡಿಗೆ ವಹಿಸಿದೆ. ಕಳೆದ ಮೂರು ದಿನಗಳಿಂದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ದಾಖಲೆ ಕಲೆ ಹಾಕುತ್ತಿದ್ದು, ಹೆಚ್ಚಿನ ವಿಚಾರಣೆಗಾಗಿ ಆರೋಪಿಯನ್ನು ವಶಕ್ಕೆ ಪಡೆಯಲು ಸಿಐಡಿ ಸಿದ್ಧತೆ ನಡೆಸಿದೆ.

ಭಾನುವಾರ ಸಿಐಡಿ ಡಿಐಜಿಪಿ ಭೀಮಾಶಂಕರ ಗುಳೇದ್ ಬೆಳಗಾವಿಗೆ ಆಗಮಿಸಿ ಅಧಿಕಾರಿಗಳ ಜತೆ ಮಾತುಕತೆ ನಡೆಸಿದರು. ಈ ವೇಳೆ ಕಳೆದ ಮೂರು ದಿನಗಳಿಂದ ಬೆಳಗಾವಿ ಉಪವಿಭಾಗಾಧಿಕಾರಿ ನೇತೃತ್ವದಲ್ಲಿ ನಡೆದ ತನಿಖೆಯ ಸಂಪೂರ್ಣ ವರದಿಯನ್ನು ಸಿಐಡಿ ಅಧಿಕಾರಿಗಳಿಗೆ ಹಸ್ತಾಂತರ ಮಾಡಲಾಯಿತು. ಈ ಸಂದರ್ಭದಲ್ಲಿ ಶಿವಾನಂದ ನೀಲಣ್ಣನವರಗೆ ಸಂಬಂಧಿಸಿದ ಕೋಟ್ಯಂತರ ಮೌಲ್ಯದ ಬಾಂಡ್ ಪೇಪರ್, ನಕಲಿ ಚೆಕ್ ಸೇರಿದಂತೆ ಮಹತ್ವದ ದಾಖಲೆಗಳು ಸಿಐಡಿ ಕೈಸೇರಿವೆ. ಹೆಚ್ಚಿನ ತನಿಖೆ ಹಿನ್ನೆಲೆಯಲ್ಲಿ ಶಿವಾನಂದ ನೀಲಣ್ಣನವರನ್ನು ವಶಕ್ಕೆ ಪಡೆಯಲು ಸಿಐಡಿ ಚಿಂತನೆ ನಡೆಸಿದ್ದು, ಸೋಮವಾರ ನ್ಯಾಯಾಲಯಕ್ಕೆ ವರದಿ ಸಲ್ಲಿಸಲು ಸಿದ್ಧತೆ ಮಾಡಿಕೊಂಡಿದೆ.

ಠೇವಣಿದಾರರಿಂದ ದಾಖಲಾಗದ ಪ್ರಕರಣ: ಈವರೆಗೆ ಯಾವೊಬ್ಬ ಠೇವಣಿದಾರರೂ ಶಿವಾನಂದ ನೀಲಣ್ಣನವರನಿಂದ ನನಗೆ ಮೋಸವಾಗಿದೆ ಎಂದು ಹೇಳಿಕೆ ನೀಡಿಲ್ಲ. ಜತೆಗೆ, ದೂರು ದಾಖಲಿಸಲು ಮುಂದಾಗಿಲ್ಲ. ಎಲ್ಲಿ ತಾವು ದೂರು ದಾಖಲಿಸಿದರೆ ಶಿವಾನಂದ ನೀಲಣ್ಣನವರ ಹೊರಗೆ ಬರುವುದು ಕಷ್ಟ ಆಗಬಹುದು, ಆಗ ನಮ್ಮ ಹಣ ಮರಳಿ ಬರದ ಪರಿಸ್ಥಿತಿ ಬರಬಹುದು ಎಂಬ ಕಾರಣಕ್ಕೆ ಠೇವಣಿ ದಾರರು ಪ್ರಕರಣ ದಾಖಲಿಸಲು ಹಿಂದೇಟು ಹಾಕುತ್ತಿದ್ದಾರೆ ಎನ್ನಲಾಗಿದೆ. ಹೀಗಾಗಿ ಜಿಲ್ಲಾಡಳಿತ ಸ್ವಯಂಪ್ರೇರಿತ ದೂರು ದಾಖಲಿಸಿ ವಿಚಾರಣೆ ನಡೆಸಿದ್ದು, ಸದ್ಯ ಮಾಳಮಾರುತಿ ಪೊಲೀಸ್ ಠಾಣೆಯಲ್ಲಿ ಶಿವಾನಂದ ನೀಲಣ್ಣನವರನ್ನು ಬಂಧಿಸಿಡಲಾಗಿದೆ.

ಪ್ರತಿ ತಿಂಗಳು 70 ಕೋಟಿ ರು. ಬಡ್ಡಿ ಸಂದಾಯ: ಶಿವಾನಂದ ನೀಲಣ್ಣನವರಗೆ ಸಂಬಂಧಿಸಿದ ಬ್ಯಾಂಕ್ ಖಾತೆಗಳ ಪರಿಶೀಲನೆ ನಡೆಸಲಾಗಿದ್ದು, ಮೂರು ಖಾಸಗಿ ಬ್ಯಾಂಕ್‌ಗಳಲ್ಲಿ ಹೊಂದಿರುವ ಖಾತೆಯಲ್ಲಿ ಕೋಟ್ಯಂತರ ರು. ವ್ಯವಹಾರ ನಡೆದಿದೆ ಎಂದು ತಿಳಿದುಬಂದಿದೆ. ಇದೇ ಅಕೌಂಟ್‌ನಿಂದ ಪ್ರತಿ ತಿಂಗಳೂ ಠೇವಣಿದಾರರಿಗೆ 70 ಕೋಟಿ ರು. ಸಂದಾಯ ಮಾಡುತ್ತಿರುವುದು ತನಿಖೆಯಿಂದ ತಿಳಿದುಬಂದಿದೆ. ಸಾಲದ ರೂಪದಲ್ಲಿ ಪಡೆದ ಕೋಟ್ಯಂತರ ರು. ಠೇವಣಿ ಹಣವನ್ನು ವಿವಿಧ ವ್ಯವಹಾರಗಳಲ್ಲಿ ತೊಡಗಿಸಿದ್ದು, ಇದರಿಂದ ಬರುವ ಹಣದಲ್ಲಿ ಪಾವತಿಸುತ್ತಿದ್ದ ಎಂಬ ಅಂಶ ಬೆಳಕಿಗೆ ಬಂದಿದೆ. ಈ ಪ್ರಮಾಣದಲ್ಲಿ ವ್ಯವಹಾರ ನಡೆದರೂ ಬ್ಯಾಂಕ್ ಅಧಿಕಾರಿಗಳು ಗಮನಿಸದಿರುವುದು ಹಲವು ಅನುಮಾನ ಹುಟ್ಟುಹಾಕಿದೆ.

ಸಾಲದ ರೂಪದಲ್ಲಿ ಹಣ ಪಡೆದ ಚಾಣಾಕ್ಷ

ಆರ್‌ಬಿಐ ನಿಯಮ ಮೀರಿ ಠೇವಣಿ ಹಣ ಸಂಗ್ರಹ ಮಾಡಿದ್ದಾರೆ ಎಂಬ ಆರೋಪ ಬಿಟ್ಟರೆ ಈವರೆಗೆ ಶಿವಾನಂದ ನೀಲಣ್ಣನವರ ಮೇಲೆ ಯಾವುದೇ ವಂಚನೆ ಪ್ರಕರಣಗಳೂ ಹೊರಗಿನಿಂದ ದಾಖಲಾ ಗಿಲ್ಲ. ಇನ್ನೊಂದು ವಿಶೇಷ ಏನೆಂದರೆ ಶಿವಾನಂದ ನೀಲಣ್ಣನವರ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹಣ ಪಡೆದಿದ್ದು ಸಾಲದ ರೂಪದಲ್ಲಿ. ಹಾಗಾಗಿಯೇ ಸ್ವಯಂಪ್ರೇರಿತ ದೂರು ದಾಖಲಿಸಿ ತನಿಖೆ ಕೈಗೊಂಡಿರುವ ಅಧಿಕಾರಿಗಳಿಗೆ ನ್ಯಾಯಾಲಯದಲ್ಲಿ ಈ ಪ್ರಕರಣವನ್ನು ತೆಗೆದುಕೊಂಡು ಹೋಗುವುದು ಸವಾಲಿನ ಕೆಲಸ.

ಶಿವಂ ಅಸೋಸಿಯೇಟ್ಸ್ ಸಂಸ್ಥೆಯ ಬಹುಕೋಟಿ ವಂಚನೆ ಪ್ರಕರಣಕ್ಕೂ ರಾಜಕೀಯಕ್ಕೂ ಯಾವುದೇ ಸಂಬಂಧವಿಲ್ಲ. ಇದು ಸಂಪೂರ್ಣವಾಗಿ ಸಾರ್ವಜನಿಕರ ಹಣಕಾಸು ವಂಚನೆಗೆ ಸಂಬಂಧಿ ಸಿದ ವಿಷಯವಾಗಿದೆ. ಕಾನೂನುಬಾಹಿರವಾಗಿ ಹಣ ಸಂಗ್ರಹಿಸಿ ಸಾರ್ವಜನಿಕರಿಗೆ ಮೋಸ ಮಾಡಿ ರುವ ಹಿನ್ನೆಲೆಯಲ್ಲಿ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

-ಸತೀಶ್ ಜಾರಕಿಹೊಳಿ ಬೆಳಗಾವಿ ಉಸ್ತುವಾರಿ ಸಚಿವ

- ತನಿಖೆ ವೇಳೆ ದೊರೆತಿರುವ ಕೋಟ್ಯಂತರ ಮೌಲ್ಯದ ಬಾಂಡ್ ಪೇಪರ್, ನಕಲಿ ಚೆಕ್ ಸೇರಿದಂತೆ ಮಹತ್ವದ ದಾಖಲೆಗಳು ವಶ
- ತಮ್ಮ ದುಡ್ಡು ವಾಪಸ್ ಬರುವುದಿಲ್ಲ ಎಂಬ ಆತಂಕದಿಂದ ದೂರು ಕೊಡಲು ಹಿಂದೇಟು ಹಾಕುತ್ತಿರುವ ಠೇವಣಿದಾರರು
- ದೊಡ್ಡ ಪ್ರಮಾಣದಲ್ಲಿ ವ್ಯವಹಾರ ನಡೆದರೂ ಬ್ಯಾಂಕ್ ಅಧಿಕಾರಿಗಳು ಗಮನಿಸದಿರುವುದು ಹಲವು ಅನುಮಾನ ಹುಟ್ಟುಹಾಕಿದೆ

ಆಲ್ಕೋಹಾಲ್ ಆಧಾರಿತ ತೆರಿಗೆ ಅಧಿಕೃತ ಜಾರಿ ಬಿಯರ್ ಮೇಲಿರುವ ದರ ಗಣನೀಯ ಇಳಿಕೆ

ಕಿಕ್ ಹೆಚ್ಚಾದಷ್ಟು ರೊಕ್ಕ ಹೆಚ್ಚು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಸರಕಾರರವು ಮದ್ಯ ತೆರಿಗೆ ವ್ಯವಸ್ಥೆಯಲ್ಲಿ ಐತಿಹಾಸಿಕ ಬದಲಾವಣೆ ಮಾಡಿದ್ದು, ಜಾಗತಿಕ ಮಟ್ಟದಲ್ಲಿ ಮಾನ್ಯತೆ ಪಡೆದಿರುವ ಆಲ್ಕೋಹಾಲ್-ಇನ್-ಬೆವರೇಜ್ (ಎಐಬಿ) ಆಧಾರಿತ ಅಬಕಾರಿ ಸುಂಕ ವ್ಯವಸ್ಥೆಯನ್ನು ಜಾರಿಗೆ ತಂದ ದೇಶದ ಮೊದಲ ರಾಜ್ಯವಾಗಿ ಕರ್ನಾಟಕ ಹೊರಹೊಮ್ಮಿದೆ. ಈ ಮೂಲಕ ಎಣ್ಣೆಯ ಕಿಕ್ಕು ಹೆಚ್ಚಾದಷ್ಟು ತೆರಿಗೆ ಬಿಸಿ ಹೆಚ್ಚಾಗುವುದು ಖಚಿತವಾಗಿದೆ.

ಹೊಸ ನೀತಿಯಲ್ಲಿ ಸರಕಾರದ ನೇರ ಬೆಲೆ ನಿಗದಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ರದ್ದುಪಡಿಸ ಲಾಗಿದೆ. ಮಾರುಕಟ್ಟೆಯ ಪರಿಸ್ಥಿತಿಯನ್ನು ಆಧರಿಸಿ ಉತ್ಪನ್ನಗಳನ್ನು ಯಾವ ದರದ ವಿಭಾಗದಲ್ಲಿ ಇರಿಸ ಬೇಕು ಎಂಬುದನ್ನು ಉತ್ಪಾದಕರಿಗೆ ಬಿಡಲಾಗಿದೆ. 2026ರ ಮೇ 8ರಂದು ಹೊರಡಿಸಿದ ಸರಕಾರಿ ಅಧಿಸೂಚನೆಯ ಪ್ರಕಾರ, ಇಂಡಿಯನ್ ಮೇಡ್ ಲಿಕ್ಕರ್ ವಿಭಾಗಗಳನ್ನು ಹಿಂದಿನ 16 ಹಂತಗಳಿಂದ ಎಂಟು ಹಂತಗಳಿಗೆ ಇಳಿಸಿ ಸರಳೀಕರಿಸಲಾಗಿದೆ.

ಅಬಕಾರಿ ಇಲಾಖೆ ಪ್ರಕಾರ, ಗ್ರಾಹಕರಿಗೆ ಕಡಿಮೆ ದರದಲ್ಲಿ ಮದ್ಯ ಲಭ್ಯವಾಗುವಂತೆ ಹಾಗೂ ನೆರೆಯ ರಾಜ್ಯಗಳಾದ ತಮಿಳುನಾಡು, ಆಂಧ್ರ ಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಮತ್ತು ಕೇರ ಳದ ದರಗಳಿಗೆ ಸಮಾನ ಅಥವಾ ಕಡಿಮೆ ಮಟ್ಟದಲ್ಲಿ ಇರಿಸಲು ಮರುಸಂರಚನೆ ಮಾಡಲಾಗಿದೆ. ಪರಿಷ್ಕೃತ ದರಗಳಲ್ಲಿ ಜನಪ್ರಿಯ ಇಂಡಿಯನ್ ಮೇಡ್ ಲಿಕ್ಕರ್ ಬ್ರ್ಯಾಂಡ್‌ಗಳು ಮತ್ತು ಬಿಯರ್ ಬ್ರ್ಯಾಂಡ್‌ಗಳ ದರಗಳನ್ನು ಒಳಗೊಂಡಿದ್ದು, ಅವುಗಳ ಪ್ಯಾಕ್ ಗಾತ್ರ, ಮದ್ಯಾಂಶದ ಪ್ರಮಾಣ ಮತ್ತು ಸ್ಲ್ಯಾಬ್ ವ್ಯವಸ್ಥೆಯ ಆಧಾರದ ಮೇಲೆ ದರಗಳು ಬದಲಾಗಲಿವೆ.

→ 4

ಪ್ರಮುಖ ಬಿಯರ್ ದರಗಳು

ಬಿಯರ್‌ಗಳು	ಕಿಂಗ್ ಫಿಷರ್ ಪ್ರೀ	ಕಿಂಗ್ಫಿಷರ್ ಸ್ಟ್ರಾ	ಬಡ್ವೈಸರ್
330 ಎಂಎಲ್	60 ರು.	100 ರು.	145 ರು.
650 ಎಂಎಲ್	110 ರು.	180 ರು.	250 ರು.
ಹೈನಿಕೆನ್ ಲಾಗರ್	ಟ್ಯೂಬಾರ್ಗ್ ಸ್ಟ್ರಾಂಗ್	ಕೊರೊನಾ ಎಕ್ಸ್ಟ್ರಾ	ಹೇವರ್ಡ್ಸ್ 5000
120 ರು.	120 ರು.	130 ರು.	70 ರು.
200 ರು.	170 ರು.	170 ರು.	135 ರು.
			ಬ್ಲಾಕ್ ಫೋರ್ಟ್
			85 ರು.
			130 ರು.



ಪ್ರೀಮಿಯಂ ಮದ್ಯ ಮಾರಾಟಕ್ಕೆ ಒತ್ತು

ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಯ ಮದ್ಯದ ಮಾರಾಟ ಪ್ರಮಾಣ ಶೇ.90ರಷ್ಟಿದ್ದರೆ ದುಬಾರಿ ಬೆಲೆಯ ಪ್ರೀಮಿಯಂ ಬ್ರ್ಯಾಂಡ್ ಲಿಕ್ಕರ್ ಪ್ರಮಾಣ ಕೇವಲ ಶೇ.10ರಷ್ಟಿದೆ. ಮದ್ಯ ಮಾರಾಟ ತೆರಿಗೆ ಹಾಗೂ ಹೆಚ್ಚುವರಿ ತೆರಿಗೆಗಳನ್ನು ಈಗಾಗಲೇ ಗರಿಷ್ಠ ಮಟ್ಟದಲ್ಲಿ ವಿಧಿಸಲಾಗಿದೆ. ಇನ್ನು ಮುಂದೆ ತೆರಿಗೆ ಏರಿಸುವುದು ಕಷ್ಟಕರ ಎಂದು ಅರಿತ ಸರಕಾರ, 'ಎಐಬಿ' ಮೂಲಕ ಗ್ರಾಹಕರನ್ನು ಪ್ರೀಮಿಯಂ ಬ್ರ್ಯಾಂಡ್ ಮದ್ಯ ಸೇವನೆಯತ್ತ ಪ್ರೋತ್ಸಾಹಿಸಲು ತೀರ್ಮಾನಿಸಿದೆ. ಶೇ.10ರಷ್ಟಿರುವ ಪ್ರೀಮಿಯಂ ಲಿಕ್ಕರ್ ಮಾರಾಟವನ್ನು ಶೇ.90ಕ್ಕೆ ಹೆಚ್ಚಿಸಿ, ಆ ಮೂಲಕ ಆದಾಯ ಗಳಿಸುವುದು ಸರಕಾರದ ಗುರಿಯಾಗಿದೆ.

ಸಿಎನ್‌ಜಿ ಕೆಜಿಗೆ 1 ರುಪಾಯಿ ತುಟ್ಟಿ

ದೆಹಲಿ: ದೇಶದಲ್ಲಿ ಜನಸಾಮಾನ್ಯರ ಜೇಬಿಗೆ ಇಂಧನ ಬೆಲೆ ಏರಿಕೆಯ ಬಿಸಿ ತಟ್ಟುತ್ತಲೇ ಇದೆ. ಮುಂಬೈ, ದೆಹಲಿ ಸೇರಿದಂತೆ ದೇಶದ ಪ್ರಮುಖ ನಗರಗಳಲ್ಲಿ ಸಿಎನ್‌ಜಿ ದರ ಕೆಜಿಗೆ 1 ರು. ಏರಿಕೆಯಾಗಿದೆ. 48 ಗಂಟೆಗಳಲ್ಲೇ 2ನೇ ಬಾರಿ ಬೆಲೆ ಏರಿಕೆಯಾಗಿರುವುದಕ್ಕೆ ಆಟೋ-ಟ್ಯಾಕ್ಸಿ ಸೇರಿದಂತೆ ಸಿಎನ್‌ಜಿ ವಾಹನಗಳ ಮಾಲೀಕರು-ಚಾಲಕರು ಆಘಾತಕ್ಕೊಳಗಾಗಿದ್ದಾರೆ.

ಮೇ 15ರಂದು ತೈಲ ಕಂಪನಿಗಳು ಸಿಎನ್‌ಜಿ ಬೆಲೆ 2 ರು. ಹೆಚ್ಚಿಸಿದ್ದವು. ಮೇ 17ರಂದು ಮತ್ತೆ 1 ರು. ಹೆಚ್ಚಳ ಮಾಡಲಾಗಿದೆ. ಇದರೊಂದಿಗೆ 48 ಗಂಟೆಗಳಲ್ಲಿಯೇ ಸಿಎನ್‌ಡಿ ಒಟ್ಟು 3 ರು. ತುಟ್ಟಿಯಾಗಿದೆ. ಸ್ಥಳೀಯ ತೆರಿಗೆಗೆ ಅನುಗುಣವಾಗಿ ವಿವಿಧ ನಗರಗಳಲ್ಲಿ ಸಿಎನ್‌ಜಿ ದರದಲ್ಲಿ ವ್ಯತ್ಯಯವಿರುತ್ತದೆ. ಬೆಂಗ ಳೂರು-93, ದೆಹಲಿ-80.09, ನೊಯಿಡಾ, ಗಾಜಿಯಾಬಾದ್-88.70, ಗುರುಗ್ರಾಮ್-85.12 ಮತ್ತು ಮುಂಬೈನಲ್ಲಿ 84 ರು. ಲೆಕ್ಕದಲ್ಲಿ ಸಿಎನ್‌ಜಿ ಮಾರಾಟ ವಾಗುತ್ತಿದೆ. ಪರಿಣಾಮವಾಗಿ ಆಟೋ ರಿಕ್ಷಾ, ಟ್ಯಾಕ್ಸಿ, ಬಸ್, ಲಾರಿ ಸೇರಿದಂತೆ ಸಿಎನ್‌ಜಿ ಆಧರಿಸಿದ ವಾಹನ ಬಳಕೆದಾರರ ನಿತ್ಯದ ವೆಚ್ಚ ಹೆಚ್ಚಲಿದೆ. ಇದು ಸಾರ್ವಜನಿಕ ಸಾರಿಗೆ ಸಂಸ್ಥೆಗಳಲ್ಲಿನ ಬಸ್ ಪ್ರಯಾಣ ದರದ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ.

ಸೊಂಪಾದ ಪುಟಗಳು

ಫೈನಲ್ ಸೆಟ್ಲ್‌ಮೆಂಟಿಗೆ ಸಿದ್ದರಾಮಯ್ಯ ರೆಡಿ
ಮೂರ್ತಿಪೂಜೆ ಆರ್.ಟಿ. ವಿಠ್ಠಲಮೂರ್ತಿ 6

ಭಾರತದಲ್ಲಿ ಸೂಟ್‌ಕೇಸ್ ಸಮರದ ಕತೆ...
ವಿದೇಶವಾಸಿ ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ಇತರರೊಂದಿಗೆ ನಿಮ್ಮನ್ನು ಹೋಲಿಸಿಕೊಳ್ಳುವುದು ನಿಮ್ಮ ಪ್ರಗತಿಗೆ ಅಡ್ಡಿಪಡಿಸುತ್ತದೆ. ಪ್ರತಿ ವ್ಯಕ್ತಿಯ ಹಾದಿಯೇ ಬೇರೆ. ಆದ್ದರಿಂದ ನಿಮ್ಮ ಸ್ಪರ್ಧೆ ನಿಮ್ಮೊಂದಿಗೇ ಇರಲಿ. ನಿನ್ನೆಯ ತಪ್ಪುಗಳಿಂದ ಕಲಿತು, ಇಂದಿನ ಗುಣಮಟ್ಟವನ್ನು ಉತ್ತಮಪಡಿಸಿಕೊಳ್ಳುವುದೇ ನಿಜವಾದ ಪ್ರಗತಿ.

ವಕ್ರತುಂಡೋಕ್ತಿ

ಹೆಲ್ಮೆಟ್ ಹಾಕಿಕೊಳ್ಳುವುದು ತಲೆ ಉಳಿಸಿಕೊಳ್ಳಲು ಎನ್ನುವುದನ್ನು ನಂಬುವವರಿಗಿಂತ, ಪೊಲೀಸರಿಂದ ಹಣ ಉಳಿಸಿಕೊಳ್ಳಲು ಎಂದು ನಂಬುವವರೇ ಹೆಚ್ಚು.

ಉಗ್ರ ಮೈನುಕಿ ಹತ್ಯೆ

ವಾಷಿಂಗ್ಟನ್: ದಕ್ಷಿಣ ಆಫ್ರಿಕಾದ ನೈಜೀರಿಯಾದಲ್ಲಿ ಶುಕ್ರವಾರ ಕಾರ್ಯಾಚರಣೆ ನಡೆಸುವ ಮೂಲಕ ಇಸ್ಲಾಮಿಕ್ ಸ್ಟೇಟ್‌ನ (ಐಎಸ್) ಪ್ರಮುಖ ನಾಯಕ ಅಬೂಬಕರ್ ಅಲ್ ಮೈನುಕಿಯನ್ನು ಹತ್ಯೆ ಮಾಡಿದ್ದೇವೆ. ಈ ಕಾರ್ಯಾಚರಣೆಯಲ್ಲಿ ಆಫ್ರಿಕಾ ಸೇನೆಯೂ ಭಾಗಿಯಾಗಿತ್ತು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಇಸ್ಲಾಮಿಕ್ ಸ್ಟೇಟ್‌ನ ಸಂಘಟನೆ ಮತ್ತು ಹಣಕಾಸಿಕ ವ್ಯವಹಾರಗಳ ಬಗ್ಗೆ ಈತ ನಿಗಾ ಇರಿಸುತ್ತಿದ್ದ. ಅಮೆರಿಕದಲ್ಲಿ ದಾಳಿ ನಡೆಸುವ ಸಂಚು ರೂಪಿಸುತ್ತಿದ್ದ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಮನೆಯಿಂದಲೇ ಲಂಚ್ ಬಾಕ್ಸ್ ತಂದ ತಮಿಳುನಾಡು ಸಿಎಂ

ಸುದ್ದಿ

ಭಾರತ-ನೆದರ್ಲೆಂಡ್ಸ್ 17 ಒಪ್ಪಂದ

ದಿ ಹೇಗ್: ಭಾರತ ಮತ್ತು ನೆದರ್ಲೆಂಡ್ಸ್ ನಡುವೆ ಕಾರ್ಯತಂತ್ರದ ಪಾಲುದಾರಿಕೆಯನ್ನು ಬಲಗೊಳಿಸಲು ರಕ್ಷಣಾ, ನಿರ್ಣಾಯಕ ಖನಿಜಗಳು ಮತ್ತು ಇತರ ಪ್ರಮುಖ ಕ್ಷೇತ್ರಗಳಲ್ಲಿ ಸಹಕಾರವನ್ನು ವೃದ್ಧಿಸಲು 17 ಒಪ್ಪಂದಗಳಿಗೆ ಸಹಿ ಮಾಡಿದೆ.

ಎರಡೂ ದೇಶಗಳ ನಡುವೆ ವ್ಯಾಪಾರ, ಹೂಡಿಕೆ, ಭದ್ರತೆ, ಸೆಮಿಕಂಡಕರ್, ಬಾಹ್ಯಾಕಾಶ, ಕ್ವಾಂಟಮ್ ಕಂಪ್ಯೂಟಿಂಗ್ ಸೇರಿದಂತೆ ಉದಯೋನ್ಮುಖ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಂಬಂಧ ವೃದ್ಧಿಸುವ ಉದ್ದೇಶವನ್ನು ಈ ಒಪ್ಪಂದಗಳು ಹೊಂದಿವೆ. ನೆದರ್ಲೆಂಡ್ಸ್, ಸ್ವೀಡನ್, ನಾರ್ವೆ, ಇಟಲಿ ದೇಶಗಳಿಗೆ ನಾಲ್ಕು ದಿನಗಳ ಪ್ರವಾಸ ಕೈಗೊಂಡಿರುವ ಪ್ರಧಾನಿ ನರೇಂದ್ರ ಮೋದಿ ಅವರು ನೆದರ್ಲೆಂಡ್ಸ್ ಪ್ರಧಾನಿ ರಾಬ್ ಜೆಟ್ಟೆನ್ ಅವರ ಜತೆ ಮಾತುಕತೆ ನಡೆಸಿದ ಬಳಿಕ ಈ ಒಪ್ಪಂದಗಳಿಗೆ ಸಹಿ ಮಾಡಲಾಗಿದೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಕಾಯಂ ಸದಸ್ಯತ್ವಕ್ಕಾಗಿ ಬೆಂಬಲ ನೀಡಿದ ನೆದರ್ಲೆಂಡ್ಸ್‌ಗೆ ಪ್ರಧಾನಿ ಮೋದಿ ಇದೇ ವೇಳೆ ಧನ್ಯವಾದ ಹೇಳಿದರು.

ನೆದರ್ಲೆಂಡ್ಸ್ ಪ್ರಧಾನಿ ರಾಬ್ ಜೆಟ್ಟೆನ್ ಹಾಗೂ ಭಾರತದ ಪ್ರಧಾನಿ ನರೇಂದ್ರ ಮೋದಿ.

ಎಬೋಲಾ: ಜಾಗತಿಕ ಆರೋಗ್ಯ ತುರ್ತುಸ್ಥಿತಿ

ಕಿನ್ಶಾಸಾ: ಕಾಂಗೋದಲ್ಲಿ ಎಬೋಲಾ ವೈರಸ್‌ಗೆ 88 ಮಂದಿ ಸಾವಿಗೀಡಾದ ಬೆನ್ನಲ್ಲೇ ವಿಶ್ವ ಆರೋಗ್ಯ ಸಂಸ್ಥೆಯು ಅಂತಾರಾಷ್ಟ್ರೀಯ ಆರೋಗ್ಯ ತುರ್ತುಸ್ಥಿತಿ ಘೋಷಿಸಿದೆ.



'ಈ ಸಾಂಕ್ರಾಮಿಕ ರೋಗವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಆತಂಕ ಉಂಟುಮಾಡುವ ಸಾರ್ವಜನಿಕ ಆರೋಗ್ಯ ತುರ್ತುಸ್ಥಿತಿಯಾಗಿದೆ ಎಂದು ನಾನು ನಿರ್ಧರಿಸಿದ್ದೇನೆ' ಎಂದು ವಿಶ್ವ ಆರೋಗ್ಯ ಸಂಸ್ಥೆಯ ಮಹಾನಿರ್ದೇಶಕ ಟೆಡ್ರೊಸ್ ಅಧಾನೊಮ್ ಗೆಬ್ರೆಯೆಸಸ್ ಕಳವಳ ವ್ಯಕ್ತಪಡಿಸಿದ್ದಾರೆ.

ಇಂದು ಕೇರಳ ಸಿಎಂ ಪ್ರಮಾಣ ಸ್ವೀಕಾರ

ತಿರುವನಂತಪುರಂ: ಕೇರಳ ಮುಖ್ಯಮಂತ್ರಿಯಾಗಿ ವಿ.ಡಿ. ಸತೀ ಶನ್ ತಿರುವನಂತ ಪುರಂನ ಸೆಂಟ್ರಲ್ ಸ್ಟೇಡಿಯಂನಲ್ಲಿ ಬೃಹತ್ ಸಮಾರಂಭ ದಲ್ಲಿ ಸೋಮವಾರ ಬೆಳಗ್ಗೆ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಸೇರಿದಂತೆ ಹೈಕಮಾಂಡ್ ನಾಯಕರು ಭಾಗವಹಿಸಲಿದ್ದಾರೆ. ಕರ್ನಾಟಕದಿಂದ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಕೆಲ ಸಚಿವರು ಭಾಗವಹಿಸಲಿದ್ದಾರೆ.

ಬೆಂಗಳೂರಿನಲ್ಲೇ 97 ಲಕ್ಷ ಟನ್ ಹಳೇ ಕಸ ಶೇಖರಣೆ

ಸಂಸ್ಕರಣೆಯಾಗದೆ ಉಳಿದ ಭಾರಿ ಕಸ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಒಂದೆಡೆ ರಾಜ್ಯದಲ್ಲಿ ತ್ಯಾಜ್ಯ ವಿಂಗಡಣೆ, ಸಂಸ್ಕರಣೆಗೆ ಹತ್ತು ಹಲವು ಯೋಜನೆಗಳನ್ನು ಕೈಗೆತ್ತಿಕೊಳ್ಳುತ್ತಿದ್ದರೂ ಕರ್ನಾಟಕದಾದ್ಯಂತ ನಿತ್ಯ 2,447 ಟನ್ ಕಸ ಸಂಸ್ಕರಣೆಯಾಗದೇ ಉಳಿಯುತ್ತಿದೆ ಎನ್ನುವ ಆತಂಕಕಾರಿ ಮಾಹಿತಿ ಬಹಿರಂಗವಾಗಿದೆ.

ಕರ್ನಾಟಕದ ನಗರ ಪ್ರದೇಶದಲ್ಲಿ ನಿತ್ಯ 13,273 ಟನ್ ಕಸ ಸಂಗ್ರಹಣೆಯಾಗುತ್ತಿದ್ದು, ಅದರಲ್ಲಿ ಶೇ.70ರಷ್ಟು ಅಂದರೆ 10 ಸಾವಿರಕ್ಕೂ ಹೆಚ್ಚು ಟನ್ ಕಸ ಸಂಸ್ಕರಣೆಯಾಗುತ್ತಿದೆ. ಇನ್ನೂ 2447 ಟನ್ ಕಸ ಸಂಸ್ಕರಣೆಯಾಗುತ್ತಿಲ್ಲ ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ ಸರಕಾರದ ಮುಖ್ಯ ಕಾರ್ಯ ದರ್ಶಿ ಶಾಲಿನಿ ರಜನೀಶ್ ವರದಿ ಸಲ್ಲಿಸಿದ್ದಾರೆ.

ಉತ್ಪತ್ತಿಯಾಗುತ್ತಿರುವ ಕಸದಲ್ಲಿ ಶೇ.70ರಷ್ಟು ಸಂಸ್ಕರಣೆಯಾಗದೇ ಉಳಿಯುತ್ತಿರುವ ಕಸದ ಪ್ರಮಾಣ ದೊಡ್ಡ ಪ್ರಮಾಣದಲ್ಲಿರುವುದು ಭವಿಷ್ಯ ದಲ್ಲಿ ಬಹುದೊಡ್ಡ ಸಮಸ್ಯೆಯಾಗಲಿದೆ ಎನ್ನುವ ಆತಂಕ ಕೇಳಿಬರುತ್ತಿದೆ. ಕರ್ನಾಟ ಕದಲ್ಲಿ ನಿತ್ಯ 4,146 ದಶಲಕ್ಷ ಲೀಟರ್ ಕೊಳಚೆ ನೀರು ಉತ್ಪತ್ತಿಯಾಗುತ್ತಿದೆ. ಈ ಪೈಕಿ 2,065 ದಶಲಕ್ಷ ಲೀಟರ್ ಕೊಳಚೆ ನೀರು ಎಸ್‌ಟಿಪಿಗಳ ಮೂಲಕ ಸಂಸ್ಕರಣೆಯಾಗುತ್ತಿದೆ. ಇನ್ನುಳಿದ 2,056 ದಶಲಕ್ಷ ಲೀಟರ್ ಕೊಳಚೆ ನೀರು ಸಂಸ್ಕರಣೆಯಾಗದೇ ಜಲಮೂಲಗಳಿಗೆ ಸೇರುತ್ತಿದೆ. ಇದನ್ನು ತಡೆಗಟ್ಟಲು ಮುಂದಿನ ದಿನಗಳಲ್ಲಿ 401 ಹೊಸ ಎಸ್‌ಟಿಪಿಗಳನ್ನು ಸ್ಥಾಪಿಸಲಾಗುತ್ತಿದ್ದು, ಇವುಗಳ ಸಾಮರ್ಥ್ಯ 2,514 ದಶಲಕ್ಷ ಲೀಟರ್ ಆಗಿದೆ. ಒಂದು ವೇಳೆ ಈ ಎಲ್ಲ ಎಸ್‌ಟಿಪಿಗಳು ಸ್ಥಾಪನೆಯಾದರೆ ಉತ್ಪತ್ತಿಯಾಗುತ್ತಿರುವ ಕೊಳಚೆ ನೀರನ್ನೆಲ್ಲ ಸಂಸ್ಕರಿಸಬಹುದು ಎನ್ನುವ ವರದಿಯನ್ನು ನೀಡಲಾಗಿದೆ.

ಬೆಂಗಳೂರಲ್ಲೇ 97 ಲಕ್ಷ ಟನ್ ಬಾಕಿ: ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಒಂಬತ್ತು ಡಂಪಿಂಗ್ ಯಾರ್ಡ್‌ಗಳಲ್ಲಿ 97 ಲಕ್ಷ ಟನ್ ಹಳೆಯ ಕಸ ಸಂಗ್ರಹವಾಗಿದೆ. ಈ ಪೈಕಿ 14.84 ಲಕ್ಷ ಟನ್ ಹಳೆಯ ಕಸವನ್ನು ಜೈವಿಕ ಸಂಸ್ಕರಣೆ ವಿಧಾನದ ಮೂಲಕ ಸಂಸ್ಕರಿಸಲಾಗಿದೆ. 24.8 ಲಕ್ಷ ಟನ್ ಕಸ ವಿಲೇವಾರಿಗೆ ಟೆಂಡರ್ ಕರೆಯಲಾಗಿದೆ. ಈ ಎಲ್ಲ ಕಸಗಳನ್ನು 2027ರ ಆಗಸ್ಟ್‌ನೊಳಗೆ ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುವುದು ಎನ್ನುವ ಮಾಹಿತಿ ನೀಡಿದ್ದಾರೆ.

ಇನ್ನುಳಿ ದಂತೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 222 ಡಂಪಿಂಗ್ ಯಾರ್ಡ್‌ಗಳಲ್ಲಿ 78.26 ಲಕ್ಷ ಟನ್ ಹಳೆಯ ಕಸವಿದೆ. ಈ ಪೈಕಿ, 11.34 ಲಕ್ಷ ಟನ್ ಹಳೆಯ ಕಸವನ್ನು ಜೈವಿಕ ಸಂಸ್ಕರಣೆ ವಿಧಾನದ ಮೂಲಕ ಸಂಸ್ಕರಿಸಲಾಗಿದೆ. ಎಲ್ಲ ಕಸಗಳನ್ನು 2027ರ ಡಿಸೆಂಬರ್ ಅಂತ್ಯದ ಒಳಗೆ ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

5,880 ಟನ್ ಜಿಬಿಎಯಲ್ಲಿ ಸಂಗ್ರಹವಾಗುವ ಕಸ

7,393 ಟನ್ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಂಗ್ರಹವಾಗುವ ಕಸ

4,522 ಟನ್ ಜಿಬಿಎ ವ್ಯಾಪ್ತಿಯಲ್ಲಿ ಸಂಸ್ಕರಣೆಯಾಗುವ ಕಸ

6,304 ಟನ್ ಇತರೆಡೆ ಸಂಸ್ಕರಣೆಯಾಗುವ ಕಸ



ಸಮಾಚಾರ ಸಣ್ಣದಲ್ಲ

ವಿದ್ಯಾರ್ಥಿಗೆ ಚಾಕು ಇರಿತ: ಮೂವರ ಸೆರೆ

ಬೆಂಗಳೂರು: ರಾಮಮೂರ್ತಿನಗರದ ಬಳಿ ದುಷ್ಕರ್ಮಿಗಳು ಭಾನುವಾರ ನಸುಕಿನಲ್ಲಿ ಬಿಬಿಎಂ ವಿದ್ಯಾರ್ಥಿಗೆ ಚಾಕುವಿನಿಂದ ಇರಿದು ಕೊಲೆ ಮಾಡಲು ಯತ್ನಿಸಿದ್ದು, ಘಟನೆ ನಡೆದ ಕೆಲವೇ ತಾಸುಗಳಲ್ಲಿ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ. ಚಾಕು ಇರಿತದಿಂದ ಗಾಯಗೊಂಡಿರುವ ವಿದ್ಯಾರ್ಥಿ ಧೀರಜ್ (21) ಎಂಬಾತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಆರೋಪಿಗಳಾದ ಭುವನ್, ಮಿಥುನ್ ಮತ್ತು ಬಾಲಕನನ್ನು ಬಂಧಿಸಲಾಗಿದೆ ಎಂದು ರಾಮಮೂರ್ತಿನಗರ ಠಾಣೆ ಪೊಲೀಸರು ತಿಳಿಸಿದ್ದಾರೆ. ರಾಮಮೂರ್ತಿನಗರ ಸಮೀಪದ ಬಂಜಾರ ಲೇಔಟ್‌ನ ಧೀರಜ್, ಬೆಳಗಿನ ಜಾವ ಬೈಕ್‌ನಲ್ಲಿ ಹೊಸಕೋಟೆ ಕಡೆಗೆ ಹೋಗುತ್ತಿದ್ದಾಗ ಈ ಘಟನೆ ನಡೆದಿದೆ. ಹೊರ ವರ್ತುಲ ರಸ್ತೆಯಲ್ಲಿ ಆರೋಪಿಗಳು ಬೈಕ್‌ನಲ್ಲಿ ಎದುರಿನಿಂದ ಬಂದಿದ್ದಾರೆ. ಈ ವಿಚಾರಕ್ಕೆ ಧೀರಜ್ ಹಾಗೂ ಆರೋಪಿಗಳ ನಡುವೆ ವಾಗ್ವಾದ ನಡೆದು ಜಗಳವಾಗಿದೆ. ಬಳಿಕ ಆರೋಪಿಗಳು ಧೀರಜ್‌ನ ತೊಡೆ ಹಾಗೂ ಬೆನ್ನಿಗೆ ಚಾಕು ಇರಿದು ಬೈಕ್ ಕಿತ್ತುಕೊಂಡು ಪರಾರಿಯಾಗಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಬಿಎಂಟಿಸಿ: 26 ತಿಂಗಳ ಹಿಂಬಾಕಿ ಪಾವತಿ

ಬೆಂಗಳೂರು: ಬಿಎಂಟಿಸಿಯ ಯಶವಂತಪುರ ಘಟಕದಲ್ಲಿ 100 ಸಿಬ್ಬಂದಿಗೆ ಮೊದಲ ಕಂತಿನ ರೂಪದಲ್ಲಿ 11 ತಿಂಗಳ ಹಿಂಬಾಕಿ ಬದಲು ಎಲ್ಲ 26 ತಿಂಗಳ ಹಿಂಬಾಕಿ ಪಾವತಿಯಾಗಿದೆ. ಜಮೆ ಆಗಿರುವ ಹೆಚ್ಚುವರಿ ಹಣವನ್ನು ಬಿಎಂಟಿಸಿ ವಾಪಸ್ ಪಡೆಯುತ್ತಿದೆ. ಶನಿವಾರ ಹಿಂಬಾಕಿ ಮೊತ್ತ ಪಾವತಿ ಪ್ರಕ್ರಿಯೆ ನಡೆಯುವ ಸಂದರ್ಭದಲ್ಲಿ, ಬಿಲ್ಲಿಂಗ್ ಕ್ಲರ್ಕ್ ಅವರಿಂದ ಉಂಟಾದ ಅನಪೇಕ್ಷಿತ ಡೇಟಾ ಎಂಟ್ರಿ ದೋಷದಿಂದ ಸುಮಾರು 100 ನಿರ್ವಾಹಕರ ಖಾತೆಗಳಿಗೆ 26 ತಿಂಗಳ ಪೂರ್ಣ ಹಿಂಬಾಕಿ ಮೊತ್ತ ಜಮೆಯಾಗಿದೆ. ಚಾಲಕರು, ಚಾಲಕ ಕಂ ನಿರ್ವಾಹಕರು, ಮೆಕ್ಯಾನಿಕ್‌ಗಳು ಹಾಗೂ ಆಡಳಿತ ಸಿಬ್ಬಂದಿಗೆ ನಿಯಮಾನುಸಾರ 11 ತಿಂಗಳ ಮೊದಲ ಕಂತಿನ ಮೊತ್ತವೇ ಜಮೆಯಾಗಿದೆ. ಈ ವ್ಯತ್ಯಾಸ ಗಮನಕ್ಕೆ ಬಂದ ತಕ್ಷಣ, ಘಟಕ ವ್ಯವಸ್ಥಾಪಕರು ಕೇಂದ್ರ ಕಚೇರಿಗೆ ಮಾಹಿತಿ ನೀಡಿ ತುರ್ತು ಕ್ರಮ ಕೈಗೊಂಡಿದ್ದಾರೆ. ಸಂಬಂಧಿತ ನಿರ್ವಾಹಕರನ್ನು ಸಂಪರ್ಕಿಸಿ ಪರಿಸ್ಥಿತಿಯನ್ನು ಪಾರದರ್ಶಕವಾಗಿ ವಿವರಿಸಲಾಗಿದ್ದು, ಹೆಚ್ಚುವರಿಯಾಗಿ ಜಮೆಯಾಗಿರುವ ಮೊತ್ತವನ್ನು ಹಿಂತಿರುಗಿಸಲು ಸಹಕಾರ ಕೋರಲಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಚಾಲಕನ ಬೆದರಿಸಿ ಹಣ ಕಿತ್ತುಕೊಂಡ ಕಳ್ಳರು

ಬೆಂಗಳೂರು: ನಾಲ್ವರು ದರೋಡೆಕೋರರು ಆಟೋ ಚಾಲಕರೊಬ್ಬರನ್ನು ತಡೆದು ಬೆದರಿಸಿ 2900 ರು. ನಗದನ್ನು ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಭಾನುವಾರ ಮುಂಜಾನೆ ತಲ್ಲಘಟ್ಟಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಬನಶಂಕರಿ ನಿವಾಸಿ ಆಟೋ ಚಾಲಕ ಶಂಕರ್ ಎಂಬುವರು ಪ್ರಯಾಣಿಕರನ್ನು ಬಿಟ್ಟು ಭಾನುವಾರ ಮುಂಜಾನೆ 1.30ರ ಸಮಯದಲ್ಲಿ ತುಳಸಿಪುರದಲ್ಲಿ ಬರುತ್ತಿದ್ದರು. ಆಗ ನಡೆದು ಕೊಂಡು ಬರುತ್ತಿದ್ದ ನಾಲ್ವರು ದರೋಡೆಕೋರರು ಅವರನ್ನು ಅಡಗಟ್ಟಿ ನಿಲ್ಲಿಸಿ ಚಾಕು ತೋರಿಸಿ ಬೆದರಿಸಿ 2900 ರು. ನಗದನ್ನು ಕಸಿದುಕೊಂಡು ಪರಾರಿಯಾಗಿದ್ದಾರೆ. ನಂತರ ಶಂಕರ್ ಅವರು ತಲ್ಲಘಟ್ಟಪುರ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದಾರೆ. ಸುದ್ದಿ ತಿಳಿದ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಖಾಸಗಿ ಶಾಲಾ ವಾಹನಗಳ ಶುಲ್ಕ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ದರ ನಿರಂತರವಾಗಿ ಏರಿಕೆಯಾಗುತ್ತಿರುವುದು ಸಾರ್ವಜನಿಕರ ಜೀವನದ ಮೇಲೆ ತೀವ್ರ ಪರಿಣಾಮ ಬೀರಿದೆ. ಖಾಸಗಿ ಬಸ್‌ಗಳ ಟಿಕೆಟ್ ದರ ಏರಿಕೆಯಾದ ಬೆನ್ನಲ್ಲೇ, ಈಗ ಶಾಲಾ ವಾಹನಗಳ ಮಾಸಿಕ ಶುಲ್ಕವನ್ನೂ ಹೆಚ್ಚಿಸಲು ತೀರ್ಮಾನಿಸಲಾಗಿದೆ. ಇದರಿಂದಾಗಿ ಈಗಾಗಲೇ ಹಣದುಬ್ಬರದಿಂದ ಬಳಲುತ್ತಿರುವ ಪೋಷಕರಿಗೆ ಮತ್ತೊಂದು ಹೊರೆಯಾಗಿದೆ. ರಾಜ್ಯದ ಖಾಸಗಿ ಶಾಲಾ ವಾಹನಗಳ ಸಂಘವು ಶಾಲಾ ಬಸ್ ಹಾಗೂ ವ್ಯಾನ್‌ಗಳ ಮಾಸಿಕ ಶುಲ್ಕವನ್ನು ಶೇ.10ರಷ್ಟು ಹೆಚ್ಚಿಸಲು ನಿರ್ಧಾರ ಕೈಗೊಂಡಿದೆ ಎಂದು ಹೇಳಲಾಗಿದೆ.

ವಿರಾಮ
ಪ್ರತಿ ಭಾನುವಾರ

{ ಎಚ್.ಕೆ.ಪಾಟೀಲ್ } ಸಚಿವ
ರಾಜ್ಯದಲ್ಲಿ ಲಕ್ಕುಂಡಿ ಪಾರಂಪರಿಕ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಹಾಗೂ ರಾಜ್ಯ ಮಟ್ಟದ ಸಲಹಾ ಸಮಿತಿಯು ಕಾನೂನಾತ್ಮಕವಾಗಿ ರಚನೆಯಾಗಿದೆ. ಲಕ್ಕುಂಡಿ ಪ್ರಾಧಿಕಾರ ಗದಗನ್ನು ಮುಖ್ಯ ಕಚೇರಿ ಮಾಡಿ ಕೆಲಸ ಆರಂಭಿಸಿದೆ. 3 ವರ್ಷದಲ್ಲಿ ಲಕ್ಕುಂಡಿ ತಾಣಕ್ಕೆ ರಾಜ್ಯ ಸರಕಾರ ಹೊಸ ಸ್ಪರ್ಶನೀಡಿದೆ. ಲಕ್ಕುಂಡಿಯಲ್ಲಿ ಮೊದಲ ಹಂತವಾಗಿ ಪ್ರಾಚ್ಯಾವಶೇಷ ವಸ್ತುಗಳ ಅನ್ವೇಷಣೆ ಆರಂಭಿಸಲಾಗಿದೆ.



ಜುಲೈ-ಆಗಸ್ಟ್‌ನಲ್ಲಿ ಬೆಂಗಳೂರು-ಮುಂಬೈ ವಂದೇ ಭಾರತ್ ಸ್ಲೀಪರ್ ಸೇವೆ | ರೈಲ್ವೆ ಸವಲತ್ತಿನಲ್ಲಿ ಕರ್ನಾಟಕ ಎರಡನೇ ಸ್ಥಾನ: ವಿ.ಸೋಮಣ್ಣ

ಬೆಂಗಳೂರು-ಮುಂಬೈ ನೂತನ ಎಕ್ಸ್‌ಪ್ರೆಸ್ ರೈಲಿಗೆ ಚಾಲನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೆಂಗಳೂರಿನ ಎಸ್‌ಎಂವಿಟಿನಿಂದ ಮುಂಬೈನ ಲೋಕಮಾನ್ಯ ತಿಲಕ್ ಟರ್ಮಿನಸ್ ನಡುವೆ ಚಲಿಸುವ ನೂತನ ಎಕ್ಸ್‌ಪ್ರೆಸ್ ರೈಲಿಗೆ ಭಾನುವಾರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹಸಿರು ನಿಶಾಣೆ ನೀಡಿದರು.

ಈ ವೇಳೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ವರ್ಚುವಲ್ ಮೂಲಕ ಮಾತನಾಡಿ, ಬೆಂಗಳೂರು-ಮುಂಬೈ ನಡುವೆ ನೂತನ ವಂದೇ ಭಾರತ್ ಓವರ್‌ನೈಟ್ ಸ್ಲೀಪರ್ ರೈಲು ಸಂಚಾರ ಜುಲೈ ಅಥವಾ ಆಗಸ್ಟ್ ತಿಂಗಳಲ್ಲಿ ಆರಂಭವಾಗಲಿದೆ. ಭಾನುವಾರ ಚಾಲನೆ ನೀಡಲಾಗಿರುವ ನೂತನ ಎಕ್ಸ್‌ಪ್ರೆಸ್ ರೈಲು ಮೇ. 24 ರಿಂದ ವಾರದಲ್ಲಿ ಎರಡು ದಿನ ಸಂಚರಿಸುತ್ತದೆ. ಕರ್ನಾಟಕದ ಪ್ರಮುಖ ನಗರಗಳಿಗೆ ಮುಂಬೈಯನ್ನು ಸಂಪರ್ಕಿಸಲಿದೆ. ಜನರ ಅಪೇಕ್ಷೆಯಂತೆ ಮುಂಬೈಗೆ ಶೀಘ್ರದಲ್ಲೇ ವಂದೇ ಭಾರತ್ ರೈಲು ಸೇವೆಯನ್ನು ಒದಗಿಸಲಾಗುವುದು.

ಸದ್ಯದಲ್ಲೇ ಬೆಂಗಳೂರು-ಮಂಗಳೂರು ವಂದೇ ಭಾರತ್: ಬೆಂಗಳೂರು-ಮಂಗಳೂರು ನಡುವೆ ವಂದೇ ಭಾರತ್ ರೈಲನ್ನು ಅತೀ ಶೀಘ್ರದಲ್ಲಿ ಆರಂಭಿಸಲಾಗುವುದು. ಬೆಂಗಳೂರನ್ನು ಕರಾವಳಿ ಕರ್ನಾಟಕ, ಮಡಗಾಂವವರೆಗೆ ಸಂಪರ್ಕಿಸುವ ವಂದೇ ಭಾರತ್ ರೈಲು ಸಂಚಾರ ಆರಂಭಿಸುವ ನಿಟ್ಟಿನಲ್ಲಿ ಪರೀಕ್ಷಾ ಹಂತ ಪ್ರಗತಿಯಲ್ಲಿದೆ. ಘಾಟ್ ಪ್ರದೇಶದಲ್ಲಿ ವಿಶೇಷ ಬ್ರೇಕಿಂಗ್ ಸಿಸ್ಟಮ್ ಮೋಡಿಫಿಕೇಶನ್ ಕೆಲಸ ನಡೆಯುತ್ತಿದೆ. ಕರ್ನಾಟಕದಲ್ಲಿ ಪ್ರಸ್ತುತ 12 ಒಂದೇ ಭಾರತ್ ರೈಲು ಸಂಚಾರ ಮಾಡುತ್ತಿದ್ದು, ಇದು ದೇಶದಲ್ಲೇ ಅತ್ಯಧಿಕವಾಗಿದೆ. ಬೆಂಗಳೂರು ನಗರಕ್ಕೆ ಸಂಪೂರ್ಣ ಸಂಪರ್ಕ ನೀಡುವ ಉದ್ದೇಶದಿಂದ 4 ಕಾರಿಡಾರ್ ಯೋಜನೆಗಳನ್ನು ರೂಪಿಸಲಾಗಿದ್ದು, ಎಲ್ಲವೂ ಪ್ರಗತಿಯಲ್ಲಿವೆ. ಬೆಂಗಳೂರು ದೇವನಹಳ್ಳಿ ಏರ್‌ಪೋರ್ಟ್ ಕಾರಿಡಾರ್ ಯೋಜನೆಯ ಅಲೈನ್‌ಮೆಂಟ್‌ಗೆ ಒಪ್ಪಿಗೆ ನೀಡಲಾಗಿದೆ. ಎರಡನೇ ಕಾರಿಡಾರ್ ಯೋಜನೆ ಕಾಮಗಾರಿ ಉತ್ತಮವಾಗಿ ನಡೆಯುತ್ತಿದ್ದು, ಸ್ಟೇಷನ್ ನಿರ್ಮಾಣ ಹಂತದಲ್ಲಿದೆ. ಮೂರನೇ ಕಾರಿಡಾರ್ ಯೋಜನೆ ಅಲೈನ್‌ಮೆಂಟ್‌ಗೆ ಇತ್ತೀಚೆಗೆ ಒಪ್ಪಿಗೆ ನೀಡಲಾಗಿದ್ದು, ಸರ್ವೆ ಕಾರ್ಯ ನಡೆಯುತ್ತಿದೆ. ನಾಲ್ಕನೇ ಕಾರಿಡಾರ್ ಯೋಜನೆಯ ಭೂಸ್ವಾಧೀನ ಸಂಪೂರ್ಣಗೊಂಡಿದ್ದು, ಸ್ಟೇಷನ್ ನಿರ್ಮಾಣ ಕಾರ್ಯ ಆರಂಭವಾಗಿದೆ ಎಂದರು.

ರೈಲ್ವೆ ಸವಲತ್ತಿನಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ: ಈ ವೇಳೆ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಮಾತನಾಡಿ, ರಾಜ್ಯದಲ್ಲಿ 12 ವಂದೇ ಭಾರತ್ ರೈಲು 14 ಜಿಲ್ಲೆಗಳಲ್ಲಿ ಓಡಾಡುತ್ತಿವೆ. ಶೀಘ್ರದಲ್ಲಿ ಬೆಂಗಳೂರು-ಮುಂಬೈ ಸ್ಲೀಪರ್ ಕೋಚ್ ವಂದೇ ಭಾರತ್ ರೈಲು ಬರಲಿದೆ. ರೈಲ್ವೆ ಸೌಲಭ್ಯಗಳನ್ನು ಹೋಲಿಸಿದರೆ ಉತ್ತರ ಪ್ರದೇಶದ ಬಳಿಕ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. 30-40 ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಬಹುತೇಕ ಯೋಜನೆಗಳು ಪ್ರಧಾನಿ ಮೋದಿ ಸೂಚನೆ ಮೇರೆಗೆ ಸಾಕಾರಗೊಳ್ಳುತ್ತಿವೆ. ಅಭಿವೃದ್ಧಿಯಲ್ಲಿ ರಾಜಕೀಯ ಇಲ್ಲ ಎಂದು ಪ್ರಧಾನಿ ಮೋದಿಯವರು ಹೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಅಭಿವೃದ್ಧಿ ಸಂಕೇತವಾಗಿ ಒಂದು ದೊಡ್ಡ ರೈಲ್ವೆ ಹಬ್‌ನ್ನು ನೂರಾರು ಯೋಜನೆಗಳ ಮೂಲಕ ಮಾಡುತ್ತಿದ್ದೇವೆ ಎಂದರು.

ಒಂದೂವರೆ ಎರಡು ವರ್ಷಗಳಲ್ಲಿ ಕರ್ನಾಟಕದಲ್ಲಿ ಒಂದೇ ಒಂದು ಮೇಲ್‌ಸೇತುವೆ, ಕೆಳ ಸೇತುವೆಗಳು ಇರುವುದಿಲ್ಲ. ಡಬಲ್ ರೈಲ್ವೆ ಲೈನುಗಳನ್ನು ನಾಲ್ಕು ಲೈನುಗಳನ್ನಾಗಿ ಮಾಡಲು 6,000 ಕೋಟಿ ರು. ಖರ್ಚು ಮಾಡುತ್ತಿದ್ದೇವೆ. ಬೆಂಗಳೂರಿಗೆ ಪ್ರತಿದಿನ 300 ರೈಲುಗಳು ಬರುತ್ತವೆ. ಬೆಂಗಳೂರಿನಿಂದ ಸುಮಾರು 2 ಲಕ್ಷ ಪ್ರಯಾಣ ಮಾಡುತ್ತಿದ್ದಾರೆ. ಇಷ್ಟೆಲ್ಲಾ ಸವಲತ್ತು ಕೊಟ್ಟರೂ ಇನ್ನೂ ಸಾಲದು. ಕರ್ನಾಟಕ ಸರಕಾರ ಸ್ವಲ್ಪ ಕೈ ಜೋಡಿಸಿದರೆ 50 ವರ್ಷಗಳಲ್ಲಿ ಮಾಡದಿದ್ದನ್ನು ಎರಡು ವರ್ಷದಲ್ಲಿ ನಾವು ಮಾಡಿ ಮುಗಿಸುತ್ತೇವೆ ಎಂದರು.

ನೂತನ ಎಕ್ಸ್‌ಪ್ರೆಸ್ ರೈಲು ಚಾಲನೆಗೆ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹಸಿರು ನಿಶಾಣೆ ತೋರಿಸಿದರು. ಈ ವೇಳೆ ಸಂಸದರಾದ ಪಿ.ಸಿ.ಮೋಹನ್, ಲೇಹರ್ ಸಿಂಗ್ ಸಿರೋಯಾ, ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಅಶುತೋಷ್ ಕುಮಾರ್ ಸಿಂಗ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

> ಬೆಂಗಳೂರು-ಮುಂಬೈ ನಡುವೆ ರಾತ್ರಿ ಸಂಚಾರಕ್ಕೆ ವಂದೇ ಭಾರತ್ ಸ್ಲೀಪರ್ ರೈಲು ಸೇವೆ ಶೀಘ್ರ ಆರಂಭವಾಗಲಿದೆ ಎಂದು ರೈಲ್ವೆ ಸಚಿವರು ಭರವಸೆ ನೀಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಕರ್ನಾಟಕದ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗಿದೆ. 2014ರ ಮೊದಲು ರಾಜ್ಯಕ್ಕೆ ವಾರ್ಷಿಕ ಸರಾಸರಿ 850 ಕೋಟಿ ರು. ರೈಲ್ವೆ ಅನುದಾನ ಸಿಗುತ್ತಿತ್ತು. ಇದೀಗ ಅದು ಸುಮಾರು 8,000 ಕೋಟಿಗೆ ರು.ಏರಿಕೆಯಾಗಿದೆ.
>
> -ತೇಜಸ್ವಿ ಸೂರ್ಯ, ಸಂಸದ

ನೂತನ ಎಕ್ಸ್‌ಪ್ರೆಸ್ ರೈಲಿನ ವೇಳಾಪಟ್ಟಿ, ನಿಲುಗಡೆ

ಬೆಂಗಳೂರು ಎಸ್‌ಎಂವಿಟಿ ಯಿಂದ ಮುಂಬೈ ಲೋಕಮಾನ್ಯ ತಿಲಕ್ ವರೆಗೆ ಸೂಪರ್ ಫಾಸ್ಟ್ ರೈಲು (16556/16554) ಮೇ. 24ರಿಂದ ವಾರದಲ್ಲಿ ಎರಡು ದಿನ ಸಂಚರಿಸುತ್ತದೆ. ಪ್ರತಿ ಶನಿವಾರ ಹಾಗೂ ಮಂಗಳವಾರ ರಾತ್ರಿ 8.34ಕ್ಕೆ ಬೆಂಗಳೂರಿನಿಂದ ಹೊರಟು ಕ್ರಮವಾಗಿ ಭಾನುವಾರ ಹಾಗೂ ಬುಧವಾರ ರಾತ್ರಿ 8.40ಕ್ಕೆ ಮುಂಬೈ ತಲುಪುತ್ತದೆ. ಮರಳಿ ಮುಂಬೈನಿಂದ ಅದೇ ದಿಕ್ಕಿನಲ್ಲಿ ಭಾನುವಾರ ಮತ್ತು ಬುಧವಾರ ರಾತ್ರಿ 11.15ಕ್ಕೆ ಹೊರಟು ಕ್ರಮವಾಗಿ ಸೋಮವಾರ ಮತ್ತು ಗುರುವಾರ ರಾತ್ರಿ 10.30ಕ್ಕೆ ಬೆಂಗಳೂರಿಗೆ ಆಗಮಿಸುತ್ತದೆ. ನಿಲುಗಡೆ ನಿಲ್ದಾಣಗಳು ತುಮಕೂರು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಮೀರಜ್, ಸಾಂಗ್ಲಿ, ಸತಾರಾ, ಲೋನಂದ್, ಪುಣೆ, ಲೋನಾವಾಲಾ, ಕರ್ಜತ್, ಕಲ್ಯಾಣ್ ಮತ್ತು ಥಾಣೆ ನಿಲ್ದಾಣಗಳಲ್ಲಿ ನಿಲುಗಡೆ ನೀಡಲಿದೆ. ಬೆಂಗಳೂರು, ಉತ್ತರ ಕರ್ನಾಟಕದಿಂದ ತೆರಳುವ ಜನರಿಗೆ ಈ ರೈಲು ಹೆಚ್ಚು ಅನುಕೂಲ ಒದಗಿಸಲಿದೆ.

ಸಾವಿರಾರು ಪ್ರಯಾಣಿಕರಿಗೆ ಅನುಕೂಲ: ತೇಜಸ್ವಿ ಸೂರ್ಯ

ಬೆಂಗಳೂರು ಮತ್ತು ಮುಂಬೈ ದೇಶದ ಎರಡು ಪ್ರಮುಖ ಆರ್ಥಿಕ ಕೇಂದ್ರಗಳಾಗಿದ್ದು, ಈ ನೂತನ ಎಕ್ಸ್‌ಪ್ರೆಸ್ ರೈಲು ಯೋಜನೆ ಮಧ್ಯ ಮತ್ತು ಉತ್ತರ ಕರ್ನಾಟಕದ ಆರ್ಥಿಕ ಚಟುವಟಿಕೆಗಳಿಗೆ ಹೊಸ ಚೈತನ್ಯ ನೀಡಲಿದೆ. ದಾವಣಗೆರೆ ಮತ್ತು ಹುಬ್ಬಳ್ಳಿ ಮೂಲಕ ಸಂಪರ್ಕ ಕಲ್ಪಿಸುವ ಈ ಕಾರಿಡಾರ್ ಕೇವಲ ಪ್ರಯಾಣ ಸುಗಮಗೊಳಿಸುವುದಲ್ಲದೆ, ಕೈಗಾರಿಕೆ, ವ್ಯಾಪಾರ ಮತ್ತು ಹೂಡಿಕೆ ಚಟುವಟಿಕೆಗಳಿಗೆ ಉತ್ತೇಜನ ನೀಡಲಿದೆ. ಬೆಂಗಳೂರು-ಚೆನ್ನೈ ಹಾಗೂ ಬೆಂಗಳೂರು-ಹೈದರಾಬಾದ್ ಹೈ-ಸ್ಪೀಡ್ ಕಾರಿಡಾರ್ ಮಾದರಿಯಲ್ಲೇ ಈ ಯೋಜನೆಯೂ ರಾಜ್ಯದ ದೀರ್ಘಕಾಲೀನ ಬೆಳವಣಿಗೆಗೆ ಸಹಕಾರಿಯಾಗಲಿದೆ. 1983ರಿಂದ ಉದ್ಯಾನ್ ಎಕ್ಸ್‌ಪ್ರೆಸ್ ಮಾತ್ರ ನೇರ ರೈಲು ಸಂಪರ್ಕವಾಗಿದ್ದು, ಪ್ರಯಾಣಿಕರು ದೀರ್ಘಕಾಲದಿಂದ ತೊಂದರೆ ಅನುಭವಿಸುತ್ತಿದ್ದರು. ಹೊಸ ರೈಲು ಸೇವೆಯಿಂದ ಸಾವಿರಾರು ಪ್ರಯಾಣಿಕರಿಗೆ ಅನುಕೂಲವಾಗಲಿದೆ. ರಾಜ್ಯದಲ್ಲಿ ರೈಲು ಮಾರ್ಗ ದ್ವಿಗುಣಗೊಳಿಸುವಿಕೆ, ವಿದ್ಯುದೀಕರಣ ಹಾಗೂ ಅಮೃತ್ ಭಾರತ್ ನಿಲ್ದಾಣ ಯೋಜನೆ ಸೇರಿದಂತೆ 52,000 ಕೋಟಿ ರು. ಅಧಿಕ ಮೌಲ್ಯದ ರೈಲ್ವೆ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ಸಂಸದ ತೇಜಸ್ವಿ ಸೂರ್ಯ ತಿಳಿಸಿದರು.

ವಿಳಂಬದ ನೆಪದಲ್ಲಿ ಪಾಲುದಾರಿಕೆ ಸಂಸ್ಥೆ ನೋಂದಣಿ ರದ್ದುಪಡಿಸಲು ಆಗದು: ಹೈ

ಬೆಂಗಳೂರು: ಪಾಲುದಾರಿಕೆ ಅಥವಾ ಭಾಗ ಸ್ವಾಮ್ಯ ಸಂಸ್ಥೆಗಳ ಆರಂಭಿಕ ನೋಂದಣಿಗೆ ಕಾನೂನಿನಲ್ಲಿ ಯಾವುದೇ ಕಾಲಮಿತಿ ನಿಗದಿಪಡಿಸಲಾಗಿಲ್ಲ ಎಂದು ಸ್ಪಷ್ಟಪಡಿಸಿರುವ ಹೈಕೋರ್ಟ್, ಸಂಸ್ಥೆಯ ನೋಂದಣಿಗೆ ರಿಜಿಸ್ಟ್ರಾರ್‌ಗಳನ್ನು ಸಂಪರ್ಕಿಸುವಲ್ಲಿ ವಿಳಂಬವಾಗಿದೆ ಎಂಬ ಕಾರಣಕ್ಕೆ ನೋಂದಣಿಯನ್ನು ತಿರಸ್ಕರಿಸುವುದಕ್ಕೆ ಅವಕಾಶವಿಲ್ಲ ಎಂದು ತಿಳಿಸಿದೆ.

ವಿಳಂಬದ ಹೆಸರಿನಲ್ಲಿ ನೋಂದಣಿ ಮಾಡದ ಶಿವಾಜಿನಗರದ ಉಪನೋಂದಣಾಧಿಕಾರಿಗಳ ಕ್ರಮವನ್ನು ಪ್ರಶ್ನಿಸಿ ಮೆಸರ್ಸ್ ಸ್ಪೆಕ್ಟ್ರಮ್ ಸ್ಪೇಸ್ ಇನ್ಫ್ರಾ ಮತ್ತು ಇತರರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರ ಏಕ ಸದಸ್ಯ ಪೀಠವು ಈ ಆದೇಶ ನೀಡಿದೆ. ಕಾನೂನಿನಡಿ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದೆ.

ಅಲ್ಲದೆ, ನೋಂದಣಾಧಿಕಾರಿಗಳು ಸಿವಿಲ್ ನ್ಯಾಯಾಲಯದಂತೆ ಕಾರ್ಯನಿರ್ವಹಣೆ ಮಾಡುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ವಿಳಂಬದ ನೆಪದಲ್ಲಿ ಸಂಸ್ಥೆಗಳ ನೋಂದಣಿಯನ್ನು ತಿರಸ್ಕರಿಸುವಂತಿಲ್ಲ. ವಿಳಂಬದ ಕಾರಣಕ್ಕೆ ಶಾಸನಬದ್ಧವಾದ ಹಕ್ಕನ್ನು ರದ್ದುಗೊಳಿಸಲು ಸಾಧ್ಯವಿಲ್ಲ. ಭಾರತೀಯ ಪಾಲುದಾರಿಕೆ ಕಾಯಿದೆಯ ಸೆಕ್ಷನ್ 58ರ ಅಡಿಯಲ್ಲಿ ನೋಂದಣಿಗಾಗಿ ಸಲ್ಲಿಸುವ ಅರ್ಜಿಗಳ ಶಾಸನಬದ್ಧವಾದ ನಿಯಮಗಳನ್ನು ಪೂರೈಸಲಾಗಿದೆಯೇ ಎಂಬುದರ ಕುರಿತು ಪರಿಶೀಲಿಸಲು ರಿಜಿಸ್ಟ್ರಾರ್‌ಗೆ ಸೀಮಿತ ಅಧಿಕಾರವಿರಲಿದೆ. ಆದರೆ, ಅದರ ಸಿಂಧುತ್ವ, ಆಂತರಿಕ ವ್ಯವಸ್ಥೆಗಳು, ಹಿಂದಿನ ಕಾರ್ಯವಿಧಾನಗಳ ಲೋಪಗಳನ್ನು ಪರಿಶೀಲನೆ ನಡೆಸುವಂತಿಲ್ಲ ಎಂದು ತಿಳಿಸಿದೆ.

ಪ್ರಕರಣದ ಹಿನ್ನೆಲೆ: ಅರ್ಜಿದಾರ ಸಂಸ್ಥೆ ನೋಂದಾಯಿಸದಿದ್ದರೂ ಎಸ್.ಮಹಾಲಿಂಗಂ ಮತ್ತು ಮೆಸರ್ಸ್ ಪೋಸಿಡಾನ್ ಟ್ರಸ್ಟ್ ನಡುವೆ ಒಪ್ಪಂದವಾಗಿದ್ದು, ಮೆಸ್ ನಾವೆಲ್ ನೆಕ್ಸ್ ಇನ್ಫ್ರಾ ಹೆಸರಿನಲ್ಲಿ ಪಾಲುದಾರಿಕೆ ಒಪ್ಪಂದದಡಿಯಲ್ಲಿ 2020ರ ಜೂನ್ 10ರಿಂದ ಜಾರಿಯಲ್ಲಿತ್ತು. ಬಳಿಕ 2021ರ ಜುಲೈ 7 ರಂದು ಮತ್ತು ಡಿಸೆಂಬರ್ 6 ರಂದು ಸಂಸ್ಥೆಗೆ ಹೆಚ್ಚುವರಿ ಪಾಲುದಾರರನ್ನು ಸೇರಿಸಿಕೊಂಡು ಮತ್ತೆ ಪುನರ್ರಚನೆ ಮಾಡಲಾಗಿತ್ತು. ಬಳಿಕ 2023ರ ಅಕ್ಟೋಬರ್ 3ರಂದು ತಿದ್ದುಪಡಿ ಮೂಲಕ ತನ್ನ ಹೆಸರನ್ನು ಮೆಸ್ ಸ್ಪೆಕ್ಟ್ರಮ್ ಸ್ಪೇಸ್ ಇನ್ಫ್ರಾ ಎಂಬುದಾಗಿ ಬದಲಾವಣೆ ಮಾಡಿಕೊಂಡಿತ್ತು. ಇದಾದ ನಂತರ ಭಾರತೀಯ ಪಾಲುದಾರಿಕೆ ಕಾಯಿದೆಯಡಿ ಸಂಸ್ಥೆಯ ನೋಂದಣಿಗಾಗಿ ಅರ್ಜಿ ಸಲ್ಲಿಸಿತ್ತು.

ಅನಧಿಕೃತ ಕುರಿ-ಮೇಕೆ ಮಾರುಕಟ್ಟೆ ಶೆಡ್ ತೆರವು

ಬೆಂಗಳೂರು: ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ನಗರದ ವಿವಿಧ ಭಾಗಗಳಲ್ಲಿ ಅನಧಿಕೃತವಾಗಿ ನಿರ್ಮಿಸಲಾಗಿದ್ದ ಕುರಿ ಮತ್ತು ಮೇಕೆ ಮಾರುಕಟ್ಟೆ ಶೆಡ್‌ಗಳ ವಿರುದ್ಧ ಬೆಂಗಳೂರು ಉತ್ತರ ನಗರ ಪಾಲಿಕೆ ಜಂಟಿ ವಿಶೇಷ ಕಾರ್ಯಾಚರಣೆ ನಡೆಸಿತು. ಪಾಲಿಕೆ ಆಯುಕ್ತರಾದ ಪಿ. ಸುನೀಲ್ ಕುಮಾರ್ ಅವರ ನಿರ್ದೇಶನದ ಮೇರೆಗೆ ಪಶುಪಾಲನಾ ಇಲಾಖೆ, ಎಂಜಿನಿಯರಿಂಗ್ ವಿಭಾಗ, ಆರೋಗ್ಯ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಮಾರ್ಷಲ್ ಸಿಬ್ಬಂದಿ ಸಹಯೋಗದಲ್ಲಿ ಕಾರ್ಯಾಚರಣೆ ಕೈಗೊಳ್ಳಲಾಯಿತು.

ಈ ಕುರಿತು ಉತ್ತರ ನಗರ ಪಾಲಿಕೆ ಪಾಲಿಕೆ ಆಯುಕ್ತ ಪಿ. ಸುನೀಲ್ ಕುಮಾರ್, ಸಾರ್ವಜನಿಕ ರಸ್ತೆ, ಪಾದಚಾರಿ ಮಾರ್ಗ, ಖಾಲಿ ಸರಕಾರ ಜಾಗ ಹಾಗೂ ರಾಜಕಾಲುವೆ ಪಕ್ಕಗಳಲ್ಲಿ ಅನುಮತಿ ಇಲ್ಲದೆ ನಿರ್ಮಿಸಲಾಗಿದ್ದ ತಾತ್ಕಾಲಿಕ ಶೆಡ್‌ಗಳು, ತಾರ್ಪಾಲಿನ್ ಆವರಣಗಳು ಮತ್ತು ಕಬ್ಬಿಣದ ಬೇಲಿಗಳನ್ನು ಜೆಸಿಬಿ ಯಂತ್ರಗಳ ಮೂಲಕ ತೆರವುಗೊಳಿಸಲಾಯಿತು. ಕುರಿ ಮತ್ತು ಮೇಕೆ ವ್ಯಾಪಾರಕ್ಕಾಗಿ ಅಕ್ರಮವಾಗಿ ಬಳಸಲಾಗುತ್ತಿದ್ದ ಹಲವು ನಿರ್ಮಿತಿಗಳನ್ನು ಅಧಿಕಾರಿಗಳು ತೆರವು ಮಾಡಿದರು. ಕಾರ್ಯಾಚರಣೆಯ ವೇಳೆ ಸಾರ್ವಜನಿಕ ಸಂಚಾರಕ್ಕೆ ಅಡಚಣೆ ಉಂಟಾಗದಂತೆ ಕ್ರಮ ಕೈಗೊಳ್ಳಲಾಗಿದ್ದು, ನಗರ ಸ್ವಚ್ಛತೆ, ಸಾರ್ವಜನಿಕ ಆರೋಗ್ಯ, ತ್ಯಾಜ್ಯ ನಿರ್ವಹಣೆ ಹಾಗೂ ಪ್ರಾಣಿಗಳ ಕಲ್ಯಾಣಕ್ಕೆ ವಿಶೇಷ ಆದ್ಯತೆ ನೀಡಲಾಗಿದೆ. ಕೆಲವು ಪ್ರದೇಶಗಳಲ್ಲಿ ಸಾರ್ವಜನಿಕರಿಂದ ಸಹಕಾರ ದೊರೆತ ಹಿನ್ನೆಲೆಯಲ್ಲಿ ಕಾರ್ಯಾಚರಣೆ ಶಾಂತಿಯುತವಾಗಿ ಪೂರ್ಣಗೊಂಡಿದೆ. ಸಾರ್ವಜನಿಕ ಆರೋಗ್ಯ ಮತ್ತು ನಗರ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಅನಧಿಕೃತ ಮಾರುಕಟ್ಟೆಗಳಿಗೆ ಅವಕಾಶ ನೀಡುವುದಿಲ್ಲ. ಬಕ್ರೀದ್ ಹಬ್ಬ ಕಾನೂನುಬದ್ಧ ಹಾಗೂ ಪರಿಸರ ಸ್ನೇಹಿಯಾಗಿ ಆಚರಿಸಲು ಸಾರ್ವಜನಿಕರು ಸಹಕರಿಸಬೇಕು ಎಂದು ಮನವಿ ಮಾಡಿದರು. ಕುರಿ ಮತ್ತು ಮೇಕೆ ವ್ಯಾಪಾರಿಗಳಿಗೆ ಪಾಲಿಕೆ ಕೆಲವು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದ್ದು, ಅನುಮತಿ ಪಡೆದ ಸ್ಥಳಗಳಲ್ಲಿ ಮಾತ್ರ ವ್ಯಾಪಾರ ನಡೆಸಬೇಕು, ರಸ್ತೆ ಮತ್ತು ಪಾದಚಾರಿ ಮಾರ್ಗಗಳಲ್ಲಿ ಶೆಡ್ ನಿರ್ಮಿಸಬಾರದು, ತ್ಯಾಜ್ಯವನ್ನು ಸರಿಯಾಗಿ ವಿಲೇವಾರಿ ಮಾಡಬೇಕು ಹಾಗೂ ಪ್ರಾಣಿ ಕಲ್ಯಾಣ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ನಿಯಮ ಉಲ್ಲಂಘಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದರು.

ಉತ್ತರ ನಗರ ಪಾಲಿಕೆ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ನಿರ್ಮಿಸಿದ ಕುರಿ-ಮೇಕೆ ಮಾರುಕಟ್ಟೆ ಶೆಡ್‌ಗಳನ್ನು ತೆರವುಗೊಳಿಸಿದರು.

ನಿರಾಶ್ರಿತರ ಕೇಂದ್ರದಲ್ಲಿದ್ದ ವಿದೇಶಿ ಅಕ್ರಮ ವಲಸಿಗರು ಪರಾರಿ

ಬೆಂಗಳೂರು: ಕೊತ್ತನೂರು ಪೊಲೀಸ್ ಠಾಣಾ ವ್ಯಾಪ್ತಿಯ ಚಿಕ್ಕಗುಬ್ಬಿ ಬಳಿಯ ಹೋಮ್ ಆಫ್ ಹೋಪ್ ನಿರಾಶ್ರಿತರ ಆಶ್ರಮದಲ್ಲಿ ಇರಿಸಲಾಗಿದ್ದ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ ನಾಲ್ವರು ಉಗಾಂಡ ಮಹಿಳೆಯರು ಪೊಲೀಸರ ಬಿಗಿ ಬಂದೋಬಸ್ತ್ ನಡುವೆಯೂ ಪರಾರಿಯಾಗಿದ್ದಾರೆ.

ಮೇ 11ರಂದು ಮುಂಜಾನೆ 3 ಗಂಟೆ ಸುಮಾರಿಗೆ ಆಶ್ರಮದ ಎರಡನೇ ಅಂತಸ್ತಿನ ಕಿಟಕಿಯ ಗ್ರಿಲ್ ಮುರಿದು ತಪ್ಪಿಸಿಕೊಂಡಿದ್ದಾರೆ. ಈ ಸಂಬಂಧ ಕೊತ್ತನೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಪರಾರಿಯಾದ ಮಹಿಳೆಯರು ಉಗಾಂಡ ಮತ್ತು ನೈಜೀರಿಯಾ ಮೂಲದವರಾಗಿದ್ದು, ಅವರ ವೀಸಾ ಅವಧಿ ಮುಗಿದಿದ್ದರೂ ದೇಶಕ್ಕೆ ಮರಳದೆ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದರು. ಉಗಾಂಡದ ತೋಪಿಷ್ಟ, ನಗವ, ಸಫಿನಾ ಮತ್ತು ಪಿತೀನ ಎಂಬ ಮಹಿಳೆಯರು ತಪ್ಪಿಸಿಕೊಂಡವರಲ್ಲಿ ಸೇರಿದ್ದಾರೆ. ಈ ಅಕ್ರಮ ವಲಸಿಗರನ್ನು ವಿದೇಶಿ ಪ್ರಾದೇಶಿಕ ನೋಂದಣಿ ಕಚೇರಿ ಅಧಿಕಾರಿಗಳು ವಶಕ್ಕೆ ಪಡೆದು, ತಮ್ಮ ಜೈಲಿನಲ್ಲಿ ಸ್ಥಳಾವಕಾಶದ ಕೊರತೆಯಿಂದಾಗಿ ಹೋಮ್ ಆಫ್ ಹೋಪ್ ಆಶ್ರಮದಲ್ಲಿ ಇರಿಸಿದ್ದರು.

ಈ ಮಹಿಳೆಯರು ಈಗಾಗಲೇ ಗಾಂಜಾ, ಡ್ರಗ್ಸ್ ಸೇರಿದಂತೆ ಹಲವು ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದರು. ಆಶ್ರಮದಲ್ಲಿ ಇರಿಸಿದ್ದಾಗಲೂ ಅವರ ಬಳಿ ಗಾಂಜಾ ಮತ್ತು ಡ್ರಗ್ಸ್ ಪತ್ತೆಯಾಗಿತ್ತು. ಇದೀಗ ಅವರು ಪರಾರಿಯಾಗಿರುವ ಹಿನ್ನೆಲೆಯಲ್ಲಿ ಮತ್ತೆ ಅಕ್ರಮ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಸಾಧ್ಯತೆಯ ಬಗ್ಗೆ ಪೊಲೀಸರು ಆತಂಕ ವ್ಯಕ್ತಪಡಿಸಿದ್ದಾರೆ.

ಹಸುವಿನ ಮೇಲೆ ಅತ್ಯಾಚಾರ ಎಸಗಿದ ವಿಕೃತ ಕಾಮುಕ

ಬೆಂಗಳೂರು: ನಾಗರಿಕ ಸಮಾಜವೇ ತಲೆತಗ್ಗಿಸುವಂತಹ ಹೀನಾಯ ಘಟನೆಯೊಂದು ಬೆಂಗಳೂರಿನ ಹೃದಯಭಾಗದಲ್ಲಿ ನಡೆದಿದೆ. ಕಾಮದ ಅಮಲೇರಿದ ವಿಕೃತ ಕಾಮಿಯೊಬ್ಬ ಮೂಕ ಪ್ರಾಣಿ ಹಸುವಿನ ಮೇಲೆ ಅತ್ಯಾಚಾರವೆಸಗಿ ಅಮಾನವೀಯತೆ ಮೆರೆದಿದ್ದಾನೆ. ಈ ಆಘಾತಕಾರಿ ದೃಶ್ಯಗಳು ಸಮೀಪದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಆಕ್ರೋಶಕ್ಕೆ ಕಾರಣವಾಗಿದೆ.

ಈ ಘೋರ ಕೃತ್ಯವು ಬೆಂಗಳೂರಿನ ಕಾಟನ್ ಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ತಡರಾತ್ರಿಯ ಸಮಯದಲ್ಲಿ ದ್ವಿಚಕ್ರ ವಾಹನದಲ್ಲಿ ಬಂದ ಅಪರಿಚಿತ ವ್ಯಕ್ತಿಯೊಬ್ಬ, ರಸ್ತೆಯ ಬದಿಯಲ್ಲಿ ಕಟ್ಟಿದ್ದ ಹಸುವಿನ ಬಳಿ ಹೋಗಿದ್ದಾನೆ. ಜನಸಂದಣಿ ಇಲ್ಲದ ಸಮಯವನ್ನು ನೋಡಿ, ಆತ ಹಸುವಿನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಇಡೀ ಕೃತ್ಯವು ಸಿಸಿಟಿವಿ ಕ್ಯಾಮೆರಾದಲ್ಲಿ ಸ್ಪಷ್ಟವಾಗಿ ಸೆರೆಯಾಗಿದ್ದು, ವಿಕೃತ ಕಾಮಿಯ ಮುಖ ಮತ್ತು ಆತ ಬಂದ ವಾಹನದ ವಿವರಗಳು ಪೊಲೀಸರಿಗೆ ಲಭ್ಯವಾಗಿವೆ ಎನ್ನಲಾಗಿದೆ.

ಸಾಮಾಜಿಕ ಜಾಲತಾಣದಲ್ಲಿ ಆಕ್ರೋಶ: ಸಿಸಿಟಿವಿ ದೃಶ್ಯಾವಳಿಗಳು ಇಂಟರ್‌ನೆಟ್‌ನಲ್ಲಿ ಹರಿದಾಡುತ್ತಿದ್ದಂತೆ ಸಾರ್ವಜನಿಕರು ಆಘಾತ ವ್ಯಕ್ತಪಡಿಸಿದ್ದಾರೆ. ಮನುಷ್ಯ ಇಷ್ಟೊಂದು ಕೆಳಮಟ್ಟಕ್ಕೆ ಇಳಿಯಲು ಹೇಗೆ ಸಾಧ್ಯ? ಎಂದು ನೆಟ್ಟಿಗರು ಪ್ರಶ್ನಿಸುತ್ತಿದ್ದಾರೆ. ಪ್ರಾಣಿ ಪ್ರೇಮಿಗಳು ಮತ್ತು ಸ್ಥಳೀಯ ನಿವಾಸಿಗಳು ಕೂಡಲೇ ಈ ದುಷ್ಕರ್ಮಿಯನ್ನು ಬಂಧಿಸಿ, ಕಠಿಣ ಶಿಕ್ಷೆ ವಿಧಿಸಬೇಕೆಂದು ಆಗ್ರಹಿಸಿದ್ದಾರೆ. ಹಸುವನ್ನು ಪೂಜಿಸುವ ನಾಡಿನಲ್ಲಿ ಇಂತಹ ಘಟನೆ ನಡೆದಿರುವುದು ಭಕ್ತರ ಮನಸ್ಸಿಗೂ ನೋವುಂಟು ಮಾಡಿದೆ.

ಖಾಸಗಿ ಕೋಟಾ: ಸೀಟು ಹಂಚಿಕೆಗೆ ಕೆಇಎ ಷರತ್ತು

ಬೆಂಗಳೂರು: ದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳಿಗೆ ಮೊದಲ ಸುತ್ತಿನ ಸೀಟು ಹಂಚಿಕೆಯ ನಂತರ ಕಾಲೇಜುಗಳು ಸಲ್ಲಿಸುವ ಖಾಸಗಿ ಕೋಟಾದ ಉಳಿಕೆ ಸೀಟು ಗಳನ್ನು ಪರಿಗಣಿಸದಿರಲು ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಿರ್ಧರಿಸಿವೆ. ಸಾಮಾನ್ಯ ಪ್ರವೇಶ ಪರೀ ಕ್ಷೆಯ ನಂತರ ವಿದ್ಯಾರ್ಥಿಗಳ ಅರ್ಹತಾ ಪಟ್ಟಿ ಆಧಾರದಲ್ಲಿ ಸೀಟು ಹಂಚಿಕೆಗೆ ಕೌನ್ಸೆಲಿಂಗ್ ಆರಂಭಿಸಲಾಗುತ್ತದೆ. ಎಂಜಿನಿ ಯರಿಂಗ್, ಕೃಷಿ ವಿಜ್ಞಾನ, ಪಶು ವೈದ್ಯ ಕೀಯ, ಬಿ-ಫಾರ್ಮ್, ಫಾರ್ಮ-ಡಿ, ಯೋಗ ಮತ್ತು ನ್ಯಾಚುರೋಪಥಿ, ಅಲೈಡ್ ಹೆಲ್ತ್ ಸೈನ್ಸ್, ಆರ್ಕಿಟೆಕ್ಚರ್, ಬಿ.ಎಸ್ಸಿ ನರ್ಸಿಂಗ್, ಹೋಮಿಯೋಪಥಿ ಕೋರ್ಸ್‌ಗಳಿಗೆ ಸೀಟು ಹಂಚಿಕೆಗೂ ಮೊದಲು ಪ್ರತಿ ಕಾಲೇಜುಗಳೂ ನಿಗದಿಯಾದ ಒಟ್ಟು ಸೀಟ ುಗಳ ಸಂಖ್ಯೆಯನ್ನು ಕೆಇಎಗೆ ಸಲ್ಲಿಸಬೇಕು. ಖಾಸಗಿ ಕಾಲೇಜುಗಳಗೆ ಸೀಟು ಹಂಚಿಕೆ ಮಾಡುವಾಗ ಸರಕಾರಿ ಕೋಟಾದ ಸೀಟುಗಳನ್ನು ಮಾತ್ರ ಕೆಇಎ ಪರಿಗಣಿಸುತ್ತದೆ. ಖಾಸಗಿ ಕೋಟಾದ ಸೀಟುಗಳಲ್ಲಿ ಕೆಲ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಪ್ರವೇಶ ಕಡಿಮೆಯಾದಾಗ ಅಂತಹ ಸೀಟುಗಳನ್ನು ಕೌನ್ಸೆಲಿಂಗ್ ಮೂಲಕ ಭರ್ತಿ ಮಾಡಲು ಕೆಇಎಗೆ ಮನವಿ ಸಲ್ಲಿಸಲಾ ಗುತ್ತದೆ ಉಳಿಕೆಯಾದ ಖಾಸಗಿ ಕೋಟಾ ಸೀಟ್‌ಗಳನ್ನು 2026-27ನೇ ಸಾಲಿನಿಂದ ಎರಡನೇ ಮತ್ತು 3ನೇ ಸುತ್ತಿಗೆ ತೆಗೆದುಕೊಳ್ಳುತ್ತಿಲ್ಲ. ಕಳೆದ ವರ್ಷ 15,000ಕ್ಕೂ ಹೆಚ್ಚು ಸೀಟುಗಳನ್ನು ಮೊದಲ ಸುತ್ತಿನ ನಂತರ ನೀಡ ಲಾಗಿತ್ತು. ಇದು ಕೌನ್ಸೆಲಿಂಗ್ ವಿಳಂಬಕ್ಕೂ ಕಾರಣವಾ ಗಿತ್ತು. ಅಗತ್ಯವಿದ್ದರೆ ಖಾಸಗಿ ಕೋಟಾದ ಸೀಟುಗಳನ್ನು ಮೊದಲ ಸುತ್ತಿಗೂ ಮೊದಲೇ ನೀಡಬೇಕು ಎಂಬ ನಿಯಮ ಸರಕಾರ-ಖಾಸಗಿ ಕಾಲೇಜುಗಳ ನಡುವಿನ ಒಪ್ಪಂದದಲ್ಲೇ ಇದೆ. ಆದರೆ, ಕಟ್ಟುನಿಟ್ಟಾಗಿ ಅನುಸರಿಸುತ್ತಿರಲಿಲ್ಲ. ಈ ವರ್ಷದಿಂದ ಜಾರಿಗೆ ತರಲಾಗುತ್ತಿದೆ ಎಂದು ಕೆಇಎ ಹೇಳಿದೆ.

ಮದುವೆಗೆ ಪೀಡಿಸುತ್ತಿದ್ದ ಪ್ರೇಯಸಿಯ ಕೊಲೆ

ಬೆಂಗಳೂರು: ಮದುವೆಯಾಗುವಂತೆ ಪೀಡಿಸುತ್ತಿದ್ದ ಕಾರಣಕ್ಕೆ ಪ್ರೇಯಸಿಯನ್ನು ಕತ್ತು ಹಿಸುಕಿ ಕೊಲೆ ಮಾಡಿ, ಶವವನ್ನು ಕೆರೆಗೆ ಎಸೆದಿದ್ದ ಅಸ್ಸಾಂ ಮೂಲದ ಆರೋಪಿಯನ್ನು ಹೆಬ್ಬಗೋಡಿ ಪೊಲೀಸರು ಬಂಧಿಸಿದ್ದಾರೆ.

ಮೇ 9ರಂದು ನಡೆದಿದ್ದ ಅಸಹಜ ಸಾವು ಪ್ರಕರಣದ ಜಾಡು ಹಿಡಿದು ಹೊರಟ ಪೊಲೀಸರು, ಇದೀಗ ಇದೊಂದು ವ್ಯವಸ್ಥಿತ ಕೊಲೆ ಎಂಬುದನ್ನು ಬಯಲಿಗೆಳೆದು ಆರೋಪಿಯನ್ನು ಜೈಲಿಗಟ್ಟುವಲ್ಲಿ ಯಶಸ್ವಿಯಾಗಿದ್ದಾರೆ. ಕಳೆದ ಮೇ 9ರಂದು ಆನೇಕಲ್ ತಾಲೂಕಿನ ಹೆಬ್ಬಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯ ತಿರುಪಾಳ್ಯ ಕೆರೆಯಲ್ಲಿ ಸುಮಾರು 47 ವರ್ಷದ ಮಹಿಳೆಯೊಬ್ಬರ ಶವ ಅನುಮಾನಾಸ್ಪದ ರೀತಿಯಲ್ಲಿ ಪತ್ತೆಯಾಗಿತ್ತು. ಮಹಿಳೆಯು ಹೊರರಾಜ್ಯದವಳಾಗಿದ್ದಳು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿದ್ದ ಹೆಬ್ಬಗೋಡಿ ಪೊಲೀಸರು, ಆರಂಭದಲ್ಲಿ ಇದನ್ನು ಅಸಹಜ ಸಾವು (ಯುಡಿಆರ್) ಎಂದು ಪರಿಗಣಿಸಿದ್ದರು. ಆದರೆ, ಮರಣೋತ್ತರ ಪರೀಕ್ಷೆ ವರದಿ ಕೈಸೇರಿದಾಗ ವೈದ್ಯರ ಅಭಿಪ್ರಾಯದಂತೆ ಮಹಿಳೆಯನ್ನು ಕತ್ತು ಹಿಸುಕಿ, ಉಸಿರುಗಟ್ಟಿಸಿ ಕೊಲೆ ಮಾಡಲಾಗಿದೆ ಎಂಬ ಸತ್ಯ ಬಯಲಿಗೆ ಬಂದಿತ್ತು. ತಕ್ಷಣ ಎಚ್ಚೆತ್ತ ಪೊಲೀಸರು, ಇದೇ ಪ್ರಕರಣವನ್ನು ಸುಮೋಟೊ (ಸ್ವಯಂ ಪ್ರೇರಿತ) ಕೊಲೆ ಪ್ರಕರಣವಾಗಿ ಬದಲಾಯಿ ಸಿಕೊಂಡು ತನಿಖೆ ಚುರುಕುಗೊಳಿಸಿದರು.

ಅಸ್ಸಾಂ ಮೂಲದ ಆರೋಪಿಯ ಬಂಧನ: ಪ್ರಕರಣದ ತನಿಖೆಗಿಳಿದ ಪೊಲೀಸರಿಗೆ ಸ್ಥಳದಲ್ಲಿ ಕೆಲ ತಾಂತ್ರಿಕ ಹಾಗೂ ಸಾಂದರ್ಭಿಕ ಸಾಕ್ಷ್ಯಗಳು ಲಭ್ಯವಾದವು. ಈ ಸಾಕ್ಷ್ಯಗಳ ಆಧಾರದ ಮೇಲೆ, ಮೃತ ಮಹಿಳೆಯೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಅಸ್ಸಾಂ ಮೂಲದ ವ್ಯಕ್ತಿಯೊಬ್ಬನ ಮೇಲೆ ಅನುಮಾನ ವ್ಯಕ್ತವಾಗಿತ್ತು. ಕಾರ್ಯಪ್ರವೃತ್ತರಾದ ಪೊಲೀಸರು, ಮೇ 14ರಂದು ಆತನನ್ನು ತಿರುಪಾಳ್ಯದಲ್ಲಿರುವ ಆತನ ವಾಸದ ಮನೆಯಲ್ಲೇ ವಶಕ್ಕೆ ಪಡೆದುಕೊಂಡರು. ವಶಕ್ಕೆ ಪಡೆದ ಆರೋಪಿಯನ್ನು ತೀವ್ರ ವಿಚಾರಣೆಗೊಳಪಡಿಸಿದಾಗ ಕೊಲೆಯ ಹಿಂದಿನ ಅಸಲಿ ಕಾರಣ ಬಾಯ್ಬಿಟ್ಟಿದ್ದಾನೆ. ಮೃತ ಮಹಿಳೆ ಹಾಗೂ ಆರೋಪಿಯ ನಡುವೆ ಅಕ್ರಮ ಸಂಬಂಧವಿತ್ತು. ಆದರೆ, ಆಕೆಯು ತನ್ನನ್ನು ಮದುವೆಯಾಗುವಂತೆ ಆರೋಪಿಗೆ ಸತತವಾಗಿ ಒತ್ತಾಯ ಮಾಡುತ್ತಿದ್ದಳು. ಇದೇ ವಿಚಾರವಾಗಿ ಆತನಿಗೆ ಕಿರಿಕಿರಿ ಉಂಟಾಗಿತ್ತು. ಕೊನೆಗೆ ಕೋಪಗೊಂಡ ಆರೋಪಿಯು ಆಕೆಯ ಕುತ್ತಿಗೆ ಹಿಸುಕಿ, ಉಸಿರುಗಟ್ಟಿಸಿ ಬರ್ಬರವಾಗಿ ಕೊಲೆ ಮಾಡಿದ್ದಾನೆ. ಪಾಪಕೃತ್ಯ ಯಾರಿಗೂ ತಿಳಿಯದಿರಲಿ ಎಂದು ಮೃತದೇಹವನ್ನು ಕೆರೆಯ ಮಧ್ಯದಲ್ಲಿ ಬೆಳೆದಿದ್ದ ಹಸಿರು ಹುಲ್ಲಿನೊಳಗೆ ಎಸೆದು ಪರಾರಿಯಾಗಿದ್ದ ಎಂಬುದು ತನಿಖೆಯಿಂದ ದೃಢಪಟ್ಟಿದೆ.

ನ್ಯಾಯಾಂಗ ಬಂಧನಕ್ಕೆ ಆರೋಪಿ

ಬಂಧಿತ ಆರೋಪಿಯನ್ನು ಮೇ 15ರಂದು ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದ್ದು, ನ್ಯಾಯಾಲಯವು ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದೆ. ಎಲೆಕ್ಟ್ರಾನಿಕ್ ಸಿಟಿ ವಿಭಾಗದ ಡಿಸಿಪಿ ನಾರಾಯಣ್ ಅವರ ಮಾರ್ಗ ದರ್ಶನ ಹಾಗೂ ಎಸಿಪಿ ಸತೀಶ್ ಕೆ.ಎಂ. ಅವರ ನೇತೃತ್ವದಲ್ಲಿ, ಹೆಬ್ಬಗೋಡಿ ಪೊಲೀ ಸ್ ಇನ್ಸ್‌ಪೆಕ್ಟರ್ ಸೋಮಶೇಖರ್ ಮತ್ತು ಇತರ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಪ್ರಕರಣವನ್ನು ಯಶಸ್ವಿಯಾಗಿ ಭೇದಿಸಿದ್ದಾರೆ.

ಯುವ ಕಾಂಗ್ರೆಸ್ ವಿರುದ್ಧ ಕಠಿಣ ಕ್ರಮ

ಬೆಂಗಳೂರು: ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ (ಕೆಪಿವೈಸಿಸಿ) ಸಮಿತಿಯಲ್ಲಿ ಸಂಘಟನಾತ್ಮಕ ಶಿಸ್ತು ಕಾಪಾಡುವ ನಿಟ್ಟಿನಲ್ಲಿ ಭಾರತೀಯ ಯುವ ಕಾಂಗ್ರೆಸ್ ಮಹತ್ವದ ನಿರ್ಧಾರ ಕೈಗೊಂಡಿದೆ. ಸಂಘಟನೆಯಲ್ಲಿ ನಿಷ್ಕ್ರಿಯತೆ ಮತ್ತು ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ರಾಜ್ಯ ಘಟಕದ ಒಟ್ಟು 15 ಪದಾಧಿಕಾರಿಗಳನ್ನು ಅವರ ಸ್ಥಾನ ಮತ್ತು ಜವಾಬ್ದಾರಿಗಳಿಂದ ತಕ್ಷಣದಿಂದ ಜಾರಿಗೆ ಬರುವಂತೆ ತಾತ್ಕಾಲಿಕವಾಗಿ ಮುಕ್ತಗೊಳಿಸಲಾಗಿದೆ.

ಯುವ ಕಾಂಗ್ರೆಸ್ ಪದಾಧಿಕಾರಿಗಳು ಸಂಘಟನೆಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು, ನಾಯಕತ್ವ ಗುಣ ಪ್ರದರ್ಶಿಸಬೇಕು ಮತ್ತು ಕಡ್ಡಾಯ ಸಭೆಗಳಿಗೆ ಹಾಜರಾಗಬೇಕು ಎಂಬ ನಿಯಮವಿದೆ. ಆದರೆ, ಈ 15 ಪದಾಧಿಕಾರಿಗಳು ಕಳೆದ ಕೆಲವು ಸಮಯದಿಂದ ಸಂಘಟನಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿಲ್ಲ ಮತ್ತು ತಮ್ಮ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿಭಾಯಿಸುತ್ತಿಲ್ಲ ಎಂಬುದು ಪರಿಶೀಲನೆಯಲ್ಲಿ ತಿಳಿದುಬಂದಿದೆ. ಈ ಹಿನ್ನೆಲೆಯಲ್ಲಿ ಸಂಘಟನೆಯ ಹಿತದೃಷ್ಟಿಯಿಂದ ಇವರನ್ನು ಹುದ್ದೆಯಿಂದ ಕೆಳಗಿಳಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಭಾರತೀಯ ಯುವ ಕಾಂಗ್ರೆಸ್‌ನ ನಿಗಮ್ ಭಂಡಾರಿ, ಶ್ರೀನಿವಾಸ್ ರಾಥೋಡ್, ತಾರಿಖ್ ಬಾಗ್ವಾನ್ ಮತ್ತು ಮಂಜುನಾಥ್ ಎಚ್.ಎಸ್. ಅವರು ಈ ಜಂಟಿ ಆದೇಶಕ್ಕೆ ಸಹಿ ಹಾಕಿದ್ದಾರೆ. ಮುಂದಿನ ಪರಾಮರ್ಶೆಯವರೆಗೆ ಈ ಪದಾಧಿಕಾರಿಗಳನ್ನು ಕರ್ತವ್ಯದಿಂದ ದೂರವಿಡಲಾಗಿದೆ ಎಂದು ಆದೇಶ ಪತ್ರದಲ್ಲಿ ಸ್ಪಷ್ಟಪಡಿಸಲಾಗಿದೆ. ಈ ಬೆಳವಣಿಗೆಯು ರಾಜ್ಯ ಯುವ ಕಾಂಗ್ರೆಸ್ ಘಟಕದಲ್ಲಿ ಸಂಚಲನ ಮೂಡಿಸಿದ್ದು, ನಿಷ್ಕ್ರಿಯವಾಗಿರುವ ಇತರ ಪದಾಧಿಕಾರಿಗಳಿಗೂ ಇದೊಂದು ಎಚ್ಚರಿಕೆಯ ಸಂದೇಶವೆಂದು ಹೇಳಲಾಗುತ್ತಿದೆ.

ಯಾರ ವಿರುದ್ಧ ಕ್ರಮ?

ರಾಜ್ಯ ಉಪಾಧ್ಯಕ್ಷೆ ದೀಪಿಕಾ ರೆಡ್ಡಿ, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಸಿ.ಎಸ್. ಫ್ರಾನ್ಸಿಸ್ ಬೆನಿಟೊ, ಬಿಂದು ಗೌಡ, ಸುಮನ್ ಸೋಮಶೇಖರ್, ಅಫ್ಘಾನಖಾನಂ, ಲಕ್ಷ್ಮಿ ಕೆ, ವಾಣಿ ಕಾಂಬ್ಳೆ, ದಕ್ಷಿಣಮೂರ್ತಿ ಎಸ್, ಕಾರ್ಯದರ್ಶಿಗಳಾದ ಅಬ್ದುಲ್ ರವೂಫ್ ಬಿ.ಎಂ., ಸೈಯದ್ ಹುಸೇನ್ ಖಾದ್ರಿ, ಮೊಹಮ್ಮದ್ ಆಸಿಫ್ ಹುಸೇನ್, ಎಸ್.ಆರ್.ಎಸ್ ಚಂದ್ ಬಾಷಾ, ಗೋವರ್ಧನ್ ಜಿ.ಸಿ,. ಪವನ್ ಸಾಲಿಯಾನ್, ನವೀನ್ ಕುಮಾರ್ ಎಸ್.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಕರ್ನಾಟಕ ಸಾರಿಗೆ ಮೂರು ವರ್ಷಗಳ ಪ್ರಗತಿಯ ಪಯಣ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶಕ್ತಿ ಗ್ಯಾರಂಟಿ
ಮಹಿಳಾ ಸಬಲೀಕರಣದತ್ತ ಪಯಣ
740 ಕೋಟಿ
ಉಚಿತ ಟಿಕೆಟ್‌ಗಳು
ರೂ. 19349.26 ಕೋಟಿ ಮೌಲ್ಯ

ಹೊಸ ಬಸ್ಸುಗಳ ಸೇರ್ಪಡೆ

7800 ಹೊಸ ಬಸ್ಸುಗಳ ಸೇರ್ಪಡೆಗೆ ಅನುಮೋದನೆ | ಈಗಾಗಲೇ **5998** ಬಸ್ಸುಗಳ ಸೇರ್ಪಡೆ (ಕರಾರಸಾನಿ-**1286** (EV ಬಸ್ - **50**), ಬಿಎಂಟಿಸಿ-**2329** (EV ಬಸ್ - **1730**), ವಾಕರಸಾಸಂ-**1210**, ಕಕರಸಾನಿ-**1173**)

ಪ್ರಾಜೆಕ್ಟ್ ಮೆಜೆಸ್ಟಿಕ್

ಬೆಂಗಳೂರಿನ ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ **'ಸಾರಿಗೆ ಹಬ್'** ನಿರ್ಮಾಣಕ್ಕೆ ಕಾರ್ಯ ಯೋಜನೆ ರೂಪಿಸಲಾಗಿದೆ

ವೇತನ ಪರಿಷ್ಕರಣೆ

1.05 ಲಕ್ಷ ನೌಕರರಿಗೆ ಶೇ. **12.5** ರಷ್ಟು ವೇತನ ಹೆಚ್ಚಳ | ನಾಲ್ಕು ಸಾರಿಗೆ ನಿಗಮಗಳಿಗೆ ಪ್ರತಿ ತಿಂಗಳು **ರೂ. 72.80** ಕೋಟಿ, ಪ್ರತಿ ವರ್ಷ **ರೂ. 873.64** ಕೋಟಿ ಹೆಚ್ಚುವರಿ ವೆಚ್ಚ

ಮಾರ್ಚ್ 2023 ರ ವೇತನ ಹೆಚ್ಚಳ ಹಿಂಬಾಕಿ

ವೇತನ ಪರಿಷ್ಕರಣೆಯ ಹಿಂಬಾಕಿ ಮೊತ್ತ **ರೂ. 1271.92** ಕೋಟಿ ಪಾವತಿಗೆ ಅನುಮೋದನೆ ಮೊದಲ ಕಂತಿನ ಹಣ **ರೂ. 450** ಕೋಟಿ ಬಿಡುಗಡೆ

ಕೆ ಎಸ್ ಆರ್ ಟಿ ಸಿ ಆರೋಗ್ಯ

280ಕ್ಕೂ ಹೆಚ್ಚು ಆಸ್ಪತ್ರೆಗಳಲ್ಲಿ ಸಿಬ್ಬಂದಿಗಳಿಗೆ ಹಾಗೂ ಅವಲಂಬಿತರಿಗೆ ಚಿಕಿತ್ಸೆ | ಇಲ್ಲಿಯವರೆಗೆ ಒಟ್ಟು **1,86,973** ಕ್ಲೇಮುಗಳು | **ರೂ. 55.02** ಕೋಟಿ ಪಾವತಿ | ವೈದ್ಯಕೀಯ ಮರುಪಾವತಿ ವೆಚ್ಚ ವಾರ್ಷಿಕ **ರೂ.16** ಕೋಟಿ

ಸಾರಿಗೆ ಸುರಕ್ಷಾ / ಕುಟುಂಬ ಕಲ್ಯಾಣ ವಿಮಾ ಯೋಜನೆ

ಅಪಘಾತದಲ್ಲಿ (ಆನ್ ಡ್ಯೂಟಿ / ಆಫ್ ಡ್ಯೂಟಿ) ಮೃತಪಟ್ಟ ಸಿಬ್ಬಂದಿಯ ಅವಲಂಬಿತರಿಗೆ **ರೂ.1** ಕೋಟಿ / **ರೂ. 50** ಲಕ್ಷ / **ರೂ. 30** ಲಕ್ಷದಂತೆ **ರೂ. 66.50** ಕೋಟಿ ಪಾವತಿ, ಅಪಘಾತ ಹೊರತು ಪಡಿಸಿ ಮೃತಪಟ್ಟ ಸಿಬ್ಬಂದಿಗಳ ಕುಟುಂಬಕ್ಕೆ **ರೂ. 3** ಲಕ್ಷದಿಂದ **ರೂ. 14** ಲಕ್ಷದವರೆಗೆ ಹೆಚ್ಚಳ, ಒಟ್ಟು **ರೂ. 93.28** ಕೋಟಿ ಪಾವತಿ

ಸಾರಿಗೆ ಮಿತ್ರ (HRMS 2.0)

ನೌಕರರ ರಜೆ ಹಾಗೂ ಹಾಜರಾತಿಯಲ್ಲಿ ಪಾರದರ್ಶಕತೆ / ಏಕರೂಪತೆ, ಸಮಗ್ರ ಸೇವಾ ದಾಖಲಾತಿ, ಭವಿಷ್ಯ ನಿಧಿ ಮಾಹಿತಿ

ಡಿಜಿಟಲ್ ಉಪಕ್ರಮಗಳು

ಬಸ್ಸುಗಳಲ್ಲಿ ಯುಪಿಐ ಡಿಜಿಟಲ್ ಪಾವತಿ ಅವತಾರ್ 4.0 | ಶೇ. **52** ರಷ್ಟು UPI ಬಳಕೆ | ಇನ್ವೆಂಟರಿ ಮ್ಯಾನೇಜ್‌ಮೆಂಟ್ (ಇ-ಉಗ್ರಾಣ) | 'ನಮ್ಮ ಬಿಎಂಟಿಸಿ' ಮೊಬೈಲ್ ಅಪ್ಲಿಕೇಶನ್ | ಲ್ಯಾಂಡ್ ಬೀಟ್ ಆಪ್ | ಇ-ವಾಣಿಜ್ಯ | ವಾಯುವ್ಯ ಸ್ನೇಹಿ | ನಮ್ಮ ಕಲಬುರಗಿ | ಅಪಘಾತ ನಿರ್ವಹಣಾ ತಂತ್ರಾಂಶ | ಇ-ಮಳಿಗೆ | ನ್ಯಾಯ ಪಥ

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಿಗೆ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪ್ರಶಸ್ತಿಗಳು

1997-2026	ಮೇ 2023 - ಮೇ 2026
694	**245**

ಶಕ್ತಿ ಯೋಜನೆಯಡಿಯಲ್ಲಿ ಮಹಿಳಾ ಪ್ರಯಾಣಿಕರ ಪ್ರಯಾಣವು ವಿಶ್ವದಾಖಲೆಗಳಲ್ಲಿ ಸೇರ್ಪಡೆ

ಹೊಸ ನೇಮಕಾತಿ

10497 ಹುದ್ದೆಗಳ ನೇಮಕಾತಿ | **9000** ಹೊಸ ನೇಮಕಾತಿ | **1497** ಅನುಕಂಪದ ನೇಮಕಾತಿ ಪೂರ್ಣ

ಬಸ್ಸುಗಳ ಪುನಃಶ್ಚೇತನ ಕಾರ್ಯ

2109 ಬಸ್ಸುಗಳ ಪುನಃಶ್ಚೇತನ ಕಾರ್ಯ

ಬಸ್ ಟ್ರಿಪ್‌ಗಳು

ಪ್ರತಿದಿನದ ಬಸ್ ಟ್ರಿಪ್‌ಗಳ ಸಂಖ್ಯೆ **154955** ರಿಂದ **186506**ಕ್ಕೆ ಹೆಚ್ಚಳ

ಧ್ವನಿ ಸ್ಪಂದನ

ದೃಷ್ಟಿ ವಿಶೇಷ ಚೇತನ ಪ್ರಯಾಣಿಕ ಸ್ನೇಹಿ ಉಪಕ್ರಮ

ತರಬೇತಿ

ಸಂಸ್ಥೆಗಳಲ್ಲಿ ಪರಿಣಾಮಕಾರಿ ತರಬೇತಿ ಕಾರ್ಯಯೋಜನೆ ರೂಪಿಸಿದ್ದು, ಒಂದು ವರ್ಷದ ಅವಧಿಯಲ್ಲಿ **33482** ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆ

ಮಾನ್ಯ ಸಾರಿಗೆ ಹಾಗೂ ಮುಜರಾಯಿ ಸಚಿವರಾದ **ಶ್ರೀ ರಾಮಲಿಂಗಾ ರೆಡ್ಡಿ** ಅವರು ನೂತನವಾಗಿ ನೇಮಕಗೊಂಡ ಚಾಲನಾ ಸಿಬ್ಬಂದಿಗಳಿಗೆ ನೇಮಕಾತಿ ಆದೇಶ ನೀಡಿದರು

ಮೂಲಸೌಕರ್ಯ ಅಭಿವೃದ್ಧಿ ಕಾರ್ಯ

ಮೈಸೂರು ನಗರದಲ್ಲಿ **ರೂ.120** ಕೋಟಿ ವೆಚ್ಚದಲ್ಲಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಕ್ರಮ | ಬೆಳಗಾವಿ, ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ಬಸ್ ನಿಲ್ದಾಣ ನಿರ್ಮಾಣ | ರಾಜ್ಯಾದ್ಯಂತ **31** ಬಸ್ ನಿಲ್ದಾಣಗಳು | **12** ಬಸ್ ಘಟಕಗಳು | **12** ಸ್ಥಳ/ಘಟಕಗಳಲ್ಲಿ ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಸ್ಟೇಷನ್‌ಗಳು | **10** ಸಿಬ್ಬಂದಿ ವಸತಿ ಗೃಹಗಳು ಮತ್ತು **02** ತರಬೇತಿ ಕೇಂದ್ರಗಳ ನಿರ್ಮಾಣ / ಮೇಲ್ದರ್ಜೆಗೇರಿಸಲಾಗಿದೆ | **ಸ್ಮಾರ್ಟ್ ಸಿಟಿ ಯೋಜನೆ**ಯಡಿ ಬೆಳಗಾವಿ, ತುಮಕೂರು (ಮೊದಲ ಹಂತ), ದಾವಣಗೆರೆ ಮತ್ತು ಬೇತೂರು ರಸ್ತೆ ಬಸ್ ನಿಲ್ದಾಣಗಳ ಮರುನಿರ್ಮಾಣ

ಬಸ್ಸುಗಳ ಬ್ರಾಂಡಿಂಗ್

ಅಶ್ವಮೇಧ | ಪಲ್ಲಕ್ಕಿ | ಅಂಬಾರಿ ಉತ್ಸವ | ಕಲ್ಯಾಣ ರಥ | ಐರಾವತ ಕ್ಲಬ್ ಕ್ಲಾಸ್ 2.0 | ಅಮೋಘವರ್ಷ | ರಾಜ ರಥ

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ

18,758 ಸಿಬ್ಬಂದಿಗಳಿಗೆ ಹೃದಯ ತಪಾಸಣೆ, **10** ಸಿಬ್ಬಂದಿಗಳಿಗೆ ತೆರೆದ ಹೃದಯ ಚಿಕಿತ್ಸೆ ಹಾಗೂ **42** ಸಿಬ್ಬಂದಿಗಳಿಗೆ ಸ್ಟಂಟ್ ಅಳವಡಿಕೆ, ವೆಚ್ಚ **ರೂ. 50.56** ಲಕ್ಷ ಪಾವತಿ

ಸಾರಿಗೆ ವಿದ್ಯಾ ಚೇತನ / ವಿದ್ಯಾ ಸ್ಫೂರ್ತಿ

ಸಿಬ್ಬಂದಿಗಳ ಮಕ್ಕಳಿಗೆ ಅತ್ಯಧಿಕ ಮೊತ್ತದ ವಿದ್ಯಾರ್ಥಿ ವೇತನ ಹೆಚ್ಚಳ ಹಾಗೂ ಇಲ್ಲಿಯವರೆಗೆ **ರೂ. 4.25** ಕೋಟಿ ಪಾವತಿ

ಮೊಬೈಲ್ ಕಾರ್ಯಾಗಾರ/ ಮೆಟ್ರೋ ಫೀಡರ್ ವ್ಯವಸ್ಥೆ

ಅಪಘಾತ ತುರ್ತು ಸ್ಪಂದನ ವಾಹನ | ಸಂಚಾರಿ ಕಾರ್ಯಾಗಾರ ನಿಯೋಜನೆ | **241** ಮೆಟ್ರೋ ಫೀಡರ್ ಬಸ್ಸುಗಳು | **12** ಪ್ಯಾಕೇಜ್ ಟೂರ್ | **142** ಎಕ್ಸ್ ಪ್ರೆಸ್ | **33** ನೈಸ್ ರಸ್ತೆಗಳ ಸೇವೆಗಳು | **10292** ಪ್ರತಿ ದಿನ ಹೆಚ್ಚುವರಿ ಟ್ರಿಪ್‌ಗಳು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು

ನುಡಿದಂತೆ ನಡೆದಿದ್ದೇವೆ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಸಮಾಚಾರ ಸಣ್ಣದಲ್ಲ

ಉಸಿರುಗಟ್ಟಿಸಿ ಅಣ್ಣನ ಕೊಂದ ತಮ್ಮ

ರಾಯಚೂರು: ತಾಯಿಗೆ ಬಾಯಿಗೆ ಬಂದಂತೆ ನಿಂದನೆ ಮಾಡಿದ ಅಣ್ಣನನ್ನು ತಮ್ಮನೇ ಕೊಲೆ ಮಾಡಿರುವ ಘಟನೆ ಜಿಲ್ಲೆಯ ಲಿಂಗಸೂಗೂರು ಪಟ್ಟಣದ ಬಸವಸಾಗರ ಕ್ರಾಸ್ ಬಳಿ ನಡೆದಿದೆ. ಅಣ್ಣ ಬಸವರಾಜ(37) ಕೊಲೆಯಾದ ವ್ಯಕ್ತಿ. ತಮ್ಮ ಶ್ರೀಧರ ಕೊಲೆ ಮಾಡಿದ ಆರೋಪಿ ಎಂದು ಪೊಲೀಸರು ತಿಳಿಸಿದ್ದಾರೆ. ಈ ಕುರಿತು ಎಸ್ಪಿ ಅರುಣಾಂಗ್ಶು ಗಿರಿ ಅವರು ಮಾತನಾಡಿದ್ದು, ಶ್ರೀಧರ್ ಎಂಬುವರು ತನ್ನ ಅಣ್ಣ ಬಸವರಾಜ ಅವರನ್ನು ಕೊಲೆ ಮಾಡಿದ್ದಾರೆ. ಬಸವರಾಜ ಅವರು ಕುಡಿದು ಬಂದು ತಾಯಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಈ ಮಾತನ್ನು ಕೇಳಿಸಿಕೊಂಡ ಶ್ರೀಧರ್ ಅವರು ಕೋಪಿತರಾಗಿ ಅಣ್ಣ ನಿದ್ದೆಯಲ್ಲಿದ್ದ ವೇಳೆ ದಿಂಬಿನಿಂದ ಉಸಿರುಗಟ್ಟಿಸಿ ಕೊಲೆ ಮಾಡಿದ್ದಾರೆ. ಆರೋಪಿ ಶ್ರೀಧರ್‌ನನ್ನು ವಿಚಾರಣೆ ಮಾಡಿ ಮರ್ಡರ್ ಆಗಿರುವುದು ಖಚಿತವಾದ ಮೇಲೆ ಪ್ರಕರಣ ದಾಖಲಿಸಿಕೊಂಡಿದ್ದೇವೆ. ಈಗಾಗಲೇ ಶ್ರೀಧರ್‌ನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಹೇಳಿದರು.

ಹಾಜರಾತಿಯಲ್ಲಿ ಜೈ ಶ್ರೀರಾಮ್ ಹೇಳಿ

ವಿಜಯಪುರ: ಇನ್ನುಮುಂದೆ ಶಾಲೆಯಲ್ಲಿ ಹಾಜರಾತಿ ವೇಳೆ ಯೆಸ್ ಸರ್ ಎನ್ನುವ ಬದಲು ಜೈ ಶ್ರೀರಾಮ್ ಹೇಳಿ. ಶಿಕ್ಷಕರಿಗೆ ನಮಸ್ಕರಿಸುವಾಗ ಜೈ ಶ್ರೀರಾಮ್ ಎನ್ನಿ ಎಂದು ವಿದ್ಯಾರ್ಥಿಗಳಿಗೆ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಕರೆ ನೀಡಿದ್ದಾರೆ. ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ಧರಿಸಲು ಮತ್ತೆ ಅವಕಾಶ ನೀಡಿರುವ ಹಿನ್ನೆಲೆ ರಾಜ್ಯ ಸರಕಾರದ ವಿರುದ್ಧ ಶಾಸಕ ಯತ್ನಾಳ್ ಹರಿಹಾಯ್ದಿದ್ದಾರೆ. ಜೂನ್‌ನಲ್ಲಿ ಶಾಲೆಗಳು ಆರಂಭವಾದ ಬಳಿಕ ಪ್ರತಿಯೊಬ್ಬರಿಗೂ ಕೇಸರಿ ಶಾಲು ವಿತರಣೆ ಮಾಡುತ್ತೇನೆ. ಕೇಸರಿ ಶಾಲು ಧರಿಸುವುದಕ್ಕೆ ನಿಷೇಧ ಹೇರಲು ಕಾಂಗ್ರೆಸ್‌ನವರಿಗೆ ಅಧಿಕಾರ ಕೊಟ್ಟವರು ಯಾರು? ಕೇಸರಿ ಶಾಲು ಹಾಕಲು ನಮಗೆ ಹಕ್ಕಿದೆ. ರಾಜ್ಯದ ಎಲ್ಲಾ ಹಿಂದೂಗಳಿಗೆ ಕರೆ ಕೊಡುತ್ತಿದ್ದೇನೆ. ಎಲ್ಲಾ ಪೋಷಕರು ತಮ್ಮ ಮಕ್ಕಳಿಗೆ ತಿಲಕ ಇಟ್ಟು ಕೇಸರಿ ಶಾಲು ಹಾಕಿ ಶಾಲೆಗೆ ಕಳುಹಿಸಿ. ಇವರು ಹೇಗೆ ವಿರೋಧ ಮಾಡುತ್ತಾರೆ? ಹೇಗೆ ತಡೆಯುತ್ತಾರೆ? ನಾವು ನೋಡುತ್ತೇವೆ ಎಂದು ಸವಾಲು ಹಾಕಿದ್ದಾರೆ.ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆಗೆ ಕಾಂಗ್ರೆಸ್ ಟೀಕೆ ಬಗ್ಗೆ ಪ್ರತಿಕ್ರಿಯಿಸಿ, ಬಿಜೆಪಿ ಸರಕಾರ ಇದ್ದಾಗ ತಮಿಳುನಾಡಿನಲ್ಲಿ ಸ್ಟಾಲಿನ್ ಬೆಲೆ ಇಳಿಕೆ ಮಾಡಿದ್ದಾರೆ. ಹಾಗೆಯೇ ಬಿಜೆಪಿ ಸರಕಾರವೂ ಇಳಿಕೆ ಮಾಡಬೇಕು ಎಂದು ಕಾಂಗ್ರೆಸ್‌ನವರೇ ಟ್ವೀಟ್ ಮಾಡಿದ್ದರು ಎಂದರು.

ಸಿದ್ದರಾಮಯ್ಯ ಆಡಳಿತ ಸಂಪೂರ್ಣ ಕುಸಿತ

ಕೊಪ್ಪಳ: ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ಮೂರು ವರ್ಷ ಪೂರೈಸುತ್ತಿದ್ದರೂ ಸಿಎಂ ಸಿದ್ದರಾಮಯ್ಯ ಅವರ ಆಡಳಿತ ಸಂಪೂರ್ಣ ಕುಸಿದು ಹೋಗಿದೆ ಎಂದು ಮಾಜಿ ಸಚಿವ ಬಿ. ಶ್ರೀರಾಮುಲು ರಾಜ್ಯ ಸರಕಾರದ ವಿರುದ್ಧ ಕಿಡಿಕಾರಿದರು. ಕೊಪ್ಪಳದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಬರೀ ಸಿಎಂ ಬದಲಾವಣೆ ಚರ್ಚೆ ನಡೆದಿದೆ. ಸಿಎಂ ಕುರ್ಚಿಯ ನಾಲ್ಕು ಕಾಲುಗಳಲ್ಲಿ ಒಂದು ಕಾಲನ್ನು ಡಿಸಿಎಂ ಡಿ.ಕೆ ಶಿವಕುಮಾರ್ ಕಿತ್ತುಕೊಂಡಿದ್ದಾರೆ. ಮೂರು ಕಾಲಿನ ಕುರ್ಚಿಯ ಮೇಲೆ ಸಿಎಂ ಅವರು ಹೇಗೆ ಆಡಳಿತ ನಡೆಸುತ್ತಾರೋ ನಮಗೆ ತಿಳಿಯುತ್ತಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರ ರಾಜೀನಾಮೆ ಕೇಳುವ ಕಾಂಗ್ರೆಸ್ ನಾಯಕರು. ಈ ಹಿಂದೆ ಬುದ್ಧಿ ಇರುವ ವ್ಯಕ್ತಿಗಳನ್ನೇ ಪ್ರಧಾನಿ ಮಾಡಿ ದೇಶವನ್ನು ಅಧೋಗತಿಗೆ ತಳ್ಳಿದ್ದರು. ರಾಜ್ಯವು ದಿವಾಳಿಯಾಗಿದೆ. ಆರ್ಥಿಕ ಪರಿಸ್ಥಿತಿಯು ಸರಿಯಿಲ್ಲ. ಪ್ರಧಾನಿ ಅವರು ಚಿನ್ನಾಭರಣ ಖರೀದಿಸಬೇಡಿ ಎಂದಿದ್ದಾರೆ. ಈ ಹಿಂದೆ ಮಾಜಿ ಪ್ರಧಾನಿ ಇಂದಿರಾಗಾಂಧಿ, ಕೇಂದ್ರ ಹಣಕಾಸು ಸಚಿವರಾಗಿದ್ದ ಪಿ.ಚಿದಂಬರಂ ಕೂಡ ಚಿನ್ನ ಖರೀದಿಸಬೇಡಿ ಎಂದಿದ್ದರು. ದೇಶದ ಆರ್ಥಿಕ ಪರಿಸ್ಥಿತಿ ಜಗತ್ತಿನಲ್ಲಿ ಮೂರನೇ ಸ್ಥಾನದಲ್ಲಿದೆ ಎಂದರು.

ಹಾವೇರಿಯಲ್ಲಿ ಬಿರುಗಾಳಿ ಮಳೆಗೆ ರೇಷ್ಮೆ ಮನೆ ನಾಶ | ಭಾರೀ ಅನಾಹುತದಿಂದ ಜನ ಪಾರು, ಸಿಡಿಲಿಗೆ ರೈತ ಬಲಿ

ರಾಜ್ಯದಲ್ಲಿ ಮುಂಗಾರು ಪೂರ್ವ ಅಬ್ಬರ ಜೋರು

ಬೆಂಗಳೂರು: ಮುಂಗಾರು ಪ್ರವೇಶಕ್ಕೂ ಮುನ್ನವೇ ರಾಜ್ಯದಲ್ಲಿ ವರುಣಾರ್ಭಟ ಜೋರಾಗಿದೆ. ಶನಿವಾರ ರಾತ್ರಿ ಹಾವೇರಿ, ರಾಯಚೂರು, ದಾವಣಗೆರೆ, ಯಾದಗಿರಿ ಸೇರಿ ಹಲವು ಜಿಲ್ಲೆಗಳಲ್ಲಿ ಬಿರುಗಾಳಿ, ಸಹಿತ ಭಾರೀ ಮಳೆ ಆಗಿದ್ದು, ಹಲವಾರು ಅವಾಂತರಗಳು ಸೃಷ್ಟಿ ಆಗಿವೆ. ರಾಯಚೂರಿನ ಮುದಗಲ್‌ನಲ್ಲಿ ಸಿಡಿಲು ಬಡಿದು ವ್ಯಕ್ತಿಯೊಬ್ಬರು ಸಾವನ್ನಪ್ಪಿದ್ದಾರೆ.

ಭಾನುವಾರ ಸಂಜೆ ಭಾರೀ ಗಾಳಿ ಮಳೆ ಸಂದರ್ಭದಲ್ಲಿ ಸಿಡಿಲು ಬಡಿದು ವ್ಯಕ್ತಿ ಸಾವನ್ನಪ್ಪಿದ ಘಟನೆ ರಾಯಚೂರಿನ ಮುದಗಲ್ ಪಟ್ಟಣ ಸಮೀಪದ ಕೋಮಲಾಪೂರು ಗ್ರಾಮದಲ್ಲಿ ನಡೆದಿದೆ. ಕೋಮಲಾಪೂರುದ ಶಾಲೆಯ ಪಕ್ಕದಲ್ಲಿ ಟ್ರ್ಯಾಕ್ಟರ್‌ನಲ್ಲಿ ಗೊಬ್ಬರ ತುಂಬುವ ವೇಳೆ ಸಿಡಿಲು ಬಡಿದು ಕರಿಯಪ್ಪ ಅಯ್ಯಪ್ಪ ಗಣಿಕಿಹಾಳ (47) ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಘಟನಾ ಸ್ಥಳಕ್ಕೆ ಕಂದಾಯ ಹಾಗೂ ಗ್ರಾಪಂ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಇನ್ನೂ ಯಾದಗಿರಿಯ ಕೆಂಭಾವಿಯಲ್ಲಿ ಮಳೆ ಸಂಭವಿಸುತ್ತಿದ್ದ ಭಾರೀ ಅನಾಹುತವೊಂದು ತಪ್ಪಿದ್ದು, ಕೂದಲೆಳೆ ಅಂತರದಲ್ಲಿ ಹತ್ತಾರು ಜನ ದುರಂತದಿಂದ ಪಾರಾಗಿದ್ದಾರೆ. ಇಲ್ಲಿನ ಎಸ್‌ಬಿಎಚ್ ಶಾದಿ ಮಹಲ್‌ನ ತಗಡಿನ ಶೆಡ್‌ನ ಮೇಲ್ಛಾವಣಿ ಬಿರುಗಾಳಿಗೆ ಹಾರಿ ಹೋಗಿದೆ. ಶಾದಿ ಮಹಲ್‌ನಲ್ಲಿ ಮದುವೆ ಸಮಾರಂಭ ನಿಗದಿಯಾಗಿತ್ತು. ದುರಂತ ಸಂಭವಿಸಿದ ವೇಳೆ ಮಹಲ್‌ನಲ್ಲಿ ಜನರ ಸಂಖ್ಯೆ ವಿರಳವಾಗಿತ್ತು. ಆದಾಗ್ಯೂ, ಮದುವೆಗೆ ಬಂದಿದ್ದ ಕುಟುಂಬಸ್ಥರು ಹಾಗೂ ಆಪ್ತ ಸಂಬಂಧಿಕರು ಸೇರಿದಂತೆ ಸುಮಾರು 100 ರಷ್ಟು ಜನ ಕಟ್ಟಡದ ಆವರಣದಲ್ಲೇ ಉಳಿದುಕೊಂಡಿದ್ದರು. ಮೇಲ್ಛಾವಣಿ ಕುಸಿದು ಬೀಳುತ್ತಿದ್ದಂತೆ ಎಲ್ಲರೂ ದಿಕ್ಕಾಪಾಲಾಗಿ ಓಡಿ ಮತ್ತು ಅಡಿಯಲ್ಲಿ ಅಡಗಿಕೊಂಡು ಪ್ರಾಣ ಉಳಿಸಿಕೊಂಡಿದ್ದಾರೆ. ಬೆಣ್ಣೆ ನಗರಿ ದಾವಣಗೆರೆಯಲ್ಲಿ ಕಳೆದ ರಾತ್ರಿ ಸುರಿದ ಹತ್ತೇ ಹತ್ತು ನಿಮಿಷದ ಮಳೆ ದೊಡ್ಡ ಅವಾಂತರವನ್ನೇ ಸೃಷ್ಟಿಮಾಡಿದೆ. ಚನ್ನಗಿರಿ ತಾಲೂಕಿನ ಬಸವಪಟ್ಟಣ ಹಾಗೂ ಶೃಂಗಾರ ಬಾಗು ತಾಂಡದಲ್ಲಿ 20ಕ್ಕೂ ಹೆಚ್ಚು ಮನೆಗಳು ಹಾನಿ 50 ಕ್ಕೂ ಹೆಚ್ಚು ವಿದ್ಯುತ್ ಕಂಬಗಳು, ಬೃಹತ್ ಮರಗಳು ನೆಲಕ್ಕುರುಳಿದೆ.

ಬಿರುಗಾಳಿ ಸಹಿತ ಮಳೆಗೆ ಯಾದಗಿರಿ ಜಿಲ್ಲೆ ಕೆಂಭಾವಿ ಪಟ್ಟದ ಶಾದಿ ಮಹಲ್ ಮೇಲ್ಛಾವಣಿ ನೆಲಕ್ಕೆ ಬಿದ್ದಿರುವುದು.

ಅಲ್ಲದೇ ಗಾಳಿಯ ರಭಸಕ್ಕೆ ಬೃಹತ್ ಮರಗಳು ಮನೆಯ ಮೇಲ ಬಿದ್ದಿದ್ದು, ಮನೆಗಳಿಗೂ ಕೂಡ ಹಾನಿಯಾಗಿದೆ. ಶನಿವಾರ ಸಂಜೆಯಿಂದ ಎರಡು ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಡಿತವಾಗಿದ್ದು ಕತ್ತಲಲ್ಲೇ ಕಾಲ ಕಳೆಯುವಂತಾಗಿದೆ. ಕೇವಲ ಹತ್ತು ನಿಮಿಷ ಬಂದ ಗಾಳಿ ಮಳೆಗೆ 2 ಗ್ರಾಮಗಳಲ್ಲಿ ಅವಾಂತರ ಸೃಷ್ಠಿಯಾಗಿದ್ದು ಈ ಗ್ರಾಮದಲ್ಲಿ ಕೂಲಿ ನಾಲಿ ಮಾಡುವ ಜನರೇ ಜಾಸ್ತಿ ಇದ್ದು, ಕೂಡಲೇ ಪರಿಹಾರ ನೀಡುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಅಲ್ಲದೇ ಬಸವಪಟ್ಟಣ ಗ್ರಾಮದಲ್ಲಿ ರೈತರಿಗೆ ತುಂಬಲಾರದ ನಷ್ಟವಾಗಿದೆ. ಅಡಿಕೆ, ತೆಂಗು, ಟೊಮೆಟೊ ಬೆಳೆಗಳು ನೆಲಕಚ್ಚಿದ್ದು ಲಕ್ಷಾಂತರ ರೂಪಾಯಿ ನಷ್ಟವಾಗಿದೆ. ಅದರಲ್ಲೂ ರೈತನೊಬ್ಬ ಸಾಲಸೋಲ ಮಾಡಿ 4 ಎಕ್ರೆ ಜಮೀನಿನಲ್ಲಿ ಬೆಳೆದ ಟೊಮೆಟೊ ಬೆಳೆ ನಾಶವಾಗಿದೆ.

ಎಕರೆಗೆ ಒಂದರಿಂದ ಒಂದೂವರೆ ಲಕ್ಷ ರು. ಖರ್ಚು ಮಾಡಿದ್ದು, ಇನ್ನೇನು ಬೆಳೆ ಕಟಾವು ಮಾಡಬೇಕು ಎನ್ನುವಷ್ಟರಲ್ಲಿ ಸಂಪೂರ್ಣ ನೆಲಕಚ್ಚಿದೆ. ಇದರಿಂದ ಟಮೊಟೊ ಕೊಳೆಯುತ್ತವೆ ಎನ್ನುವ ಆತಂಕವನ್ನ ರೈತರು ಎದುರಿಸುತ್ತಿದ್ದಾರೆ. ಜೊತೆಗೆ ಬಿರು ಬೇಸಿಗೆಯಲ್ಲಿ ಬೆಳೆಗಳನ್ನು ಉಳಿಸಿಕೊಳ್ಳೋದೇ ಕಷ್ಟ ಅಂತಿರುವಾಗ ಟ್ಯಾಂಕರ್ ನಿಂದ, ಬೋರ್ ವೆಲ್‌ಗಳಿಂದ ನೀರು ಹಾಯಿಸಿ ಬೆಳೆ ಉಳಿಸಿಕೊಂಡಿದ್ದು, ಇನ್ನೇನು ಕೈಗೆ ಬಂದ ತುತ್ತು ಬಾಯಿಗೆ ಬರಬೇಕು ಎನ್ನುವಷ್ಟರಲ್ಲಿ ನೆಲಕಚ್ಚಿದ್ದು ರೈತರು ಕಣ್ಣೀರಿಡುವಂತಾಗಿದೆ.

ಇನ್ನೂ ತಾಲೂಕಿನ ತ್ಯಾವಣಿಗಿ, ದೊಡ್ಡಘಟ್ಟ ಗ್ರಾಮದ ಸುತ್ತಾಮುತ್ತ ಸಾವಿರಾರು ಹೆಕ್ಟೇರ್ ಭತ್ತದ ಬೆಳೆ ನಾಶವಾಗಿ ರೈತರನ್ನು ಸಂಕಷ್ಟಕ್ಕೆ ದೂಡಿದೆ. ಎಕರೆಗೆ 40 ರಿಂದ 50 ಸಾವಿರ ರೂಪಾಯಿ ಖರ್ಚು ಮಾಡಿ ಭತ್ತ ಬೆಳೆದಿದ್ದು, ಇನ್ನೊಂದು ವಾರದಲ್ಲಿ ಕಟಾವಿಗೆ ಬಂದಿತ್ತು. ಆದರೆ ನಿನ್ನೆ ಸಂಜೆ ಆಲಿಕಲ್ಲು ಮಳೆ ಬಿದ್ದಿದ್ದರಿಂದ ಭತ್ತದ ತೆನೆಯಿಂದ ಕಾಳುಗಳು ನೆಲದ ಪಾಲಾಗಿದ್ದು, 60 ರಿಂದ 70 ಎಷ್ಟು ಭತ್ತದ ಕಾಳು ನೆಲಕ್ಕೆ ಬಿದ್ದಿವೆ. ಕೇವಲ 30% ರಷ್ಟು ಮಾತ್ರ ಬೆಳೆ ಕೈಗೆ ಸಿಗಲಿದೆ ಪ್ರತಿ ಬಾರಿ ನಷ್ಟವನ್ನು ಅನುಭವಿಸುವಂತಾಗಿದೆ ಎಂದು ಅಳಲಾಗಿದೆ. ಚನ್ನಗಿರಿ ತಾಲೂಕಿನಾದ್ಯಂತ ರೈತರಿಗೆ ಸಾಕಷ್ಟು ನಷ್ಟವಾಗಿದ್ದು, ಸೂಕ್ತ ಪರಿಹಾರ ನೀಡುವಂತೆ ಒತ್ತಾಯಿಸಿದ್ದಾರೆ.

ಹರಪನಹಳ್ಳಿಯಲ್ಲಿ 25ಕ್ಕೂ ಹೆಚ್ಚು ಮನೆಗಳಿಗೆ ಹಾನಿ

ಬಿರುಗಾಳಿ ಸಹಿತ ಭಾರೀ ಮಳೆಗೆ 25ಕ್ಕೂ ಹೆಚ್ಚು ಮನೆಗಳು ಹಾನಿಗೊಳಗಾಗಿದ್ದು, ಮರಗಳು ಹಾಗೂ ವಿದ್ಯುತ್ ಕಂಬಗಳು ಧರೆಗುರುಳಿರುವ ಘಟನೆ ವಿಜಯನಗರ ಜಿಲ್ಲೆಯ ಹರಪನಹಳ್ಳಿಯ ಶೃಂಗಾರ ಗ್ರಾಮದಲ್ಲಿ ನಡೆದಿದೆ. ಶನಿವಾರ ರಾತ್ರಿ ಸುರಿದ ಭಾರೀ ಮಳೆಗೆ ಮನೆಗಳ ತಗಡಿನ ಶೀಟುಗಳು ಹಾಗೂ ಮೇಲ್ಛಾವಣಿ ಕೂಡ ಹಾರಿ ಹೋಗಿವೆ. ಮನೆಗಳ ಪಕ್ಕದಲ್ಲಿದ್ದ ಮರದ ರೆಂಬೆ ಕೊಂಬೆಗಳು ಮನೆ ಮೇಲ್ಛಾವಣಿ ಮೇಲೆ ಬಿದ್ದು ಹಾನಿಯುಂಟಾಗಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಆಗಿಲ್ಲ. ಗಾಳಿ ಮಳೆಗೆ ಜನರು ತತ್ತರಿಸಿದ್ದಾರೆ.

ರೇಷ್ಮೆ ಹುಳು ಸಾಕಾಣಿಕೆ ಮನೆಗೆ ಹಾನಿ: 10 ಲಕ್ಷ ರು. ನಷ್ಟ

ಹಾವೇರಿ ಜಿಲ್ಲೆಯಲ್ಲಿ ಬಿರುಗಾಳಿ ಮಳೆಗೆ ಜನ ತತ್ತರಿಸಿ ಹೋಗಿದ್ದಾರೆ. ಬಿರುಗಾಳಿ ಮಳೆಗೆ ರೇಷ್ಮೆ ಬೆಳೆಗಾರರು ಕಂಗಾಲಾಗಿದ್ದಾರೆ. ಭಾರೀ ಬಿರುಗಾಳಿ ಮಳೆಗೆ ರೇಷ್ಮೆ ಮನೆಯ ಮೇಲ್ಛಾವಣಿ ಸಂಪೂರ್ಣ ಹಾರಿ ಹೋದ ಘಟನೆ ಹಾವೇರಿ ತಾಲೂಕಿನ ಕಾಟೇನಹಳ್ಳಿ ಗ್ರಾಮದಲ್ಲಿ ನಡೆದಿದೆ. 4 ಎಕರೆಯಲ್ಲಿ ಬೆಳೆದಿದ್ದ ರೇಷ್ಮೆ ಹುಳುಗಳು ಸಾಕಾಣಿಕೆ ಮಾಡುತ್ತಿದ್ದ ಶೇಖಪ್ಪ ಕಳ್ಳಿಹಾಳ ಎಂಬವರಿಗೆ ಸೇರಿದ ರೇಷ್ಮೆ ಮನೆ ಸಂಪೂರ್ಣ ಹಾನಿಯಾಗಿದೆ. 10 ಲಕ್ಷಕ್ಕೂ ಅಧಿಕ ಮೌಲ್ಯದ ರೇಷ್ಮೆ ಹುಳುಗಳು ಮತ್ತು ರೇಷ್ಮೆ ಮನೆ ಸಂಪೂರ್ಣ ನಾಶವಾಗಿದೆ. ರೇಷ್ಮೆ ಸಾಕಾಣಿಕೆ ಮಾಡುತ್ತಿದ್ದ ಅನ್ನ ದಾತರು ಕಂಗಾಲಾಗಿದ್ದಾರೆ. ತಡರಾತ್ರಿ ತಾಡ ಪಲ್ ಹಾಕಿ ರೇಷ್ಮೆ ಹುಳುಗಳನ್ನು ರಕ್ಷಣೆ ಮಾಡಿದ್ದಾರೆ.

ತುಮಕೂರು: ಮರ್ಯಾದಾ ಹತ್ಯೆ ಶಂಕೆ, ತಂದೆಯ ಬಂಧನ

ತುಮಕೂರು: ತಂದೆಯೇ ಮಗಳನ್ನು ಕೊಲೆ ಮಾಡಿರುವ ಆರೋಪ ಕೇಳಿ ಬಂದಿದ್ದು, ಮರ್ಯಾದೆ ಹತ್ಯೆ ಶಂಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ಆರೋಪಿಯನ್ನು ಬಂಧಿಸಿರುವ ಘಟನೆ ಶಿರಾ ತಾಲೂಕಿನ ಕಳ್ಳಂಬೆಳ್ಳ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಮೇಘನಾ(17) ಹತ್ಯೆಯಾದ ದುರ್ದೈವಿ. ಒಂದೂವರೆ ತಿಂಗಳಿಂದ ಮಗಳು ಮೇಘನಾ ಕಾಣೆಯಾಗಿರುವ ಬಗ್ಗೆ ತಾಯಿ ಕೊಟ್ಟ ದೂರಿನ ಮೇರೆಗೆ ತಂದೆಯನ್ನು ಪೊಲೀಸರು ಬಂಧಿಸಿದ್ದು, ತನಿಖೆ ಕೈಗೊಂಡಿದ್ದಾರೆ. ಜಿಲ್ಲೆಯ ಶಿರಾ ತಾಲೂಕಿನ ನಿಂಬೆಮರದಹಳ್ಳಿ ಗ್ರಾಮದಲ್ಲಿ ಮೇಘನಾ(17) ಕಳೆದ ಏಪ್ರಿಲ್ 16 ರಂದು ಕಾಣೆಯಾಗಿದ್ದರು. ಕೂಲಿ ಕೆಲಸ ಮಾಡಿಕೊಂಡು ಮನೆಗೆ ಬಂದ ತಾಯಿ ಮಗಳು ಮನೆಯಲ್ಲಿ ಇಲ್ಲದಿರುವುದನ್ನು ಕಂಡು ಗಾಬರಿಯಾಗಿದ್ದರು. ಮತ್ತೊಂದೆಡೆ ಗಂಡ ಕೂಡ ನಾಪತ್ತೆಯಾಗಿದ್ದು ಅನುಮಾನ ಹೆಚ್ಚಿಸಿತ್ತು. ಮದುವೆ ವಿಚಾರಕ್ಕೆ ಕಲಹ? ಮದುವೆ ವಿಚಾರಕ್ಕೆ ಮನೆಯಲ್ಲಿ ಗಲಾಟೆ ನಡೆದಿತ್ತು ಎನ್ನಲಾಗಿದೆ. ಮಗಳಿಗೆ ಇನ್ನೂ 17 ವರ್ಷ ಅವಳನ್ನು ಈಗಲೇ ಮದುವೆ ಮಾಡಿ ಕೊಡಲ್ಲ ಎಂದು ತಿಮ್ಮರಾಯಪ್ಪ ಮನೆಯಲ್ಲಿ ಜಗಳವಾಡಿದ್ದು. ಈ ಘಟನೆ ನಡೆದ ಮರುದಿನವೇ ಮೇಘನಾ ಕಾಣೆಯಾಗಿದ್ದಾರೆ. ಏಪ್ರಿಲ್ 16 ಸಂಜೆ 6:30ರ ವೇಳೆಗೆ ಗಂಟೆಗೆ ತಾಯಿ ಕೂಲಿ ಕೆಲಸ ಮುಗಿಸಿ ಮನೆಗೆ ಬಂದು ನೋಡಿದಾಗ ಮಗಳು ಮನೆಯಲ್ಲಿ ಇರಲಿಲ್ಲ. ಆಕೆಯ ಫೋನ್‌ಗೆ ಕಾಲ್ ಮಾಡಿದ್ದು, ಫೋನ್ ಸ್ವಿಚ್ ಆಫ್ ಆಗಿದೆ. ತಕ್ಷಣ ಗಂಡನನ್ನು ಹುಡುಕಿದ್ದಾರೆ. ಆತ ಕೂಡ ನಾಪತ್ತೆಯಾಗಿದ್ದಾನೆ. ತಕ್ಷಣ ತಾಯಿ ಕಳ್ಳಂಬೆಳ್ಳ ಪೊಲೀಸ್ ಠಾಣೆಗೆ ಮಗಳು ನಾಪತ್ತೆ ದೂರು ಕೊಟ್ಟಿದ್ದಾರೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತಂದೆ ತಿಮ್ಮರಾಯಪ್ಪನನ್ನು ಪತ್ತೆ ಮಾಡಿದ್ದು, ವಿಚಾರಣೆಗೆ ಒಳಪಡಿಸಿದ ವೇಳೆ ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ. ಮಗಳು ಮೇಘನಾಳನ್ನು ಆಕೆಯ ತಂದೆಯೇ ಕೊಂದು ಮಣ್ಣಿನಲ್ಲಿ ಮುಚ್ಚಿ ಹಾಕಿದ್ದಾನೆ ಎನ್ನಲಾಗಿದೆ. ಸದ್ಯ ತಿಮ್ಮರಾಯಪ್ಪನನ್ನು ಪೊಲೀಸರು ವಿಚಾರಣೆ ನಡೆಸುತ್ತಿದ್ದು, ಶೀಘ್ರದಲ್ಲೇ ಸತ್ಯಾಸತ್ಯತೆ ಹೊರಬರಲಿದೆ.

ರಾಜ್ಯದ ಹಳದಿ ಬೋರ್ಡ್ ವಾಹನಗಳಿಗೆ ಹಸಿರು ತೆರಿಗೆ ವಿಧಿಸುತ್ತಿರುವ ತಮಿಳುನಾಡು

ನೆರೆರಾಜ್ಯದಿಂದ ಹಸಿರು ತೆರಿಗೆ ಹೊರೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ತಮಿಳುನಾಡು ಸಾರಿಗೆ/ಪರಿವಹನ್ ಪೋರ್ಟಲ್‌ನಲ್ಲಿ ಪ್ರವಾಸಿ ವಾಹನಗಳಿಗೆ ಮರು ಹಸಿರು ತೆರಿಗೆ ವಸೂಲಿ ಮಾಡುತ್ತಿರುವ ತಾಂತ್ರಿಕ ದೋಷವನ್ನು ತಕ್ಷಣ ಸರಿಪಡಿಸುವ ಕುರಿತು ಕರ್ನಾಟಕ ರಾಜ್ಯ ಟ್ರಾವೆಲ್ಸ್ ಆಪರೇಟರ್ಸ್ ಅಸೋಸಿಯೇಷನ್ ಮನವಿ ಮಾಡಿದೆ.

ತಾಂತ್ರಿಕ ದೋಷವನ್ನು ತಕ್ಷಣ ಸರಿಪಡಿಸುವ ಕುರಿತು ತಮಿಳುನಾಡು ಸರಕಾರ, ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಹಾಗೂ ರಾಷ್ಟ್ರೀಯ ಮಾಹಿತಿ ಕೇಂದ್ರಕ್ಕೆ ಪತ್ರ ಬರೆಯಲಾಗಿದ್ದು, ತಮಿಳುನಾಡು ಸಾರಿಗೆ ಪೋರ್ಟಲ್/ಪರಿವಹನ್ ಪೋರ್ಟಲ್‌ನಲ್ಲಿ ಪ್ರವಾಸಿ ವಾಹನಗಳ ವಿಶೇಷ ಪರವಾನಗಿ ನೀಡುವ ಪ್ರಕ್ರಿಯೆಯಲ್ಲಿ ಕಳೆದ ಒಂದು ವಾರದಿಂದ ಗಂಭೀರ ಸಮಸ್ಯೆ ಉಂಟಾಗಿದೆ. ತಮಿಳುನಾಡು ರಾಜ್ಯಕ್ಕೆ ಪ್ರಯಾಣಿಕರನ್ನು ಕರೆತರುವ ಪ್ರವಾಸಿ ವಾಹನಗಳಿಗೆ ಪ್ರತಿಯೊಂದು ಪ್ರಯಾಣಕ್ಕೂ ವಿಶೇಷ ಪರವಾನಗಿ ಪಡೆಯುವ ವೇಳೆ ಹಸಿರು ತೆರಿಗೆಯನ್ನು ಮರು ವಸೂಲಿ ಮಾಡಲಾಗುತ್ತಿದೆ. 8 ವರ್ಷ ಮೇಲ್ಪಟ್ಟ ವಾಹನಗಳಿಗೆ ಹಸಿರು ತೆರಿಗೆಯನ್ನು ಆರು ತಿಂಗಳಿಗೆ ಒಂದೇ ಬಾರಿ ವಸೂಲಿ ಮಾಡಬೇಕಾಗಿದೆ. ಪ್ರತಿಯೊಂದು ವಿಶೇಷ ಪರವಾನಗಿ ಅಥವಾ ಪ್ರಯಾಣಕ್ಕೂ ಮರು ತೆರಿಗೆ ವಿಧಿಸುವುದು ನಿಯಮಗಳ ಆಶಯಕ್ಕೆ ವಿರುದ್ಧವಾಗಿದ್ದು, ಪ್ರವಾಸಿ ವಾಹನ ಮಾಲೀಕರು ಹಾಗೂ ಸಾರಿಗೆ ನಿರ್ವಾಹಕರ ಮೇಲೆ ಅನಗತ್ಯ ಮತ್ತು ಹೆಚ್ಚುವರಿ ಆರ್ಥಿಕ ಭಾರವನ್ನು ಉಂಟುಮಾಡುತ್ತಿದೆ ಎಂದು ತಿಳಿಸಲಾಗಿದೆ.

ಟ್ಯಾಕ್ಸಿ, ಮ್ಯಾಕ್ಸಿ ಕ್ಯಾಬ್, ಇನ್ನೋವಾ ಹಾಗೂ ಇತರ ಪ್ರವಾಸಿ ವಾಹನ ಮಾಲೀಕರು ಈಗಾಗಲೇ ಹೆಚ್ಚುತ್ತಿರುವ ತೆರಿಗೆ, ಇಂಧನ ವೆಚ್ಚ ಮತ್ತು ಕಾರ್ಯಾಚರಣಾ ವೆಚ್ಚಗಳಿಂದ ಸಂಕಷ್ಟದಲ್ಲಿದ್ದಾರೆ. ಈ ಮರು ಹಸಿರು ತೆರಿಗೆ ವಸೂಲಿ ಪ್ರವಾಸೋದ್ಯಮ ಮತ್ತು ಸಾರಿಗೆ ಕ್ಷೇತ್ರದ ಮೇಲೆ ನೇರ ಪರಿಣಾಮ ಬೀರುತ್ತಿದ್ದು, ಅಂತಾರಾಜ್ಯ ಪ್ರವಾಸಿ ಸಂಚಾರಕ್ಕೂ ತೊಂದರೆ ಉಂಟುಮಾಡುತ್ತಿದೆ. ದೇಶದಲ್ಲಿ ಸುಗಮ ಅಂತಾರಾಜ್ಯ ಪ್ರವಾಸೋದ್ಯಮ, ಸುಲಭ ಪ್ರಯಾಣ ವ್ಯವಸ್ಥೆ ಹಾಗೂ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಉತ್ತೇಜನ ನೀಡುತ್ತಿರುವ ಸಂದರ್ಭದಲ್ಲಿ ಇಂತಹ ತಾಂತ್ರಿಕ ಮತ್ತು ಪ್ರಕ್ರಿಯಾತ್ಮಕ ದೋಷಗಳನ್ನು ತಕ್ಷಣ ಸರಿಪಡಿಸುವುದು ಅತ್ಯಂತ ಅಗತ್ಯವಾಗಿದೆ ಎಂದು ಅಸೋಸಿಯೇಷನ್ ಅಧ್ಯಕ್ಷ ಕೆ.ರಾಧಾಕೃಷ್ಣ ಹೊಳ್ಳ ತಿಳಿಸಿದ್ದಾರೆ.

ಮನವಿ ಏನು?

- ತಮಿಳುನಾಡು ಸಾರಿಗೆ/ಪರಿವಹನ್ ಪೋರ್ಟಲ್‌ನಲ್ಲಿನ ತಾಂತ್ರಿಕ ದೋಷವನ್ನು ತಕ್ಷಣ ಸರಿಪಡಿಸಬೇಕು
- ನಿಯಮಗಳಂತೆ ಹಸಿರು ತೆರಿಗೆ ಮಾನ್ಯತೆಯನ್ನು ಆರು ತಿಂಗಳವರೆಗೆ ಅನ್ವಯವಾಗುವಂತೆ ಮಾಡಬೇಕು
- ಪ್ರತಿಯೊಂದು ವಿಶೇಷ ಪರವಾನಗಿ, ಪ್ರಯಾಣಕ್ಕೂ ಮರು ಹಸಿರು ತೆರಿಗೆ ವಸೂಲಿ ನಿಲ್ಲಿಸಬೇಕು
- ವಾಹನ ಮಾಲೀಕರಿಂದ ಹೆಚ್ಚುವರಿಯಾಗಿ ವಸೂಲಿ ಮಾಡಲಾದ ತೆರಿಗೆ ಮೊತ್ತವನ್ನು ಪರಿಶೀಲಿಸಿ ಸೂಕ್ತ ಪರಿಹಾರ ನೀಡಬೇಕು
- ಅಂತಾರಾಜ್ಯ ಪ್ರವಾಸಿ ವಾಹನ ನಿರ್ವಾಹಕರಿಗೆ ಆಗುತ್ತಿರುವ ತೊಂದರೆ ತಪ್ಪಿಸಲು ಅಗತ್ಯ ಸ್ಪಷ್ಟೀಕರಣ ಹೊರಡಿಸಬೇಕು

ಕಿಕ್ ಹೆಚ್ಚಾದಷ್ಟು ರೊಕ್ಕ ಹೆಚ್ಚು

← ಮೊದಲಪುಟದಿಂದ

ಹೊಸ ನೀತಿಯಲ್ಲಿ ಸ್ಲಾಬ್‌ಗಳ ಸಂಖ್ಯೆಯನು 16ರಿಂದ 8ಕ್ಕೆ ಇಳಿಸಲಾಗಿದೆ. ಬಡ ಹಾಗೂ ಮಧ್ಯಮ ವರ್ಗದವರು ಆಲ್ಕೋಹಾಲ್ ಪ್ರಮಾಣ ಶೇ.42.8ರಷ್ಟು ಇರುವ ಮೊದಲ ನಾಲ್ಕು ಸ್ಲ್ಯಾಬ್‌ಗಳ ಮದ್ಯವನ್ನೇ ಹೆಚ್ಚಾಗಿ ಖರೀದಿಸುತ್ತಾರೆ. ಈ ಸ್ಲ್ಯಾಬ್‌ಗಳಲ್ಲಿ ಲಭ್ಯವಿರುವ 180 ಮಿಲಿ ಮದ್ಯದ ಬೆಲೆಯು 105 ರಿಂದ 110 ರು. ವರೆಗೆ ಹೆಚ್ಚಾಗುವ ಸಾಧ್ಯತೆಯಿದೆ. ಕಳೆದ ವರ್ಷವಷ್ಟೇ ಮೊದಲ ನಾಲ್ಕು ಸ್ಲ್ಯಾಬ್‌ಗಳ (180 ಮಿಲಿ) ಬೆಲೆಯನ್ನು 80 ರಿಂದ 95 ರು.ಗಳಿಗೆ ಏರಿಕೆ ಮಾಡಲಾಗಿತ್ತು. ಈಗ ಮತ್ತೆ ಬೆಲೆ ಏರಿಕೆಯಾದರೆ ರಾಜ್ಯ ಸರಕಾರಕ್ಕೆ ಹೆಚ್ಚಿನ ಆದಾಯವೇನೋ ಬರಲಿದೆ, ಆದರೆ ಬಡ ಮತ್ತು ಮಧ್ಯಮ ವರ್ಗದವರ ಜೇಬಿಗೆ ಕತ್ತರಿ ಬೀಳಲಿದೆ. ಕರ್ನಾಟಕದಲ್ಲಿ ಮೊದಲ ನಾಲ್ಕು ಸ್ಲ್ಯಾಬ್‌ಗಳ ಮದ್ಯದ ಮಾರಾಟ ಪ್ರಮಾಣವೇ ಶೇ.80ರಷ್ಟಿರುವುದರಿಂದ ರಾಜ್ಯದ ಅಬಕಾರಿ ಆದಾಯ ವೃದ್ಧಿಸಲಿದೆ.

ಪ್ರಮುಖ ಪರಿಷ್ಕೃತ ದರಗಳು

ಮದ್ಯಗಳು	90 ಎಂಎಲ್	180 ಎಂಎಲ್‌ಐ	750 ಎಂಎಲ್
ಓಲ್ಡ್ ಟಾವರ್ನ್ ವಿಸ್ಕಿ	70 ರು.	135 ರು.	560 ರು.
ಬ್ಯಾಗ್‌ಪೇರ್ ಡಿಲಕ್ಸ್ ವಿಸ್ಕಿ	80 ರು.	155 ರು.	645 ರು.
ಓಲ್ಡ್ ಮಾಂಕ್ ರಮ್	90 ರು.	175 ರು.	850 ರು.
ಇಂಪೀರಿಯಲ್ ಬ್ಲೂ ವಿಸ್ಕಿ	110 ರು.	215 ರು.	885 ರು.
ರಾಯಲ್ ಸ್ಟಾಗ್ ಡಿಲಕ್ಸ್ ವಿಸ್ಕಿ	150 ರು.	280 ರು.	1,145 ರು.

ಆಮದು ಮದ್ಯ ದರ (750 ಎಂಎಲ್)

ಜಾನಿ ವಾಕರ್ ರೆಡ್ ಲೇಬಲ್	2,810 ರು.
ಚಿವಾಸ್ ರಿಗಲ್ 12 ವರ್ಷ	4,220 ರು.
ಗ್ಲೆನ್ಲಿವೆಟ್ 12 ವರ್ಷ	5,400 ರು.
ಗ್ರೇ ಗೂಸ್ ವೊಡ್ಕಾ	10,045 ರು.
ಜಾನಿ ವಾಕರ್ ಬ್ಲೂ ಲೇಬಲ್	15,500 ರು.

ಬಸ್‌ಗಳ ಅಭಾವ: ಪ್ರಯಾಣಿಕರು ಹೈರಾಣ

ಚಿಕ್ಕಮಗಳೂರು: ಇತಿಹಾಸ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಶೃಂಗೇರಿಯ ಸರ್ಕಾರಿ ಬಸ್ ನಿಲ್ದಾಣದಲ್ಲಿ ಸದ್ಯ ಪ್ರಕೃತಿ ಸೌಂದರ್ಯಕ್ಕಿಂತ ಹೆಚ್ಚಾಗಿ 'ಶಕ್ತಿ' ಯೋಜನೆಯ ಭೀಕರ ಎಫೆಕ್ಟ್ ಎದ್ದು ಕಾಣಿಸುತ್ತಿದೆ.

ಬಸ್ ನಿಲ್ದಾಣಕ್ಕೆ ಬಸ್ ಬಂದು ನಿಲ್ಲುವಷ್ಟರಲ್ಲಿ ಜೇನು ನೊಣಗಳಂತೆ ಮುತ್ತಿಕೊಳ್ಳುವ ಪ್ರಯಾಣಿಕರು, ಸೀಟು ಹಿಡಿಯಲು ನಡೆಸುತ್ತಿರುವ ಸಾಹಸಗಳು ಸಾರ್ವಜನಿಕರನ್ನು ಬೆಚ್ಚಿಬೀಳಿಸುವಂತಿವೆ. ಬೇಸಿಗೆ ರಜೆ ಹಿನ್ನೆಲೆಯಲ್ಲಿ ರಾಜ್ಯದ ಮೂಲೆ ಮೂಲೆಗಳಿಂದ ಮಕ್ಕಳ ಸಮೇತ ಶೃಂಗೇರಿ ಶಾರದಾಂಬೆಯ ದರ್ಶನಕ್ಕೆ ಭಕ್ತ ಸಾಗರವೇ ಹರಿದುಬರುತ್ತಿದೆ. ಆದರೆ, ಅದಕ್ಕೆ ತಕ್ಕಂತೆ ಬಸ್‌ಗಳ ವ್ಯವಸ್ಥೆ ಇಲ್ಲದ ಕಾರಣ ಪ್ರಯಾಣಿಕರು ಪ್ರಯಾಣಕ್ಕಾಗಿ ಜೀವವನ್ನೇ ಪಣಕ್ಕಿಡುತ್ತಿದ್ದಾರೆ. ಶೃಂಗೇರಿ ಬಸ್ ನಿಲ್ದಾಣದಲ್ಲಿ ಬಸ್ ಬಂದು ನಿಲ್ಲುತ್ತಿದ್ದಂತೆಯೇ ಮಹಿಳೆಯರು ಬಸ್ಸಿನ ಮುಂಭಾಗ ಹಾಗೂ ಹಿಂಭಾಗದ ಬಾಗಿಲುಗಳಿಗೆ ಮುಗಿಬೀಳುತ್ತಿದ್ದಾರೆ. ನೂಕುನುಗ್ಗಲು ಎಷ್ಟು ಭೀಕರವಾಗಿದೆ ಎಂದರೆ, ಬಾಗಿಲಲ್ಲಿ ಹತ್ತಲು ಸಾಧ್ಯವಾಗದ ಪೋಷಕರು, ಸೀಟು ಹಿಡಿಯಲು ತಮ್ಮ ಪುಟ್ಟ ಮಕ್ಕಳನ್ನು ಕಿಟಕಿಯ ಮೂಲಕ ಒಳಗಡೆ ತಳ್ಳುತ್ತಿರುವ ದೃಶ್ಯಗಳು ಇಲ್ಲಿ ಸಾಮಾನ್ಯ ಎಂಬಂತಾಗಿವೆ. ಮೊದಲು ಕಿಟಕಿಯಿಂದ ಒಳಗೆ ಹೋಗಿ ಸೀಟು ಹಿಡಿ ಎಂದು ಅಪ್ಪ-ಅಮ್ಮನೇ ಮಕ್ಕಳಿಗೆ ಐಡಿಯಾ ಕೊಡುತ್ತಿರುವುದು ಬಸ್ ನಿಲ್ದಾಣದಲ್ಲಿದ್ದ ಇತರ ಪ್ರಯಾಣಿಕರನ್ನು ಶಾಕ್‌ಗೆ ಒಳಗಾಗಿಸಿದೆ.

ದೆಹಲಿಯಲ್ಲಿ ಯುಪಿಎಸ್‌ಸಿ ತರಬೇತಿ ಭವನ

ಬೆಳಗಾವಿ: ಯುಪಿಎಸ್‌ಸಿ ನಡೆಸುವ ಪರೀಕ್ಷೆಗೆ ತಯಾರಿ ನಡೆಸುವ ಬಡ ಹಾಗೂ ಗ್ರಾಮೀಣ ಭಾಗದ ಅಭ್ಯರ್ಥಿಗಳ ಅನುಕೂಲಕ್ಕಾಗಿ ದೆಹಲಿಯಲ್ಲಿ ತರಬೇತಿ ಭವನ ನಿರ್ಮಿಸಲಾಗುವುದು. ಜಿಲ್ಲೆಯ ಪ್ರತಿ ತಾಲ್ಲೂಕಿನ ಇಬ್ಬರು ವಿದ್ಯಾರ್ಥಿಗಳಿಗೆ ಅಲ್ಲಿ ಪರೀಕ್ಷೆಗೆ ಸಿದ್ಧತೆ ನಡೆಸಲು ಅವಕಾಶ ಕಲ್ಪಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು. ಇಲ್ಲಿನ ಸುವರ್ಣ ವಿಧಾನಸೌಧದಲ್ಲಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯಿತಿ ಆಶ್ರಯದಲ್ಲಿ ಭಾನುವಾರ ಆಯೋಜಿಸಿದ್ದ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯು ದ್ವಿತೀಯ ವರ್ಷದ ಪರೀಕ್ಷೆಗಳಲ್ಲಿ ಸಾಧನೆಗೈದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭ ದಲ್ಲಿ ಅವರು ಮಾತನಾಡಿದರು. ಭಾರತವನ್ನು ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ಯುವಜನರು ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಆತ್ಮವಿಶ್ವಾಸದಿಂದ ಎದುರಿಸಿ ಸಾಧನೆ ಮಾಡಬೇಕು.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರವರ ಕಾರ್ಯಾಲಯ,
ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಧಾರವಾಡ-580001
ಕಛೇರಿ : 0836-2447090, ಇ-ಮೇಲ್ : kwbcen@gmail.com

ಟೆಂಡರ್ ಪ್ರಕಟಣೆ (ಎಲೆಕ್ಟ್ರಾನಿಕ್ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಅರ್ಹರಿರುವ ಸಂಸ್ಥೆ/ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ (ದ್ವಿ-ಟೆಂಡರ್ ದಾಖಲೆ ಪದ್ಧತಿಯಲ್ಲಿ) ಟೆಂಡರ್ ಆಹ್ವಾನಿಸಲಾಗಿದೆ. ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : 158 ದಿನಾಂಕ : 15-05-2026. ಕಾಮಗಾರಿಯ ಹೆಸರು:- ಅಮೃತ್-2.0 ಯೋಜನೆ ಅಡಿ ಗದಗ-ಬೆಟಗೇರಿ ನಗರಗಳ ನೀರು ಸರಬರಾಜು ವ್ಯವಸ್ಥೆಗೆ ಅಭಿವೃದ್ಧಿ ಕಲ್ಪಿಸುವ ಕಾಮಗಾರಿ ಹಾಗೂ 5 ವರ್ಷಗಳ ನಿರ್ವಹಣೆ ಮತ್ತು ದುರಸ್ತಿ (1 ವರ್ಷದ DLP ಒಳಗೊಂಡು) DBOT ಮಾದರಿಯಲ್ಲಿ (ಇಡುಗಂಟು ಟೆಂಡರ್- ವೇರಿಯೇಷನ್ ಇರುವುದಿಲ್ಲಾ) INDENT No: KUWSDB/2026-27/WS/WORK_INDENT510. ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು ಅಥವಾ ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು ಸಂಪರ್ಕಿಸಬಹುದು.

ಸಹಿ/- ಮುಖ್ಯ ಅಭಿಯಂತರು,
ಕನನೀಸ ಮತ್ತು ಒಚ ಮಂಡಳಿ, ಧಾರವಾಡ
ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/186/2026-27

ಗುಣಮಟ್ಟದ ಗೇರು ಕಸಿ ಸಸಿ ಬೆಳೆಯಲು 1 ಕೋಟಿ ಅನುದಾನ: ಸಚಿವ ಈಶ್ವರ್ ಖಂಡ್ರೆ ಭರವಸೆ

ಗೇರು ಉತ್ಪಾದನೆಯಲ್ಲಿ ರಾಜ್ಯ ಸ್ವಾವಲಂಬಿ ಗುರಿ

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಗೇರು ಅಥವಾ ಗೋಡಂಬಿ ಬೆಳೆಯಲು ವಿಪುಲ ಅವಕಾಶವಿದ್ದು, ಗೇರು ಅಭಿವೃದ್ಧಿ ನಿಗಮದ ವತಿಯಿಂದ ಗುಣಮಟ್ಟದ ಗೋಡಂಬಿ ಸಸಿಗಳನ್ನು ಬೆಳೆಸಿ, ರೈತರಿಗೆ ನೀಡಲಾಗುವುದು. ಇದಕ್ಕಾಗಿ 1 ಕೋಟಿ ರು. ಅನುದಾನ ನೀಡುವುದಾಗಿ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಭರವಸೆ ನೀಡಿದರು.

ಗೇರು ಅಭಿವೃದ್ಧಿ ಮಂಡಳಿಯಿಂದ ಮಂಗಳೂರಿನಲ್ಲಿ ಆಯೋಜಿಸಿದ್ದ ಗೇರು ಮೇಳಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಎಂಡೋಸಲ್ಫಾನ್ ಅನಾಹುತದ ಬಳಿಕ ಹಲವು ರೈತರು ಗೇರು ಬೆಳೆಯುವುದರಿಂದಲೇ ವಿಮುಖರಾಗಿದ್ದಾರೆ. ಇವರಿಗೆ ಮತ್ತೆ ಉತ್ತೇಜನ ನೀಡಿ ಗತವೈಭವ ಮರಳುವಂತೆ ಮಾಡಲು ಕ್ರಮ ವಹಿಸಲಾಗುವುದು ಎಂದರು.

ಆಸಕ್ತ ರೈತರಿಗೆ ಸಸಿಗಳನ್ನು ನಿಗಮದ ನರ್ಸರಿಗಳಲ್ಲಿಯೇ ಬೆಳೆಸಿ, ಪೂರೈಸುವುದು ಸೂಕ್ತ ಎಂದು ಪರಿಗಣಿಸಿ, ಈ ವರ್ಷದಿಂದಲೇ ಕಸಿ ಮಾಡಿದ ಗೋಡಂಬಿ ಸಸಿ ಬೆಳೆಸಲು ಸೂಚನೆ ನೀಡಲಾಗಿದೆ. ಇದಕ್ಕಾಗಿ 1 ಕೋಟಿ ರು.ಅನುದಾನ ನೀಡಲಾಗುವುದು. 1 ಕೋಟಿ ರು.ವೆಚ್ಚದಲ್ಲಿ ಸಸಿಗಳನ್ನು ಬೆಳೆಸಿ ಮುಂದಿನ ವರ್ಷದಿಂದ ಸಬ್ಸಿಡಿ ದರದಲ್ಲಿ ರೈತರಿಗೆ ಈ ಸಸಿಗಳನ್ನ ಮಾರಾಟ ಮಾಡಲಾಗುವುದು ಎಂದು ತಿಳಿಸಿದರು.

ಇಂದು ಗೇರು ಮಳಿಗೆಗಳಿಗೆ ತಾವು ಭೇಟಿ ನೀಡಿದ್ದು, ಗೇರು ಮೌಲ್ಯವರ್ಧನೆಗೆ ಒತ್ತು ನೀಡಿದರೆ, ರೈತರಿಗೆ ಹೆಚ್ಚಿನ ಮಾಹಿತಿ ಪೂರೈಸಿದರೆ, ಉತ್ಪಾದನಾ ವೆಚ್ಚ ತಗ್ಗಿ, ಆದಾಯ ಹೆಚ್ಚುತ್ತದೆ. ಅದರಿಂದ ಅವರಿಗೆ ಅನುಕೂಲ ಆಗುವುದರ ಜತೆಗೆ ಗೇರು ಉತ್ಪಾದನೆಯೂ ಹೆಚ್ಚಳವಾಗುತ್ತದೆ.

ಗೇರು ಅಭಿವೃದ್ಧಿ ಮಂಡಳಿಯಿಂದ ಮಂಗಳೂರಿನಲ್ಲಿ ಆಯೋಜಿಸಿದ್ದ ಗೇರು ಮೇಳಕ್ಕೆ ಚಾಲನೆ ನೀಡಿದ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು, ಗೇರು ಕೃಷಿಯ ಕೈಪಿಡಿ ಬಿಡುಗಡೆ ಮಾಡಿದರು.

ಮೇಳದ ಅಂಗವಾಗಿ ಮಕ್ಕಳಿಗೆ ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆ ಮತ್ತು ರಂಗೋಲಿ ಸ್ಪರ್ಧೆ ಏರ್ಪಡಿಸಲಾಗಿತ್ತು. ಚಿತ್ರ ಬರೆದ ಚಿಣ್ಣರೊಂದಿಗೆ ಕೆಲ ಸಮಯ ಕಳೆದ ಸಚಿವರು, ಮಕ್ಕಳನ್ನ. ಇದೇ ಸಂದರ್ಭದಲ್ಲಿ 12 ಪ್ರಗತಿಪರ ರೈತರನ್ನ ಸನ್ಮಾನಸಲಾಯಿತು. ಶಾಸಕ ವೇದವ್ಯಾಸ ಕಾಮತ್ ಅವರು ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಶಾಸಕರಾದ ರಾಜೇಗೌಡ, ಅಶೋಕ್ ಕುಮಾರ್ ರೈ, ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಮಮತಾ ಡಿ.ಎಸ್. ಗಟ್ಟಿ, ಮಾಜಿ ಸಚಿವ ರಮಾನಾಥ ರೈ ಮತ್ತಿತರರು ಪಾಲ್ಗೊಂಡಿದ್ದರು.

ಕಚ್ಚಾ ಗೇರು ಬೀಜವನ್ನು ಆಮದು ಮಾಡಿಕೊಂಡು ಸಂಸ್ಕರಿಸುವ ಸ್ಥಿತಿ ಬಂದಿದೆ. ಹೀಗಾಗಿ ಇಂತಹ ಮೇಳ, ಕಾರ್ಯಾಗಾರಗಳ ಮೂಲಕ ರೈತರಿಗೆ ಮಾಹಿತಿಯ ಜತೆಗೆ ರಿಯಾಯಿತಿ ದರದಲ್ಲಿ ಸಸಿಗಳನ್ನು ನೀಡಲಾಗುವುದು. ಕರ್ನಾಟಕವನ್ನು ಗೇರು ಕ್ಷೇತ್ರದಲ್ಲಿ ಸ್ವಾವಲಂಬಿಯನ್ನಾಗಿ ಮಾಡಲಾಗುವುದು.

-ಈಶ್ವರ್ ಖಂಡ್ರೆ, ಅರಣ್ಯ ಸಚಿವ

ಪಶ್ಚಿಮಘಟ್ಟ ಸಂರಕ್ಷಣೆ ನಮ್ಮ ಹೊಣೆ

ಪಶ್ಚಿಮಘಟ್ಟ ಇರುವ ದಕ್ಷಿಣ ಕನ್ನಡದಲ್ಲಿ ಹುಟ್ಟಿ ಬೆಳೆದ ನೀವು ಪುಣ್ಯವಂತರು. ಪಶ್ಚಿಮ ಘಟ್ಟಗಳು ಮಳೆಯ ಮಾರುತ ತಡೆದು ದೇಶದಾದ್ಯಂತ ವ್ಯಾಪಕ ಮಳೆ ಆಗುವಂತೆ ಮಾಡುತ್ತವೆ. ಹೀಗಾಗಿ ಪಶ್ಚಿಮ ಘಟ್ಟವನ್ನು ಸಂರಕ್ಷಿಸುವ ಹೊಣೆ ಎಲ್ಲರ ಮೇಲಿದೆ. ನಷ್ಟದಲ್ಲಿದ್ದ ಗೇರು ಅಭಿವೃದ್ಧಿ ನಿಗಮ ನಿಯಮಿತವನ್ನು ಲಾಭದತ್ತ ತೆಗೆದುಕೊಂಡು ಹೋಗುವಲ್ಲಿ ಮಮತಾ ಗಟ್ಟಿ ಅವರು ಶ್ರಮಿಸಿದ್ದು, ಅಭಿನಂದನಾರ್ಹರಾಗಿದ್ದಾರೆ. ಇಂದು ನಾವು ಜಾಗತಿಕ ತಾಪಮಾನ ಏರಿಕೆ ಮತ್ತು ಹವಾ ಮಾನ ಬದಲಾವಣೆಯ ಕಾಲಘಟ್ಟದಲ್ಲಿ ಸಾಗಿದ್ದು, ಒಂದು ತಿಂಗಳ ಮಳೆ ಒಂದೇ ವಾರದಲ್ಲಿ ಬೀಳುತ್ತದೆ. ಒಂದು ವಾರದ ಮಳೆ ಒಂದು ದಿನದಲ್ಲಿ ಬೀಳುತ್ತದೆ. ಇದರಿಂದ ಬೆಳೆ ನಷ್ಟ ಆಗುತ್ತಿದೆ. ವಾಡಿಕೆಯಷ್ಟೇ ಮಳೆಯಾದರೂ, ಒಂದೇ ದಿನ ವಿಪರೀತ ಮಳೆ ಬೀಳುತ್ತಿರುವುದರಿಂದ ಹಾನಿ ಹೆಚ್ಚಾಗುತ್ತಿದೆ. ಹೀಗಾಗಿ ವೃಕ್ಷ ಸಂರಕ್ಷಣೆಗೆ ನಾವೆಲ್ಲರೂ ಸಂಕಲ್ಪ ಮಾಡಬೇಕು. ಹಸಿರು ಹೊದಿಕೆ ಹೆಚ್ಚಿಸಬೇಕು ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಹೇಳಿದರು.

ಸಾರಿಗೆ ಇಲಾಖೆ
TRANSPORT DEPARTMENT

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಸಾರಿಗೆ ಇಲಾಖೆ
ಮೂರು ವರ್ಷಗಳ ಸಾಧನೆಯ ಮೈಲಿಗಲ್ಲು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಮೂಲಭೂತ ಸೌಕರ್ಯಗಳ ಅಭಿವೃದ್ಧಿ

ರೂ. 70.12 ಕೋಟಿ ವೆಚ್ಚದಲ್ಲಿ **15** ನೂತನ ಪ್ರಾದೇಶಿಕ ಸಾರಿಗೆ ಕಛೇರಿಗಳ ನಿರ್ಮಾಣ | **ರೂ. 39.25** ಕೋಟಿ ವೆಚ್ಚದಲ್ಲಿ **6** ನೂತನ ಪ್ರಾದೇಶಿಕ ಸಾರಿಗೆ ಕಛೇರಿಗಳ ನಿರ್ಮಾಣ ಪ್ರಗತಿ

ಸ್ವಯಂಚಾಲಿತ/ಗಣಕೀಕೃತ ಪರೀಕ್ಷಾ ಪಥ (ADTS)

ರೂ. 266.00 ಕೋಟಿ ವೆಚ್ಚದಲ್ಲಿ ರಾಜ್ಯದ ವಿವಿಧ **45** ಸ್ಥಳಗಳಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳ ಸ್ಥಾಪನೆ

ಸ್ವಯಂಚಾಲಿತ ವಾಹನ ತಪಾಸಣಾ ಕೇಂದ್ರ

ಪಿ.ಪಿ.ಪಿ. ಯೋಜನೆಯಡಿ DBFOT ಮಾದರಿಯಲ್ಲಿ **12** ಹಾಗೂ BOO ಮಾದರಿಯಲ್ಲಿ **20** ಸ್ಥಳಗಳಲ್ಲಿ ಸ್ವಯಂಚಾಲಿತ ವಾಹನ ತಪಾಸಣಾ ಕೇಂದ್ರಗಳ ನಿರ್ಮಾಣಕ್ಕೆ ಕ್ರಮ

ಭಾರಿ ವಾಹನ ಚಾಲಕರ ತರಬೇತಿ ಕೇಂದ್ರ

ಬೆಂಗಳೂರು, ಧಾರವಾಡ, ಕಲಬುರಗಿ ಮತ್ತು ಮಂಗಳೂರುಗಳಲ್ಲಿ **ರೂ. 46.00** ಕೋಟಿಗಳ ವೆಚ್ಚದಲ್ಲಿ, ಭಾರಿ ವಾಹನ ಚಾಲನಾ ತರಬೇತಿ ಕೇಂದ್ರ ನಿರ್ಮಾಣ | ಬಳ್ಳಾರಿ, ವಿಜಯಪುರ, ನಾಗಮಂಗಲ ಮತ್ತು ಶಿವಮೊಗ್ಗಗಳಲ್ಲಿ **ರೂ. 21.00** ಕೋಟಿ ವೆಚ್ಚದಲ್ಲಿ ಭಾರಿ ವಾಹನ ಚಾಲನಾ ತರಬೇತಿ ಕೇಂದ್ರ ನಿರ್ಮಾಣಕ್ಕೆ ಕ್ರಮ

ಸೀಝಿಂಗ್ ಯಾರ್ಡ್

ಬೆಂಗಳೂರಿನ ಚಂದಾಪುರದಲ್ಲಿ ಕೆ.ಎಸ್.ಆರ್.ಟಿ.ಸಿ ವತಿಯಿಂದ **ರೂ. 1.48** ಕೋಟಿ ವೆಚ್ಚದಲ್ಲಿ ಸೀಝಿಂಗ್ ಯಾರ್ಡ್ ನಿರ್ಮಾಣ | ಬೆಂಗಳೂರಿನ ದೇವನಹಳ್ಳಿ ಮತ್ತು ಮಂಗಳೂರಿನಲ್ಲಿ **ರೂ. 7.58** ಕೋಟಿಗಳ ವೆಚ್ಚದಲ್ಲಿ ಸೀಝಿಂಗ್ ಯಾರ್ಡ್ ನಿರ್ಮಾಣಕ್ಕೆ ಕ್ರಮ

ಅತಿ ಸುರಕ್ಷಿತ ನೋಂದಣಿ ಫಲಕ (HSRP)

ಕರ್ನಾಟಕ ರಾಜ್ಯದಲ್ಲಿ ಒಟ್ಟು **59** ಲಕ್ಷಕ್ಕೂ ಅಧಿಕ ಸಂಖ್ಯೆಯ ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕಗಳ ಅಳವಡಿಕೆ

ಸ್ಮಾರ್ಟ್ ಎನ್‌ಫೋರ್ಸ್‌ಮೆಂಟ್

ರೂ. 5.65 ಕೋಟಿ ವೆಚ್ಚದಲ್ಲಿ ರಾಜ್ಯದಲ್ಲಿರುವ ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳ **7** ಟೋಲ್ ಪ್ಲಾಜಾಗಳಲ್ಲಿ ಮತ್ತು **80** ವಿವಿಧ ಸ್ಥಳಗಳಲ್ಲಿ **ರೂ. 70.00** ಕೋಟಿ ವೆಚ್ಚದಲ್ಲಿ AI ಆಧಾರಿತ ಕ್ಯಾಮರಾ ಅಳವಡಿಸಲು ಕ್ರಮ

ಸಂಪರ್ಕ ರಹಿತ / ಆನ್ ಲೈನ್ ಸೇವೆಗಳು

ಸಾರಥಿ - **15** ಕಾಂಟ್ಯಾಕ್ಟ್ ಲೆಸ್ ಸೇವೆಗಳು
ಸಾರಥಿ - **16** ನಾನ್ ಕಾಂಟ್ಯಾಕ್ಟ್ ಲೆಸ್ ಸೇವೆಗಳು
ವಾಹನ್ - **9** ಕಾಂಟ್ಯಾಕ್ಟ್ ಲೆಸ್ ಸೇವೆಗಳು
ವಾಹನ್ - **12** ನಾನ್ ಕಾಂಟ್ಯಾಕ್ಟ್ ಲೆಸ್ ಸೇವೆ

ಜಿಯೋ ಫೆನ್ಸಿಂಗ್

ಜಿಯೋ ಫೆನ್ಸಿಂಗ್ ಆಧಾರಿತ m-Vahan Fitness App ಅನ್ನು **66** ಆರ್‌ಟಿಒಗಳಲ್ಲಿ ಜಾರಿ | ಪರಿಶೀಲನೆ ಬಳಿಕವೇ ವಾಹನಗಳ ಅರ್ಹತಾ ಪ್ರಮಾಣ ಪತ್ರ ನೀಡಿಕೆ

ಕೇಂದ್ರಿಕೃತ ಮುದ್ರಣ ಸೌಲಭ್ಯ (CPF)

ಮೈಕ್ರೋಚಿಪ್ ಆಧಾರಿತ RC & DL Smart card ವ್ಯವಸ್ಥೆ | ಕೇಂದ್ರಿಕೃತ ಮುದ್ರಣ ಸೌಲಭ್ಯ | ಈ ಯೋಜನೆಯನ್ನು ಜಾರಿಗೆ ತರುವಲ್ಲಿ ರಾಜ್ಯವು **4ನೇ** ಸ್ಥಾನದಲ್ಲಿದೆ

ರೆಟ್ರೋರಿಫ್ಲೆಕ್ಟೀವ್ ಟೇಪ್

ಅಪಘಾತಗಳನ್ನು ನಿಯಂತ್ರಿಸಲು ವಾಹನಗಳಿಗೆ **Retro Reflective Tape & rear marking plate** ಅಳವಡಿಕೆ

ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕಲ್ಯಾಣ ಮಂಡಳಿ

ಮೋಟಾರು ಸಾರಿಗೆ ಸಂಬಂಧಿತ ಕಾರ್ಮಿಕರ ಮಂಡಳಿಯು ಪ್ರಸ್ತುತ ಕಾರ್ಮಿಕ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ/ ಸಾರಿಗೆ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುವ ಸಂಬಂಧ ಸಂಪುಟ ಅನುಮೋದನೆ ದೊರಕಿದೆ/ ಮುಂದಿನ ವಿಧಾನಮಂಡಲ ಅಧಿವೇಶನದಲ್ಲಿ ಒಪ್ಪಿಗೆ ಪಡೆದು ಸಾರಿಗೆ ಇಲಾಖೆಯ ವ್ಯಾಪ್ತಿಗೆ ತರಲಾಗುವುದು | ಸದರಿ ಮಂಡಳಿಯಡಿಯಲ್ಲಿ ವಿದ್ಯಾರ್ಥಿ ವೇತನ, ಅಪಘಾತ ಪರಿಹಾರ, ನೈಸರ್ಗಿಕ ಮರಣ ಪರಿಹಾರ ಹಾಗೂ ಅಂತ್ಯ ಸಂಸ್ಕಾರ ವೆಚ್ಚ, ವಿವಾಹ ವೆಚ್ಚ, ಫಲಾನುಭವಿ/ಫಲಾನುಭವಿಯ ಪತ್ನಿಗೆ ಹೆರಿಗೆ ಭತ್ಯೆ, ಮಕ್ಕಳಿಗೆ ಶೈಕ್ಷಣಿಕ ಸಹಾಯ, ಭವಿಷ್ಯ ನಿಧಿ, ವಸತಿ ಹಾಗೂ ವೃದ್ಧಾಶ್ರಮ ಸೌಲಭ್ಯ ಒದಗಿಸಲಾಗುವುದು

ನೋಂದಾಯಿತ ವಾಹನಗಳ ನಿಷ್ಕ್ರಿಯಪಡಿಸುವ ನೀತಿ (RVSF)

ಹಳೆಯ ಮಾಲಿನ್ಯಕಾರಕ ವಾಹನಗಳನ್ನು ಸ್ಕ್ರ್ಯಾಪ್ ಮಾಡುವ RVSF ಯೋಜನೆ | ಇದುವರೆಗೂ **11,368** ವಾಹನಗಳ ನಿಷ್ಕ್ರಿಯಗೊಳಿಸಲಾಗಿದೆ

ಹೊಗೆ ತಪಾಸಣೆ ಪ್ರಮಾಣ ಪತ್ರಕ್ಕೆ ಹೊಸ ತಂತ್ರಾಂಶ ಅಭಿವೃದ್ಧಿ

5,95,000 ವಾಹನಗಳ ತಪಾಸಣೆ ಹಾಗೂ ಪ್ರಮಾಣ ಪತ್ರಗಳ ನೀಡಿಕೆ

ಡ್ರೈವರ್ ಡ್ರೋಜಿನೆಸ್ & ಅಟೆನ್ಷನ್ ವಾರ್ನಿಂಗ್ ಸಿಸ್ಟಮ್ (DD & AWS)

300 ಕೆ ಎಸ್ ಆರ್ ಟಿ ಸಿ ಬಸ್ಸುಗಳಲ್ಲಿ **ರೂ. 2.50** ಕೋಟಿಗಳ ವೆಚ್ಚದಲ್ಲಿ Driver Drowsiness & Attention Warning ಸಾಧನಗಳ ಅಳವಡಿಕೆ

Vehicle Location Tracking Device & Emergency Button ಅಳವಡಿಸುವ ಯೋಜನೆ

ಮಹಿಳೆ ಮತ್ತು ಮಕ್ಕಳ ಸುರಕ್ಷತೆಗಾಗಿ **2,25,560** ಸಾರ್ವಜನಿಕ ಸೇವಾ ವಾಹನಗಳಲ್ಲಿ VLTD and Panic Button ಅಳವಡಿಕೆ | ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ - ಯೋಜನೆಯ ಭಾಗವಾಗಿ **ರೂ. 22.00** ಕೋಟಿಗಳ ವೆಚ್ಚದಲ್ಲಿ ಸಾರಿಗೆ ಆಯುಕ್ತರ ಕಛೇರಿಯಲ್ಲಿ Command and Control Centre ಸ್ಥಾಪನೆ

ಮಾನ್ಯ ಸಾರಿಗೆ ಹಾಗೂ ಮುಜರಾಯಿ ಇಲಾಖೆ ಸಚಿವರಾದ **ಶ್ರೀ ರಾಮಲಿಂಗಾ ರೆಡ್ಡಿ** ಅವರು ರಸ್ತೆ ಸುರಕ್ಷತಾ ಅಭಿಯಾನದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಂದರ್ಭ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಆಯುಕ್ತರು ಸಾರಿಗೆ ಮತ್ತು ರಸ್ತೆ ಸುರಕ್ಷತೆ
1ನೇ ಮಹಡಿ, ಟಿಟಿಎಂಸಿ ಕಟ್ಟಡ, 'ಎ' ಬ್ಲಾಕ್, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-560027
ವೆಬ್ ಸೈಟ್: www.transport.karnataka.gov.in ಇ-ಮೇಲ್: transcom@nic.in ದೂ.ಸಂ.: 080-22214900

ಸಂಪಾದಕೀಯ

ನೆದರ್‌ಲ್ಯಾಂಡ್ ಜೊತೆಗೆ ನಂಟಸ್ತಿಕೆ

ಪ್ರಧಾನಿ ನರೇಂದ್ರ ಮೋದಿ ಅವರು ನೆದರ್‌ಲೆಂಡ್‌ಗೆ ನೀಡಿರುವ ಭೇಟಿ ಹಲವು ರೀತಿಯಲ್ಲಿ ಫಲಪ್ರದವಾಗಿದೆ. ನಾವು ಎಚ್ಚರಿಕೆಯಿಂದ ಬದುಕದೆ ಹೋದರೆ ಮತ್ತೊಮ್ಮೆ ಬಡತನ ನಮ್ಮನ್ನು ಅಪ್ಪಿಕೊಂಡೀತು ಎಂಬ ಎಚ್ಚರಿಕೆಯನ್ನು ಅವರು ಮತ್ತೊಮ್ಮೆ ಅಲ್ಲಿಂದ ಮೊಳಗಿಸಿದ್ದಾರೆ. ಅದಕ್ಕಿಂತ ಹೆಚ್ಚಾಗಿ, ಅವರ ಭೇಟಿಯ ವೇಳೆ 17 ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದ್ದು, ಭಾರತ ಹಾಗೂ ನೆದರ್‌ಲ್ಯಾಂಡ್ ಎರಡೂ ದೇಶಗಳಿಗೂ ಇದರಿಂದ ಅನುಕೂಲ ಆಗಲಿದೆ. ನೆದರ್‌ಲ್ಯಾಂಡ್ ಭಾರತದ ಪ್ರಮುಖ ವ್ಯಾಪಾರ ಪಾಲುದಾರನಾಗಿದೆ. 5560 ಕೋಟಿ ಡಾಲರ್‌ಗಳಷ್ಟು ವಿದೇಶಿ ನೇರ ಹೂಡಿಕೆ ನೆದರ್‌ಲೆಂಡ್‌ನಿಂದ ಭಾರತಕ್ಕೆ ಕಳೆದ ಸಾಲಿನಲ್ಲಿ ಹರಿದುಬಂದಿದೆ. ಈ ದೇಶ ಭಾರತದಲ್ಲಿನ 4ನೇ ಅತಿದೊಡ್ಡ ಹೂಡಿಕೆದಾರ ರಾಷ್ಟ್ರ ಎನಿಸಿಕೊಂಡಿದೆ. ಇದೀಗ ಮಾಡಿಕೊಳ್ಳಲಾದ ಒಪ್ಪಂದಗಳಲ್ಲಿ ಒಂದು, ಬೆಂಗಳೂರು ಸಮೀಪದ ಹೆಸರುಘಟ್ಟದಲ್ಲಿನ ಪಶುಸಂಗೋಪನಾ ಶ್ರೇಷ್ಠತಾ ಕೇಂದ್ರ, 'ಸೆಂಟರ್ ಆಫ್ ಎಕ್ಸಲೆನ್ಸ್ ಫಾರ್ ಅನಿಮಲ್ ಹಸ್ಬೆಂಡರಿ' (ಸಿಇಎಎಚ್) ನಲ್ಲಿ ನೆದರ್‌ಲೆಂಡ್‌ನಿಂದ 'ಇಂಡೊ-ಡಚ್ ಸೆಂಟರ್ ಆಫ್ ಎಕ್ಸಲೆನ್ಸ್ ಆನ್ ಟ್ರೇನಿಂಗ್ ಇನ್ ಡೇರಿ' ಆರಂಭ. ಕ್ಷೀರೋತ್ಪಾದನೆ- ಪಶುಸಂಗೋಪಕರ ಆದಾಯ ವೃದ್ಧಿಗೆ ಉತ್ತಮ ಡೇರಿ ತಂತ್ರಜ್ಞಾನದ ನೆರವು ದೊರೆಯಲಿದೆ. ಡಚ್ ದೇಶ ಪಶುಸಂಗೋಪನೆಯಲ್ಲಿ ಜಗತ್ತಿಗೇ ಮುಂದಿದ್ದು, ಆ ವಿಚಾರದಲ್ಲಿ ಗಳಿಸಿದ ಜ್ಞಾನವನ್ನು ನಮಗೆ ಧಾರೆ ಎರೆಯಲಿದೆ. ಕರ್ನಾಟಕ ಕೆಎಂಎಫ್ ಮೂಲಕ ಕ್ಷೀರ ಕ್ರಾಂತಿ ಮಾಡಿದ್ದು, ಇದರಿಂದ ನಮ್ಮ ಬಾಂಧವ್ಯ ಇನ್ನಷ್ಟು ಗಾಢವಾಗಲಿದೆ. ಭಾರತದ ಪಶುವೈದ್ಯರು- ಡೇರಿ ತಜ್ಞರಿಗೆ ತರಬೇತಿ- ಕೌಶಲಾಭಿವೃದ್ಧಿ, ಪಶು ಆರೋಗ್ಯ ಮತ್ತು ರೋಗ ನಿಯಂತ್ರಣ ಬಲಪಡಿಸುವಿಕೆ ಇದರಿಂದ ಆಗಲಿದೆ. ಇದಲ್ಲದೆ ಭಾರತದ ಸೆಮಿಕಂಡಕ್ಟರ್ ಉದ್ಯಮ ಕ್ಷೇತ್ರ, ಹಸಿರು ಇಂಧನ, ಶಿಕ್ಷಣ, ಆರೋಗ್ಯ ಮತ್ತು ಸಾಂಸ್ಕೃತಿಕ ವಿನಿಮಯ ಕ್ಷೇತ್ರಗಳಲ್ಲಿ ಭಾರತಕ್ಕೆ ಗಣನೀಯ ಲಾಭ ತಂದುಕೊಡುವ ಮಾತುಕತೆಗಳು ನಡೆದಿವೆ. ಎರಡೂ ದೇಶವಾಸಿಗಳ ಪ್ರವಾಸ, ಭೇಟಿಗೆ ವೀಸಾ ವಿತರಣೆ ಸರಳವಾಗಲಿದೆ. ನೆದರ್‌ಲೆಂಡ್‌ನಲ್ಲಿ ಭಾರತದ ವಿದ್ಯಾರ್ಥಿಗಳು, ಸಂಶೋಧಕರು ಮತ್ತು ವೃತ್ತಿಪರರಿಗೆ ಹೆಚ್ಚು ಅವಕಾಶಗಳು ಸಿಗಲಿವೆ. ಅಪರೂಪದ ಪ್ರಮುಖ ಖನಿಜಗಳ ಕ್ಷೇತ್ರದಲ್ಲಿ ಪರಸ್ಪರ ವಿನಿಮಯ, ಹಸಿರು ಜಲಜನಕ ರಫ್ತು ಮಾರುಕಟ್ಟೆ ವಿಸ್ತರಣೆ, ನವೀಕರಿಸಬಹುದಾದ ಇಂಧನ ಕ್ಷೇತ್ರಕ್ಕೆ ಉತ್ತೇಜನ ಸಿಗಲಿದೆ. ಭಾರತದ ವಿದ್ಯಾರ್ಥಿಗಳು- ಅಧ್ಯಾಪಕರಿಗೆ ಡಚ್ ವಿವಿಗಳಲ್ಲಿ ಅಧ್ಯಯನಕ್ಕೆ ಮತ್ತು ಬೋಧನೆಗೆ ಹೆಚ್ಚು ಅವಕಾಶ ದೊರೆಯಲಿದೆ. ಯುದ್ಧದಿಂದ ಆರ್ಥಿಕತೆ ಕುಸಿಯುತ್ತಿರುವ ಹೊತ್ತಿನಲ್ಲಿ ಇಂಥ ಬಾಂಧವ್ಯ ವಿಸ್ತರಣೆಗಳು ಭರವಸೆ ಮೂಡಿಸುತ್ತವೆ.

ಸೊಂಪಾದಕೀಯ

ಮಕ್ಕಳಿರಲವ್ವಾ ಮನೆ ತುಂಬ

ಆಂಧ್ರಪ್ರದೇಶದಲ್ಲಿ ಹೆಚ್ಚು ಮಕ್ಕಳನ್ನು ಹೆರಲು ಸರಕಾರ ನೀಡಿರುವ ಆಮಿಷ ಎಲ್ಲರ ಹುಬ್ಬೇರುವಂತೆ ಮಾಡಿದೆ. ರಾಜ್ಯದಲ್ಲಿ ಜನಸಂಖ್ಯೆ ಕುಸಿತವನ್ನು ತಡೆಯುವ ಪ್ರಯತ್ನದ ಭಾಗವಾಗಿ, ಮೂರನೇ ಮಗುವಿಗೆ ಜನನ ನಿಡುವವರಿಗೆ 30,000 ರೂ. ಹಾಗೂ ನಾಲ್ಕನೇ ಮಗುವಿಗೆ ಜನನ ನೀಡುವವರಿಗೆ 40,000 ರೂಪಾಯಿ ಸರಕಾರದ ಕಡೆಯಿಂದ ನೀಡಲಾಗುತ್ತದಂತೆ. ಇದು ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರ ಘೋಷಣೆ. ಓಕೆ, ಐದನೇ ಮಗು, ಆರನೇ ಮಗುವಿಗೆ ಏನೂ ಬೇಡವೇ? ಏಳು, ಎಂಟು ಮಕ್ಕಳನ್ನು ಹೆತ್ತು ಕೊಟ್ಟರೆ? ಅನುಪಾತದ ಪ್ರಕಾರ ಈ ನಗದು ಬಹುಮಾನ ಹೆಚ್ಚುತ್ತ ಹೋಗಬೇಕು. ನನ್ನ ಪುರುಷ ಪ್ರಯತ್ನಕ್ಕೆ 'ನಗದು' ಸಿಗುತ್ತದೆ ಎಂದು ದಂಪತಿಗಳಲ್ಲಿ ಗಂಡನೇನೋ ಖುಷಿಪಡಬಹುದು. ಆದರೆ ಹೆರಿಗೆಯ ನೋವು ತಿನ್ನಬೇಕಾದ ಪತ್ನಿಯ ಗತಿ ಏನು? ಮದುವೆಯ ಚಿಂತೆಯೇ ಬೇಡ, ಮಕ್ಕಳನ್ನು ಹೆತ್ತು ಕೊಡುತ್ತೇನೆ ಎನ್ನುವವರಿಗೂ ಈ ನಿಯಮ ಅನ್ವಯ ಆಗುತ್ತದೆಯೇ? ಸರಿ, ನಾಲ್ಕಾರು ಮಕ್ಕಳನ್ನು ಹೆತ್ತದ್ದಾಯಿತು, ಅವುಗಳನ್ನು ಸಾಕುವುದಕ್ಕೂ ಸರಕಾರದ ಪ್ರೋತ್ಸಾಹ ಧನ ಇದೆಯೋ? ಅವುಗಳಿಗೆ ಪೌಷ್ಟಿಕ ಆಹಾರ, ಉಡುಗೆ, ವಿದ್ಯಾಭ್ಯಾಸದ ಖರ್ಚು- ಇದನ್ನೆಲ್ಲ ಸರಕಾರ ನೋಡಿಕೊಳ್ಳುತ್ತದೋ? ಹೀಗೆ ಹಲವಾರು ಪ್ರಶ್ನೆಗಳು ಇವೆ. ಈ ಪ್ರಶ್ನೆಗಳಿಗೆ ಉತ್ತರ ಸಿಕ್ಕದೆ ಮುಂದುವರಿಯುವುದಿಲ್ಲ ಎಂದು ಹುಮ್ಮಸ್ಸು ಹೊಂದಿರುವ ದಂಪತಿಗಳು ನಿರ್ಧರಿಸಿದ್ದಾರೆ ಎಂಬ ವರದಿಗಳು ಬಂದಿವೆ. ಈ ನಿಯಮಾವಳಿ ನಮ್ಮ ಹಿಂದಿನ ತಲೆಮಾರುಗಳಿಗೆ ಅನ್ವಯ ಆಗುವುದಿದ್ದರೆ, ಹತ್ತಾರು ಮಕ್ಕಳನ್ನು ಹುಟ್ಟಿಸಿ ಈ ಜಗತ್ತಿಗೆ ಬಿಡುತ್ತಿದ್ದ ನಮ್ಮ ಪಿತೃಪಿತಾಮಹರೂ ಸಂತೋಷಪಡುತ್ತಿದ್ದರು. ಅಂತೂ ಮಕ್ಕಳಿರಲವ್ವಾ ಮನೆ ತುಂಬ ಎಂಬ ಗಾದೆಗೆ ಹೊಸ ರೂಪ ಈಗ.

ಸಂಪಾದಕರ ಸದ್ಯಶೋಧನೆ

ಕೇರಳಕ್ಕೆ ಸಿಕ್ಕ 'ಅಕ್ಷರಪ್ರೇಮಿ' ಸಿಎಂ

ಸಂಸದ ಶಶಿ ತರೂರ್ ಅವರು ಕೇರಳದ ನೂತನ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಆಯ್ಕೆಯಾದ ವಿ.ಡಿ.ಸತೀಶನ್ ಅವರ ಬಗ್ಗೆ ಮಾತನಾಡುತ್ತಾ ಒಂದು ಆಸಕ್ತಿದಾಯಕ ವಿಷಯ ಹಂಚಿಕೊಂಡಿದ್ದರು. 'ನಾವಿಬ್ಬರೂ ಭೇಟಿಯಾದಾಗ ರಾಜಕೀಯದ ಚರ್ಚೆಗಿಂತ ಹೆಚ್ಚಾಗಿ, ನಾವು ಓದಿದ ಪುಸ್ತಕಗಳ ಬಗ್ಗೆ, ಇತ್ತೀಚೆಗೆ ಪ್ರಕಟವಾದ ಜಾಗತಿಕ ಮಟ್ಟದ ಪುಸ್ತಕಗಳು, ಸಂಶೋಧನಾ ಪ್ರಬಂಧಗಳು ಅಥವಾ ಹೊಸ ಸಾಹಿತ್ಯಿಕ ಕೃತಿಗಳ ಬಗ್ಗೆಯೇ ಹೆಚ್ಚು ಮಾತಾಡುತ್ತೇವೆ' ಎಂದು ಹೇಳಿದ್ದರು. ಅಂದರೆ ಸತೀಶನ್ ಅವರು ಕೇರಳದ ನೂತನ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿರುವುದು, ಒಬ್ಬ ಪುಸ್ತಕಪ್ರೇಮಿಯ ಗೆಲುವು ಎಂಬ ರೀತಿಯಲ್ಲಿ ಸಂಭ್ರಮಿಸಲಾಗುತ್ತಿದೆ.

ರಾಜಕಾರಣಿಗಳು ಪುಸ್ತಕ ಓದುವುದು ಅಪರೂಪ. ಅವರಿಗೆ ಅದಕ್ಕೆಲ್ಲ ಸಮಯ ಸಿಗುವುದಿಲ್ಲ. ಆದರೆ ಸತೀಶನ್ ಹಾಗಲ್ಲ. ನಿತ್ಯವೂ ಪುಸ್ತಕ ಓದುತ್ತಾರೆ. ಯಾವ ಹೊಸ ಪುಸ್ತಕ ಬಿಡುಗಡೆಯಾದರೂ, ಅದು ಅವರ ಟೇಬಲ್ ಮೇಲೆ ಇರುತ್ತದೆ. ಸತೀಶನ್ ಅವರಿಗೆ ಪುಸ್ತಕಗಳೆಂದರೆ ಕೇವಲ ಹವ್ಯಾಸವಲ್ಲ, ಅದು ಅವರ ದೈನಂದಿನ ಜೀವನದ ಅವಿಭಾಜ್ಯ ಅಂಗ. ರಾಜಕಾರಣದ ಬಿಡುವಿಲ್ಲದ ಕೆಲಸ-ಕಾರ್ಯಗಳ ನಡುವೆಯೂ ಅವರು ಪ್ರತಿದಿನ ಓದಿಗಾಗಿ ಸಮಯ ಮೀಸಲಿಡುತ್ತಾರೆ. ಅವರ ಖಾಸಗಿ ಗ್ರಂಥಾಲಯದಲ್ಲಿ ಸಾವಿರಾರು ವೈವಿಧ್ಯಮಯ ಪುಸ್ತಕಗಳಿವೆ. ಸತೀಶನ್ ಅವರು ಕೇವಲ ರಾಜಕೀಯ ಪುಸ್ತಕಗಳಿಗೆ ಸೀಮಿತವಾಗದೇ, ಮಲಯಾಳಂ ಮತ್ತು ಇಂಗ್ಲಿಷ್ ಸಾಹಿತ್ಯ, ಜಾಗತಿಕ ಇತಿಹಾಸ, ಪರಿಸರ ವಿಜ್ಞಾನ ಮತ್ತು ಕಾನೂನು ಕುರಿತಾದ ಗಂಭೀರ ಕೃತಿಗಳನ್ನು ಅಧ್ಯಯನ ಮಾಡುತ್ತಾರೆ. ಜಾಗತಿಕ ಮಟ್ಟದ ಲೇಖಕರಾಗಿರುವ ಶಶಿ ತರೂರ್ ಅವರೇ ಸತೀಶನ್ ಅವರ ಓದಿನ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುವುದು ಸಾಮಾನ್ಯ ಸಂಗತಿಯಲ್ಲ. ಬೌದ್ಧಿಕವಾಗಿ ಸಮಾನ ಮನಸ್ಕರಾಗಿರುವ ಇವರಿಬ್ಬರ ಸ್ನೇಹವು ಪುಸ್ತಕಗಳ ಮೂಲಕವೇ ಗಟ್ಟಿಯಾಗಿದೆ. ಸತೀಶನ್ ಅವರು ಕಳೆದ ಐದು ವರ್ಷಗಳ ಕಾಲ ಕೇರಳ ವಿಧಾನಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿ ಕೆಲಸ ಮಾಡಿದ ರೀತಿ ಸಾಕಷ್ಟು ಮೆಚ್ಚುಗೆಗೆ ಪಾತ್ರವಾಗಿತ್ತು. ಅವರ ವಾದಗಳು ಕೇವಲ ರಾಜಕೀಯ ಟೀಕೆಗಳಾಗಿರದೇ, ಆಳವಾದ ಸಂಶೋಧನೆಯಿಂದ ಕೂಡಿರುತ್ತಿದ್ದವು. ಯಾವುದೇ ವಿಷಯದ ಮೇಲೆ ಮಾತನಾಡುವಾಗ ಅವರು ಸಂಬಂಧಿತ ಪುಸ್ತಕಗಳು ಅಥವಾ ವರದಿಗಳನ್ನು ಉಲ್ಲೇಖಿಸುತ್ತಿದ್ದರು. ತಾವು ಓದಿದ ಪುಸ್ತಕಗಳನ್ನು ಅವರು ಉದ್ಧರಿಸುತ್ತಿದ್ದರು. ಇದು ಅವರ ವಿರೋಧಿಗಳಿಗೂ ಅಚ್ಚರಿ ಮೂಡಿಸುತ್ತಿತ್ತು. ಓದು ಅವರ ಭಾಷೆಯ ಮೇಲೆ ಹಿಡಿತ ನೀಡಿದೆ. ಅವರ ಮಾತುಗಳಲ್ಲಿ ಸ್ಪಷ್ಟತೆ ಇರುತ್ತದೆ ಮತ್ತು ಭಾವನಾತ್ಮಕ ವಿಷಯಗಳಿಗಿಂತ ತಾರ್ಕಿಕ ವಿಷಯಗಳಿಗೆ ಅವರು ಹೆಚ್ಚು ಒತ್ತು ನೀಡುತ್ತಾರೆ. ಸತೀಶನ್ ಅವರಲ್ಲಿರುವ ಪರಿಸರ ಕಾಳಜಿಗೆ ಅವರ ಓದಿನ ಹಿನ್ನೆಲೆಯೇ ಕಾರಣ. ಗಾಡ್ಗಿಲ್ ವರದಿ ಮತ್ತು ಪಶ್ಚಿಮ ಘಟ್ಟಗಳ ಸಂರಕ್ಷಣೆ ಬಗ್ಗೆ ಅವರು ಸಾರ್ವಜನಿಕವಾಗಿ ಮತ್ತು ಸದನದಲ್ಲಿ ಮಂಡಿಸಿದ ವಿಚಾರಗಳು ಅವರ ಅಧ್ಯಯನಶೀಲತೆಗೆ ಸಾಕ್ಷಿ. ಸಾಹಿತ್ಯ ಮತ್ತು ಕಲೆಯ ಮೇಲಿನ ಅವರ ಪ್ರೀತಿ ಕೇರಳದ ಸಾಂಸ್ಕೃತಿಕ ವಲಯದಲ್ಲೂ ಅವರಿಗೆ ದೊಡ್ಡ ಅಭಿಮಾನಿ ಬಳಗವನ್ನು ತಂದುಕೊಟ್ಟಿದೆ. ಕೇರಳವು ಸಾಕ್ಷರತೆಯಲ್ಲಿ ಮೊದಲಿದ್ದರೂ, ಒಬ್ಬ ಪ್ರಬುದ್ಧ ಓದುಗ ನಾಯಕನನ್ನು ಮುಖ್ಯಮಂತ್ರಿಯಾಗಿ ಪಡೆಯುತ್ತಿರುವುದು ಆ ರಾಜ್ಯದ ಸುದೈವ. ಪುಸ್ತಕಗಳ ಮೂಲಕ ಜಗತ್ತನ್ನು ನೋಡುವ ಸತೀಶನ್ ಅವರು ಕೇರಳದ ಸಮಸ್ಯೆಗಳಿಗೆ ಜ್ಞಾನದ ಮೂಲಕ ಪರಿಹಾರ ಕಂಡುಕೊಳ್ಳಲಿ ಎಂಬುದು ಜನರ ಆಶಯ. ಸತೀಶನ್ ಅವರು ಇಂಗ್ಲಿಷ್ ಮತ್ತು ಮಲಯಾಳಂ ಎರಡೂ ಭಾಷೆಗಳ ಸಾಹಿತ್ಯದ ಮೇಲೆ ಸಮಾನ ಹಿಡಿತ ಹೊಂದಿದ್ದಾರೆ. ಸಂಕೀರ್ಣವಾದ ಮಸೂದೆಗಳಿರಲಿ ಅಥವಾ ಬಜೆಟ್ ಚರ್ಚೆಯಿರಲಿ, ಅವರು ಸದಾ ಹೋಂವರ್ಕ್ ಮಾಡಿಯೇ ಸಭೆಗೆ ಬರುತ್ತಾರೆ. ಕೇರಳದ ಸಾಂಸ್ಕೃತಿಕ ಚರಿತ್ರೆ ಮತ್ತು ಸಾಮಾಜಿಕ ಸುಧಾರಣೆಯ ಚಳವಳಿಗಳ ಬಗ್ಗೆ ಅವರಿಗೆ ಆಳವಾದ ಜ್ಞಾನವಿದೆ. ಇದು ಅವರ ಆಡಳಿತದಲ್ಲಿ ಸಮಾಜದ ಎಲ್ಲ ವರ್ಗಗಳನ್ನು ಒಳಗೊಳ್ಳುವ ನಿರ್ಧಾರ ತೆಗೆದುಕೊಳ್ಳಲು ಸಹಕಾರಿಯಾಗಿದೆ. ಒಬ್ಬ ಉತ್ತಮ ಓದುಗ ಕೇರಳದಂತಹ ಸಾಕ್ಷರ ರಾಜ್ಯದ ಚುಕ್ಕಾಣಿ ಹಿಡಿಯುತ್ತಿರುವುದು, ಅಲ್ಲಿನ ಬೌದ್ಧಿಕ ಲೋಕಕ್ಕೆ ಹೊಸ ಆಶಾದಾಯಕ ಮುನ್ನುಡಿಯಾಗಿದೆ.

ಫೈನಲ್ ಸೆಟ್ಲ್‌ಮೆಂಟಿಗೆ ಸಿದ್ದರಾಮಯ್ಯ ರೆಡಿ

ಸಿದ್ದರಾಮಯ್ಯ ಅವರು ರಾಹುಲ್ ಗಾಂಧಿ ಅವರ ಮುಂದೆ ಫೈನಲ್ ಸೆಟ್ಲ್‌ಮೆಂಟಿಗೆ ಸಜ್ಜಾಗಿ ಕುಳಿತ ನಂತರ ನಂತರ ಕಾಂಗ್ರೆಸ್ ಪಾಳಯದಲ್ಲಿ ಒಂದು ವಿಷಯ ನಿಕ್ಕಿಯಾಗಿದೆ. ಅದೆಂದರೆ ನಾಯಕತ್ವ ಬದಲಾವಣೆಯ ಆಟ ನಿರ್ಣಾಯಕ ತಿರುವು ಪಡೆದರೆ ಒಂದೋ ಸರ್ಕಾರ ಅಲುಗಾಡುವುದು ಗ್ಯಾರಂಟಿ. ಇಲ್ಲವೇ ಸಿದ್ದರಾಮಯ್ಯ ಅವರ ಸಂಪುಟ ಪುನರ‍್ರಚನೆಯಾಗುವುದು ಗ್ಯಾರಂಟಿ ಎಂಬುದು.

ಮೂರ್ತಿಪೂಜೆ

ಆರ್.ಟಿ. ವಿಠ್ಠಲಮೂರ್ತಿ

vveditoped@gmail.com

ಸಿಎಂ ಸಿದ್ದರಾಮಯ್ಯ ಈ ಬಾರಿ ಫೈನಲ್ ಸೆಟ್ಲ್‌ಮೆಂಟ್‌ಗೆ ಸಜ್ಜಾಗಿದ್ದಾರೆ. ಅಷ್ಟೇ ಅಲ್ಲ, 'ನಿಮ್ಮ ಜತೆ ಮಾತನಾಡಬೇಕು ಟೈಮು ಕೊಡಿ' ಅಂತ ರಾಹುಲ್ ಗಾಂಧಿಯವರನ್ನು ಕೇಳಿಕೊಂಡಿದ್ದಾರೆ.

ಅಂದ ಹಾಗೆ ಸಿದ್ದರಾಮಯ್ಯ ಅವರು ಸೆಟ್ಲ್ ಮಾಡಿಕೊಳ್ಳಲು ನಿರ್ಧರಿಸಿರುವ ವಿಷಯ ಯಾವುದು ಎಂಬುದು ರಹಸ್ಯವೇನಲ್ಲ. ಕಳೆದ ಎರಡು ವರ್ಷಕ್ಕೂ ಹೆಚ್ಚು ಕಾಲದಿಂದ ವೆಂಕಟೇಶ್ವರ ಸ್ತೋತ್ರದಂತಾಗಿರುವ ಅಧಿಕಾರ ಹಂಚಿಕೆಯ ಮಾತನ್ನು ಸೆಟ್ಲ್ ಮಾಡಿಕೊಳ್ಳುವುದು ಸಿದ್ದರಾಮಯ್ಯ ಅವರ ನಿರ್ಧಾರ.

ಅಂದ ಹಾಗೆ ಸಿದ್ದರಾಮಯ್ಯ ಅವರು ತಕ್ಷಣದ ಸೆಟ್ಲ್‌ಮೆಂಟ್‌ಗೆ ರೆಡಿಯಾಗಲು ಹಲವು ಕಾರಣಗಳಿವೆ. ಈ ಪೈಕಿ ಮುಖ್ಯವಾದುದು ಡಿ.ಕೆ. ಶಿವಕುಮಾರ್ ಅವರ ಕ್ಯಾಂಪಿನಿಂದ ಕೇಳಿ ಬರುತ್ತಿರುವ ಮಾತು. ಅದರ ಪ್ರಕಾರ: 'ಸರ್ಕಾರಕ್ಕೆ ಮೂರು ವರ್ಷ ಭರ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ನಾಯಕತ್ವ ಬದಲಾವಣೆ ಮಾಡಲು ವರಿಷ್ಠರು ನಿರ್ಧರಿಸಿದ್ದಾರೆ. ಈ ನಿರ್ಧಾರವನ್ನು ಹೇಳುವ ಸಲುವಾಗಿಯೇ ದಿಲ್ಲಿಗೆ ಬರುವಂತೆ ಸಿದ್ದರಾಮಯ್ಯ ಅವರಿಗೆ ಬುಲಾವ್ ನೀಡಲಿದ್ದಾರೆ. ಅರ್ಥಾತ್, ಸಿದ್ಧರಾಮಯ್ಯ ಅವರು ಸಿಎಂ ಹುದ್ದೆಯಿಂದ ಕೆಳಗಿಳಿದು ಈ ತಿಂಗಳ ಅಂತ್ಯದ ಹೊತ್ತಿಗೆ ಡಿ.ಕೆ. ಶಿವಕುಮಾರ್ ಸಿಎಂ ಆಗಲಿದ್ದಾರೆ' ಎಂಬುದು ಆ ಕ್ಯಾಂಪಿನ ಮಾತು.

ಇದೇ ಕ್ಯಾಂಪಿನ ಪ್ರಕಾರ, 'ಸಿಎಂ ಹುದ್ದೆಯಿಂದ ಕೆಳಗಿಳಿಯಲಿರುವ ಸಿದ್ದರಾಮಯ್ಯ ಅವರನ್ನು ರಾಜ್ಯಸಭೆ ಸದಸ್ಯರನ್ನಾಗಿ ಮಾಡುವುದು ವರಿಷ್ಠರ ಲೆಕ್ಕಾಚಾರ. ಹೀಗೆ ಎಲ್ಲವೂ ಸೆಟ್ಲ್ ಆಗಿರುವುದರಿಂದ ಕರ್ನಾಟಕದ ರಾಜಕಾರಣದಲ್ಲಿ ಯಾವ ಗೊಂದಲವೂ ಆಗುವುದಿಲ್ಲ' ಎಂಬುದು ಅದರ ಮಾತು.

ಯಾವಾಗ ಈ ಮಾತು ಗಟ್ಟಿಯಾಗಿ ಕೇಳತೊಡಗಿತೋ? ಆಗ ಸಿಎಂ ಸಿದ್ದರಾಮಯ್ಯ ಫೈನಲ್ ಸೆಟ್ಲ್‌ಮೆಂಟ್‌ಗೆ ಸಜ್ಜಾಗಿದ್ದಾರೆ. ಮೂಲಗಳ ಪ್ರಕಾರ ಇದೇ ಕಾರಣಕ್ಕಾಗಿ ಕಳೆದ ವಾರ ರಾಹುಲ್ ಗಾಂಧಿಯವರನ್ನು ಸಂಪರ್ಕಿಸಿದ ಸಿದ್ದರಾಮಯ್ಯ, 'ನಿಮ್ಮ ಜತೆ ಮಾತನಾಡಬೇಕು. ಹೀಗಾಗಿ ದಿಲ್ಲಿಗೆ ಬರುತ್ತೇನೆ ಟೈಮು ಕೊಡಿ' ಎಂದಿದ್ದಾರೆ.

ಆದರೆ ಸಿದ್ದರಾಮಯ್ಯ ನೇರವಾಗಿ ಕೇಳಿದರೂ ರಾಹುಲ್ ಗಾಂಧಿ ಇದುವರೆಗೆ ಟೈಮು ಕೊಟ್ಟಿಲ್ಲ. ಆದರೆ ಅವರು ಟೈಮು ಕೊಟ್ಟಿಲ್ಲ ಅಂತ ಸುಮ್ಮನಿರಲು ಸಾಧ್ಯವೇ? ಹಾಗಂತಲೇ ಕೇರಳದ ಮುಖ್ಯಮಂತ್ರಿಯಾಗಿ ವಿ.ಡಿ. ಸತೀಶನ್ ಪ್ರಮಾಣ ವಚನ ಸ್ವೀಕರಿಸುವ ಸಮಾರಂಭಕ್ಕೆ ಹೋದಾಗ ಅಲ್ಲಿ ಸಿಗುವ ರಾಹುಲ್ ಗಾಂಧಿಯವರ ಬಳಿ ಟೈಮು ಕೊಡಿ ಅಂತ ಪುನಃ ಕೇಳಲು ಸಿದ್ದರಾಮಯ್ಯ ನಿರ್ಧರಿಸಿದ್ದಾರೆ.

ಹೀಗೆ ತಾವು ಹೇಳಿದ ಮೇಲೆ ರಾಹುಲ್ ಗಾಂಧಿ ಟೈಮು ಕೊಟ್ಟರೆ ದಿಲ್ಲಿಗೆ ಹೋಗಲಿರುವ ಸಿದ್ದರಾಮಯ್ಯ ಮೂರು ವಿಷಯಗಳನ್ನು ರಾಹುಲ್ ಗಾಂಧಿ ಮುಂದೆ ಪ್ರಸ್ತಾಪಿಸಲಿದ್ದಾರೆ.

ಈ ಪೈಕಿ ಮುಖ್ಯವಾದುದು, 'ನಾನು ಸಿಎಂ ಹುದ್ದೆಯಲ್ಲಿ ಮುಂದುವರಿಯಬೇಕೋ ಬೇಡವೋ' ಎಂಬುದು.

ಒಂದು ವೇಳೆ ರಾಹುಲ್ ಗಾಂಧಿ 'ಅಧಿಕಾರ ತ್ಯಾಗ ಮಾಡಿ ಸಿದ್ರಾಮಯ್ಯಾಜೀ' ಎಂದರೆ 'ಆಗಲಿ ಸಾರ್. ನಾನು ರೆಡಿ ಇದ್ದೇನೆ. ಆದರೆ ನಾನು ತೆರವು ಮಾಡುವ ಜಾಗಕ್ಕೆ ದಲಿತ ನಾಯಕ ಡಾ.ಜಿ. ಪರಮೇಶ್ವರ್ ಬರಬೇಕು. ಇಲ್ಲದಿದ್ದರೆ ಮುಂದಿನ ಬೆಳವಣಿಗೆಗಳ ಬಗ್ಗೆ ನಾನು ಜವಾಬ್ದಾರನಲ್ಲ' ಅಂತ ಖಡಕ್ಕಾಗಿ ಹೇಳಲು ಸಿದ್ದರಾಮಯ್ಯ ತೀರ್ಮಾನಿಸಿದ್ದಾರೆ.

ಆದರೆ ರಾಹುಲ್ ಗಾಂಧಿ ಅಧಿಕಾರ ತ್ಯಾಗದ ಮಾತನಾಡದೆ 'ನಿಮ್ಮ ಪಾಡಿಗೆ ನೀವು ನೆಮ್ಮದಿಯಾಗಿರಿ' ಎಂದರೆ 'ಸಂಪುಟ ಪುನರ‍್ರಚನೆಗೆ ಗ್ರೀನ್ ಸಿಗ್ನಲ್ ಕೊಡಿ. ಮತ್ತು ರಾಜ್ಯ ಕಾಂಗ್ರೆಸ್ ಉಸ್ತುವಾರಿ ಹೊಣೆಗಾರಿಕೆಯಿಂದ ಸುರ್ಜೇವಾಲಾ ಅವರನ್ನು ಬಿಡುಗಡೆ ಮಾಡಿ' ಅಂತ ಸಿದ್ಧರಾಮಯ್ಯ ಸ್ಪಷ್ಟವಾಗಿ ಒತ್ತಾಯಿಸಲಿದ್ದಾರೆ.

ಯಾವಾಗ ಅವರು ಹೀಗೆ ಫೈನಲ್ ಸೆಟ್ಲ್‌ಮೆಂಟಿಗೆ ಸಜ್ಜಾಗಿ ಕುಳಿತರೋ? ಇದಾದ ನಂತರ ಕಾಂಗ್ರೆಸ್ ಪಾಳಯದಲ್ಲಿ ಒಂದು ವಿಷಯ ನಿಕ್ಕಿಯಾಗಿದೆ. ಅದೆಂದರೆ ನಾಯಕತ್ವ ಬದಲಾವಣೆಯ ಆಟ ನಿರ್ಣಾಯಕ ತಿರುವು ಪಡೆದರೆ ಒಂದೋ ಸರ್ಕಾರ ಅಲುಗಾಡುವುದು ಗ್ಯಾರಂಟಿ. ಇಲ್ಲವೇ ಸಿದ್ದರಾಮಯ್ಯ ಅವರ ಸಂಪುಟ ಪುನರ‍್ರಚನೆಯಾಗುವುದು ಗ್ಯಾರಂಟಿ ಎಂಬುದು.

ಹೀಗಾಗಿ ಈ ಹೊಸ ಗ್ಯಾರಂಟಿಗಾಗಿ ಎಲ್ಲರೂ ರಾಹುಲ್ ಗಾಂಧಿಯವರತ್ತ ತಿರುಗಿ ನೋಡುತ್ತಿದ್ದಾರೆ.

ರಾಹುಲ್‌ಗೆ ಕಾಡುತ್ತಿರುವ ಚಿಂತೆ

ಹೀಗೆ ಸಿದ್ದರಾಮಯ್ಯ- ಡಿ.ಕೆ. ಶಿವಕುಮಾರ್ ಮಧ್ಯೆ ನಡೆಯುತ್ತಿರುವ ಅಧಿಕಾರ ಹಂಚಿಕೆ ಸಂಘರ್ಷ ನಿರ್ಣಾಯಕ ಘಟ್ಟಕ್ಕೆ ಬಂದಿದ್ದರೆ,ದಿಲ್ಲಿಯ ಕಾಂಗ್ರೆಸ್ ಪಡಸಾಲೆಯಿಂದ ಬೇರೆಯೇ ಕತೆ ತೇಲಿ ಬರುತ್ತಿದೆ.

ಅದರ ಪ್ರಕಾರ, ಅಧಿಕಾರ ಹಂಚಿಕೆಯ ವಿಷಯ ಎಷ್ಟು ಸೂಕ್ಷ್ಮ ಘಟ್ಟಕ್ಕೆ ತಲುಪಿದೆ ಎಂದರೆ ರಾಹುಲ್ ಗಾಂಧಿ ಲಿಟರಲಿ ಚಿಂತೆಗೆ ಬಿದ್ದಿದ್ದಾರೆ.

ಮೂಲಗಳ ಪ್ರಕಾರ, 'ರಾಹುಲ್ ಗಾಂಧಿ ಚಿಂತೆ ಮಾಡುತ್ತಿರುವ ವಿಷಯ ಎಂದರೆ ಭಿನ್ನಮತದ್ದು. ಒಂದು ವೇಳೆ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿ ಡಿ.ಕೆ. ಶಿವಕುಮಾರ್ ಅವರಿಗೆ ಸಿಎಂ ಹುದ್ದೆ ಕೊಟ್ಟರೆ ಸಿದ್ದರಾಮಯ್ಯ ತಿರುಗಿ ಬೀಳುತ್ತಾರೆ. ಒಂದು ವೇಳೆ ಸಿದ್ದರಾಮಯ್ಯ ಅವರನ್ನು ಮುಂದುವರಿಸಿ ಡಿ.ಕೆ. ಶಿವಕುಮಾರ್ ಅವರಿಗೆ ಪಟ್ಟ ತಪ್ಪಿಸಿದರೆ ಡಿ.ಕೆ. ಶಿವಕುಮಾರ್ ರೆಬೆಲ್ ಆಗುತ್ತಾರೆ.

ಹೀಗಾಗಿ ಈ ಇಬ್ಬರ ಪೈಕಿ ಯಾರ ಭಿನ್ನಮತವನ್ನು ಭರಿಸಬಹುದು? ಎಂಬುದು ರಾಹುಲ್ ಗಾಂಧಿಯವರ ಯೋಚನೆ. ಈ ಪೈಕಿ ಡಿ.ಕೆ. ಶಿವಕುಮಾರ್ ಭಿನ್ನಮತೀಯರಾದರೆ ಅಪಾಯ ಕಡಿಮೆ. ಆದರೆ ಸಿದ್ದರಾಮಯ್ಯ ಭಿನ್ನಮತೀಯರಾದರೆ ಅಪಾಯ ಜಾಸ್ತಿ ಎಂಬುದು ಅವರಿಗಿರುವ ಮಾಹಿತಿ.

ಈ ಹಿಂದೆ ಕರ್ನಾಟಕದಲ್ಲಿ 2008ರ ವಿಧಾನಸಭೆ ಚುನಾವಣೆಯನ್ನು ಖರ್ಗೆಯವರ ನೇತೃತ್ವದಲ್ಲಿ ಎದುರಿಸಿದಾಗ ಸಿದ್ದರಾಮಯ್ಯ ಪ್ರಚಾರದ ಫೀಲ್ಡಿನಿಂದ ದೂರವೇ ಇದ್ದರು. ಮುಂದೆ 2018ರಲ್ಲಿ ಅತಂತ್ರ ಫಲಿತಾಂಶ ಬಂದು ಜೆಡಿಎಸ್ ಜತೆ ಸೇರಿ ಸರ್ಕಾರ ರಚಿಸಿದರೂ ಅದು ಬಹುಕಾಲ ಬಾಳಲಿಲ್ಲ. ಹೀಗಾಗಿ ಈಗ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿದರೂ ಇಂತಹದ್ದೇ ಇತಿಹಾಸ ರಿಪೀಟ್ ಅಗಬಹುದು ಎಂಬುದು ರಾಹುಲ್ ಗಾಂಧಿಯವರ ಚಿಂತೆ.

ಹೀಗಾಗಿ 'ನಿಮ್ಮ ಭೇಟಿಗೆ ಟೈಮು ಕೊಡಿ' ಅಂತ ಸಿದ್ದರಾಮಯ್ಯ ಹಲವು ಬಾರಿ ಕೇಳಿದರೂ ರಾಹುಲ್ ಗಾಂಧಿ ಚಕಾರವೆತ್ತುತ್ತಿಲ್ಲ.

ಕೈ ಪಾಳಯದಿಂದ ದಿಲ್ಲಿ ಅಭ್ಯರ್ಥಿ?

ಈ ಮಧ್ಯೆ ರಾಜ್ಯ ಕಾಂಗ್ರೆಸ್ ಪಾಳಯದಲ್ಲಿ ಹೊಸ ಅಸಮಾಧಾನ ಕಾಣಿಸಿಕೊಂಡಿದೆ. ಇಂತಹ ಅಸಮಾಧಾನಕ್ಕೆ ರಾಜ್ಯಸಭೆ ಚುನಾವಣೆಯೇ ಮೂಲ.

ಅಂದ ಹಾಗೆ ಜೂನ್ ಮೂವತ್ತರಂದು ಕರ್ನಾಟಕದಿಂದ ರಾಜ್ಯಸಭೆ ಸದಸ್ಯರಾಗಿರುವ ನಾಲ್ಕು ಮಂದಿ ನಿವೃತ್ತಿಯಾಗಲಿದ್ದು, ಅವರು ತೆರವು ಮಾಡಲಿರುವ ಜಾಗಕ್ಕೆ ಕಾಂಗ್ರೆಸ್‌ನ ಮೂವರು ಮತ್ತು ಬಿಜೆಪಿಯ ಒಬ್ಬರು ಬರಬಹುದು.

ಹೀಗಾಗಿ ಕರ್ನಾಟಕ ವಿಧಾನಸಭೆಯಿಂದ ರಾಜ್ಯಸಭೆಗೆ ಹೋಗಲು ಕೈ ಪಾಳಯ ಮೂವರು ಅಭ್ಯರ್ಥಿಗಳನ್ನು ರೆಡಿ ಮಾಡಿದೆಯಾದರೂ ಅಂತಿಮ ಕ್ಷಣದಲ್ಲಿ ಹೈಕಮಾಂಡ್

ಕ್ಯಾಂಡಿಡೇಟ್ ಒಬ್ಬರು ಎಂಟ್ರಿಯಾಗಬಹುದು ಎಂಬುದು ರಾಜ್ಯ ಕಾಂಗ್ರೆಸ್ಸಿಗರ ಅಸಮಾಧಾನ.

ಅವರ ಅಸಮಾಧಾನಕ್ಕೆ ಕಾರಣವೆಂದರೆ ದಿಲ್ಲಿಯಿಂದ ತೇಲಿ ಬರುತ್ತಿರುವ ವರ್ತಮಾನ.

ಅದರ ಪ್ರಕಾರ, ಪವನ್ ಖೇರಾ, ಸುಪ್ರಿತಾ ಶ್ರೀನಿವಾಸ್ ಸೇರಿದಂತೆ ಬೇರೆ ರಾಜ್ಯಗಳ ಹಲ ನಾಯಕರು ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಲು ಹಾತೊರೆಯುತ್ತಿದ್ದಾರೆ. ಒಂದು ವೇಳೆ ಅವರ ಒತ್ತಡಕ್ಕೆ ಹೈಕಮಾಂಡ್ ಮಣಿದರೆ ಕರ್ನಾಟಕದಿಂದ ಪರರಾಜ್ಯದವರು ಕ್ಯಾಂಡಿಡೇಟ್ ಆಗಬಹುದು. ಆದರೆ ಕರ್ನಾಟಕದಲ್ಲಿ ಪಕ್ಷದ ಏಳಿಗೆಗೆ ನಾಲ್ಕಾಣೆ ದುಡಿಮೆಯಿಲ್ಲದ ಇಂತವರು ಬಂದರೆ, ಪಕ್ಷಕ್ಕಾಗಿ ದುಡಿದ ನಮಗೆ ಅವಮಾನ ಎಂಬುದು ರಾಜ್ಯ ಕಾಂಗ್ರೆಸ್ಸಿಗರ ಅಸಮಾಧಾನ.

ಹೀಗೆ ಅವರ ಅಸಮಾಧಾನದ ಬಿಸಿ ದಿಲ್ಲಿಯ ಕಾಂಗ್ರೆಸ್ ವರಿಷ್ಠರನ್ನು ತಲುಪಿದೆಯಾದರೂ ರಾಜಕಾರಣದಲ್ಲಿ ಏನೂ ಆಗಬಹುದು ಎಂಬುದು ಈ ನಾಯಕರ ಯೋಚನೆ. ಹೀಗೆ ಕರ್ನಾಟಕದಿಂದ ರಾಜ್ಯಸಭೆಗೆ ಹೋಗಲು ದಿಲ್ಲಿ ಕ್ಯಾಂಡಿಡೇಟುಗಳು ರೆಡಿ ಇದ್ದರೂ ಮತ್ತೊಂದು ಕಡೆ ಪ್ರಾಥಮಿಕವಾಗಿ ಮೂರು ಅಭ್ಯರ್ಥಿಗಳ ಪಟ್ಟಿ ರೆಡಿಯಾಗಿದೆ.

ಅದರ ಪ್ರಕಾರ, ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ರಾಷ್ಟ್ರೀಯ ಯುವ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಮತ್ತು ಮೈಸೂರಿನ ವಿಜಯಕುಮಾರ್ ಅವರ ಹೆಸರುಗಳು ಈ ಪಟ್ಟಿಯಲ್ಲಿವೆ.

ಈ ಪೈಕಿ ಬಿ.ವಿ. ಶ್ರೀನಿವಾಸ್ ಅವರು ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಮೂಲದವರು. ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷರಾದ ಕಾಲದಿಂದ ರಾಹುಲ್ ಗಾಂಧಿಯವರ ಆಪ್ತರಾಗಿರುವ ಬಿ.ವಿ. ಶ್ರೀನಿವಾಸ್ ಅವರಿಗೆ 'ಆಕ್ಸಿಜನ್ ಮ್ಯಾನ್' ಎಂದೇ ಕರೆಯಲಾಗುತ್ತಿತ್ತು. ಕಾರಣ? ದೇಶದಲ್ಲಿ ಕೋವಿಡ್ ಸಮಸ್ಯೆ ತಾರಕಕ್ಕೇರಿದ ಕಾಲದಲ್ಲಿ ಸಾವಿರಾರು ರೋಗಿಗಳಿಗೆ ಅವರು ಆಕ್ಸಿಜನ್ ಒದಗಿಸಿದ್ದರು. ಇಂತಹ ಬಿ.ವಿ. ಶ್ರೀನಿವಾಸ್ ಅವರಿಗೆ ಈ ಹಿಂದೆ ಎಮ್ಮೆಲ್ಸಿಗಿರಿಗೆ ರೆಡಿ ಇರಿ ಅಂತ ವರಿಷ್ಠರು ಆಫರ್ ನೀಡಿದ್ದರಾದರೂ ಅವರು ನಿರಾಕರಿಸಿದ್ದರು. ಅಷ್ಟೇ ಅಲ್ಲ, 'ಕೊಡುವುದಾದರೆ ನನಗೆ ರಾಜ್ಯಸಭೆಯ ಸೀಟು ಕೊಡಿ' ಅಂತ ಹೇಳಿದ್ದರು. ಅವರ ಅವತ್ತಿನ ಕೋರಿಕೆ ಇವತ್ತು ನೆರವೇರುವ ಘಳಿಗೆ ಹತ್ತಿರವಾಗಿದೆ.

ಇನ್ನು ಪ್ರಾಥಮಿಕ ಪಟ್ಟಿಯಲ್ಲಿರುವ ವಿಜಯಕುಮಾರ್ ಮೈಸೂರು ಜಿಲ್ಲೆಯವರು. ಪಕ್ಷ ಸಂಘಟನೆಯ ವಿಷಯದಲ್ಲಿ ಅವರು ತೋರಿಸಿದ ಬದ್ಧತೆಯನ್ನು ಮೆಚ್ಚಿದ್ದ ಸಿಎಂ ಸಿದ್ದರಾಮಯ್ಯ ಅವರು ಕಳೆದ ಲೋಕಸಭಾ ಚುನಾವಣೆಯಲ್ಲಿ ಮೈಸೂರಿನ ಟಿಕೆಟ್ಟನ್ನು ಅವರಿಗೇ ಕೊಡಲು ಬಯಸಿದ್ದರು. ಆದರೆ ಇದನ್ನೊಪ್ಪದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು, 'ಇಲ್ಲ, ಇಲ್ಲ, ಈ ಬಾರಿ ಮೈಸೂರು ಲೋಕಸಭಾ ಕ್ಷೇತ್ರದಿಂದ ರೋರಿಂಗ್ ಸ್ಟಾರ್ ಲಕ್ಷ್ಮಣ್ ಅವರಿಗೇ ಟಿಕೆಟ್ ಕೊಡಬೇಕು' ಎಂದು ಪಟ್ಟು ಹಿಡಿದು ಯಶಸ್ವಿಯಾಗಿದ್ದರು.

ಪರಿಣಾಮವಾಗಿ ಅವತ್ತು ಅವಕಾಶ ಕಳೆದುಕೊಂಡ ವಿಜಯಕುಮಾರ್ ಈಗ ರಾಜ್ಯಸಭೆಯ ಟಿಕೆಟ್ ಗಿಟ್ಟಿಸುವ ಹಂತದಲ್ಲಿದ್ದಾರೆ. ಮುಂದೇನು ಆಗುತ್ತದೋ ಕಾದು ನೋಡಬೇಕು.

ಲಾಸ್ಟ್ ಸಿಪ್

ಈ ಬಾರಿ ಕೇರಳದ ಮುಖ್ಯಮಂತ್ರಿಯಾಗುವ ಅವಕಾಶ ವಿ.ಡಿ. ಸತೀಶನ್ ಅವರಿಗೆ ದಕ್ಕಿರುವುದರಿಂದ ಸಿಎಂ ಹುದ್ದೆಯ ಮತ್ತೊಬ್ಬ ಆಕಾಂಕ್ಷಿ ಕೆ.ಸಿ. ವೇಣುಗೋಪಾಲ್ ಮುನಿಸಿಕೊಂಡಿದ್ದಾರೆ. ಅವರ ಮುನಿಸು ಯಾವ ಮಟ್ಟದಲ್ಲಿದೆ ಎಂದರೆ ಸ್ವತಃ ರಾಹುಲ್ ಗಾಂಧಿ ಫೋನು ಮಾಡಿದರೂ ಅವರು ಸಂಪರ್ಕಕ್ಕೆ ಸಿಗುತ್ತಿಲ್ಲವಂತೆ.

ಪರಿಣಾಮ? ಅವರನ್ನು ಸಮಾಧಾನಿಸಲು ಹರಸಾಹಸ ಮಾಡುತ್ತಿರುವ ರಾಹುಲ್ ಗಾಂಧಿಯವರು ಇದಕ್ಕಾಗಿ ಕರ್ನಾಟಕದ ಕಾಂಗ್ರೆಸ್ ನಾಯಕರಾದ ಮನ್ಸೂರ್ ಅಲಿ ಖಾನ್ ಅವರ ನೆರವು ಪಡೆಯುತ್ತಿದ್ದಾರೆ. ಹಿರಿಯ ನಾಯಕ ರೆಹಮಾನ್ ಖಾನ್ ಅವರ ಪುತ್ರರಾಗಿರುವ ಮನ್ಸೂರ್ ಅಲಿ ಖಾನ್ ಈ ಹಿಂದೆ ಬೆಂಗಳೂರುಲೆಕೆಯ ಅಂತರದಲ್ಲಿ ಎಂ.ಪಿ ಎಲೆಕ್ಷನ್ನು ಸೋತಿದ್ದರು.

ಕೆ.ಸಿ. ವೇಣುಗೋಪಾಲ್ ಅವರ ಪರಮಾಪ್ತರಾಗಿರುವ ಮನ್ಸೂರ್ ಅಲಿ ಖಾನ್ ಈಗ ಕೆ.ಸಿ. ವೇಣುಗೋಪಾಲ್ ಅವರನ್ನು ಸಂತೈಸುವ ರಾಹುಲ್ ಯತ್ನಕ್ಕೆ ಆಸರೆಯಾಗಿದ್ದಾರೆ.

ಬದಲಾಗಬೇಕಾಗಿರುವುದು ನೀಟ್ ಅಲ್ಲ, ನಿಯತ್ತು

ಚೀನಾದಂತಹ ಅಪಾರ ಜನಸಂಖ್ಯೆ ಹೊಂದಿರುವ ದೇಶಕ್ಕೆ ರಾಷ್ಟ್ರೀಯ ಪರೀಕ್ಷೆಯಲ್ಲಿ ಶಿಸ್ತು ಮತ್ತು ಪಾರದರ್ಶಕತೆಯನ್ನು ನಿರ್ವಹಿಸಲು ಸಾಧ್ಯವಾಗುವುದಾದರೆ, ಭಾರತದಲ್ಲಿ ಅದು ಯಾಕೆ ಸಾಧ್ಯವಾಗಬಾರದು? ಇಲ್ಲಿ ಸಮಸ್ಯೆ ಜನಸಂಖ್ಯೆಯದ್ದಲ್ಲ. ಆಡಳಿತಾತ್ಮಕ ದೃಢತೆಯಲ್ಲಿ, ರಾಜಕೀಯ ಇಚ್ಛಾಶಕ್ತಿಯಲ್ಲಿ ಮತ್ತು ಶಿಕ್ಷಣವನ್ನು ರಾಷ್ಟ್ರದ ಭವಿಷ್ಯವೆಂದು ನೋಡುವ ಉದಾತ್ತ ಮನೋಭಾವದಲ್ಲಿ.

ಸತ್ವಪರೀಕ್ಷೆ

ಡಾ. ರವೀಶ ಎನ್. ಎಸ್

vveditoped@gmail.com

ಕ್ರಿ.ಶ. 427ರಲ್ಲಿ ಗುಪ್ತ ಸಾಮ್ರಾಟ ಕುಮಾರಗುಪ್ತನ ಆಶ್ರಯದಲ್ಲಿ ಸ್ಥಾಪಿತಗೊಂಡ ನಳಂದ ವಿಶ್ವವಿದ್ಯಾನಿಲಯವು ಕೇವಲ ಭಾರತದಷ್ಟೇ ಅಲ್ಲ, ಇಡೀ ಜಗತ್ತಿನ ಮೊದಲ ವಸತಿ ಆಧಾರಿತ ಮಹಾವಿದ್ಯಾಪೀಠವೆಂದು ಗುರುತಿಸಲ್ಪಟ್ಟಿತ್ತು. ಸುಮಾರು 800 ವರ್ಷ ನಿರಂತರವಾಗಿ ಜ್ಞಾನ ದೀಪ ಬೆಳಗಿಸಿದ ಆ ಮಹಾನ್ ವಿದ್ಯಾಕೇಂದ್ರದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಗುರುಗಳು ಮತ್ತು ಹತ್ತು ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದರು. ಚೀನಾ, ಜಪಾನ್, ಕೊರಿಯಾ, ಟಿಬೆಟ್, ಮಂಗೋಲಿಯಾ, ಶ್ರೀಲಂಕಾ ಹಾಗೂ ದಕ್ಷಿಣ ಏಷ್ಯಾದ ಅನೇಕ ಭಾಗಗಳಿಂದ ಪಂಡಿತರು ಮತ್ತು ವಿದ್ಯಾರ್ಥಿಗಳು ನಳಂದದತ್ತ ಹರಿದು ಬರುತ್ತಿದ್ದರು. ಜ್ಞಾನಕ್ಕಾಗಿ ಸಾವಿರಾರು ಕಿಲೋಮೀಟರ್ ಪ್ರಯಾಣ ಮಾಡುತ್ತಿದ್ದ ಆ ಯುಗದಲ್ಲಿ, ಭಾರತವು ಕೇವಲ ಭೌಗೋಳಿಕ ರಾಷ್ಟ್ರವಾಗಿರಲಿಲ್ಲ; ಅದು ಜಗತ್ತಿನ ಬೌದ್ಧಿಕ ರಾಜಧಾನಿಯಾಗಿತ್ತು.

ಆದರೆ ನಳಂದದ ಬಾಗಿಲು ಎಲ್ಲರಿಗೂ ಸುಲಭವಾಗಿ ತೆರೆಯುತ್ತಿರಲಿಲ್ಲ. ವಿಶ್ವವಿದ್ಯಾನಿಲಯದ ಪ್ರವೇಶ ದ್ವಾರಗಳಲ್ಲೇ ಮಹಾಪಂಡಿತರನ್ನು ನೇಮಿಸಲಾಗುತ್ತಿತ್ತು. ಅವರನ್ನು Gate Scholars ಎಂದು ಕರೆಯಲಾಗುತ್ತಿತ್ತು. ಇವರು ಕೇವಲ ಕಾವಲುಗಾರರಲ್ಲ; ಜ್ಞಾನದ ದ್ವಾರಪಾಲಕರು. ವಿದ್ಯಾರ್ಥಿ ಒಳಗೆ ಪ್ರವೇಶಿಸುವ ಮೊದಲು, ತತ್ವಶಾಸ್ತ್ರ, ತರ್ಕ, ವ್ಯಾಕರಣ, ಧರ್ಮ, ವಿಜ್ಞಾನ ಮತ್ತು ಸಂವಾದ ಸಾಮರ್ಥ್ಯದ ಕುರಿತು ಪ್ರಶ್ನೆ ಕೇಳಲಾಗುತ್ತಿತ್ತು. ಕೇವಲ ಕಂಠಪಾಠದಿಂದ ಅಲ್ಲ, ಆಳವಾದ ಚಿಂತನೆ, ತಾರ್ಕಿಕ ಮನಸ್ಸು ಮತ್ತು ಜ್ಞಾನಪಿಪಾಸೆಯಿಂದ ಮಾತ್ರ ನಳಂದದ ದ್ವಾರಗಳು ತೆರೆಯುತ್ತಿದ್ದವು. ಚೀನಾದ ಪ್ರವಾಸಿಗ ಹ್ಯೂಯನ್ ತ್ಸಾಂಗ್ ತನ್ನ ಬರಹಗಳಲ್ಲಿ ಹೇಳುವಂತೆ, ಹತ್ತು ಮಂದಿಯಲ್ಲಿ ಏಳು-ಎಂಟು ಮಂದಿ ಈ ಜ್ಞಾನ ಸಂವಾದದಲ್ಲೇ ವಿಫಲರಾಗುತ್ತಿದ್ದರು.

ಅಲ್ಲಿನ ಶಿಕ್ಷಣ ಪದ್ಧತಿ ಇನ್ನೂ ವಿಶಿಷ್ಟವಾಗಿತ್ತು. ಪೂರ್ವಪಕ್ಷ ಎಂಬ ಸಂವಾದ ಪರಂಪರೆ ಅಲ್ಲಿ ಜೀವಂತವಾಗಿತ್ತು. ಯಾರಾದರೂ ಒಂದು ವಿಚಾರವನ್ನು ವಿರೋಧಿಸುವ ಮೊದಲು, ಮೊದಲು ಎದುರಾಳಿಯ ವಾದವನ್ನು ಅತ್ಯಂತ ಪ್ರಾಮಾಣಿಕವಾಗಿ ಮತ್ತು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕಾಗಿತ್ತು. ಎದುರಾಳಿಯ ಮಾತನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ವಾದಿಸಿದರೆ, ಆ ಸಂವಾದದಲ್ಲೇ ಸೋತಂತೆ ಪರಿಗಣಿಸಲಾಗುತ್ತಿತ್ತು. ಅಂದರೆ ಅಲ್ಲಿ ವಾದ ಗೆಲ್ಲುವುದಕ್ಕಿಂತ ಸತ್ಯ ಅರಿಯುವುದು ಮುಖ್ಯವಾಗಿತ್ತು. ಅದಕ್ಕಾಗಿಯೇ ನಳಂದ, ತಕ್ಷಶಿಲಾ ಮತ್ತು ವಿಕ್ರಮಶಿಲೆಯಂತಹ ಭಾರತೀಯ ವಿದ್ಯಾಕೇಂದ್ರಗಳು ವಿಶ್ವದ ಅತ್ಯಂತ ಶ್ರೇಷ್ಠ ಜ್ಞಾನಪೀಠಗಳಾಗಿ ಬೆಳಗಿದ್ದವು.

ಇಂದಿನ ಜಾಗತಿಕ ಸಂದರ್ಭದಲ್ಲಿ 'ಎಲ್ಲ ಒಳ್ಳೆಯ ವಿಚಾರಗಳು ಜಗತ್ತಿನ ಎಲ್ಲ ಕಡೆಗಳಿಂದ ಬರಲಿ' ಎಂಬ ಉದಾತ್ತ ಮನೋಭಾವವೇ ಭಾರತಕ್ಕೆ ಅತ್ಯಂತ ಅಗತ್ಯವಾಗಿದೆ. ಶಿಕ್ಷಣ ಮತ್ತು ಪರೀಕ್ಷಾ ವ್ಯವಸ್ಥೆಗಳ ವಿಚಾರದಲ್ಲಿ ನಾವು ಕೇವಲ ನಮ್ಮದೇ ಆದ ಹಳೆಯ ಚೌಕಟ್ಟಿನೊಳಗೆ ಸುತ್ತಾಡದೆ, ವಿಶ್ವದ ವಿವಿಧ ರಾಷ್ಟ್ರಗಳ ಯಶಸ್ವಿ ಅನುಭವಗಳಿಂದ ಕಲಿಯಬೇಕಾಗಿದೆ. ಫಿನ್‌ಲ್ಯಾಂಡಿನ ವಿದ್ಯಾರ್ಥಿ ಕೇಂದ್ರಿತ ಶಿಕ್ಷಣ, ಜಪಾನ್‌ನ ನೈತಿಕ ಶಿಕ್ಷಣ ಪದ್ಧತಿ, ದಕ್ಷಿಣ ಕೊರಿಯಾದ ತಂತ್ರಜ್ಞಾನ ಆಧಾರಿತ ಪರೀಕ್ಷಾ ಭದ್ರತೆ, ಉರುಗ್ವೆಯ ಸಮಾನ ಅವಕಾಶದ ಶಿಕ್ಷಣ ಮಾದರಿ, ಅಮೆರಿಕಾದ ವಿಶ್ಲೇಷಣಾತ್ಮಕ ಮೌಲ್ಯಮಾಪನ ವಿಧಾನ, ಬ್ರಿಟನ್ನ ಆಪ್ಟಿಟ್ಯೂಡ್ ಪರೀಕ್ಷಾ ವ್ಯವಸ್ಥೆ, ಮತ್ತು ಚೀನಾದ ಕಟ್ಟುನಿಟ್ಟಿನ ಪರೀಕ್ಷಾ ಶಿಸ್ತು - ಇವೆಲ್ಲವನ್ನು ಆಳವಾಗಿ ಅಧ್ಯಯನ ಮಾಡಿ ಭಾರತದ ಇಂದಿನ ಸಾಮಾಜಿಕ ಪರಿಸ್ಥಿತಿಗೆ ತಕ್ಕ ಸುಧಾರಣೆಗಳನ್ನು ತರಬೇಕಾಗಿದೆ.

ಈ ನಿಟ್ಟಿನಲ್ಲಿ ನಾವು ಚೀನಾದಲ್ಲಿ ನಡೆಯುವ Gaokao ಎಂಬ ರಾಷ್ಟ್ರೀಯ ಪ್ರವೇಶ ಪರೀಕ್ಷೆಯನ್ನು ಒಮ್ಮೆ ಗಮನಿಸಬೇಕು. ಕೋಟ್ಯಾಂತರ ವಿದ್ಯಾರ್ಥಿಗಳು ಭಾಗವಹಿಸುವ ಆ ಪರೀಕ್ಷೆಯನ್ನು ವಿಶ್ವದಲ್ಲೇ ಅತ್ಯಂತ ಕಠಿಣ ಮತ್ತು ಶಿಸ್ತಿನ ಪರೀಕ್ಷಾ ವ್ಯವಸ್ಥೆ ಎಂದು ಪರಿಗಣಿಸಲಾಗುತ್ತದೆ. ಅಲ್ಲಿ ಪ್ರಶ್ನೆಪತ್ರಿಕೆಯ ಪಾವಿತ್ರ್ಯವನ್ನು ರಾಷ್ಟ್ರದ ಗೌರವದಂತೆ ಕಟುವಾಗಿ ಕಾಪಾಡಲಾಗುತ್ತದೆ. ಎಐ ಆಧಾರಿತ ತಂತ್ರಜ್ಞಾನದ ಮೇಲ್ವಿಚಾರಣೆ, ಬಯೋಮೆಟ್ರಿಕ್ ನಿಯಂತ್ರಣ, ಎಲೆಕ್ಟ್ರಾನಿಕ್ ಭದ್ರತಾ ವಲಯ, ಕಟ್ಟುನಿಟ್ಟಿನ ಲಾಜಿಸ್ಟಿಕ್ಸ್ ಮತ್ತು ಕ್ಷಿಪ್ರ ಕಾನೂನು ಕ್ರಮಗಳ ಮೂಲಕ ಅವರು ಪರೀಕ್ಷೆಯ ಮೇಲಿನ ಸಾರ್ವಜನಿಕ ವಿಶ್ವಾಸವನ್ನು ಇಂದಿಗೂ ಉಳಿಸಿಕೊಂಡಿದ್ದಾರೆ. ಚೀನಾದಂತಹ ಅಪಾರ ಜನಸಂಖ್ಯೆ ಹೊಂದಿರುವ ರಾಷ್ಟ್ರಕ್ಕೆ ಇಷ್ಟೊಂದು ಶಿಸ್ತು ಮತ್ತು ಪಾರದರ್ಶಕತೆಯನ್ನು ನಿರ್ವಹಿಸಲು ಸಾಧ್ಯವಾಗುವುದಾದರೆ, ಇತಿಹಾಸ ಪ್ರಸಿದ್ಧ ಭಾರತದಲ್ಲಿ ಅದು ಯಾಕೆ ಸಾಧ್ಯವಾಗಬಾರದು? ಇಲ್ಲಿ ಸಮಸ್ಯೆ ಜನಸಂಖ್ಯೆಯದ್ದಲ್ಲ; ಸಮಸ್ಯೆ ಇರುವುದು ಆಡಳಿತಾತ್ಮಕ ದೃಢತೆಯಲ್ಲಿ, ರಾಜಕೀಯ ಇಚ್ಛಾಶಕ್ತಿಯಲ್ಲಿ ಮತ್ತು ಶಿಕ್ಷಣವನ್ನು ರಾಷ್ಟ್ರದ ಭವಿಷ್ಯವೆಂದು ನೋಡುವ ಉದಾತ್ತ ಮನೋಭಾವದಲ್ಲಿ.

ಇಂದು ನಮ್ಮ ದೇಶದಲ್ಲಿ ನಡೆದಿರುವ ಅತ್ಯಂತ ದೊಡ್ಡ ದುರಂತವೆಂದರೆ, ಇಡೀ ಶಿಕ್ಷಣ ವ್ಯವಸ್ಥೆಯನ್ನು ಸಂಪೂರ್ಣವಾಗಿ ಸ್ಪರ್ಧಾತ್ಮಕ ಪರೀಕ್ಷಾ ವ್ಯವಸ್ಥೆಯ ಕೈಗೆ ಒಪ್ಪಿಸಿರುವುದು. ಜೆಇಇ, ನೀಟ್, ಸಿಇಟಿ, ಯುಪಿಎಸ್‌ಸಿ, ಕೆಎಎಸ್, ಐಬಿಪಿಎಸ್, ಸಿಎ, ಸಿಎಸ್, ಸಿಎಂಎ ಯಂತಹ ರಾಷ್ಟ್ರ ಮಟ್ಟದ ಪರೀಕ್ಷೆಗಳು ಪ್ರತಿಭೆಯನ್ನು ಅಳೆಯುವ ಆರೋಗ್ಯಕರ ಸಾಧನಗಳಾಗಬೇಕಿತ್ತೇ ಹೊರತು ಇಡೀ ಶಿಕ್ಷಣವನ್ನೇ ನುಂಗಿ ನೀರು ಕುಡಿಯುವ ವ್ಯವಸ್ಥೆಯಾಗಬಾರದಿತ್ತು. ದುರದೃಷ್ಟವಶಾತ್, ಇವು ನಿಧಾನವಾಗಿ ಶಾಲೆ, ಪಿಯುಸಿ ಹಾಗೂ ಪದವಿ ಶಿಕ್ಷಣಗಳ ಮೂಲ ಮಹತ್ವವನ್ನೇ ಕುಗ್ಗಿಸಿಬಿಟ್ಟಿವೆ.

ಇಂದಿನ ಪಿಯು-ಪದವಿ ವಿದ್ಯಾರ್ಥಿಗಳು ತರಗತಿಯಲ್ಲಿ ಕುಳಿತು ಪಾಠ ಕೇಳುವುದಕ್ಕಿಂತ ಕೋಚಿಂಗ್ ಸೆಂಟರ್‌ಗಳ ಟೈಮ್ ಟೇಬಲ್‌ಗೆ ಹೆಚ್ಚು ಮಹತ್ವ ಕೊಡುತ್ತಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ನೀಟ್ ಮತ್ತು ಜೆಇಇ ಪರೀಕ್ಷೆಗಳ ಅಬ್ಬರ ಶುರುವಾದ ದಿನದಿಂದ, ಪಿಯು ಶಿಕ್ಷಣವನ್ನು ನಿಷ್ಠೆಯಿಂದ ಓದುತ್ತಿರುವ ವಿದ್ಯಾರ್ಥಿಗಳು ಮತ್ತು ಪ್ರಾಮಾಣಿಕವಾಗಿ ಬೋಧಿಸುತ್ತಿರುವ ಉಪನ್ಯಾಸಕರ ಕಠಿಣ ಪರಿಶ್ರಮವನ್ನು ಈ ಒಟ್ಟು ವ್ಯವಸ್ಥೆಯು ಮೌಲ್ಯಹೀನಗೊಳಿಸಿ ಮೂಲೆಗೆ ತಳ್ಳಿರುವಂತಿದೆ.

ಈ ಕರಾಳ ಸ್ಥಿತಿ ಇಂದು ನಮ್ಮ ಉನ್ನತ ಪದವಿ ಶಿಕ್ಷಣವನ್ನೂ ತಲುಪಿದೆ. ಸ್ಪರ್ಧಾತ್ಮಕ ಪರೀಕ್ಷೆಯಂತಹ ದೊಡ್ಡ ವ್ಯವಸ್ಥೆಗಳ ಬೆನ್ನಟ್ಟುವ ಧಾವಂತದಲ್ಲಿ, ಅನೇಕ ವಿದ್ಯಾರ್ಥಿಗಳು ಪದವಿಯನ್ನು ಜ್ಞಾನಾರ್ಜನೆಯ ಅಮೂಲ್ಯ ಹಂತವಾಗಿ ನೋಡುತ್ತಲೇ ಇಲ್ಲ; ಬದಲಿಗೆ ಅದನ್ನೊಂದು ಕೇವಲ ಸ್ಪರ್ಧಾತ್ಮಕ ಪರೀಕ್ಷೆಗೆ ಬೇಕಾದ ಕಾಗದದ ಅರ್ಹತೆಯಾಗಿ ಮಾತ್ರ ನೋಡುತ್ತಿದ್ದಾರೆ. ಇದರಿಂದಾಗಿ ನಮ್ಮ ಹೆಮ್ಮೆಯ ವಿಶ್ವವಿದ್ಯಾಲಯಗಳ ಶಿಕ್ಷಣದ ಸತ್ವವೇ ಕಳೆಗುಂದಿದೆ.

ಪರೀಕ್ಷಾ ವ್ಯವಸ್ಥೆಯ ಸುತ್ತ ನಿರ್ಮಾಣವಾಗಿರುವ ಈ ಕೋಚಿಂಗ್ ಕೇಂದ್ರೀಕೃತ ಮಾದರಿಯು ಸಮಾಜದಲ್ಲಿ ದೊಡ್ಡದೊಂದು ಆರ್ಥಿಕ ಮತ್ತು ಸಾಮಾಜಿಕ ಅಸಮತೋಲನವನ್ನು ಸೃಷ್ಟಿಸಿದೆ. ದುಬಾರಿ ಕೋಚಿಂಗ್ ಪಡೆಯಲು ಶಕ್ತರಾಗಿರುವ ವಿದ್ಯಾರ್ಥಿಗಳಿಗೆ ಒಂದು ರೀತಿಯ ಸೌಲಭ್ಯ ಸಿಕ್ಕರೆ, ಗ್ರಾಮೀಣ ಹಾಗೂ ಆರ್ಥಿಕವಾಗಿ ಹಿಂದುಳಿದ ಬಡ ವಿದ್ಯಾರ್ಥಿಗಳಿಗೆ ಮತ್ತೊಂದು ರೀತಿಯ ಕವಲುಹಾದಿ ನಿರ್ಮಾಣವಾಗುತ್ತಿದೆ. ಶಾಲೆ-ಕಾಲೇಜುಗಳ ಮೂಲ ಬೋಧನೆಗಿಂತ ಕೋಚಿಂಗ್ ಸೆಂಟರ್‌ಗಳ ಶಾರ್ಟ್‌ಕಟ್ ಎಕ್ಸಾಮ್ ಟ್ರಿಕ್ಸ್‌ಗಳಿಗೆ ಮಾರುಕಟ್ಟೆಯಲ್ಲಿ ಬೆಲೆ ಸಿಗುತ್ತಿರುವುದು ಇಡೀ ಶಿಕ್ಷಣದ ದಿಕ್ಕನ್ನೇ ತಪ್ಪಿಸುತ್ತಿದೆ.

ಇದಲ್ಲದೆ ಇಂದು ಪೋಷಕರು ಮಾಡುತ್ತಿರುವ ಅತ್ಯಂತ ದೊಡ್ಡ ತಪ್ಪೆಂದರೆ, ತಮ್ಮ ಮಕ್ಕಳನ್ನು ದಾಖಲಿಸುವ ಪಿಯುಸಿ ಅಥವಾ ಪದವಿ ಕಾಲೇಜುಗಳ ಗುಣಮಟ್ಟವನ್ನು ಕೇವಲ ಪರೀಕ್ಷೆಗಳ ಫಲಿತಾಂಶಗಳ ಆಧಾರದ ಮೇಲೆ ಅಳೆಯುತ್ತಿರುವುದು. ಇದರ ನೇರ ಪರಿಣಾಮವಾಗಿ, ಇತ್ತೀಚಿನ ದಿನಗಳಲ್ಲಿ ಮೂಲ ಕಾಲೇಜುಗಳ ಆವರಣದಲ್ಲೇ ಇಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಗಳನ್ನು (ಕೋಚಿಂಗ್) ನೀಡುವ ಕರಾಳ ಸಂಸ್ಕೃತಿ ವ್ಯಾಪಕವಾಗಿ ಬೆಳೆಯುತ್ತಿದ್ದು, ಇದರಿಂದ ಕಾಲೇಜಿನ ಮೂಲ ಉದ್ದೇಶವೇ ಸಂಪೂರ್ಣವಾಗಿ ಕುಂಠಿತವಾಗುತ್ತಿದೆ.

ಇಂದು ಕೆಲವು ಕಡೆಗಳಲ್ಲಿ ಕಾಲೇಜುಗಳು ಶಿಕ್ಷಣ ಸಂಸ್ಥೆಗಳಂತೆ ಅಲ್ಲ, ಕೇವಲ ಕೋಚಿಂಗ್ ಉದ್ಯಮಗಳ ಶಾಖೆಗಳಂತೆ ಕಾರ್ಯನಿರ್ವಹಿಸುತ್ತಿರುವುದು ಬಹಿರಂಗ ಸತ್ಯ. ಅಕ್ಷರದ ಪಾವಿತ್ರ್ಯವನ್ನು ವ್ಯಾಪಾರದ ಮಾರುಕಟ್ಟೆಗೆ ಎಳೆದುಕೊಂಡು



ಬಂದಿರುವ ಈ ವ್ಯವಸ್ಥೆಯಲ್ಲಿ, ವಿದ್ಯಾರ್ಥಿಗಳ ಕನಸುಗಳೇ ಈಗ ಮಾರಾಟವಾಗುವ ವಸ್ತುಗಳಾಗಿವೆ. ಸಾವಿರಾರು ಕೋಟಿಗಳ ಈ ಕೋಚಿಂಗ್ ಜಾಲದಲ್ಲಿ ವಿದ್ಯಾರ್ಥಿಯೊಬ್ಬನ ಆತಂಕ, ಪೋಷಕರ ಭಯ ಮತ್ತು ಸಮಾಜದ ನಿರೀಕ್ಷೆಗಳನ್ನೇ ಹಣ ಮಾಡುವ ನಿರ್ದಯ ಉದ್ಯಮ ಬೆಳೆಯುತ್ತಿದೆ.

ಇಂದು ಕೆಲವು ಶಿಕ್ಷಣ ಸಂಸ್ಥೆಗಳು ಜ್ಞಾನವನ್ನು ನೀಡುವುದಕ್ಕಿಂತ ರಿಸಲ್ಟ್ ಉತ್ಪಾದಿಸುವ ಕಾರ್ಖಾನೆಗಳಾಗಿ ಬದಲಾಗುತ್ತಿರುವುದು ಅತ್ಯಂತ ಅಪಾಯಕಾರಿ ಬೆಳವಣಿಗೆ. ಶಿಕ್ಷಣ ಸೇವೆಯಾಗಿರುವ ಜಾಗದಲ್ಲಿ ವ್ಯಾಪಾರ ನಿಂತಾಗ, ಅಲ್ಲಿ ಮೌಲ್ಯಗಳು ಸಾಯುತ್ತವೆ. ನಿಯತ್ತು ಹಾಳಾದಾಗ ಅತ್ಯುತ್ತಮ ಶಿಕ್ಷಣ ವ್ಯವಸ್ಥೆಯೂ ಭ್ರಷ್ಟಗೊಳ್ಳುತ್ತದೆ. ಕೋಚಿಂಗ್ ಸಂಸ್ಥೆಗಳು ಶಿಕ್ಷಣ ವ್ಯವಸ್ಥೆಯ ಪೂರಕವಾಗಿರಬೇಕಿತ್ತು; ಆದರೆ ಈಗ ಅವೇ ಶಿಕ್ಷಣದ ಮೇಲೆಯೇ ಆಧಿಪತ್ಯ ಸಾಧಿಸಲು ಮುಂದಾಗಿವೆ. ಇದು ಕೇವಲ ಶಿಕ್ಷಣದ ಮೇಲಿನ ದಾಳಿ ಅಲ್ಲ; ಸಮಾಜದ ಬೌದ್ಧಿಕ ಸ್ವಾತಂತ್ರ್ಯದ ಮೇಲಿನ ದಾಳಿ. ಶಿಕ್ಷಣದ ದಿಕ್ಕನ್ನು ಗುರುಗಳು ನಿರ್ಧರಿಸಬೇಕೇ ಹೊರತು ಮಾರುಕಟ್ಟೆ ಅಲ್ಲ.

ಆದರೆ, ನಮ್ಮಲ್ಲಿ ಸಮಸ್ಯೆ ಕೇವಲ ತಾಂತ್ರಿಕ ವ್ಯವಸ್ಥೆಯದ್ದಲ್ಲ, ಅದಕ್ಕಿಂತ ಮಿಗಿಲಾಗಿ ಸಮಸ್ಯೆ ಇರುವುದು ಆಂತರಿಕ ನಿಯತ್ತಿನಲ್ಲಿ. ಇಂದು ಪರೀಕ್ಷಾ ಅಕ್ರಮಗಳಿಗೆ ಶಿಕ್ಷೆ ನೀಡುವಂತಹ ಕಠಿಣ ಕಾನೂನುಗಳಿವೆ, ತನಿಖಾ ಸಂಸ್ಥೆಗಳಿವೆ, ಹತ್ತಾರು ನಿಯಮಾವಳಿಗಳಿವೆ. ಆದರೂ ಕಾನೂನಿನ ಕಣ್ಣಿಗೆ ಮಣ್ಣೆರಚಿ, ಅಲ್ಲಿನ ಒಳಗುಟ್ಟುಗಳ ಬಳಸಿಕೊಂಡು ಅಕ್ರಮ ಎಸಗುವ ಮಾಫಿಯಾಗಳು ಮತ್ತು ಜಾಲಗಳು ವ್ಯವಸ್ಥೆಯ ಒಳಗೇ ಬಲವಾಗಿ ಬೇರೂರಿವೆ. ಪ್ರಶ್ನೆಪತ್ರಿಕೆ ಸೋರಿಕೆ, ಒಳಗಿನ ಮಹತ್ವದ ಮಾಹಿತಿ ಮಾರಾಟ, ಸಿಬ್ಬಂದಿಗಳ ಶಾಮೀಲಾತಿ, ಪರೀಕ್ಷಾ ಕೇಂದ್ರಗಳ ದುರುಪಯೋಗ- ಇವೆಲ್ಲವೂ ಕೇವಲ ಕಾಯ್ದೆಯ ಸಮಸ್ಯೆಗಳಲ್ಲ, ಇವು ನಮ್ಮ ಆಡಳಿತಾತ್ಮಕ ಮತ್ತು ನೈತಿಕ ವೈಫಲ್ಯದ ಸ್ಪಷ್ಟ ಸೂಚನೆಗಳಾಗಿವೆ.

ಪರೀಕ್ಷಾ ಅಕ್ರಮಗಳ ಮೂಲದಲ್ಲಿರುವುದು ಹಣದ ಅತಿಯಾಸೆ. ಶಿಕ್ಷಣ ಇಂದು ಕೆಲವರ ಕೈಯಲ್ಲಿ ಹಣದ ಯಂತ್ರ ಆಗಿ ಬದಲಾಗುತ್ತಿರುವುದು ಅತ್ಯಂತ ಅಪಾಯಕಾರಿ ಬೆಳವಣಿಗೆ. ಶಿಕ್ಷಣವನ್ನು ರಾಷ್ಟ್ರ ನಿರ್ಮಾಣದ ಪವಿತ್ರ ಕ್ಷೇತ್ರವೆಂದು ನೋಡುವ ಬದಲು, ಹಣ ಮುದ್ರಿಸುವ ಉದ್ಯಮವಾಗಿ ನೋಡುವ ಮನೋಭಾವವೇ ಇಂತಹ ಅಕ್ರಮಗಳ ನಿಜವಾದ ಬೇರು. ಇಂತಹ ಆತಂಕಕಾರಿ ಸನ್ನಿವೇಶದಲ್ಲಿ, ಸರ್ಕಾರಗಳು ಮತ್ತು ಶಿಕ್ಷಣ ಇಲಾಖೆಯು ಈ ಕೋಚಿಂಗ್ ಆಧಾರಿತ ಕಾಲೇಜುಗಳ ಧೋರಣೆಯ ಬಗ್ಗೆ ಕಟ್ಟುನಿಟ್ಟಾದ ನಿಲುವಿಗೆ ಬರಬೇಕಾಗಿರುವುದು ಇಂದಿನ ಅಗತ್ಯ. ಶಿಕ್ಷಣವನ್ನು ಉದ್ಯಮವನ್ನಾಗಿ ಮಾಡಿಕೊಂಡು, ನಿಯಮಬಾಹಿರವಾಗಿ ಕಾಲೇಜುಗಳ ಒಳಗೆ ಕೋಚಿಂಗ್ ಮಾಫಿಯಾವನ್ನು ಪೋಷಿಸುತ್ತಿರುವ ಸಂಸ್ಥೆಗಳ ವಿರುದ್ಧ ಸರ್ಕಾರ ಕಠಿಣ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕಿದೆ.

ಪ್ರಶ್ನೆಪತ್ರಿಕೆ ಸಿದ್ದಪಡಿಸುವ ಮತ್ತು ಸಾಗಿಸುವ ಇಡೀ ಪ್ರಕ್ರಿಯೆ ಅತ್ಯುನ್ನತ ಡಿಜಿಟಲ್ ಎನ್ಕ್ರಿಪ್ಷನ್ ಭದ್ರತೆಯ ಅಡಿಯಲ್ಲಿರಬೇಕು. ಸ್ವತಂತ್ರ ಪರೀಕ್ಷಾ ಭದ್ರತಾ ಘಟಕಗಳು ನಿರ್ಮಾಣವಾಗಬೇಕು ಹಾಗೂ ಹೊರಗಿನ ಖಾಸಗಿ ಏಜೆನ್ಸಿಗಳ ಮೇಲಿನ ಅವಲಂಬನೆ ಸಂಪೂರ್ಣವಾಗಿ ನಿಲ್ಲಬೇಕು. ಪರೀಕ್ಷಾ ಅಕ್ರಮದಲ್ಲಿ ಭಾಗಿಯಾದ ಕೋಚಿಂಗ್ ಸಂಸ್ಥೆಗಳ ಮಾನ್ಯತೆಯನ್ನು ಮುಲಾಜಿಲ್ಲದೆ ಶಾಶ್ವತವಾಗಿ ರದ್ದುಪಡಿಸುವಂತಹ ಉಗ್ರ ಕ್ರಮಗಳು ಜಾರಿಗೆ ಬರಲೇಬೇಕಿದೆ.

ಇದರೊಂದಿಗೆ, ಪರೀಕ್ಷಾ ವ್ಯವಸ್ಥೆಯ ಪಾರದರ್ಶಕತೆಯನ್ನು ಹೆಚ್ಚಿಸಲು ನಮ್ಮ ಮೂಲ ಶಾಲೆ, ಕಾಲೇಜು ಮತ್ತು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ನಾವು ತಳಮಟ್ಟದಿಂದ ಬಲಪಡಿಸಬೇಕಾಗಿದೆ. ತರಗತಿಯಲ್ಲಿ ಕೇವಲ ಜ್ಞಾನದ ಬೋಧನೆಗೆ ಮತ್ತು ಸಮಗ್ರ ಕಲಿಕೆಗೆ ಮಾತ್ರ ಪ್ರಥಮ ಪ್ರಾಮುಖ್ಯತೆ ಕೊಡಬೇಕೇ ಹೊರತು ಸ್ಪರ್ಧಾತ್ಮಕ ಪರೀಕ್ಷೆಯ ಸರಿ-ತಪ್ಪುಗಳಿಗಲ್ಲ. ತರಗತಿಯ ನಿರಂತರ ಅಧ್ಯಯನ ಮತ್ತು ಪ್ರಾಮಾಣಿಕ ಮೌಲ್ಯಮಾಪನಕ್ಕೂ ರಾಷ್ಟ್ರೀಯ ಪರೀಕ್ಷೆಗಳಷ್ಟೇ ಸಮಾನವಾದ ಮಹತ್ವ ಸಿಗಬೇಕು; ಆಗಲೇ ಪಿಯುಸಿ ಮತ್ತು ಪದವಿಯ ಅಂಕಗಳಿಗೆ ನಿಜವಾದ ಗೌರವ ಮರಳಿ ಸಿಗಲು ಸಾಧ್ಯ.

ಶಿಕ್ಷಕ ತರಬೇತುದಾರನಾಗಿ ಬದಲಾಗಬಾರದು. ಶಿಕ್ಷಕ ಎಂದರೆ ಕೇವಲ ಶಾರ್ಟ್‌ಕಟ್ ಟ್ರಿಕ್ಸ್ ಹೇಳಿಕೊಡುವ ವ್ಯಕ್ತಿಯಲ್ಲ; ಜ್ಞಾನವನ್ನು ಪಸರಿಸುವ, ಜ್ಞಾನವನ್ನು ಉತ್ಥಾನಗೊಳಿಸುವ, ವಿದ್ಯಾರ್ಥಿಗಳಲ್ಲಿ ಓದಿನ ಮೇಲೆ ಪ್ರೀತಿ ಹುಟ್ಟಿಸುವ ವ್ಯಕ್ತಿಯಾಗಬೇಕು. ವಿದ್ಯಾರ್ಥಿಯನ್ನು ಕೇವಲ ಸ್ಪರ್ಧಾತ್ಮಕ ಪರೀಕ್ಷೆಯ ಫಲಿತಾಂಶದ ಮೆಟ್ಟಿಲಾಗಿ ನೋಡುವ ವ್ಯವಸ್ಥೆಯ ನೀತಿ ಬದಲಾಗದಿದ್ದರೆ, ಭಾರತದ ಭವಿಷ್ಯದ ನೀತಿಯೂ ಬದಲಾಗುವುದಿಲ್ಲ. ಶಿಕ್ಷಕನನ್ನು ರಿಸಲ್ಟ್ ಮಷಿನ್ ಆಗಿ ಕುಗ್ಗಿಸುವ ಸಮಾಜ ಕೊನೆಗೆ ತನ್ನದೇ ಜ್ಞಾನ ಪರಂಪರೆಯನ್ನು ಕಳೆದುಕೊಳ್ಳುತ್ತದೆ.

ನಿಜವಾಗಿಯೂ ಬದಲಾಗಬೇಕಾಗಿರುವುದು ಪರೀಕ್ಷಾ ಪದ್ಧತಿಯೇ? ಖಂಡಿತ ಇಲ್ಲ. ಕಾಲೇಜಿನ ಯೋಗ್ಯತೆಯನ್ನು ಸ್ಪರ್ಧಾತ್ಮಕ ಪರೀಕ್ಷೆಯ ಫಲಿತಾಂಶಗಳ ಮೇಲೆ ನಿರ್ಧರಿಸುವುದು ನಿಲ್ಲಬೇಕಿದೆ. ಸ್ಪರ್ಧಾತ್ಮಕ ಪರೀಕ್ಷೆಗಳು ಒಂದು ನಿರ್ದಿಷ್ಟ ಉದ್ಯೋಗ ಅಥವಾ ಸೀಟನ್ನು ಪಡೆಯಲು ಇರುವ ತಾತ್ಕಾಲಿಕ ಅಳತೆಗೋಲುಗಳಷ್ಟೇ; ಆದರೆ ಕಾಲೇಜಿನ ಬೋಧನೆಯು ವಿದ್ಯಾರ್ಥಿಯ ಇಡೀ ಬದುಕಿಗೆ ದಾರಿದೀಪವಾಗುವ ನಿರಂತರ ಪ್ರಕ್ರಿಯೆ.

ಇಲ್ಲಿ ಬದಲಾಗಬೇಕಾಗಿರುವುದು ವ್ಯವಸ್ಥೆಯ ಒಳಗಿರುವ ಪ್ರತಿಯೊಬ್ಬರ ನಿಯತ್ತು. ಪರೀಕ್ಷಾ ವ್ಯವಸ್ಥೆಯನ್ನು ನಿಯಂತ್ರಿಸುವ ಅಧಿಕಾರಿಗಳ, ಕೋಟಿಗಳ ವ್ಯವಹಾರ ಮಾಡುವ ಕೋಚಿಂಗ್ ಸೆಂಟರ್‌ಗಳ, ದೊಡ್ಡ ಕನಸು ಕಾಣುವ ಪೋಷಕರ ಮತ್ತು ವಿದ್ಯಾರ್ಥಿಗಳ ನಿಯತ್ತು ಮೊದಲು ಬದಲಾಗಬೇಕಿದೆ. ಯಾಕೆಂದರೆ, ನಾವು ಇಂದು ಕೇವಲ ಕಂಪ್ಯೂಟರ್ ಪರದೆಯ ಮೇಲಿನ ಪರೀಕ್ಷಾ ಫಲಿತಾಂಶಗಳನ್ನು ರೂಪಿಸುತ್ತಿಲ್ಲ, ಬದಲಿಗೆ ಈ ದೇಶದ ಅಮೂಲ್ಯ ಮಕ್ಕಳ ಜೀವಂತ ಕನಸುಗಳನ್ನು ರೂಪಿಸುತ್ತಿದ್ದೇವೆ. ಶಿಕ್ಷಣ ಎನ್ನುವುದು ಕೇವಲ ಬದುಕಿನ ಓಟದ ಸ್ಪರ್ಧೆಯಲ್ಲ; ಅದು ನಮ್ಮ ರಾಷ್ಟ್ರ ನಿರ್ಮಾಣದ ಗಟ್ಟಿ ಅಡಿಪಾಯ.

ಭಟ್ಟರ್ ಸ್ಕಾಚ್

- **ವಿನೋದ ಆಳ್ವಾ, ಮಂಗಳೂರು**
  ಭಟ್ರೇ, ಜಿಮ್ ಮೆಂಬರ್‌ಶಿಪ್ ಮತ್ತು ಮದುವೆ ಆಮಂತ್ರಣದ ನಡುವೆ ಸಾಮ್ಯತೆ ಏನು?
- **ಎರಡಕ್ಕೂ ಹಣ ಕೊಡುತ್ತೇವೆ, ಆದರೆ ಹೋಗುವಾಗ ಮಾತ್ರ ಬೇಜಾರು!**

- **ವಸಂತ ಬಿ, (ಇಮೇಲ್ ಮೂಲಕ)**
  ಭಟ್ರೇ, ಹೋಟೆಲ್‌ನಲ್ಲಿ ವೇಟರ್ ಬರುವವರೆಗೂ ನಾವು ಯಾಕೆ ಗಂಭೀರವಾಗಿ ಇರುತ್ತೇವೆ?
- **ಆರ್ಡರ್ ಕೊಟ್ಟ ಮೇಲೆ ನಮ್ಮ ಅಸಲಿ ಹಸಿವು ಜಗತ್ತಿಗೆ ಗೊತ್ತಾಗಬಾರದು ಅಂತ!**

- **ಶಾಮಲಾ ಭಟ್, ಕುಮಟಾ**
  ಭಟ್ರೇ, ಸೊಳ್ಳೆ ಬತ್ತಿ ಹಚ್ಚಿದರೂ ಸೊಳ್ಳೆಗಳು ಯಾಕೆ ಸಾಯುವುದಿಲ್ಲ?
- **ಅವುಗಳಿಗೂ ಈಗ ಸ್ಮೋಕಿಂಗ್ ಅಭ್ಯಾಸ ಆಗಿ ಹೋಗಿದೆ!**

- **ಹೇಮಂತ ರಾವ್, ಸಾಗರ**
  ಭಟ್ರೇ, ಮನೆಗೆ ಸುಣ್ಣ ಬಣ್ಣ ಬಳಿಯುವಾಗ ಯಾಕೆ ಅಷ್ಟು ಖುಷಿಯಾಗುತ್ತದೆ?
- **ನಮ್ಮ ಹಳೆಯ ಕಲೆಗಳು ಕೊನೆಗೂ ಅಳಿಸಿ ಹೋಗುತ್ತವಲ್ಲ ಎಂಬ ಸಮಾಧಾನ!**

- **ರಮೇಶ ಹುದ್ದಾರ, ಮೈಸೂರು**
  ಭಟ್ರೇ, ಗ್ರೂಪ್ ಫೋಟೋದಲ್ಲಿ ಮೊದಲು ನಾವು ಯಾರನ್ನು ಹುಡುಕುತ್ತೇವೆ?
- **ಹಿಂದಿನ ಸಾಲಿನಲ್ಲಿರುವ ನಮ್ಮನ್ನು!**

- **ಕೆ.ಪಿ.ಸುಳ್ಯ, ಕುಂದಾಪುರ**
  ಭಟ್ರೇ, ಶಾಲಾ ದಿನಗಳಲ್ಲಿ ಬೆಲ್ ಹೊಡೆದಾಗ ಸಿಗುವ ಸುಖ ಯಾವುದರಲ್ಲಿ ಇದೆ?
- **ಜೈಲಿನಿಂದ ಬಿಡುಗಡೆ ಹೊಂದಿದ ಕೈದಿಗೆ ಸಿಗುವ ಸುಖ ಕಮ್ಮಿಯಾ?!**

- **ಶ್ರೀನಿವಾಸ ರುದ್ರ, ವೈಯಾಲಿಕಾವಲ್**
  ಭಟ್ರೇ, ಮಳೆಗಾಲದಲ್ಲಿ ಕೊಡೆ ಯಾಕೆ ಮನೆಗೆ ವಾಪಸ್ ಬರುವುದಿಲ್ಲ?
- **ಕೊಡೆಗೂ ಇನ್ನೊಬ್ಬರ ಮನೆಯಲ್ಲಿ 'ಡಿನ್ನರ್' ಮಾಡುವ ಆಸೆ ಇರುತ್ತದೆ!**

- **ರೂಪಾ ವಾಸುದೇವ, ಭೈರಸಂದ್ರ**
  ಭಟ್ರೇ, ದೇವಸ್ಥಾನದ ಪ್ರಸಾದ ಯಾಕೆ ಅಷ್ಟು ರುಚಿಯಾಗಿರುತ್ತದೆ?
- **ಅದರಲ್ಲಿ ಯಾವತ್ತೂ ಗೋಡಂಬಿ, ಏಲಕ್ಕಿ ಕೊರತೆ ಬಾಧಿಸುವುದಿಲ್ಲ!**

- **ನಂಜುಂಡಿ ಶೇಷಯ್ಯ, ಕುಣಿಗಲ್**
  ಭಟ್ರೇ, ಕೆಲಸಕ್ಕೆ ಹೋಗುವಾಗ ಹೆಂಡತಿ ಯಾಕೆ 'ಬೇಗ ಬನ್ನಿ' ಅಂತಾಳೆ?
- **ಪ್ರೀತಿಗಲ್ಲ, ಬರುವಾಗ ತರಕಾರಿ ಮತ್ತು ರೇಷನ್ ತರಲಿಕ್ಕೆ!**

- **ಷಣ್ಮುಖಪ್ಪ ಹಾಲಂಬಿ, ಶಿವಮೊಗ್ಗ**
  ಭಟ್ರೇ, ಲಿಫ್ಟ್‌ನಲ್ಲಿ ಯಾರಾದರೂ ಇದ್ದಾಗ ನಾವು ಯಾಕೆ ಮೇಲೆ ನೋಡುತ್ತೇವೆ?
- **ಸುಮ್ನೆ ಅದೊಂದು ಒಣ ಸ್ಟೈಲ್ !**

ಭಾರತದಲ್ಲಿ ಸೂಟ್‌ಕೇಸ್ ಸಮರದ ಕತೆ...

ವಿದೇಶವಾಸಿ

ಕಿರಣ್ ಉಪಾಧ್ಯಾಯ

vveditoped@gmail.com

ಮೊದಲೇ ಹೇಳುತ್ತೇನೆ, ಇದು ರಾಜಕೀಯ ಪಕ್ಷದ, ರಾಜಕಾರಣಿಗಳ ಸೂಟ್‌ಕೇಸ್ ಸಮರದ ಕತೆಯಲ್ಲ. ಸಣ್ಣವರಾಗಿದ್ದಾಗ ಮನೆಗೆ ಯಾರೇ ಬಂದರೂ ನಾವು ಮೊದಲು ನೋಡುತ್ತಿದ್ದುದು ಅವರ ಟ್ರಂಕ್. ಆಗ ಹಸಿರು ಕಬ್ಬಿಣದ ಟ್ರಂಕ್ ಚಾಲ್ತಿಯಲ್ಲಿತ್ತು. ಅತಿಥಿಗಳ ಟ್ರಂಕ್ ಗಾತ್ರ ನೋಡಿ ಅವರು ಎಷ್ಟು ದಿನ ಉಳಿಯಬಹುದು ಎಂದು ಅಂದಾಜು ಮಾಡಲಾಗುತ್ತಿತ್ತು. ಆಗ ಟ್ರಂಕ್‌ನ ಬಣ್ಣಕ್ಕೆ ಹೆಚ್ಚು ಪ್ರಾಧಾನ್ಯ ಇರಲಿಲ್ಲವಾದರೂ, ಹಳೆಯದಾಗುತ್ತಿದ್ದಂತೆ, ತುಕ್ಕು ಹಿಡಿಯುತ್ತಿದ್ದಂತೆ ಅದಕ್ಕೆ ಬಣ್ಣದ ಪುನರ್ ಲೇಪನವಾಗುತ್ತಿತ್ತು. ಬಣ್ಣ ಹಚ್ಚಿ, ಬಿಸಿಲಿಗೆ ಇಟ್ಟು ಒಣಗಿಸುವುದು ಒಂದೆರಡು ದಿನದ ಕೆಲಸ. ಆ ಕಾಲದಲ್ಲಿ ಮರದ ಟ್ರಂಕ್ ಇದ್ದವಾದರೂ, ಪ್ರಯಾಣಕ್ಕೆ ಬಳಸುವುದು ಕಮ್ಮಿಯೇ. ಅವನ್ನು ಶಾಲೆ, ಕಾಲೇಜು, ಮನೆಗಳಲ್ಲಿ ವಸ್ತುಗಳನ್ನು ದಾಸ್ತಾನು ಮಾಡಿಡಲು ಹೆಚ್ಚು ಬಳಸುತ್ತಿದ್ದರು.

ಕಾಲಕ್ರಮೇಣ ಕಬ್ಬಿಣ, ಅಲ್ಯುಮಿನಿಯಮ್, ಹಿಂಡಾಲಿಯಮ್ ಟ್ರಂಕ್ ಜಾಗವನ್ನು ಪ್ಲಾಸ್ಟಿಕ್ ಸೂಟ್ ಕೇಸ್‌ಗಳು ಆಕ್ರಮಿಸಿಕೊಂಡವು. ಚಿಲಕದ ಜಾಗದಲ್ಲಿ ಝಿಪ್, ನಂಬರ್ ಲಾಕ್ ಬಂದವು. ಆಕರ್ಷಕ ವಿನ್ಯಾಸ, ಬಣ್ಣ, ಕಮ್ಮಿ ತೂಕ ಜನರನ್ನು ಆಕರ್ಷಿಸಿದವು. ನಂತರ ಹೊತ್ತುಕೊಂಡು ನಡೆಯುವ ಬದಲು ತಳ್ಳಿಕೊಂಡು ಹೋಗಲು ಅವುಗಳಿಗೆ ಚಕ್ರ ಜೋಡಿಸಲಾಯಿತು. ಗೀರು ಬೀಳದಂತೆ ರಕ್ಷಣೆ ನೀಡಲಾಯಿತು. ಸೂಟ್ ಕೇಸ್ ಕಂಪನಿಗಳ ಹೆಸರೂ ಜನಪ್ರಿಯವಾಗತೊಡಗಿದವು.

ಸೂಟ್‌ಕೇಸ್ ಶಕೆ ಭಾರತದಲ್ಲಿ ಆರಂಭವಾದಾಗ ಹೆಸರು ಮಾಡಿದ ಕಂಪನಿ ವಿಐಪಿ. ಆಗೆಲ್ಲ ಸೂಟ್‌ಕೇಸ್ ಅಂದರೆ ವಿಐಪಿ ★(VIP) ಎನ್ನುವಂತಿತ್ತು. ಎಂಬತ್ತರ ದಶಕದಲ್ಲಿ ವಿಐಪಿ ಭಾರತವನ್ನು ಸಂಪೂರ್ಣವಾಗಿ ಆವರಿಸಿಕೊಂಡುಬಿಟ್ಟಿತ್ತು. ಅದರ 'ಉಡ್ ಉಡ್ ಜಾಯೆ', 'ವಿಐಪಿ ಅಲ್ಫಾ ಸೂಟ್ ಕೇಸ್, ಕೇವಲ 289 ರೂಪಾಯಿಗೆ' ಇತ್ಯಾದಿ ಜಾಹೀರಾತುಗಳೂ ಜನಪ್ರಿಯವಾಗಿದ್ದವು. ಹಸಿರು ಬಣ್ಣದ ಟ್ರಂಕುಗಳು ಮದುಮಗನಿಗೆ ಬಳುವಳಿ ಪ್ರತೀಕವಾಗಿ ಉಳಿದುಕೊಂಡಿತು. ಈಗ ಅದೂ ಸೂಟ್‌ಕೇಸ್‌ಗೆ ಬದಲಾಗಿ, ಟ್ರಂಕ್ ಸ್ಥಾನ ವಸ್ತುಸಂಗ್ರಹಾಲಯಕ್ಕೆ ಸೀಮಿತವಾಗಿದೆ.

ಈಗ ಸ್ಯಾಮ್ಸೊನೈಟ್, ಡೆಲ್ಸಿ, ಅಮೆರಿಕನ್ ಟೂರಿಸ್ಟರ್, ಲೂಯಿ ವಿಟ್ಟೋ, ಹಾರ್ಟ್ಮನ್ ಇತ್ಯಾದಿ ಇಪ್ಪತ್ತಕ್ಕೂ ಹೆಚ್ಚು ಸೂಟ್‌ಕೇಸ್‌ಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಿದ್ದರೂ, ಭಾರತದಲ್ಲಿ ಹೆಚ್ಚು ನಡೆಯುವುದು ವಿಐಪಿ, ಅರಿಸ್ಟೊಕ್ರಾಟ್ ಮತ್ತು ಸಫಾರಿ ಸೂಟ್‌ಕೇಸ್‌ಗಳೇ. ಈ ಮೂರೂ ಬ್ರ್ಯಾಂಡ್‌ಗಳು ಭಾರತದಲ್ಲಿ ತಯಾರಾಗುತ್ತವೆ ಎನ್ನುವುದಕ್ಕಿಂತ ಹೆಚ್ಚಿನ ಒಂದು ಸಂಬಂಧವಿದೆ. ಈ ಮೂರೂ ಜನಪ್ರಿಯವಾಗುವುದಕ್ಕೆ ಕಾರಣೀಕರ್ತರಾದವರು ಸುಧೀರ್ ಜಾಟಿಯಾ.

ಭಾರತದ ಸೂಟ್‌ಕೇಸ್ ಕಥೆ ಆರಂಭವಾಗುವುದು ದಿಲಿಪ್ ಪಿರಾಮಲ್ ಅವರಿಂದ. ಭಾರವಾದ, ಲೋಹದ ಟ್ರಂಕ್ ಅಥವಾ ಮರದ ಪೆಟ್ಟಿಗೆಯ ಬದಲಾಗಿ, ಹಗುರಾದ, ಗಟ್ಟಿಯೂ ಆದ ಪ್ಲಾಸ್ಟಿಕ್ ಸೂಟ್‌ಕೇಸ್ ತಯಾರಿಸಿದರೆ ಹೇಗೆ ಎಂದು ಯೋಚಿಸಿದ ಪಿರಾಮಲ್ 1971ರಲ್ಲಿ ವಿಐಪಿ ಸಂಸ್ಥೆ ಆರಂಭಿಸಿದರು. ಆರಂಭವಾದ ಒಂದು ದಶಕದೊಳಗೆ ಪ್ರತಿ ಮನೆಯಲ್ಲೂ ಒಂದಾದರೂ ವಿಐಪಿ ಸೂಟ್‌ಕೇಸ್ ಅಥವಾ ಬ್ರೀಫ್‌ಕೇಸ್ ಇರುತ್ತಿತ್ತು. ಕಚೇರಿ ಕೆಲಸಕ್ಕೆ ಹೋಗುವವರು ಕಾಗದಪತ್ರ ಕೊಂಡೊಯ್ಯಲು ವಿಐಪಿ ಬ್ರಿಫ್‌ಕೇಸ್ ಬಳಸುತ್ತಿದ್ದರು. ಮಹಾರಾಷ್ಟ್ರದ ನಾಸಿಕ್, ನಾಗಪುರ್ ಮತ್ತು ಜಲಗಾವ್ ನಗರದ ಕಾರ್ಖಾನೆಗಳಲ್ಲಿ ವಿಐಪಿ ಸೂಟ್‌ಕೇಸ್ ತಯಾರಾಗುತ್ತಿದ್ದವು. ಆ ಕಾಲದಲ್ಲಿ ಭಾರತದಲ್ಲಷ್ಟೇ ಅಲ್ಲ, ವಿಶ್ವದಲ್ಲಿಯೂ ವಿಐಪಿ ಹೆಸರು ಮಾಡಿತ್ತು. ಒಂದು ಸಮಯದಲ್ಲಂತೂ ವಿಐಪಿ ವಿಶ್ವದ ಸೂಟ್‌ಕೇಸ್ ತಯಾರಿ ಸಂಸ್ಥೆಗಳ ಪಟ್ಟಿಯಲ್ಲಿ 2ನೆ ಸ್ಥಾನ ತಲುಪಿತ್ತು.

ಆಗ ಸೂಟ್‌ಕೇಸ್ ತಯಾರಿಸುವ ಇನ್ನೊಂದು ಸಂಸ್ಥೆ ಅರಿಸ್ಟೋ ಪ್ಲಾಸ್ಟ್ ಪ್ರೈವೇಟ್ ಲಿಮಿಟೆಡ್. ಆದರೆ ಅದಕ್ಕೆ ವಿಐಪಿ ಸೂಟ್‌ಕೇಸ್‌ಗಳಿಗೆ ಇರುವಷ್ಟು ಬೇಡಿಕೆ ಇರಲಿಲ್ಲ. ಆದರೂ ಇನ್ನೊಂದು ಸೂಟ್‌ಕೇಸ್ ಕಂಪನಿ ಮಾರುಕಟ್ಟೆಯಲ್ಲಿ ಇರುವುದು ಪಿರಾಮಲ್‌ಗೆ ಇಷ್ಟವಿರಲಿಲ್ಲ. ಅದಕ್ಕೆ ಸುಲಭ ಪರಿಹಾರದ ಮಾರ್ಗವೆಂದರೆ, ಅರಿಸ್ಟೋ ಪ್ಲಾಸ್ಟ್ ಸಂಸ್ಥೆಯನ್ನು ತಾನು ಖರೀದಿಸುವುದು ಎಂದು ಪಿರಾಮಲ್ ನಿರ್ಧರಿಸಿದರು. ಆದರೆ ಅದನ್ನು ನೋಡಿಕೊಳ್ಳಲು ಒಬ್ಬ ಅನುಭವಿ ವ್ಯಕ್ತಿಯ ಅವಶ್ಯಕತೆ ಅವರಿಗಿತ್ತು. ಆಗ ಸಹಾಯಕ್ಕೆ ಬಂದವರು ಮೋಹನ್ ಲಾಲ್ ಜಾಟಿಯಾ. ಬಟ್ಟೆಯ ವ್ಯಾಪಾರ ಮಾಡುತ್ತಿದ್ದ ಮೋಹನ್ ಲಾಲ್‌ಗೆ, ಸೂಟ್ ಕೇಸ್ ವ್ಯಾಪಾರ ಮತ್ತು ವಿತರಣೆ ಕುರಿತು ಸಾಕಷ್ಟು

ಅನುಭವವಿತ್ತು. ಅವರು ಪಿರಾಮಲ್ ಸ್ನೇಹಿತರೂ ಆಗಿದ್ದರು. ಪಿರಾಮಲ್ ಮತ್ತು ಜಾಟಿಯಾ ಇಬ್ಬರೂ ತಲಾ ಐವತ್ತು ಪ್ರತಿಶತದಂತೆ ಅರಿಸ್ಟೋ ಪ್ಲಾಸ್ಟ್ ಸಂಸ್ಥೆಯ ಒಡೆಯರಾಗಿ, 1974ರಲ್ಲಿ ಅರಿಸ್ಟೊಕ್ರಾಟ್ ಹೆಸರಿನಲ್ಲಿ ಮಾರುಕಟ್ಟೆಗೆ ತರಲು ಆರಂಭಿಸಿದರು. ಆದರೆ ಪಿರಾಮಲ್ ವಿಐಪಿ ಸಂಸ್ಥೆಯ ಕಡೆಗೆ ಹೆಚ್ಚು ಗಮನ ಕೊಡುತ್ತಿದ್ದು, ಅರಿಸ್ಟೊಕ್ರಾಟ್ ಕಡೆ ಹೆಚ್ಚಿನ ಲಕ್ಷ್ಯ ವಹಿಸದಿರುವುದು ಜಾಟಿಯಾಗೆ ಮನವರಿಕೆಯಾಗತೊಡಗಿತ್ತು. ಅದಕ್ಕೆ ಕಾರಣ ಬಹಳ ಸರಳವಾಗಿತ್ತು. ವಿಐಪಿ ನೂರು ಪ್ರತಿಶತ ಪಿರಾಮಲ್ ಒಡೆತನದಲ್ಲಿತ್ತು. ಅರಿಸ್ಟೊಕ್ರಾಟ್‌ನಲ್ಲಿ ಶೇ. ಐವತ್ತು ಮಾತ್ರ ಪಿರಾಮಲ್ ಒಡೆತನವಿತ್ತು. ಆದ್ದರಿಂದ ಸ್ವಾಭಾವಿಕವಾಗಿಯೇ ಪಿರಾಮಲ್ ವಿಐಪಿ ಸಂಸ್ಥೆಯನ್ನು ಬೆಳೆಸಲು ಹೆಚ್ಚು ಶ್ರಮವಹಿಸುತ್ತಿದ್ದಾರೆ ಎಂದು ಜಾಟಿಯಾ ತಿಳಿದರು. ಈ ಸಂಕೀರ್ಣದಿಂದ ಹೊರಗೆ ಬಂದು ಅರಿಸ್ಟೊಕ್ರಾಟ್ ಸಂಸ್ಥೆ ಬೆಳೆಸಲು ಬಯಸಿದರು. ಆದರೆ ಜಾಟಿಯಾಗೆ ತಮ್ಮದೇ ಆದ ಬಟ್ಟೆಯ ಉದ್ಯಮ ಇದ್ದುದರಿಂದ, ಇಲ್ಲಿ ಐವತ್ತು ಪ್ರತಿಶತ ಮಾತ್ರ ಭಾಗಿದಾರರಾಗಿದ್ದರಿಂದ ಜತೆಗೆ ವಯಸ್ಸೂ ಆಗಿದ್ದರಿಂದ ಹೆಚ್ಚಿನ ಗಮನ ಕೊಡಲು ಸಾಧ್ಯವಾಗುತ್ತಿರಲಿಲ್ಲ. ಆಗ ಅವರು ತಮ್ಮ ಮಗ ಸುಧೀರ್ ಜಾಟಿಯಾ ಅವರನ್ನು ತಮ್ಮ ಸ್ಥಾನದಲ್ಲಿ ಸಂಸ್ಥೆಯ ನಿರ್ದೇಶಕರನ್ನಾಗಿ ಸೇರಿಸಿದರು.

ಸುಧೀರ್ ಜಾಟಿಯ ಅರಿಸ್ಟೊಕ್ರಾಟ್ ಸಂಸ್ಥೆಯನ್ನು ಸೇರಿಕೊಂಡಾಗ ಕೇವಲ 21 ವರ್ಷದ ಯುವಕರಾಗಿದ್ದರು. ಅವರ ಬಳಿ ವ್ಯಾಪಾರದ ಯಾವುದೇ ಅನುಭವ ಇರಲಿಲ್ಲ, ಸಾಮಾನ್ಯವಾಗಿ ಹೊಸದಾಗಿ ಬಂದ ಮಾಲೀಕರ ಮಗನನ್ನು ನೋಡುವ ರೀತಿಯಲ್ಲಿಯೇ ಅಲ್ಲಿಯ ನೌಕರರು ಸುಧೀರ್ ಅವರನ್ನು ನೋಡಿದರು. ಸುಧೀರ್ ಅವರೆಲ್ಲರ ವಿಚಾರಗಳನ್ನೂ ಮೀರಿ ನಿಂತರು. ಅರಿಸ್ಟೊಕ್ರಾಟ್ ಕಂಪನಿಯನ್ನು ವಿಐಪಿಯ ನೆರಳಿನಿಂದ ಹೊರಗೆ ತಂದು ಸದೃಢವಾಗಿ ನಿಲ್ಲಿಸುವುದು ಸುಧೀರ್ ಜಾಟಿಯಾಗೆ ದೊಡ್ಡ ಸವಾಲಾಗಿತ್ತು. ಸುಧೀರ್ ಜಾಟಿಯಾ ಮೂರು ಕೆಲಸದಿಂದ ಇದನ್ನು ಸಾಧಿಸಿದರು. ಬ್ಯಾಗ್ ಮತ್ತು ಸೂಟ್‌ಕೇಸ್‌ನ ವಿನ್ಯಾಸ ಬದಲಿಸಿ, ಬೆಲೆ ನಿಯಂತ್ರಿಸಿ, ಮಾರುಕಟ್ಟೆಯಲ್ಲಿ ವಿತರಣೆಯನ್ನು ಅಭಿವೃದ್ಧಿಪಡಿಸಿ, ಬದುಕುಳಿಯುವುದೇ ಕಷ್ಟ ಎಂದು ತಿಳಿದಿದ್ದ ಅರಿಸ್ಟೊಕ್ರಾಟ್ ಸಂಸ್ಥೆಯ ಜೀವಕ್ಕೆ ಆಧಾರವಾಗಿ ನಿಂತರು. ದಶಕ ಕಳೆಯುವುದರೊಳಗೆ ಅರಿಸ್ಟೊಕ್ರಾಟ್ ಒಂದು ಸದೃಢ ಸಂಸ್ಥೆಯಾಗಿ ಬೆಳೆಯಿತು.

ಈ ನಡುವೆ ದಿಲೀಪ್ ಪಿರಾಮಲ್ ವಯಸ್ಸಿನ ಕಾರಣದಿಂದಾಗಿ ನಿವೃತ್ತಿ ಪಡೆಯುವ ಯೋಚನೆಯಲ್ಲಿದ್ದರು. ಅವರು ಒಬ್ಬ ಪ್ರತಿಭಾನ್ವಿತ, ಜವಾಬ್ದಾರಿಯುತ ವ್ಯಕ್ತಿಯ ಹುಡುಕಾಟದಲ್ಲಿದ್ದರು. ಆಗ ಅವರಿಗೆ ಕಂಡದ್ದು ಸುಧೀರ್ ಜಾಟಿಯಾ. 2003ರಲ್ಲಿ ಸುಧೀರ್ ಜಾಟಿಯಾ ಅವರನ್ನು ಅರಿಸ್ಟೊಕ್ರಾಟ್ ಮತ್ತು ವಿಐಪಿ, ಎರಡೂ ಸಂಸ್ಥೆಗಳ ನಿರ್ದೇಶಕರನ್ನಾಗಿ ಪಿರಾಮಲ್ ನೇಮಿಸಿದರು. ಇದು ಆ ಕಾಲದಲ್ಲಿ ದೇಶದಾದ್ಯಂತ ಆಶ್ಚರ್ಯದ ಸಂಚಲನವನ್ನುಂಟುಮಾಡಿತ್ತು. ಆದರೆ ಸುಧೀರ್ ಜಾಟಿಯ ಮನದಲ್ಲಿ ಒಂದು ಆತಂಕವಿತ್ತು. ವಿಐಪಿ ಮತ್ತು ಅರಿಸ್ಟೊಕ್ರಾಟ್ ಎರಡೂ ಒಂದೇ ಒಡೆತನದ ಸಂಸ್ಥೆಗಳು, ಒಂದೇ ಉತ್ಪನ್ನವನ್ನು ಒಂದೇ ಮಾರುಕಟ್ಟೆಯಲ್ಲಿ ಒಂದೇ ರೀತಿಯ ಬಳಕೆದಾರರಿಗೆ ಮಾರುತ್ತಿರುವುದನ್ನು ತಡೆಗಟ್ಟುವುದು ಹೇಗೆ ಎಂಬುದನ್ನು ಅವರು ಆಲೋಚಿಸುತ್ತಿದ್ದರು. ಅದಕ್ಕಾಗಿ ಅವರು ಒಂದು ಉಪಾಯವನ್ನು ಕಂಡುಕೊಂಡರು. ವಿಐಪಿಯನ್ನು ವ್ಯಾಪಾರಸ್ಥರ, ಶ್ರೀಮಂತರ ಬ್ಯಾಗ್‌ಗಳೆಂದೂ, ಅರಿಸ್ಟೊಕ್ರಾಟ್ ಸಾಮಾನ್ಯ ಜನರ, ವಿದ್ಯಾರ್ಥಿಗಳ ಬ್ಯಾಗ್‌ಗಳೆಂದೂ ಗುರುತಿಸುವಂತೆ ಮಾಡಿದರು. ಎರಡರದ್ದೂ ವಿನ್ಯಾಸ, ಬೆಲೆ, ಬೇರೆಯಾಗಿ ನಿಗದಿಪಡಿಸಿದರು. ಅಂಗಡಿಗಳಲ್ಲಿ ಇಡುವ ಜಾಗ ಮತ್ತು ಇಡುವ ರೀತಿಯನ್ನೂ ಬೇರೆ ಬೇರೆ ಮಾಡಿದರು. ಇದರಿಂದ ಎರಡೂ ಕಂಪನಿಗಳು ಬೇರೆ ಬೇರೆಯೇ ಎನ್ನುವ ರೀತಿಯಲ್ಲಿ ಬೆಳೆದವು. ಇದರಿಂದಾಗಿ ಕೆಲವು ವರ್ಷಗಳಲ್ಲಿಯೇ ಸುಧೀರ್ ವಿಐಪಿ ಸಂಸ್ಥೆಯ ನಿರ್ದೇಶಕ ಸ್ಥಾನದಿಂದ ವ್ಯವಸ್ಥಾಪಕ ನಿರ್ದೇಶಕರಾಗಿ ಬಡ್ತಿ ಪಡೆದರು.

2008ರಲ್ಲಿ ಜಾಗತೀಕರಣದಿಂದಾಗಿ ಅಮೆರಿಕದ ಸ್ಯಾಮ್ಸನೈಟ್ ಮತ್ತು ಅದರ ಅಂಗಸಂಸ್ಥೆಯಾದ ಅಮೆರಿಕನ್ ಟೂರಿಸ್ಟರ್ ಭಾರತವನ್ನು ಪ್ರವೇಶಿಸಿದ್ದು ವಿಐಪಿ ಮತ್ತು ಅರಿಸ್ಟೊಕ್ರಾಟ್ ಸಂಸ್ಥೆಗಳಿಗೆ ವ್ಯಾಪಾರದಲ್ಲಿ ದೊಡ್ಡ ಪೆಟ್ಟನ್ನೇ ಕೊಟ್ಟಿತ್ತು. ಜತೆಗೆ ಚೀನಾದಿಂದ ಬಂದ ಕಮ್ಮಿ ಬೆಲೆಯ ಸೂಟ್‌ಕೇಸ್‌ಗಳು ಮಾರುಕಟ್ಟೆಯನ್ನು ಆವರಿಸಿಕೊಳ್ಳುತ್ತಿದ್ದವು. ಇದರಿಂದಾಗಿ 2008ರಲ್ಲಿ ಮೊದಲ ಬಾರಿಗೆ ವಿಐಪಿ ಮೂವತ್ತು ಪ್ರತಿಶತ ನಷ್ಟವನ್ನು ಅನುಭವಿಸಿತ್ತು. ಆಗ ಕೆಲವರು ಸುಧೀರ್ ಅವರನ್ನು ಟೀಕಿಸಲು ಆರಂಭಿಸಿದರು. ಅವರ ಕೆಲವು ನಿರ್ಣಯಗಳಿಂದಾಗಿ ಕಂಪನಿ ನಷ್ಟ ಅನುಭವಿಸುತ್ತದೆ ಎಂದರು. ಆಗ ಸುಧೀರ್ ಜಾಟಿಯಾ ಒಂದು ನಿರ್ಣಯವನ್ನು ಕೈಗೊಂಡರು. ಹೆಚ್ಚಿನ ಬೆಲೆಯ ಬ್ಯಾಗ್ ಮತ್ತು ಸೂಟ್‌ಕೇಸ್ ನಿರ್ಮಾಣವನ್ನು ಸಂಪೂರ್ಣವಾಗಿ ನಿಲ್ಲಿಸಿದರು. ಮಾರುಕಟ್ಟೆಯಲ್ಲಿ ಅತಿ ಹೆಚ್ಚು ಬೇಡಿಕೆಯಲ್ಲಿರುವ ಹ್ಯಾಂಡ್‌ಬ್ಯಾಗ್‌ಗಳನ್ನು ಹೆಚ್ಚು ತಯಾರಿಸುವಂತೆ ಹೇಳಿದರು. ಅದಕ್ಕೆ ಬೇಕಾದ ಕೆಲವು ವಸ್ತುಗಳನ್ನು ಚೀನಾದಿಂದ ಆಮದು ಮಾಡಿಕೊಳ್ಳಲು ನಿರ್ಧರಿಸಿದರು. ಆದರೆ ಗುಣಮಟ್ಟದಲ್ಲಿ ಯಾವುದೇ ಹೊಂದಾಣಿಕೆ ಮಾಡಿಕೊಳ್ಳದಿರಲು ನಿರ್ಧರಿಸಿದರು. ಪ್ರತಿಯೊಂದು ಸಣ್ಣ ವಿಷಯದಲ್ಲೂ, ನಾಜೂಕಿನ ಸ್ಥಿತಿಯಲ್ಲೂ ಹೆಚ್ಚಿನ ಜವಾಬ್ದಾರಿ ವಹಿಸಿಕೊಂಡು ಕೆಲಸ ಮಾಡಿದರು. ಇದರಿಂದಾಗಿ ವಿಐಪಿ ಸಂಸ್ಥೆಯಲ್ಲಿ ಇತಿಹಾಸ ನಿರ್ಮಾಣವಾಯಿತು.

2009ರಲ್ಲಿ ವಿಐಪಿ ಸಂಸ್ಥೆ ಮೊದಲ ಬಾರಿಗೆ ಐವತ್ತು ಕೋಟಿ ರೂಪಾಯಿ ಲಾಭ ಗಳಿಸಿತು. ಈ ಯಶಸ್ಸಿನಿಂದಾಗಿ ಸುಧೀರ್ ಜಾಟಿಯಾ ಲಗೇಜ್ ಇಂಡಸ್ಟ್ರಿಯಲ್ಲಿ ಮನೆಮಾತಾದರು. ಆದರೆ ಯಶಸ್ಸಿನ ಜೊತೆಗೆ ಕೆಲವೊಮ್ಮೆ ಬದಲಾವಣೆಯ ನಿರ್ಣಯಗಳು ಬರುತ್ತವೆ ಎಂಬುದಕ್ಕೆ ಸಾಕ್ಷಿಯಾಗುವಂತೆ ವಿಐಪಿ ಸಂಸ್ಥೆಯಲ್ಲಿಯೂ ಬದಲಾವಣೆಯ ಗಾಳಿ ಬೀಸಿತ್ತು. ಪಿರಾಮಲ್ ಮನೆತನದ ಯಾರಾದರೂ ಒಬ್ಬರು ವ್ಯವಸ್ಥಾಪಕ ನಿರ್ದೇಶಕರಾಗಬೇಕು ಎನ್ನುವ ಸಹಮತ ಮೂಡಿತ್ತು. ಅದಕ್ಕಾಗಿ ದಿಲೀಪ್ ಪಿರಾಮಲ್ ಅವರ ಪುತ್ರಿ, ರಾಧಿಕಾ ಪಿರಾಮಲ್ ಅವರನ್ನು ಸುಧೀರ್ ಜಾಗದಲ್ಲಿ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಿಸಲಾಯಿತು. ಆಗ ಸುಧೀರ್‌ಗೆ ವಿಐಪಿಯಲ್ಲಿ ಹೆಚ್ಚಿನ ಕೆಲಸವೇನೂ ಇರಲಿಲ್ಲ, ಅವರಿಗೆ ತಮ್ಮ ಅಸ್ತಿತ್ವವನ್ನು ಸಾಬೀತುಪಡಿಸಲು ಬೇರೆ ಮಾರ್ಗ ಹುಡುಕುವುದು ಅನಿವಾರ್ಯವಾಯಿತು. ಆಗ ಅವರ ಕಣ್ಣಿಗೆ ಬಿದ್ದದ್ದು ಸಫಾರಿ ಸಂಸ್ಥೆ. 1980ರಿಂದಲೇ ಮಾರುಕಟ್ಟೆಯಲ್ಲಿದ್ದರೂ ಸಫಾರಿ ಸಂಸ್ಥೆ ಹೆಚ್ಚಿನ ಲಾಭವನ್ನೂ ಗಳಿಸುತ್ತಿರಲಿಲ್ಲ, ಪ್ರಚಾರದಲ್ಲೂ ಇರಲಿಲ್ಲ.

ಗುಜರಾತಿನ ಬರೋಡಾದಲ್ಲಿ ನಿರ್ಮಾಣಗೊಳ್ಳುತ್ತಿದ್ದ ಸಫಾರಿ ಬ್ಯಾಗ್‌ಗಳು ಭಾರತದ ಸೇನೆ ಮತ್ತು ಕೆಲವೇ ನಗರದ ಸಣ್ಣಪುಟ್ಟ ಅಂಗಡಿಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಿದ್ದವು. ಕಂಪನಿಯ ಆರ್ಥಿಕ ಪರಿಸ್ಥಿತಿ ಹೇಗಿತ್ತು ಎಂದರೆ, 2011ರ ವೇಳೆಗೆ ವಾರ್ಷಿಕವಾಗಿ ಸುಮಾರು 70 ಕೋಟಿ ವಹಿವಾಟು ನಡೆಸುತ್ತಿದ್ದ ಸಂಸ್ಥೆಯ ಲಾಭ ಮೂರು ಕೋಟಿಗೂ ಕಡಿಮೆ ಇತ್ತು. ಸುಧೀರ್‌ಗೆ ಸಫಾರಿ ಹೆಸರೇ ಆಕರ್ಷಕವಾಗಿ ಕಂಡಿತು. ಈ ಸಂಸ್ಥೆ ತನ್ನ ಕೈಗೆ ಸಿಕ್ಕರೆ ಇದನ್ನು ಉದ್ಧಾರ ಮಾಡುತ್ತೇನೆ ಎನ್ನುವ ಬಲವಾದ ನಂಬಿಕೆ ಇತ್ತು. ಆದ್ದರಿಂದ, ಈ ಸಂಸ್ಥೆಯಲ್ಲಿ ಹಣ ಹೂಡಿ ತಮ್ಮನ್ನು ಅದರಲ್ಲಿ ತೊಡಗಿಸಿಕೊಳ್ಳಲು ನಿರ್ಧರಿಸಿದರು. ಸ್ವತಃ ಇಪ್ಪತ್ತೊಂಬತ್ತು ಕೋಟಿ ರೂಪಾಯಿ ಸುರಿದು, ಕಂಪನಿಯ ಐವತ್ತಾರು ಪ್ರತಿಶತ ಶೇರು ಖರೀದಿಸಿ, ಸಫಾರಿ ಸಂಸ್ಥೆಯ ಸಿಇಒ ಆದರು.

ಆದರೆ ಅವರ ಹಾದಿ ಸುಗಮವಾಗಿರಲಿಲ್ಲ. ಸಫಾರಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಉದ್ಯೋಗಿಗಳು ಹಳಬರಾಗಿದ್ದರು. ಸುಧೀರ್ ಹೊಸಬರನ್ನು ಕೆಲಸಕ್ಕೆ ಸೇರಿಸಿಕೊಂಡರು. ಸಫಾರಿ ಸೂಟ್‌ಕೇಸ್‌ಗಳು ಹೆಚ್ಚಿನ ರಿಪೇರಿಗೆ ಬರುತ್ತಿದ್ದುದರಿಂದ ರಿಪೇರಿ ಕೇಂದ್ರಗಳೂ ಹೆಚ್ಚಿನ ಸಂಖ್ಯೆಯಲ್ಲಿ ಇದ್ದವು. ಸುಧೀರ್ ಬಂದ ನಂತರ ಗುಣಮಟ್ಟ ಹೆಚ್ಚಿಸಿದರೆ ಬ್ಯಾಗ್ ರಿಪೇರಿಗೆ ಬರುವುದಿಲ್ಲ ಎಂದು ನಿರ್ಧರಿಸಿ ಗುಣಮಟ್ಟ ಹೆಚ್ಚಿಸಿದರು. ಒಂದು ವೇಳೆ ಬ್ಯಾಗ್ ಹಾಳಾದರೆ ಬದಲಾಗಿ ಹೊಸತನ್ನೇ ನೀಡಲು ಸೂಚಿಸಿದರು. ಸಾಂಪ್ರದಾಯಿಕ ವಿತರಣಾಕಾರರ ಹೊರತಾಗಿ ಸಾಮಾನ್ಯ ಮಧ್ಯಮವರ್ಗದ ಜನ ಓಡಾಡುವ ಜಾಗದಲ್ಲಿ, ಬಿಗ್ ಬಝಾರ್, ರಿಲಾಯನ್ಸ್ ಟ್ರೆಂಡ್ಸ್ ಇತ್ಯಾದಿ ಮಳಿಗೆಗಳನ್ನು ಸಂಪರ್ಕಿಸಿ ಅಲ್ಲಿಯೂ ಸಫಾರಿ ಸಿಗುವಂತೆ ಮಾಡಿದರು. ಅಮೆಝಾನ್, ಫ್ಲಿಪ್‌ಕಾರ್ಟ್ ಜತೆ ಒಪ್ಪಂದ ಮಾಡಿಕೊಂಡು ಮೊದಲ ಬಾರಿಗೆ ಆನ್‌ಲೈನಿನಲ್ಲಿ ಸೂಟ್‌ಕೇಸ್ ಸಿಗುವಂತೆ ಮಾಡಿದರು. ಇದರಿಂದಾಗಿ ಸಫಾರಿಯ ವ್ಯಾಪಾರದಲ್ಲಿ ಶೇ. ಮೂವತ್ತರಷ್ಟು ಆನ್‌ಲೈನ್‌ನಿಂದ ಬರುವಂತಾಯಿತು. ಇದರಿಂದಾಗಿ ಸುಧೀರ್ ಸೇರಿಕೊಂಡಾಗ ಎಪ್ಪತ್ತು ಕೋಟಿ ವ್ಯಾಪಾರ ಮಾಡುತ್ತಿದ್ದ ಸಫಾರಿ 2020ರ ವೇಳೆಗೆ ಆರುನೂರು ಕೋಟಿ ದಾಟಿತ್ತು. ಕೋವಿಡ್ ಸಂದರ್ಭದಲ್ಲಿ ಬ್ಯಾಗ್ ತಯಾರಿಸುವ ಕಂಪನಿಗಳೆಲ್ಲ ನಷ್ಟದಲ್ಲಿದ್ದು ನೌಕರರನ್ನು ತೆಗೆದುಹಾಕುತ್ತಿದ್ದರೆ, ಸಫಾರಿ ಎಲ್ಲರನ್ನೂ ಹಾಗೆಯೇ ಉಳಿಸಿಕೊಂಡಿತ್ತು. ಇದು ಕೋವಿಡ್ ನಂತರವೂ ಸಫಾರಿ ಉಳಿದ ಕಂಪನಿಗಳಿಗಿಂತ ಮೊದಲೇ ಕಾರ್ಯ ಆರಂಭಿಸಿ, ಹೆಚ್ಚಿನ ಲಾಭ ಗಳಿಸಲು ಸಹಾಯಕಾರಿಯಾಯಿತು.

2024ರಲ್ಲಿ ಸಫಾರಿ 1500 ಕೋಟಿಗೂ ಹೆಚ್ಚು ವ್ಯಾಪಾರ ಮಾಡಿ, ವಿಐಪಿಗಿಂತ ಮುಂದೆ ಸಾಗಿ, ಭಾರತದ ನಂಬರ್ ವನ್ ಸೂಟ್‌ಕೇಸ್ ತಯಾರಿಸುವ ಸಂಸ್ಥೆಯಾಗಿ ಗುರುತಿಸಿಕೊಂಡಿತು. ಅದಕ್ಕೇ ಹೇಳಿದ್ದು, ಭಾರತದಲ್ಲಿ ಸೂಟ್‌ಕೇಸ್ ವ್ಯಾಪಾರದಲ್ಲಿ ನೆನಪಿಡಬೇಕಾದದ್ದು ರಾಜಕಾರಣಿಗಳನ್ನೂ ಅಲ್ಲ, ಪಕ್ಷವನ್ನೂ ಅಲ್ಲ, ಸುಧೀರ್ ಜಾಟಿಯಾ ಅವರನ್ನು.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಸರಕಾರಿ ಹುದ್ದೆ ತುಂಬಿರಿ

ಕರ್ನಾಟಕದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದು ಮೂರು ವರ್ಷ ಪೂರೈಸಿದ ಬಗ್ಗೆ ಸಾಧನಾ ಸಮಾವೇಶ ನಡೆಸಲು ಸಿದ್ಧತೆ ನಡೆಸಿದೆ. ಆದರೆ ಇವರದೇ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿರುವಂತೆ ಪ್ರತೀ ವರ್ಷ ಒಂದು ಲಕ್ಷ ಸರ್ಕಾರೀ ಉದ್ಯೋಗ ನೀಡುವ ಭರವಸೆ ಸಂಪೂರ್ಣ ಸುಳ್ಳಾಗಿದೆ. ಹಾಗಾಗಿ ಸರ್ಕಾರದ ಈ ಸಾಧನಾ ಸಮಾವೇಶದ ಸಂಭ್ರಮ ಕಾರ್ಯಕ್ರಮದಲ್ಲಾದರೂ ಖಾಲಿ ಬಿದ್ದಿರುವ 4 ಲಕ್ಷ ಸರ್ಕಾರೀ ಹುದ್ದೆ ತುಂಬುವ ಅಧಿಸೂಚನೆ ಪ್ರಕಟಿಸುವ ಮೂಲಕ ಜನಪ್ರಿಯ ಸಿಎಂ ಸಿದ್ದರಾಮಯ್ಯ ಅವರು ತಮ್ಮದೇ ಘೋಷಣೆ ಪಾಲಿಸಲಿ ಮತ್ತು ನುಡಿದಂತೆ ನಡೆಯಲಿ.

- ಎಸ್.ಎನ್ ರಮೇಶ್, ಮಂಡ್ಯ

ಸೊಳ್ಳೆ ಬತ್ತಿಗಳು ಹಾನಿಕಾರಕ

ಸೊಳ್ಳೆ ನಿವಾರಕ ಅಗರಬತ್ತಿಗಳಿಂದ ಎದುರಾಗುವ ಗಂಭೀರ ಆರೋಗ್ಯದ ಅಪಾಯಗಳ ಕುರಿತು ವರದಿಗಳಾಗಿವೆ.

ಮಾರುಕಟ್ಟೆಯಲ್ಲಿರುವ ಶೇಕಡಾ 85ರಷ್ಟು ಉತ್ಪನ್ನಗಳು ಕೇಂದ್ರ ಕೀಟನಾಶಕಗಳ ನೋಂದಣಿ ಅನುಮೋದನೆ ಹೊಂದಿಲ್ಲದಿರುವುದು ಆತಂಕಕಾರಿ ಸಂಗತಿ. ಧೂಮಪಾನದಷ್ಟೇ ಮಾರಕವಾಗಿರುವ ಈ ಹೊಗೆಯಿಂದ ಶೇಕಡಾ 70ರಷ್ಟು ಉಸಿರಾಟದ ತೊಂದರೆಗಳನ್ನು ವೈದ್ಯರು ಗುರುತಿಸಿದ್ದಾರೆ. ಜನರು ಇವು ಸುರಕ್ಷಿತವೆಂದು ನಂಬಿರುವುದು ಜಾಗೃತಿಯ ಕೊರತೆಯನ್ನು ತೋರಿಸುತ್ತದೆ. ಸರ್ಕಾರವು ತಕ್ಷಣವೇ ಇಂತಹ ಕಾನೂನುಬಾಹಿರ ಮತ್ತು ಅಸುರಕ್ಷಿತ ಉತ್ಪನ್ನಗಳ ಮಾರಾಟದ ಮೇಲೆ ಕಟ್ಟುನಿಟ್ಟಿನ ನಿಷೇಧ ಹೇರಬೇಕು. ಸಾರ್ವಜನಿಕರು ಆಯುರ್ವೇದ ಮೂಲಿಕೆಗಳು ಹಾಗೂ ಬೇವಿನ ಎಣ್ಣೆಯಂತಹ ನೈಸರ್ಗಿಕ ಪರ್ಯಾಯಗಳನ್ನು ಬಳಸಲು ಪ್ರೇರೇಪಿಸಬೇಕು.

- ಡಾ. ವಿಜಯಕುಮಾರ್ ಎಚ್.ಕೆ, ರಾಯಚೂರು

ರಾಜ್ಯ ಸರ್ಕಾರ ಬೆಲೆ ಇಳಿಸಲಿ

ಮಧ್ಯ ಪ್ರಾಚ್ಯದ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ, ಪ್ರಧಾನಿ ನರೇಂದ್ರ ಮೋದಿಯವರು ನೀಡಿದ ಮಿತವ್ಯಯದ ಕರೆಯ ಹಿನ್ನೆಲೆಯಲ್ಲಿ, ಮತ್ತು ದೇಶದ ಆರ್ಥಿಕ ಪರಿಸ್ಥಿತಿಯನ್ನು ಸರಿದೂಗಿಸುವ ಸಲುವಾಗಿ ಕೇಂದ್ರ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ತಲಾ 3 ರೂಪಾಯಿ ಏರಿಸಿದೆ. ಬೆಲೆ ಏರಿಕೆಯ ಮೂಲವೇ ಪೆಟ್ರೋಲ್ ಡೀಸೆಲ್ ದರ ಏರಿಕೆ. ಪ್ರತಿಯೊಂದರ ಬೆಲೆಯೂ ಹೆಚ್ಚಾದಾಗ ಜನಸಾಮಾನ್ಯರು ಬದುಕುವುದಾದರೂ ಹೇಗೆ? ರಾಜ್ಯ ಸರ್ಕಾರವೇನೋ ಬೆಲೆ ಏರಿಕೆಯ ವಿರುದ್ಧ ಕಿಡಿ ಕಾರುತ್ತಿದೆ. ಆದರೆ ರಾಜ್ಯ ಸರ್ಕಾರ ಸದ್ಯದ ಪರಿಸ್ಥಿತಿಯಲ್ಲಿ ರಾಜ್ಯದ ಜನರ ಹಿತಾಸಕ್ತಿ ಕಾಪಾಡಲೇಬೇಕು ಎಂದಾದರೆ ಕೇಂದ್ರವನ್ನು ದೂಷಿಸುವ ಬದಲು, ರಾಜ್ಯದ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಯನ್ನು ಇಳಿಸುವ ಮೂಲಕ ಜನಸಾಮಾನ್ಯರ ಪಾಲಿಗೆ ನೆರವಾಗುವ ಮೂಲಕ ಬೆಲೆ ಏರಿಕೆಯನ್ನು ತಪ್ಪಿಸಬಹುದು. ಕೆಲ ತಿಂಗಳುಗಳ ಕಾಲ ಸರ್ಕಾರಕ್ಕೆ ಬರುವ ಆದಾಯದ ಮೂಲ ಕಡಿಮೆಯಾದರೂ ಸರಿಯೇ, ಜನಸಾಮಾನ್ಯರ ಹಿತಾಸಕ್ತಿಯನ್ನು ಕಾಪಾಡಲಿ.

- ಮುರುಗೇಶ ಡಿ., ದಾವಣಗೆರೆ

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಹಂಟಾವೈರಸ್: ಸೋಂಕಿಗಿಂತ ವೇಗವಾಗಿ ಹರಡುತ್ತಿದೆ ಭಯ!



ಆರೋಗ್ಯ ಭಾಗ್ಯ

ಡಾ. ರೋಹಿತ್ ಕುಮಾರ್ ಎಚ್. ಜಿ

vveditoped@gmail.com

ಯಾವುದೇ ಹೊಸ ವೈರಸ್ ಸುದ್ದಿ ಬಂದರೂ ನಮಗೆ ಕೋವಿಡ್-19 ಸಾಂಕ್ರಾಮಿಕದ ನೆನಪುಗಳು ಮರುಕಳಿಸುತ್ತವೆ. ಮಾಸ್ಕ್, ಲಾಕ್ ಡೌನ್, ಅನಿಶ್ಚಿತತೆ ಹಾಗೂ ಸಾವು-ನೋವಿನ ಅನುಭವಗಳು, ನಾವು ಒಂದು ಸೋಂಕನ್ನು ನೋಡುವ ಬಗೆಯನ್ನೇ ಬದಲಾಯಿಸಿಬಿಟ್ಟಿವೆ. ಇತ್ತೀಚೆಗೆ ಮತ್ತೊಂದು ವೈರಸ್ ಸುದ್ದಿಯಲ್ಲಿದೆ. ಅದುವೇ ಹಂಟಾವೈರಸ್! ಅಟ್ಲಾಂಟಿಕ್ ಸಾಗರದಲ್ಲಿ ಸಂಚರಿಸುತ್ತಿದ್ದ ಹಡಗಿನಲ್ಲಿ ಕಾಣಿಸಿಕೊಂಡ ಹಂಟಾವೈರಸ್ ಮೂರು ಜನರನ್ನು ಬಲಿಪಡೆದ ಸುದ್ದಿ ಕೇಳಿ ಜನರು ಇದು ಮತ್ತೊಂದು ಕರೋನವಿರಬಹುದು ಎಂದು ಭಯಪಡುತ್ತಿದ್ದಾರೆ. ಆದರೆ, ಆತಂಕವನ್ನು ಬದಿಗೊತ್ತಿ, ಸಮಸ್ಯೆಯ ಅರಿವು ಹೊಂದುವುದು ಎಂದಿನಂತೆಯೇ ಅತ್ಯವಶ್ಯಕವಾಗಿದೆ.

ಮೊದಲಿಗೆ ಇದು ಹೊಸ ವೈರಸ್ ಅಲ್ಲ. 1964ರಲ್ಲಿ ತಮಿಳುನಾಡಿನ ವೆಲ್ಲೂರಿನ ತೊಟ್ಟಪಾಳ್ಯಮ್ ಬಳಿ ಕೀಟಗಳನ್ನು ತಿನ್ನುವ ಸುಂಡಿಲಿಯಿಂದ ಜಗತ್ತಿನ ಮೊದಲ ಹಂಟಾವೈರಸ್‌ನ್ನು ಬೇರ್ಪಡಿಸಲಾಯಿತು. ಆ ವೈರಸ್‌ಗೆ 'ತೊಟ್ಟಪಾಳ್ಯಮ್ ವೈರಸ್' ಎಂದೇ ಹೆಸರಿಸಲಾಗಿತ್ತು. ಆದರೆ, ಈ ವೈರಸ್‌ನಿಂದ ಮನುಷ್ಯರಲ್ಲಿ ಯಾವುದೇ ರೀತಿಯ ಸಮಸ್ಯೆಗಳಾದ ಬಗ್ಗೆ ಈವರೆಗೂ ವರದಿಯಾಗಿಲ್ಲ.

ತದನಂತರ, 1951ರಿಂದ 1953ರವರೆಗೆ ಕೊರಿಯನ್ ಯುದ್ಧದ ಸಂದರ್ಭದಲ್ಲಿ 3000ಕ್ಕೂ ಹೆಚ್ಚು ವಿಶ್ವಸಂಸ್ಥೆಯ ಯೋಧರು ರಕ್ತಸ್ರಾವ ಜ್ವರದಿಂದ ಬಳಲಿ, ನೂರಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದರು. ಆಗ ಪ್ರಾರಂಭಗೊಂಡ ಅಧ್ಯಯನದ ಫಲವಾಗಿ ಇದೇ ಜಾತಿಗೆ ಸೇರಿದ ಇನ್ನೊಂದು ಪ್ರಭೇದದ ವೈರಸ್‌ನ್ನು 1978ರಲ್ಲಿ ಮೊದಲ ಬಾರಿಗೆ ದಕ್ಷಿಣ ಕೊರಿಯಾದ ಹಂಟನ್ ನದಿಯ ಬಳಿಯಿದ್ದ ಇಲಿಯಿಂದ ಬೇರ್ಪಡಿಸಲಾಯಿತು. ಹಾಗಾಗಿ ಇದಕ್ಕೆ 'ಹಂಟನ್' ಅಥವಾ 'ಹಂಟಾ' ಎಂಬ ಹೆಸರು ಬಂದಿತು.

ಕೋವಿಡ್-19 ತರಹ ಹಂಟಾವೈರಸ್ ಸಾಮಾನ್ಯವಾಗಿ ಮನುಷ್ಯರಿಂದ ಮನುಷ್ಯರಿಗೆ ಸುಲಭವಾಗಿ ಹರಡುವುದಿಲ್ಲ. ಆದರೆ, ಈ ಬಾರಿ ಹಡಗಿನಲ್ಲಿ ಪತ್ತೆಯಾಗಿರುವ 'ಆಂಡಿಸ್' (Andes) ತಳಿ ವಿಶೇಷವಾಗಿದೆ. ಇದು ಅಪರೂಪದ ಸಂದರ್ಭಗಳಲ್ಲಿ ಮನುಷ್ಯರಿಂದ ಮನುಷ್ಯರಿಗೆ ಹರಡಬಹುದೆಂಬ ಸಾಕ್ಷ್ಯಗಳಿವೆ. 2018-19ರಲ್ಲಿ ಅರ್ಜೆಂಟೀನಾದಲ್ಲಿ ನಡೆದ ಒಂದು ಹುಟ್ಟುಹಬ್ಬದ ಸಮಾರಂಭ ಸೂಪರ್ ಸ್ಪ್ರೆಡರ್ ಘಟನೆಯಾಗಿ ಗುರುತಿಸಲ್ಪಟ್ಟಿದ್ದು ಇದೇ ತಳಿಯಿಂದ. ಆದರೂ, ಈ ವೈರಸ್ ಸಾಮಾನ್ಯವಾಗಿ ದೀರ್ಘಕಾಲ ಸಮೀಪ ಸಂಪರ್ಕದಲ್ಲಿರುವವರಲ್ಲಿ ಮಾತ್ರ ಹರಡುವ ಅಪಾಯ ಹೆಚ್ಚು ಎಂದು ವಿಜ್ಞಾನಿಗಳು ಹೇಳುತ್ತಾರೆ.

ಪ್ರಾಣಿಜನ್ಯ ವೈರಸ್‌ಗಳು ಏಕೆ ಹೆಚ್ಚಾಗುತ್ತಿವೆ?

ಹಂಟಾವೈರಸ್ ಮೂಲತಃ ಒಂದು ಪ್ರಾಣಿಜನ್ಯ ರೋಗ. ಇದು ಸಾಮಾನ್ಯವಾಗಿ ಇಲಿ ಮತ್ತು ಹೆಗ್ಗಣಗಳಂತಹ ಪ್ರಾಣಿಗಳ ಮೂಲಕ ಹರಡುತ್ತದೆ. ಹಂಟಾವೈರಸ್ ಹೊಂದಿರುವ ಇಲಿಗಳ ಮಲ-ಮೂತ್ರ-ಜೊಲ್ಲು ಸಂಪರ್ಕಕ್ಕೆ ಬಂದ ವ್ಯಕ್ತಿಗಳು ಈ ಸೋಂಕಿಗೆ ತುತ್ತಾಗುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಕೋವಿಡ್-19, ನಿಪಾ, ಹಕ್ಕಿ ಜ್ವರ, ಮಂಕಿಪಾಕ್ಸ್, ಕರ್ನಾಟಕದಲ್ಲಿ ಪದೇಪದೇ ಕಾಣಿಸಿಕೊಳ್ಳುವ ಮಂಗನ ಕಾಯಿಲೆ ಮತ್ತು ಈಗ ಹಂಟಾವೈರಸ್ ಮುಂತಾದ ಸೋಂಕುಗಳು ಪದೇಪದೇ ಸುದ್ದಿಯಾಗುತ್ತಿರುವುದು ಆಕಸ್ಮಿಕವಲ್ಲ. ಮನುಷ್ಯರು ಅರಣ್ಯ ಪ್ರದೇಶಗಳಿಗೆ ಹೆಚ್ಚು ನುಗ್ಗುತ್ತಿರುವುದು, ನಗರೀಕರಣ ವೇಗವಾಗಿ ನಡೆಯುತ್ತಿರುವುದು, ಪರಿಸರ ನಾಶ, ಹವಾಮಾನ ಬದಲಾವಣೆ ಮತ್ತು ಕಾಡುಜೀವಿಗಳ ವಾಸಸ್ಥಾನಗಳ ಮೇಲೆ ಮಾನವ ಹಸ್ತಕ್ಷೇಪ ಹೆಚ್ಚುತ್ತಿರುವುದು ಇದಕ್ಕೆ ಪ್ರಮುಖ ಕಾರಣಗಳಾಗಿವೆ. ಈ ಬದಲಾವಣೆಗಳಿಂದ ಮನುಷ್ಯರು ಮತ್ತು ಕಾಡುಪ್ರಾಣಿಗಳ ನಡುವಿನ ಅಂತರ ಕಡಿಮೆಯಾಗುತ್ತಿದ್ದು, ಪ್ರಾಣಿಗಳಲ್ಲಿದ್ದ ವೈರಸ್‌ಗಳು ಮನುಷ್ಯರಿಗೆ ಹರಡುವ ಸಾಧ್ಯತೆ ಹೆಚ್ಚುತ್ತಿದೆ.

ಇಲಿ ಮತ್ತು ಹೆಗ್ಗಣಗಳಂತಹ ಪ್ರಾಣಿಗಳು ಮಾನವ ವಾಸಸ್ಥಳಗಳ ಸಮೀಪ ಹೆಚ್ಚು ಕಾಣಿಸಿಕೊಳ್ಳುತ್ತಿರುವುದು ಹಂಟಾವೈರಸ್‌ನಂತಹ ಸೋಂಕುಗಳ ಅಪಾಯವನ್ನು ಹೆಚ್ಚಿಸುತ್ತದೆ. ಅಸಮರ್ಪಕ ತ್ಯಾಜ್ಯ ನಿರ್ವಹಣೆ, ಅಸ್ವಚ್ಛ ಪರಿಸರ, ಪ್ರವಾಹ ಪರಿಸ್ಥಿತಿಗಳು ಮತ್ತು ಆಹಾರದ ಅವಶೇಷಗಳು ಇಂತಹ ಪ್ರಾಣಿಗಳನ್ನು ನಗರ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಆಕರ್ಷಿಸುತ್ತವೆ. ಹೀಗಾಗಿ, ಇಂತಹ ಸೋಂಕುಗಳನ್ನು ಕೇವಲ ವೈದ್ಯಕೀಯ ಸಮಸ್ಯೆಯಾಗಿ ನೋಡುವುದಕ್ಕಿಂತ, ಪರಿಸರ ಮತ್ತು ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದಲೂ ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ.

ತಪ್ಪು ಮಾಹಿತಿ ಬೇಡ

ಕೋವಿಡ್-19 ನಂತರ ಯಾವುದೇ ಹೊಸ ವೈರಸ್ ಕುರಿತು ಸುದ್ದಿ ಹೊರಬಂದರೂ ಸಾಮಾಜಿಕ ಜಾಲತಾಣಗಳಲ್ಲಿ ಆತಂಕ ಕ್ಷಣಾರ್ಧದಲ್ಲಿ ಹರಡುತ್ತದೆ. ಮತ್ತೊಂದು ಮಹಾಮಾರಿ ಬರುತ್ತಿದೆ, ಲಾಕ್ಡೌನ್ ಮತ್ತೆ ಬರಲಿದೆ ಅಥವಾ ಈ ವೈರಸ್ ಗಾಳಿಯ ಮೂಲಕ ಎಲ್ಲರಿಗೂ ಹರಡುತ್ತಿದೆ ಎಂಬಂತಹ ಪರಿಶೀಲಿಸದ ಸಂದೇಶಗಳು ಜನರಲ್ಲಿ ಅನಗತ್ಯ ಭಯ ಹುಟ್ಟಿಸುತ್ತವೆ. ಹಂಟಾವೈರಸ್ ಕುರಿತೂ ಇದೇ ರೀತಿಯ ಹಲವು ತಪ್ಪು ಕಲ್ಪನೆಗಳು ಹರಿದಾಡುತ್ತಿವೆ. ಆದರೆ, ಪ್ರತಿಯೊಂದು ವೈರಸ್ ಕೂಡ ಕೋವಿಡ್‌ನಂತೆ ಜಾಗತಿಕ ಸಾಂಕ್ರಾಮಿಕವಾಗುವುದಿಲ್ಲ ಎಂಬುದನ್ನು ಅರಿತುಕೊಳ್ಳಬೇಕು.

ಸೋಂಕಿನ ಬಗ್ಗೆ ಸರಿಯಾದ ಮಾಹಿತಿಯನ್ನು ವಿಶ್ವ ಆರೋಗ್ಯ ಸಂಸ್ಥೆ, ಆರೋಗ್ಯ ಇಲಾಖೆ ಮತ್ತು ವಿಜ್ಞಾನಿಗಳಿಂದ ಪಡೆಯುವುದು ಅತ್ಯಂತ ಮುಖ್ಯ. ಸಾಮಾಜಿಕ ಜಾಲತಾಣಗಳಲ್ಲಿ ಹರಡುವ ಪ್ರತಿಯೊಂದು ವಿಡಿಯೋ ಅಥವಾ ಸಂದೇಶವನ್ನು ನಂಬುವುದಕ್ಕಿಂತ, ವೈಜ್ಞಾನಿಕ ಆಧಾರವಿರುವ ಮಾಹಿತಿಯನ್ನು, ನಂಬಲರ್ಹ ಮೂಲಗಳಿಂದ ಮಾತ್ರ ಸ್ವೀಕರಿಸಬೇಕು. ಸೋಂಕಿನ ಬಗ್ಗೆ ಜಾಗೃತಿ ಅಗತ್ಯವಾದರೂ, ಭಯ ಮತ್ತು ವದಂತಿಗಳು ಸಮಾಜದಲ್ಲಿ ಗೊಂದಲ ಸೃಷ್ಟಿಸಬಲ್ಲವು. ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಜವಾಬ್ದಾರಿಯುತ ಮಾಹಿತಿ ಹಂಚಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

ರೋಗಲಕ್ಷಣಗಳೇನು?

ಸಾಮಾನ್ಯವಾಗಿ ವೈರಸ್‌ನಿಂದ ಸೋಂಕಿಗೊಳಗಾದ ಒಂದರಿಂದ ಎಂಟು ವಾರಗಳ ನಂತರ ವಿವಿಧ ಪ್ರಾಥಮಿಕ ಗುಣಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಅವುಗಳೆಂದರೆ, ಜ್ವರ, ಸುಸ್ತು, ಸ್ನಾಯು ನೋವು, ತಲೆನೋವು, ಚಳಿ, ವಾಂತಿ ಮತ್ತು ಹೊಟ್ಟೆನೋವುಗಳು. ಈ ಎಲ್ಲಾ ಲಕ್ಷಣಗಳು ವೈರಲ್ ಜ್ವರ ಅಥವಾ ಡೆಂಗ್ಯೂ ರೋಗಕ್ಕೆ ತಾಳೆಯಾಗುವುದರಿಂದ ರೋಗನಿರ್ಣಯ ವಿಳಂಬವಾಗಬಹುದು. ಮುಂದಿನ ಹಂತದಲ್ಲಿ ಸಮಸ್ಯೆ ತೀವ್ರಗೊಂಡು ಕೆಮ್ಮು, ಉಸಿರಾಟ ಸಮಸ್ಯೆ, ಎದೆಯ ಬಿಗಿತ, ತ್ವರಿತ ಉಸಿರಾಟ, ಶ್ವಾಸಕೋಶದಲ್ಲಿ ನೀರು ಶೇಖರಗೊಂಡು ರಕ್ತದೊತ್ತಡ ಕಡಿಮೆಯಾಗಬಹುದು. ಇವು ಕೊನೆಗೆ ಕಿಡ್ನಿ ಮತ್ತು ಶ್ವಾಸಕೋಶದ ವೈಫಲ್ಯಕ್ಕೆ ಕಾರಣವಾಗಿ ಜೀವಹಾನಿಯಾಗುವ ಅಪಾಯವಿರುತ್ತದೆ. ವಿಶ್ವ ಆರೋಗ್ಯ ಸಂಸ್ಥೆಯ ಅಂಕಿ ಅಂಶಗಳ ಪ್ರಕಾರ ಈ ಸೋಂಕಿನ ಮರಣ ಪ್ರಮಾಣ 20%ರಿಂದ 40%ರಷ್ಟಿದೆ!

ಇಲಿಗಳು ಹೆಚ್ಚಿರುವ ಪ್ರದೇಶಗಳಲ್ಲಿರುವ ಜನರು ಈ ಸೋಂಕಿಗೆ ತುತ್ತಾಗುವ ಅಪಾಯದಲ್ಲಿರುತ್ತಾರೆ. ರೈತರು ಮತ್ತು ಕೃಷಿಕರು, ರಸ್ತೆ ಗುಡಿಸುವವರು, ಧಾನ್ಯ ಸಂಗ್ರಹಣಾ ಕೇಂದ್ರದಲ್ಲಿ ಕೆಲಸ ಮಾಡುವವರು ಮುಖ್ಯವಾಗಿ ಹೆಚ್ಚು ಎಚ್ಚರಿಕೆ ವಹಿಸಬೇಕಾಗುತ್ತದೆ. ಹಂಟಾವೈರಸ್ ಸೋಂಕಿಗೆ ಯಾವುದೇ ನಿರ್ದಿಷ್ಟ ಚಿಕಿತ್ಸೆ, ಆಂಟಿವೈರಲ್ ಔಷಧ ಅಥವಾ ಲಸಿಕೆ ಇಲ್ಲ, ಹಾಗಾಗಿ, ಸೋಂಕಿಗೊಳಗಾದವರಿಗೆ ತಕ್ಷಣದ ಚಿಕಿತ್ಸೆ ನೀಡುವುದು ಅತ್ಯವಶ್ಯಕ. ತೀವ್ರ ನಿಗಾ ಘಟಕದಲ್ಲಿ ಆರೈಕೆ ನೀಡುವುದು, ಆಮ್ಲಜನಕ ಚಿಕಿತ್ಸೆ, ಉಸಿರಾಟದ ಸಹಾಯ ಮತ್ತು ತೀವ್ರವಾದ ಉಸಿರಾಟ ಮತ್ತು ಹೃದಯದ ತೊಂದರೆಗಳನ್ನು ನಿರ್ವಹಿಸಲು ರಕ್ತದೊತ್ತಡವನ್ನು ನಿಗಾವಹಿಸುವುದು ಪ್ರಮುಖ ಚಿಕಿತ್ಸಕ ಕ್ರಮಗಳಾಗಿವೆ.

ಈ ಬಿಕ್ಕಟ್ಟಿನ ಸಂದರ್ಭದಲ್ಲಿ ಭಾರತವು ಹಲವು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದೆ. ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು (ಐಸಿಎಂಆರ್) ಅಡಿಯಲ್ಲಿರುವ 165 ವೈರಲ್ ಸಂಶೋಧನೆ ಮತ್ತು ರೋಗನಿರ್ಣಯ ಪ್ರಯೋಗಾಲಯಗಳ ಜಾಲವನ್ನು ಸಕ್ರಿಯಗೊಳಿಸಲಾಗಿದ್ದು, ಈ ಪ್ರಯೋಗಾಲಯಗಳು ಯಾವುದೇ ಹೊಸ ರೋಗಕಾರಕಗಳನ್ನು ಪತ್ತೆಹಚ್ಚುವ ಸಾಮರ್ಥ್ಯ ಹೊಂದಿವೆ. ಸೋಂಕಿನ ಮೇಲೆ ನಿಗಾ ವಹಿಸಲು ವಿಶ್ವ ಆರೋಗ್ಯ ಸಂಸ್ಥೆಯ ಜೊತೆ ಭಾರತವು ಕೈಜೋಡಿಸಿದೆ. ಮುಖ್ಯವಾಗಿ ಭಾರತದಲ್ಲಿ ಈ ಸೋಂಕು ಅತ್ಯಂತ ವಿರಳವಾಗಿರುವುದು ಸಮಾಧಾನಕರ ಅಂಶ. ಇಲ್ಲಿಯವರೆಗೆ ನಮ್ಮ ದೇಶದಲ್ಲಿ ಹಂಟಾವೈರಸ್ ಯಾವುದೇ ರೀತಿಯ ಸಮಸ್ಯೆಯನ್ನು ತಂದೊಡ್ಡಿಲ್ಲ. ಭಾರತೀಯರಿಬ್ಬರು ಹಡಗಿನಲ್ಲಿ ಸೋಂಕಿಗೆ ಒಳಗಾಗಿರುವುದು ಕಳವಳಕಾರಿಯಾಗಿದ್ದರೂ, ಆ ಇಬ್ಬರನ್ನು ನೆದರ್ಲ್ಯಾಂಡ್‌ನಲ್ಲಿ ಕ್ವಾರಂಟೈನ್‌ನಲ್ಲಿಡಲಾಗಿದ್ದು, ಅವರ ಆರೋಗ್ಯವು ಸುಸ್ಥಿತಿಯಲ್ಲಿದೆ.

ಹಂಟಾವೈರಸ್ ಸೋಂಕಿಗೊಳಗಾಗದಂತೆ ತಡೆಗಟ್ಟಲು ಕೆಲವು ತಂತ್ರಗಳು ಹೀಗಿವೆ: ಮೊದಲಿಗೆ, ಇಲಿಗಳು ಮನೆಯ ಒಳಬರದಂತೆ ತಡೆಯಲು ಗೋಡೆಗಳಲ್ಲಿರುವ ರಂಧ್ರಗಳನ್ನು ಮುಚ್ಚಬೇಕು. ಇಲಿಗಳ ಮಲ ಮೂತ್ರವಿರುವ ಜಾಗ ಶುಚಿಗೊಳಿಸುವಾಗ ಒಣ ಕಸದಂತೆ ಗುಡಿಸಬಾರದು. ಹೀಗೆ ಮಾಡುವುದರಿಂದ ವೈರಸ್ ಕಣಗಳು ಗಾಳಿಯಲ್ಲಿ ಹರಡಬಹುದು. ಬದಲಾಗಿ ನೀರು ಅಥವಾ ಸೋಂಕು ನಿವಾರಕವನ್ನು ಬಳಸಿ ಒದ್ದೆ ಬಟ್ಟೆಯಿಂದ ಒರೆಸಬೇಕು. ಮನೆಯ ಒಳಗೆ ಚೆನ್ನಾಗಿ ಗಾಳಿಯಾಡುವಂತೆ ನೋಡಿಕೊಳ್ಳಬೇಕು. ಮನೆಯ ಸುತ್ತಮುತ್ತ ಆಹಾರದ ತ್ಯಾಜ್ಯ ಸುರಿಯಬಾರದು. ಇದು ಇಲಿಗಳನ್ನು ಆಕರ್ಷಿಸುತ್ತದೆ. ಇಂತಹ ಆಹಾರ ತ್ಯಾಜ್ಯಗಳನ್ನು ಮುಚ್ಚಳವಿರುವ ಲೋಹದ ಬುಟ್ಟಿಗಳಲ್ಲಿ ಹಾಕಿಡಬೇಕು. ಸ್ವಚ್ಛತಾ ಕಾರ್ಯ ಕೈಗೊಳ್ಳುವಾಗ ಮಾಸ್ಕ್ ಮತ್ತು ಕೈಗವಸುಗಳನ್ನು ಧರಿಸಬೇಕು. ನಂತರ ಕೈಗಳನ್ನು ಚೆನ್ನಾಗಿ ತೊಳೆದುಕೊಳ್ಳಬೇಕು.

ಸಮತೋಲನ ಮುಖ್ಯ

ವಿಜ್ಞಾನಿಗಳು ಇಂದು ಒನ್ ಹೆಲ್ತ್ ಎಂಬ ಮಹತ್ವದ ಪರಿಕಲ್ಪನೆಯನ್ನು ಹೆಚ್ಚು ಒತ್ತಿ ಹೇಳುತ್ತಿದ್ದಾರೆ. ಇದರ ಅರ್ಥ, ಮನುಷ್ಯರ ಆರೋಗ್ಯ, ಪ್ರಾಣಿಗಳ ಆರೋಗ್ಯ ಮತ್ತು ಪರಿಸರದ ಆರೋಗ್ಯ, ಈ ಮೂರೂ ಪರಸ್ಪರ ಸಂಬಂಧ ಹೊಂದಿವೆ ಎಂಬುದು. ಕಾಡುಜೀವಿಗಳ ವಾಸಸ್ಥಾನ ನಾಶವಾದಾಗ, ಪರಿಸರ ಅಸಮತೋಲನ ಉಂಟಾದಾಗ ಅಥವಾ ನಗರಗಳಲ್ಲಿ ಅಸ್ವಚ್ಛತೆ ಹೆಚ್ಚಾದಾಗ ಅದರ ಪರಿಣಾಮ ಹೊಸ ಸೋಂಕುಗಳ ರೂಪದಲ್ಲಿ ಮನುಷ್ಯರ ಮೇಲೆ ಬೀಳಬಹುದು. ಹಂಟಾವೈರಸ್ ಸೋಂಕು ಈ ಸಂಬಂಧವನ್ನು ಮತ್ತೊಮ್ಮೆ ನೆನಪಿಸಿವೆ. ಆದ್ದರಿಂದ, ಭವಿಷ್ಯದ ಸೋಂಕುಗಳನ್ನು ತಡೆಗಟ್ಟಲು ಕೇವಲ ಆಸ್ಪತ್ರೆಗಳು ಮತ್ತು ಔಷಧಿಗಳು ಸಾಕಾಗುವುದಿಲ್ಲ. ಸ್ವಚ್ಛ ಪರಿಸರ, ಸಮರ್ಪಕ ತ್ಯಾಜ್ಯ ನಿರ್ವಹಣೆ, ಕಾಡುಜೀವಿಗಳ ಸಂರಕ್ಷಣೆ, ಪರಿಣಾಮಕಾರಿ ಆರೋಗ್ಯ ನಿಗಾವ್ಯವಸ್ಥೆ ಮತ್ತು ವೈಜ್ಞಾನಿಕ ಜಾಗೃತಿಗಳೆಲ್ಲವೂ ಸಮಾನವಾಗಿ ಮುಖ್ಯವಾಗುತ್ತವೆ. ಸಾರ್ವಜನಿಕ ಆರೋಗ್ಯವನ್ನು ಬಲಪಡಿಸುವುದು ಎಂದರೆ ಕೇವಲ ರೋಗ ಬಂದ ನಂತರ ಚಿಕಿತ್ಸೆ ನೀಡುವುದಲ್ಲ. ಸೋಂಕುಗಳು ಉಂಟಾಗುವ ಪರಿಸ್ಥಿತಿಗಳನ್ನು ಕಡಿಮೆ ಮಾಡುವುದೂ ಇದರ ಭಾಗವಾಗಿದೆ.

ಕೊನೆಯದಾಗಿ, ಹಂಟಾವೈರಸ್ ಮತ್ತೊಂದು ಕೋವಿಡ್ ಅಲ್ಲ, ಹಾಗಾಗಿ ಅನಗತ್ಯ ಗಾಬರಿ ಬೇಡ. ಹಾಗೆಂದು ನಿರ್ಲಕ್ಷ್ಯವೂ ಸಲ್ಲದು. ಹಂಟಾವೈರಸ್ ಹರಡುವ ರೀತಿ ಕೋವಿಡ್-19ಗಿಂತ ಬಹಳ ಭಿನ್ನವಾಗಿದೆ. ಇದು ಸಾಮಾನ್ಯವಾಗಿ ಗಾಳಿಯ ಮೂಲಕ ಸುಲಭವಾಗಿ ಒಬ್ಬರಿಂದ ಮತ್ತೊಬ್ಬರಿಗೆ ಹರಡುವುದಿಲ್ಲ. ಸೋಂಕು ತಗುಲಿದವರಲ್ಲಿ ಸಾವಿನ ಪ್ರಮಾಣ ಹೆಚ್ಚಿರುವುದರಿಂದ ಆರಂಭಿಕ ಹಂತದಲ್ಲೇ ಲಕ್ಷಣಗಳನ್ನು ಗುರುತಿಸಿ ಅಗತ್ಯ ಚಿಕಿತ್ಸೆ ಪಡೆಯುವುದು ಅತ್ಯಂತ ಮುಖ್ಯವಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಹರಡುವ ಅಂತೆ-ಕಂತೆಗಳಿಗೆ ಕಿವಿಗೊಡದೆ, ವೈಜ್ಞಾನಿಕ ಮಾಹಿತಿಯನ್ನೇ ನಂಬುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

(ಲೇಖಕರು ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಗ್ರ್ಯಾಂಟ್ಸ್ ಮ್ಯಾನೇಜರ್)

ಪ್ರಸ್ತುತ

ರಾ. ರಾಮಾರಾಧ್ಯ, ಮೈಸೂರು

ಕೇರಳದಲ್ಲಿ ಕಮ್ಯುನಿಸ್ಟ್ ಸೋಲು ಯಾಕೆ?

ಭಾರತದಲ್ಲಿ ಕಮ್ಯುನಿಸ್ಟ್ ಚಳವಳಿಯ ಬಗ್ಗೆ ಮಾತನಾಡುವಾಗ ಕೇರಳ ರಾಜ್ಯವನ್ನು ವಿಶೇಷವಾಗಿ ಉಲ್ಲೇಖಿಸಲೇಬೇಕು. ದೇಶದಲ್ಲಿ ಕಮ್ಯುನಿಸ್ಟ್ ತತ್ವಗಳಿಗೆ ದೀರ್ಘಕಾಲದ ರಾಜಕೀಯ ನೆಲೆ ಸಿಕ್ಕಿರುವ ರಾಜ್ಯಗಳಲ್ಲಿ ಕೇರಳ ಪ್ರಮುಖವಾಗಿದೆ. ಶಿಕ್ಷಣ, ಆರೋಗ್ಯ, ಸಾಮಾಜಿಕ ಅಭಿವೃದ್ಧಿ ಮತ್ತು ರಾಜಕೀಯ ಜಾಗೃತಿಯಲ್ಲಿ ಕೇರಳದ ಕಮ್ಯುನಿಸ್ಟ್ ಸರ್ಕಾರಗಳು ತಮ್ಮದೇ ಆದ ಮಾದರಿಯನ್ನು ನಿರ್ಮಿಸಿವೆ. ಅದೇ ಸಮಯದಲ್ಲಿ ಹಲವು ವಿವಾದಗಳು, ರಾಜಕೀಯ ಹಿಂಸಾಚಾರ ಮತ್ತು ತತ್ವಾಧಾರಿತ ಸಂಘರ್ಷಗಳಿಂದ ಕೇರಳದ ಎಡಪಂಥೀಯ ರಾಜಕೀಯ ಟೀಕೆಯನ್ನೂ ಎದುರಿಸಿದೆ.

1957ರಲ್ಲಿ ಇಎಂಎಸ್ ನಂಬೂದಿರಿಪಾಡ್ ನೇತೃತ್ವದಲ್ಲಿ ಕೇರಳದಲ್ಲಿ ವಿಶ್ವದ ಮೊದಲ ಪ್ರಜಾಪ್ರಭುತ್ವದ ಮೂಲಕ ಆಯ್ಕೆಯಾದ ಕಮ್ಯುನಿಸ್ಟ್ ಸರ್ಕಾರ ಅಧಿಕಾರಕ್ಕೆ ಬಂದದ್ದು ಇತಿಹಾಸದ ಮಹತ್ವದ ಘಟನೆ. ಭೂ ಸುಧಾರಣೆ, ಶಿಕ್ಷಣ ವಿಸ್ತರಣೆ ಮತ್ತು ಸಾಮಾಜಿಕ ಸಮಾನತೆ ಎಂಬ ಉದ್ದೇಶಗಳೊಂದಿಗೆ ಕಮ್ಯುನಿಸ್ಟ್ ಸರ್ಕಾರ ಹಲವು ಜನಪರ ಯೋಜನೆಗಳನ್ನು ಜಾರಿಗೆ ತಂದಿತು. ಕೇರಳದಲ್ಲಿ ಭೂ ಸುಧಾರಣೆ ಕಾಯ್ದೆಗಳು ರೈತರ ಜೀವನದಲ್ಲಿ ದೊಡ್ಡ ಬದಲಾವಣೆ ತಂದವು. ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರಿ ಶಾಲೆಗಳು ಮತ್ತು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಗೆ ಒತ್ತು ನೀಡಿದ ಪರಿಣಾಮ ಕೇರಳ ಇಂದು ದೇಶದಲ್ಲೇ ಅತಿ ಹೆಚ್ಚು ಸಾಕ್ಷರ ರಾಜ್ಯವಾಗಿ ಗುರುತಿಸಿಕೊಂಡಿದೆ. ಆರೋಗ್ಯ ಕ್ಷೇತ್ರದಲ್ಲಿಯೂ ಕೇರಳದ ಸಾಧನೆ ಗಮನಾರ್ಹ.

ಆದರೆ ಕೇರಳದ ಕಮ್ಯುನಿಸ್ಟ್ ಆಡಳಿತ ಟೀಕೆಗಳಿಂದ ಮುಕ್ತವಾಗಿಲ್ಲ. ಹಲವು ವರ್ಷಗಳಿಂದ ರಾಜ್ಯದಲ್ಲಿ ರಾಜಕೀಯ ಹಿಂಸಾಚಾರದ ಆರೋಪಗಳು ಕೇಳಿಬರುತ್ತಿವೆ. ವಿಶೇಷವಾಗಿ ಉತ್ತರ ಕೇರಳದ ಕೆಲವು ಭಾಗಗಳಲ್ಲಿ ಎಡಪಂಥೀಯ ಕಾರ್ಯಕರ್ತರು ಮತ್ತು ವಿರೋಧಿ ಸಂಘಟನೆಗಳ ನಡುವೆ ಘರ್ಷಣೆಗಳು ನಡೆದಿರುವುದು ಸುದ್ದಿಯಾಗುತ್ತಲೇ ಬಂದಿದೆ. ರಾಜಕೀಯ ಭಿನ್ನಾಭಿಪ್ರಾಯಗಳು ಕೆಲವೊಮ್ಮೆ ಹಿಂಸಾತ್ಮಕ ಸ್ವರೂಪ ಪಡೆದಿರುವುದು ರಾಜ್ಯದ ರಾಜಕೀಯ ವಾತಾವರಣದ ಮೇಲೆ ಪರಿಣಾಮ ಬೀರಿದೆ. ಇದೇ ರೀತಿ ಧಾರ್ಮಿಕ ಸಮುದಾಯಗಳ ಜೊತೆಗಿನ ರಾಜಕೀಯ ಸಮೀಕರಣ, ಚಿನ್ನದ ಕಳ್ಳಸಾಗಣೆ ಪ್ರಕರಣಗಳು, ಆಡಳಿತದ ಭ್ರಷ್ಟಾಚಾರ ಆರೋಪಗಳು ಮತ್ತು ಯುವಕರ ನಿರುದ್ಯೋಗ ಸಮಸ್ಯೆ ಕೂಡ ಕಮ್ಯುನಿಸ್ಟ್ ಸರ್ಕಾರಕ್ಕೆ ಸವಾಲಾಗಿದೆ. ಕೇರಳದ ಅನೇಕ ಯುವಕರು ಉದ್ಯೋಗಕ್ಕಾಗಿ ವಿದೇಶಗಳಿಗೆ ತೆರಳುತ್ತಿರುವುದು ರಾಜ್ಯದ ಆರ್ಥಿಕ ಸ್ಥಿತಿಯ ಮತ್ತೊಂದು ಮುಖವಾಗಿದೆ.ಆದರೂ ಸಾಮಾಜಿಕ ಅಭಿವೃದ್ಧಿ ಸೂಚ್ಯಂಕಗಳಲ್ಲಿ ಕೇರಳ ದೇಶಕ್ಕೆ ಮಾದರಿಯಾಗಿಯೇ ಉಳಿದಿದೆ.

ಇತ್ತೀಚಿನ ವರ್ಷಗಳಲ್ಲಿ ರಾಷ್ಟ್ರೀಯ ರಾಜಕೀಯದ ಬದಲಾವಣೆಗಳು ಕೇರಳದಲ್ಲಿಯೂ ಪ್ರಭಾವ ಬೀರುತ್ತಿವೆ. ರಾಷ್ಟ್ರವಾದ, ಧಾರ್ಮಿಕ ರಾಜಕೀಯ ಮತ್ತು ಹೊಸ ತಲೆಮಾರಿನ ಆಶಯಗಳ ನಡುವೆ ಕಮ್ಯುನಿಸ್ಟ್ ಪಕ್ಷಗಳು ಪ್ರಭಾವ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿವೆ. ಯುವಜನರನ್ನು ಸೆಳೆಯುವುದು ಮತ್ತು ಆರ್ಥಿಕ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುವುದು ಎಡಪಕ್ಷಗಳಿಗೆ ಮುಂದಿನ ದಿನಗಳಲ್ಲಿ ದೊಡ್ಡ ಸವಾಲಾಗಿರುತ್ತದೆ.

ಭಾರತದಲ್ಲಿ ಕಮ್ಯುನಿಸ್ಟ್ ರಾಜಕೀಯ ಸಂಪೂರ್ಣವಾಗಿ ಕುಸಿದಿಲ್ಲ ಎಂಬುದಕ್ಕೆ ಕೇರಳವೇ ಪ್ರಮುಖ ಉದಾಹರಣೆ. ಆದರೆ ಬದಲಾಗುತ್ತಿರುವ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಗೆ ಹೊಂದಿಕೊಳ್ಳುವ ಸಾಮರ್ಥ್ಯವೇ ಕೇರಳದ ಕಮ್ಯುನಿಸ್ಟ್ ರಾಜಕೀಯದ ಭವಿಷ್ಯವನ್ನು ನಿರ್ಧರಿಸಲಿದೆ. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಕೇರಳದಲ್ಲಿ ಎಲ್‌ಡಿಎಫ್ ಸರ್ಕಾರ ಸೋತು ಯುಡಿಎಫ್ ಆಡಳಿತ ಜಾರಿಗೆ ಬಂದಿತು ಹೀಗಾಯಿತೆಂದು ಕಮ್ಯುನಿಸ್ಟ್ ಮಂದಿ ಸುಮ್ಮನೆ ಕೂರುವವರಲ್ಲ. ಅಂಡರ್‌ಗ್ರೌಂಡ್ ಕಮ್ಯುನಿಸ್ಟ್ ಚಟುವಟಿಕೆಗಳು ತಣ್ಣಗೆ ನಡೆಯುತ್ತಲೇ ಇರುತ್ತವೆ. ಎದುರಾಳಿ ಸರ್ಕಾರ ಸ್ವಲ್ಪ ಯಾಮಾರಿದರೂ ಫಲಿತಾಂಶ ತಿರುಗು ಮುರುಗಾಗುತ್ತದೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:122

ಸಮಾಚಾರ ಸಣ್ಣದಲ್ಲ

'ಎನ್‌ಡಿಎ' ಬಿರುಕಿಗೆ ವೈಎಸ್ಸಾರ್‌ಸಿಪಿ ಯತ್ನ

ವಿಜಯವಾಡ: ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಕೆಲವು ನಾಯಕರು ಅರೆಬೆಂದ ನಿರೂಪಣೆಗಳು ಮತ್ತು ರಾಜಕೀಯ ಅಪಪ್ರಚಾರ ಮೂಲಕ ಆಂಧ್ರ ಪ್ರದೇಶದಲ್ಲಿನ ಎನ್‌ಡಿಎ ಮೈತ್ರಿಕೂಟದೊಳಗೆ ಸಂಘರ್ಷ ಸೃಷ್ಟಿಸಲು ಮತ್ತು ರಾಜ್ಯದ ಜನರನ್ನು ದಾರಿತಪ್ಪಿಸಲು ಸಂಚು ನಡೆಸಿದ್ದಾರೆ ಎಂದು ಆಂಧ್ರಪ್ರದೇಶ ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಕಿಡಿಕಾರಿದ್ದಾರೆ. ಮಂಗಳಗಿರಿಯಲ್ಲಿನ ಜನಸೇನಾ ಪಕ್ಷದ ಕಚೇರಿಯಲ್ಲಿ ಉದ್ಯಮಿಗಳ ಸಮಾವೇಶದಲ್ಲಿ ಮಾತನಾಡಿ, ವಿಶಾಲ ರಾಜ್ಯದ ಹಿತಾಸಕ್ತಿಗಾಗಿಯೇ ಎನ್‌ಡಿಎ ಮೈತ್ರಿಕೂಟ ರಚಿಸಲಾಗಿದೆ. ಹಾಗಾಗಿ ಜನಸೇನಾ ಪಕ್ಷದ ಕಾರ್ಯಕರ್ತರು ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಇಂತಹ ಸಂಚುಗಳಿಗೆ ಬಲಿಯಾಗಬಾರದು ಎಂದು ಪವನ್ ಜಾಗೃತಿ ಮೂಡಿಸಲೆತ್ನಿಸಿದರು. 2014ರಲ್ಲಿ ಏಕವ್ಯಕ್ತಿ ಚಳುವಳಿಯಿಂದ ಶುರುವಾದ ಜನಸೇನಾ ಪಕ್ಷದಲ್ಲೀಗ ಕಾರ್ಯಕರ್ತರು ಮತ್ತು ವೀರ ಮಹಿಳಾ ಸದಸ್ಯೆಯರು ಸೇರಿ 21.5 ಲಕ್ಷಕ್ಕೂ ಹೆಚ್ಚು ಸದಸ್ಯರಿದ್ದಾರೆ ಎಂದರು.

ಜ.ದ್ವಿವೇದಿ ಹೇಳಿಕೆ ಪ್ರಚೋದನಕಾರಿ

ಇಸ್ಲಾಮಾಬಾದ್: ಭಾರತ ಪೀಡಕ ಉಗ್ರರಿಗೆ ಆಶ್ರಯ ನೀಡುವುದು, ಪ್ರೋತ್ಸಾಹ ನೀಡುವುದನ್ನು ನಿಲ್ಲಿಸದೇ ಇದ್ದರೆ ಪಾಕಿಸ್ತಾನ ಸದ್ಯೋಭವಿಷ್ಯದಲ್ಲಿ ಇತಿಹಾಸ ಸೇರಬೇಕಾಗುತ್ತದೆ ಎಂದು ಭಾರತದ ಸೇನಾಪಡೆ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರು ಇತ್ತೀಚೆಗೆ ದೆಹಲಿ ಸಂವಾದ ಕಾರ್ಯಕ್ರಮದಲ್ಲಿ ಹೇಳಿರುವುದಕ್ಕೆ ಪಾಕ್ ಸೇನೆ ಕಿಡಿಕಾರಿದೆ. ಜನರಲ್ ದ್ವಿವೇದಿ ಹೇಳಿಕೆ 'ಪ್ರಚೋದನಕಾರಿ' ಯಾಗಿದೆ. ಉಭಯ ದೇಶಗಳನ್ನು ಮತ್ತೆ ಸಂಘರ್ಷಕ್ಕೆ ತಳ್ಳಲಿದೆ. ಪರಿಣಾಮ ಉಪ ಖಂಡಕ್ಕೆ ವಿನಾಶಕಾರಿಯಾಗಲಿದೆ ಎಂದು ಪಾಕ್ ಸೇನಾ ಮುಖ್ಯಸ್ಥ ಅಸೀಮ್ ಮುನೀರ್ ಭಾರತಕ್ಕೆ ಎಚ್ಚರಿಕೆ ನೀಡಿದ್ದಾರೆ.

ವಯನಾಡ್ 'ಪೋಸ್ಟರ್ ಬಾಯ್'ಗೀಗ ಸಂಕಷ್ಟ

ವಯನಾಡ್: ಕೇರಳ ಚುನಾವಣೆ ಮುಗಿದು ವಾರಗಳೇ ಕಳೆದರೂ ಕಾಂಗ್ರೆಸ್ ಪಕ್ಷದ ವರಿಷ್ಠರು ಸಿಎಂ ಅಭ್ಯರ್ಥಿ ಆಯ್ಕೆಗೆ ವಿಳಂಬ ಮಾಡುತ್ತಿದ್ದಾರೆ ಎಂಬ ಕಾರಣಕ್ಕೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ವಾದ್ರಾ, ಪ್ರತಿನಿಧಿಸುವ ವಯನಾಡು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಹೈಕಮಾಂಡನ್ನು ಟೀಕಿಸುವ ಭಿತ್ತಿಪತ್ರಗಳು ಕೆಲವು ದಿನಗಳ ಹಿಂದೆ ಕಾಣಿಸಿಕೊಂಡಿದ್ದವು. ಅದಾದ ಬಳಿಕ ಸಿಎಂ ಅಭ್ಯರ್ಥಿಯಾಗಿ ವಿ.ಡಿ.ಸತೀಶನ್ ಅವರನ್ನು ಆಯ್ಕೆ ಮಾಡಲಾಗಿದೆ. ಈಗ ಕಾಂಗ್ರೆಸ್ ವರಿಷ್ಠರ ಕಣ್ಣು ವಯನಾಡಿನಲ್ಲಿ ಪೋಸ್ಟರ್ ಹಚ್ಚಿದವರತ್ತ ತಿರುಗಿದೆ. ವಯನಾಡು ಲೋಕಸಭಾ ಕ್ಷೇತ್ರವನ್ನು 2019ರಲ್ಲಿ ಪ್ರತಿನಿಧಿಸಿದ್ದ ರಾಹುಲ್ ಗಾಂಧಿ ಮತ್ತು 2024ರಿಂದ ಪ್ರತಿನಿಧಿಸುತ್ತಿರುವ ಪ್ರಿಯಾಂಕಾ ವಾದ್ರಾರನ್ನು ಗುರಿಯಾಗಿಸಿ ಪೋಸ್ಟರ್ ಅಂಟಿಸಲಾಗಿತ್ತು. ಮುಂದಿನ ಬಾರಿ ಈ ಕ್ಷೇತ್ರದಲ್ಲಿ ನೀವಿಬ್ಬರೂ ಗೆಲ್ಲಲಾರಿರಿ ಎಂದು ಟೀಕಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಪೋಸ್ಟರ್ ಅಂಟಿಸಿದವರ ವಿರುದ್ಧ ವಯನಾಡು ಪೊಲೀಸ್ ಠಾಣೆಗೆ ಕ್ಷೇತ್ರದ ಶಾಸಕ ಟಿ.ಸಿದ್ಧಿಕ್ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ. ಸಿಸಿಟಿವಿ ದೃಶ್ಯಾವಳಿ ಆಧರಿಸಿ ಬಂಧನಕ್ಕೆ ಯತ್ನ ನಡೆದಿದೆ.

ದೆಹಲಿ ಕಟ್ಟಡಕ್ಕೆ ಬೆಂಕಿ: ಬಾಲೆ, 8ಜನರ ರಕ್ಷಣೆ

ದೆಹಲಿ: ದೆಹಲಿಯ ಶಹದಾರ ಪ್ರದೇಶದಲ್ಲಿ 4 ಅಂತಸ್ತಿನ ಕಟ್ಟಡಕ್ಕೆ ಭಾನುವಾರ ಬೆಳಗ್ಗೆ ಬೆಂಕಿ ಬಿದ್ದಿದ್ದು, ಅಪಾರ ಹಾನಿಯಾಗಿದೆ. ಕಟ್ಟಡದಲ್ಲಿದ್ದ ಮನೆಗಳಲ್ಲಿ ವಾಸವಾಗಿದ್ದ 12 ವರ್ಷದ ಬಾಲಕಿ ಸೇರಿದಂತೆ ಒಟ್ಟು 9 ಜನರಿಗೆ ಸುಟ್ಟ ಗಾಯಗಳಾಗಿವೆ. ಹೊಗೆಯನ್ನೇ ಉಸಿರಾಡಿದ್ದರಿಂದ ಪ್ರಜ್ಞಾಹೀನರಾಗಿ ಬಿದ್ದಿದ್ದರು. ಅವರೆಲ್ಲರನ್ನು ಅಗ್ನಿಶಾಮಕ ದಳದ ಸಿಬ್ಬಂದಿ ರಕ್ಷಿಸಿ ಕಷ್ಟಪಟ್ಟ ಕಟ್ಟಡದಿಂದ ಹೊರಕ್ಕೆ ಕರೆತಂದಿದ್ದಾರೆ. ಬಳಿಕ ಅಸ್ವಸ್ಥರನ್ನೆಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಮುಂದುವರಿದಿದೆ.

30ಕ್ವಿಂ. ಗಾಂಜಾವಶ, 1771 ಮಂದಿ ಸೆರೆ

ಭುವನೇಶ್ವರ: ಒಡಿಶಾ ರಾಜ್ಯ ಪೊಲೀಸ್ ಇಲಾಖೆ ಮಾದಕದ್ರವ್ಯ ಜಾಲದ ವಿರುದ್ಧ ಸಮರ ಸಾರಿದ್ದು, ವಿವಿಧ ವಿಭಾಗಗಳು ಅಧಿಕಾರಿ-ಸಿಬ್ಬಂದಿಗಳ ತಂಡ 5 ದಿನಗಳ ಕಾಲ ಬೃಹತ್ ಕಾರ್ಯಾಚರಣೆ ನಡೆಸಿ 3 ಸಾವಿರ ಕೆಜಿ ಗಾಂಜಾ ವಶಪಡಿಸಿಕೊಂಡಿದೆ. ಗಾಂಜಾ ಕೃಷಿ, ಸಂಸ್ಕರಣೆ, ಮಾರಾಟದಲ್ಲಿ ನಿರತವಾಗಿದ್ದ ಬೃಹತ್ ಮಾದಕದ್ರವ್ಯ ಜಾಲದ 1771 ಆರೋಪಿಗಳನ್ನು ಬಂಧಿಸಿ ಅವರ ಬಳಿಯಿದ್ದ 20 ಬಂದೂಕುಗಳನ್ನೂ ವಶಪಡಿಸಿಕೊಂಡಿದ್ದಾರೆ.

{ ಟಿಟಿವಿ ದಿನಕರನ್ } ಎಎಂಎಂಕೆ ಕಾರ್ಯದರ್ಶಿ

ನೂತನ ಸರಕಾರ ಭದ್ರಪಡಿಸಿಕೊಳ್ಳುವ ಸಲುವಾಗಿ 'ಟಿವಿಕೆ' ಪಕ್ಷ ಈಗಲೂ 'ಕುದುರೆ ವ್ಯಾಪಾರ'ದಲ್ಲಿ ತೊಡಗಿದೆ. ಟಿವಿಕೆ ಸೇರಿದ ಎಎಂಎಂಕೆ ಶಾಸಕರಿಗೇನಾದರೂ ಸಚಿವ ಸ್ಥಾನ ನೀಡಿದ್ದೇ ಆದರೆ ಅದನ್ನು ಶಾಸಕರ ಖರೀದಿಗೆ ಬದಲಾಗಿ ನೀಡಿದ ನಗದು ಎಂದೇ ಪರಿಗಣಿಸಲಾಗುವುದು. ಅಲದೇ ಆ ವಿಷಯವಾಗಿ ಸಿಬಿಐ ತನಿಖೆಗೂ ಪಕ್ಷ ಒತ್ತಾಯಿಸಲಿದೆ.

ಚುನಾವಣೆ ಸೋಲು ಬಳಿಕ ಸ್ಟಾಲಿನ್ ಭೇಟಿ ಬಗ್ಗೆ ರಜನಿಕಾಂತ್ ಸ್ಪಷ್ಟನೆ | ಮೇ 4 ರಂದೇ ವಿಜಯ್‌ಗೆ ಶುಭ ಸಂದೇಶ

ವಿಜಯ್ ಬಗ್ಗೆ ಅಸೂಯೆ ಇಲ್ಲ: ಸ್ಟಾಲಿನ್ 4 ದಶಕಗಳ ಸ್ನೇಹಿತ

ಚೆನ್ನೈ: ರಜನಿಗೆ ಯಾರ ಬಗೆಗೂ ಅಸೂಯೆ ಇಲ್ಲ. ನಾನು ಅಷ್ಟೊಂದು ಕೀಳುಮಟ್ಟದ ವ್ಯಕ್ತಿ ಅಲ್ಲ. ಇದು ರಾಜ್ಯದ ಜನತೆಗೆ ಸ್ಪಷ್ಟವಾಗಬೇಕು ಎಂದು ಬಹುಭಾಷಾ ನಟ-ನಿರ್ಮಾಪಕ ರಜನಿಕಾಂತ್ ಹೇಳಿದ್ದಾರೆ.

ತಮಿಳುನಾಡು ಮಾಜಿ ಮುಖ್ಯಮಂತ್ರಿ, ಡಿಎಂಕೆ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಅವರನ್ನು ಮೇ 6ರಂದು ರಜನಿಕಾಂತ್ ಭೇಟಿಯಾಗಿದ್ದ ಬಗ್ಗೆ ತಮಿಳುನಾಡು ಜನರಲ್ಲಿ, ರಾಜಕೀಯ ಆಸಕ್ತರಲ್ಲಿ ಅಚ್ಚರಿಗೆ, ನಟ-ಸಿಎಂ ವಿಜಯ್ ಅಭಿಮಾನಿಗಳಲ್ಲಿ ತಪ್ಪು ತಿಳಿವಳಿಕೆಗೆ ಕಾರಣವಾಗಿತ್ತು. ಪರಿಣಾಮವಾಗಿ ಸಾಮಾಜಿಕ ಜಾಲತಾಣದಲ್ಲಿ ಹಲವು ಊಹಾಪೋಹ, ಸುಳ್ಳು ಸುದ್ದಿಗಳ ಹರಿದಾಟಕ್ಕೂ ಅವಕಾಶವಾಗಿತ್ತು. ಈ ಊಹಾಪೋಹಗಳಿಗೆ ತೆರೆ ಎಳೆಯುವ ಸಲುವಾಗಿಯೇ ಚೆನ್ನೈನ ಪೊಯೆಸ್ ಗಾರ್ಡನ್‌ನಲ್ಲಿನ ತಮ್ಮ ನಿವಾಸದಲ್ಲಿ ರಜನಿಕಾಂತ್ ಭಾನುವಾರ ಬೆಳಗ್ಗೆ ಸುದ್ದಿಗೋಷ್ಠಿ ನಡೆಸಿದರು.

'ವಿಧಾನಸಭೆ ಚುನಾವಣೆಗೆ ಸಂಬಂಧಿಸಿ ನನ್ನ ಬಗ್ಗೆ ಜಾಲತಾಣ ಮತ್ತು ರಾಜಕೀಯ ವಲಯದಲ್ಲಿ ಹಲವು ಟೀಕೆ-ಟಿಪ್ಪಣಿಗಳು ಹರಿದಾಡುತ್ತಿವೆ. ನಾನೀಗ ಪ್ರತಿಕ್ರಿಯಿಸದೇ ಇದ್ದರೆ ಆ ಟೀಕೆಗಳೇ ಸತ್ಯ ಎಂದು ಜನ ನಂಬುವ ಅಪಾಯವಿದೆ. ಹಾಗಾಗಿ ಸಾರ್ವಜನಿಕವಾಗಿ ಮಾತನಾಡಿ ಗೊಂದಲ ಪರಿಹರಿಸಲು ನಿರ್ಧರಿಸಿದ್ದೇನೆ' ಎಂದು ಮೊದಲಿಗೆ ಹೇಳಿದರು. 'ಸ್ಟಾಲಿನ್ ಜತೆಗಿನ ಸ್ನೇಹ ರಾಜಕೀಯಕ್ಕೆ ಹೊರತಾದದ್ದು. ಅಷ್ಟೇ ಅಲ್ಲ, ಸ್ಟಾಲಿನ್ ಮತ್ತು ನನ್ನ ಸ್ನೇಹ 4 ದಶಕಗಳಷ್ಟು ಹಳೆಯದು. ಚುನಾವಣೆ ಬಳಿಕ ಸ್ಟಾಲಿನ್ ಅವರನ್ನು ಭೇಟಿಯಾಗಿರುವುದು ಪೂರ್ಣ ವೈಯಕ್ತಿಕ ಕಾರಣಕ್ಕಾಗಿ ಅಷ್ಟೆ' ಎಂದು ವಿವರಿಸಿದರು.

ಚುನಾವಣೆಯಲ್ಲಿ ಗೆಲುವು-ಸೋಲು ಸಹಜ. ಆದರೆ ಕೊಲತ್ತೂರು ಕ್ಷೇತ್ರದಲ್ಲಿ ಸತತ 3 ಬಾರಿ ಗೆದ್ದಿದ್ದ ಸ್ಟಾಲಿನ್, ಅಲ್ಲಿ ಸೋತದ್ದು ನನಗೆ ಸ್ವಲ್ಪ ಬೇಸರ ತರಿಸಿತು. ಅದಕ್ಕಾಗಿ ಒಬ್ಬ ಸ್ನೇಹಿತನಾಗಿ ಅವರನ್ನು ಭೇಟಿಯಾಗಿ ಧೈರ್ಯ ತುಂಬುವ ಪ್ರಯತ್ನ ಮಾಡಿದೆ ಅಷ್ಟೆ. ಆದರೆ, ಅದನ್ನೇ ಕೆಲವರು ವಿಜಯ್ ಸಿಎಂ ಆಗದಂತೆ ತಡೆಯಲು ಸ್ಟಾಲಿನ್ ಜತೆ ಚರ್ಚೆ ನಡೆಸಲು ರಜನಿಕಾಂತ್ ಹೋಗಿದ್ದಾರೆ ಎಂದೆಲ್ಲಾ ಮಾತನಾಡಿದರು. ರಜನಿ ಅಷ್ಟೊಂದು ಕೀಳುಮಟ್ಟದ ವ್ಯಕ್ತಿ ಅಲ್ಲ. ಇದು ರಾಜ್ಯದ ಜನತೆಗೆ ಸ್ಪಷ್ಟವಾಗಬೇಕು' ಎಂದು ರಜನಿ ಹೇಳಿದರು.

ಸಿಎಂ ವಿಜಯ್ ಅವರನ್ನು ಭಾನುವಾರ ಬೆಳಗ್ಗೆ ಭೇಟಿ ಮಾಡಿದ ನಟ ಕಮಲಹಾಸನ್ ಪುಸ್ತಕಗಳನ್ನು ಉಡುಗೊರೆಯಾಗಿ ನೀಡಿದರು.

ನಟ ವಿಜಯ್ ಚುನಾವಣೆ ಗೆಲುವಿನ ಬೆನ್ನಲ್ಲೇ ರಜನಿಕಾಂತ್ 'ಎಕ್ಸ್' ಮೆಸೇಜ್.

ಸಿಎಂ ಜೋಸೆಫ್ ವಿಜಯ್‌ಗೆ ಕಮಲಹಾಸನ್ 6 ಬೇಡಿಕೆ

ಇನ್ನೊಂದೆಡೆ, ಬಹುಭಾಷಾ ನಟ-ನಿರ್ಮಾಪಕ, ರಾಜ್ಯಸಭಾ ಸದಸ್ಯ ಕಮಲಹಾಸನ್ ತಮಿಳುನಾಡಿನ ನೂತನ ಸಿಎಂ-ಚಿತ್ರನಟ ಸಿ.ಜೋಸೆಫ್ ವಿಜಯ್ ಅವರನ್ನು ಚೆನ್ನೈನಲ್ಲಿ ಭಾನುವಾರ ಭೇಟಿ ಮಾಡಿ ಅಭಿನಂದನೆ ಸಲ್ಲಿಸಿ, ಪುಸ್ತಕಗಳನ್ನು ಉಡುಗೊರೆಯಾಗಿ ನೀಡಿದ್ದಾರೆ. ರಾಜ್ಯದ ಅಭಿವೃದ್ಧಿಗಾಗಿ ವಿಜಯ್ ಹೊಂದಿರುವ ಆಲೋಚನೆಗಳನ್ನು ಶ್ಲಾಘಿಸಿದ್ದಾರೆ. ಆ ಬಳಿಕ ಹಿರಿಯ ನಟ ಕಮಲ್, ತಮಿಳು ಚಿತ್ರರಂಗ ಹಲವು ತೊಡಕುಗಳನ್ನು ಎದುರಿಸುತ್ತಿದೆ. ಹಾಗಾಗಿ, ಚಿತ್ರರಂಗಕ್ಕೆ ರಾಜ್ಯ ಸರಕಾರದ ಪ್ರೋತ್ಸಾಹ ಮತ್ತು ಬೆಂಬಲ ಅಗತ್ಯವಿದೆ ಎಂಬುದೂ ಸೇರಿದಂತೆ 6 ಪ್ರಮುಖ ಬೇಡಿಕೆಗಳ ಪತ್ರವನ್ನು ಸಿಎಂ ವಿಜಯ್ ಅವರಿಗೆ ಸಲ್ಲಿಸಿದರು. ಆದರೆ, 6 ಬೇಡಿಕೆಗಳ ವಿವರಗಳನ್ನು ಕಮಲಹಾಸನ್ ಬಹಿರಂಗಪಡಿಸಲಿಲ್ಲ.

ಮೇ 6ರಂದು ಸ್ಟಾಲಿನ್‌ರ ಚೆನ್ನೈ ನಿವಾಸದಲ್ಲಿ ರಜನಿಕಾಂತ್ ಮಾತುಕತೆ.

ವಿಜಯ್ ಬಗ್ಗೆ ಅಸೂಯೆ, ವಿರೋಧ ಇಲ್ಲ

ನೂತನ ಸಿಎಂ ಸಿ.ಜೋಸೆಫ್ ವಿಜಯ್ ಬಗ್ಗೆ ವಿರೋಧವಿಲ್ಲ, ನಾನು ರಾಜಕೀಯದಲ್ಲಿಲ್ಲ. ಹಾಗಾಗಿ ನಾನೇಕೆ ಅವರ ಬಗೆ ಅಸೂಯೆ ಪಡಲಿ. ಯಾರ ವಿಧಿಯಲ್ಲಿ ಏನಿದೆಯೋ ಅದು ಆಗುತ್ತದೆ. ವಿಜಯ್ ರಾಜಕೀಯ ಪ್ರಗತಿಯ ಬಗ್ಗೆ ನನ್ನಲ್ಲಿ ಯಾವುದೇ ಅಸೂಯೆ ಇಲ್ಲ ಎಂದು ರಜನಿಕಾಂತ್ ಸ್ಪಷ್ಟಪಡಿಸಿದ್ದಾರೆ. ನನ್ನ ಮತ್ತು ವಿಜಯ್ ನಡುವೆ ಒಂದು ತಲೆಮಾರಿನ ಅಂತರವಿದೆ. ಇದನ್ನು ಹಿಂದೆ ಕೂಡ ಹೇಳಿದ್ದೆ. ವಿಜಯ್‌ರನ್ನು ಬಾಲ್ಯದಿಂದಲೂ ನೋಡಿದ್ದೇನೆ. ಅವರು ಸಿಎಂ ಆಗಿದ್ದಕ್ಕೆ ನಾನೇಕೆ ಅಸೂಯೆ ಪಡಬೇಕು? ಎಂದು ಪ್ರಶ್ನಿಸಿದರು. 52ನೇ ವಯಸ್ಸಿಗೇ ವಿಜಯ್ ಅವರು ಎಂಜಿಆರ್ ಅಥವಾ ಎನ್‌ಟಿಆರ್ ಸಾಧಿಸಿದ್ದಕ್ಕಿಂತ ಹೆಚ್ಚಿನದನ್ನು ಸಾಧಿಸಿದ್ದಾರೆ. ಶಕ್ತಿಶಾಲಿ ರಾಜಕೀಯ ಪಕ್ಷಗಳನ್ನೇ ಸೋಲಿಸಿದ್ದಾರೆ. ಆ ಬಗ್ಗೆ ಅಚ್ಚರಿ-ಸಂತೋಷ ಎರಡೂ ಇದೆ. ನಾನು ಅವರನ್ನು ಮೆಚ್ಚುತ್ತೇನೆ. ರಾಜ್ಯದ ಜನತೆ ವಿಜಯ್ ಬಗ್ಗೆ ದೊಡ್ಡ ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದಾರೆ. ಅವರು ಅದನ್ನೆಲ್ಲಾ ಈಡೇರಿಸುತ್ತಾರೆ ಎಂದು ನಂಬಿದ್ದೇನೆ. ಅವರಿಗೆ ನನ್ನ ಶುಭಹಾರೈಕೆಗಳು ಎಂದರು.

ವಿಜಯ್ ಸಿಎಂ ಅದ ಬಳಿಕ ಅಭಿನಂದನೆ ಸಲ್ಲಿಸಲಿಲ್ಲ ಎಂಬ ಮಾತನ್ನು ತಳ್ಳಿಹಾಕಿದ ರಜನಿಕಾಂತ್, ವಿಜಯ್ ಚುನಾವಣೆ ಗೆದ್ದ ಸುದ್ದಿ ಹೊರಬಿದ್ದ ತಕ್ಷಣವೇ ಸೋಷಿಯಲ್ ಮೀಡಿಯಾ ಮೂಲಕ ಅಭಿನಂದನೆ ಸಲ್ಲಿಸಿದ್ದೆ ಎಂದು ಸ್ಪಷ್ಟಪಡಿಸಿದರು.

ಕೇರಳ ಸಿಎಂ: ಸತೀಶನ್ ಪ್ರಮಾಣ ವಚನ ಇಂದು

ತಿರುವನಂತಪುರಂ: ಕೇರಳ ವಿಧಾನಸಭಾ ಚುನಾವಣೆ ಫಲಿತಾಂಶ ಪ್ರಕಟವಾದ 2 ವಾರಗಳ ತರುವಾಯ ಕಾಂಗ್ರೆಸ್ ನೇತೃತ್ವದ 'ಯುಡಿಎಫ್' ಒಕ್ಕೂಟ ಸರಕಾರ ರಚನೆಯಾಗುತ್ತಿದೆ. ಯುಡಿಎಫ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ವಿ.ಡಿ.ಸತೀಶನ್ ನೂತನ ಮುಖ್ಯಮಂತ್ರಿಯಾಗಿ ತಿರುವನಂತಪುರಂನ ಸೆಂಟ್ರಲ್ ಸ್ಟೇಡಿಯಂನಲ್ಲಿ ಬೃಹತ್ ಸಮಾರಂಭದಲ್ಲಿ ಸೋಮವಾರ(ಮೇ 18) ಬೆಳಗ್ಗೆ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಕಾಂಗ್ರೆಸ್ ನಾಯಕರಾದ ಸಂಸದ ರಾಹುಲ್ ಗಾಂಧಿ ಮತ್ತು ವಯನಾಡು ಸಂಸದೆ ಪ್ರಿಯಾಂಕಾ ವಾದ್ರಾ ಸಮಾರಂಭದಲ್ಲಿ ಭಾಗಿಯಾಗಲಿದ್ದಾರೆ.

ಸಿಎಂ ಜತೆಗೇ ಕಾಂಗ್ರೆಸ್‌ನ ಹಿರಿಯ ನಾಯಕ ರಮೇಶ್ ಚೆನ್ನಿತ್ತಲ(ಗೃಹ ಖಾತೆ) ಸೇರಿದಂತೆ ಕೆಲವು ಹಿರಿಯ ಸಚಿವರೂ ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆ ಇದೆ. ಸಂಪುಟ ಸದಸ್ಯರ ಆಯ್ಕೆ ಹಾಗೂ ಖಾತೆ ಹಂಚಿಕೆಗಾಗಿ ಯುಡಿಎಫ್‌ನ ಪಾಲುದಾರ ಪಕ್ಷಗಳಾದ ಕಾಂಗ್ರೆಸ್, ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್, ಕೇರಳ ಕಾಂಗ್ರೆಸ್(ಜೋಸೆಫ್ ಬಣ) ನಡುವೆ ತೀವ್ರ ರಾಜಕೀಯ ಕಸರತ್ತು ನಡೆದಿದೆ. 21 ಸಚಿವರುಗಳಿಗೆ ಅವಕಾಶವಿರುವ ಸಂಪುಟದಲ್ಲಿ ಕಾಂಗ್ರೆಸ್ ಪಾಲಿಗೆ 12 ಸಚಿವ ಖಾತೆಗಳ ಸಿಂಹಪಾಲು ಸಿಗುವ ನಿರೀಕ್ಷೆಯಿದೆ. ಸತೀಶನ್ ಸಂಪುಟ ಸೇರಲು ಮೊದಲಿಗೆ ನಿರಾಕರಿಸಿದ್ದ ರಮೇಶ್ ಚೆನ್ನಿತ್ತಲರನ್ನು ಕೆ.ಸಿ.ವೇಣುಗೋಪಾಲ್ ಮತ್ತಿತರರು ಗೃಹ ಖಾತೆಯ ಭರವಸೆಯೊಂದಿಗೆ ಸಚಿವ ಸಂಪುಟ ಸೇರಲು ಒಪ್ಪಿಸಿದ್ದಾರೆ. 'ಆರ್‌ಎಸ್‌ಪಿ'ಯ ಶಿಬು ಬೇಬಿ ಜಾನ್ ಸಚಿವರಾಗುವುದು ಖಚಿತವಾಗಿದ್ದು, ಇಂಧನ ಖಾತೆಯ ನಿರೀಕ್ಷೆಯಲ್ಲಿದ್ದಾರೆ.

ಪ.ಬಂ. ಫಾಟ್ಲಾ ಕ್ಷೇತ್ರ 21ಕ್ಕೆ ಮರು ಮತದಾನಕ್ಕೆ ಸಿದ್ಧತೆ

ಕೋಲ್ಕತ್ತ: ಪಶ್ಚಿಮ ಬಂಗಾಳದ ಫಾಲ್ಟಾ ವಿಧಾನಸಭಾ ಕ್ಷೇತ್ರ ಸಂಖ್ಯೆ-144ರಲ್ಲಿ ಮೇ 21ರಂದು ಮರು ಮತದಾನವಾಗಲಿದೆ.

ಏಪ್ರಿಲ್‌ನಲ್ಲಿನ ಮತದಾನ ವೇಳೆ ಫಾಲ್ಟಾ ಕ್ಷೇತ್ರದ ಮತಗಟ್ಟೆಗಳಲ್ಲಿ ವಿದ್ಯುನ್ಮಾನ ಮತ ಯಂತ್ರ(ಇವಿಎಂ)ದಲ್ಲಿ ಬಿಜೆಪಿ ಮತ್ತು ಇನ್ನೊಬ್ಬ ಅಭ್ಯರ್ಥಿಗೆ ಮತದಾನ ಮಾಡುವುದಕ್ಕೆ ಒತ್ತಬೇಕಾದ ಬಟನ್ ಮೇಲೆ ದಪ್ಪನಾದ ಸ್ಟಿಕರ್ ಅಂಟಿಸಿ ಮತದಾನ ಮಾಡಲಾಗದಂತೆ ಅಡ್ಡಿಪಡಿಸಲಾಗಿತ್ತು. ಬಿಜೆಪಿಯ ಮತಗಟ್ಟೆ ಏಜೆಂಟರು ಅಧಿಕಾರಿಗಳ ಗಮನ ಸೆಳೆದರೂ ಕ್ರಮ ಕೈಗೊಳ್ಳಲಿಲ್ಲ.

144ನೇ ಕ್ಷೇತ್ರದಲ್ಲಿನ ಈ ಅಕ್ರಮದ ಫೋಟೋ-ವಿಡಿಯೊಗಳೂ ಜಾಲತಾಣದಲ್ಲಿ ವೈರಲ್ ಆದ ಬಳಿಕ ಎಚ್ಚೆತ್ತ ಚುನಾವಣಾ ಆಯೋಗ, ಇಡೀ ಕ್ಷೇತ್ರದ ಮತದಾನವನ್ನೇ ರದ್ದುಪಡಿಸಿ ಮೇ 21ರಂದು ಮರು ಮತದಾನಕ್ಕೆ ಮತ್ತು ಮೇ 24ರಂದು ಮತ ಎಣಿಕೆಗೂ ಆದೇಶಿಸಿತು.

ಮರು ಮತದಾನಕ್ಕೆ ಕೆಲ ದಿನಗಳಷ್ಟೇ ಬಾಕಿ ಇದೆ. ಕ್ಷೇತ್ರದಲ್ಲಿ ಈ ಬಾರಿ ಮತ್ತಷ್ಟು ಬಿಗಿ ಕ್ರಮಗಳನ್ನು ಚುನಾವಣಾ ಆಯೋಗ ಕೈಗೊಂಡಿದೆ. ಹೆಚ್ಚುವರಿ ಭದ್ರತಾ ವ್ಯವಸ್ಥೆಗೂ ಆದೇಶಿಸಿದೆ. ಅಲ್ಲದೇ, ವಿಧಾನಸಭಾ ಕ್ಷೇತ್ರ 144ಕ್ಕೆ ಸೀಮಿತವಾಗಿ ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ ಆಕ್ಟ್-1881ರನ್ವಯ ಮೇ 21ರಂದು ಸಾರ್ವತ್ರಿಕ ರಜೆ ಘೋಷಿಸಲಾಗಿದೆ. ಸರಕಾರಿ ಮತ್ತು ಖಾಸಗಿ ಸಂಸ್ಥೆಗಳ ನೌಕರರಿಗೆ ವೇತನ ಸಹಿತ ರಜೆ ನೀಡುವಂತೆ ರಾಜ್ಯಪಾಲರಿಂದ ಆದೇಶ ಹೊರಡಿಸಲಾಗಿದೆ.

ಭಾರೀ ಕುತೂಹಲ ಕೆರಳಿಸಿರುವ ಫಾಟ್ಲಾ ವಿಧಾನಸಭಾ ಕ್ಷೇತ್ರದಲ್ಲಿ ದೇಬಾಂಶು ಪಾಂಡಾ ಬಿಜೆಪಿ ಅಭ್ಯರ್ಥಿಯಾಗಿದ್ದರೆ, ಕಾಂಗ್ರೆಸ್ ಪಕ್ಷದಿಂದ ಅಬ್ದುರ್ ರಝಾಕ್ ಮೊಲ್ಲಾ ಮತ್ತು ಟಿಎಂಸಿಯಿಂದ ಜಹಂಗೀರ್ ಖಾನ್, ಸಿಪಿಐ-ಎಂನಿಂದ ಶಂಭುನಾತ್ ಕುರ್ಮಿ ಹಾಗೂ ಇಬ್ಬರು ಪಕ್ಷೇತರರು ಕಣದಲ್ಲಿದ್ದಾರೆ.

ದೆಹಲಿ ಹೈಕೋರ್ಟ್ ಗಮನ ಸೆಳೆವ ಆದೇಶ

ಅತ್ಯಾಚಾರ: ಬಾಲಕಿ ಒಪ್ಪದಿದ್ದರೆ ವೈದ್ಯ ಪರೀಕ್ಷೆಗೆ ಒತ್ತಾಯ ಸಲ್ಲ

ದೆಹಲಿ: ಅತ್ಯಾಚಾರ ಸಂತ್ರಸ್ತ ಬಾಲಕಿಯು ವೈದ್ಯಕೀಯ ಪರೀಕ್ಷೆಗೆ ಒಪ್ಪದೇ ಇದ್ದರೆ, ಆಕೆಯನ್ನು ಒತ್ತಾಯಿಸಲು ಪೊಲೀಸರಿಗೆ ಅಧಿಕಾರ ಇಲ್ಲ ಎಂದು ದೆಹಲಿ ಹೈಕೋರ್ಟ್ ಸ್ಪಷ್ಟವಾಗಿ ಹೇಳಿದೆ.

ಬಾಂಗ್ಲಾದೇಶ ಮೂಲದ ಆರೋಪಿ ಉತ್ತರ ಪ್ರದೇಶದಲ್ಲಿ ನೆಲೆಸಿದ್ದು, 11 ವರ್ಷದ ಮಲಮಗಳ ಮೇಲೆ ಅತ್ಯಾಚಾರ ನಡೆಸಿದ್ದ ಆರೋಪ ಎದುರಿಸುತ್ತಿದ್ದು, ಸದ್ಯ ಬಂಧನದಲ್ಲಿದ್ದಾನೆ. ತನ್ನನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಲಾಗಿದೆ. ಅಲ್ಲದೇ, ಬಾಲಕಿ 11 ವರ್ಷದವಳಲ್ಲ, ಹೆಚ್ಚು ವಯಸ್ಸಿನವಳು. ಬೇಕಿದ್ದರೆ ವೈದ್ಯಕೀಯ ಪರೀಕ್ಷೆ ನಡೆಸಿ ಎಂದೂ ವಾದಿಸಿದ್ದ. ಈ ಅಂಶಗಳ ಮೇಲೆಯೇ ಆತ ಜಾಮೀನು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ. ಆದರೆ, ಬಾಲಕಿ ವೈದ್ಯಕೀಯ ಪರೀಕ್ಷೆಗೆ ನಿರಾಕರಿಸಿದಳು. ಆರೋಪಿ ಪರ ವಕೀಲರು, ಬಾಲಕಿಯ ತಾಯಿ ವೈದ್ಯ ಪರೀಕ್ಷೆಗೆ ಒಪ್ಪಿಗೆ ನೀಡಿದ್ದರೂ, ಬಾಲಕಿ ನಿರಾಕರಿಸಿದ್ದಾಳೆ. ಇದೇ ಕಾರಣದ ಮೇಲೆ ತಮ್ಮ ಕಕ್ಷಿದಾರನಿಗೆ ಜಾಮೀನು ನೀಡಬೇಕು ಎಂದು ವಾದಿಸಿದ್ದರು.

ಆದರೆ, ಈ ವಾದವನ್ನು ಪೂರ್ಣ ತಿರಸ್ಕರಿಸಿದ ನ್ಯಾಯಮೂರ್ತಿ ಗಿರೀಶ್ ಕಠ್ಪಾಲಿಯ ಅವರು, ಬಾಲಕಿಯ ದೈಹಿಕ ಸ್ವಾಯತ್ತತೆ ಮತ್ತು ಗೌಪ್ಯತೆ ಗೌರವಿಸಬೇಕಿದೆ ಎಂದು ಅಭಿಪ್ರಾಯಪಟ್ಟರು. ಅತ್ಯಾಚಾರದಿಂದ ಈಗಾಗಲೇ ನೊಂದಿರುವ ಬಾಲಕಿಯ ಗಾಯದ ಮೇಲೆ ಮತ್ತಷ್ಟು ನೋವು ಸೇರಿಸುವ ಅಧಿಕಾರ ಪೊಲೀಸರಿಗಿಲ್ಲ ಎಂದು ಹೇಳಿ, ಆರೋಪಿಯ ಜಾಮೀನು ಅರ್ಜಿ ತಿರಸ್ಕರಿಸಿದರು.

ಇರಾನ್ ಅಣ್ವಸ್ತ್ರ : ಚೀನಾಕ್ಕೂ ಇಷ್ಟವಿಲ್ಲ

ವಾಷಿಂಗ್ಟನ್/ಬೀಜಿಂಗ್: 'ಇರಾನ್ ಯಾವುದೇ ಕಾರಣಕ್ಕೂ ಪರಮಾಣು ಅಸ್ತ್ರಗಳನ್ನು ಹೊಂದಬಾರದು ಹಾಗೂ ಮಹತ್ವದ ಹೊರ್ಮುಜ್ ಜಲಸಂಧಿ ಎಲ್ಲಾ ದೇಶಗಳ ಹಡಗುಗಳಿಗೂ ಸದಾ ತೆರೆದಿರಬೇಕು' ಎಂಬ ವಿಷಯದಲ್ಲಿ ಅಮೆರಿಕ ಮತ್ತು ಚೀನಾ ದೇಶಗಳದ್ದು ಒಂದೇ ನಿಲುವಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

3 ದಿನಗಳ ಚೀನಾ ಪ್ರವಾಸದಿಂದ ವಾಷಿಂಗ್ಟನ್‌ಗೆ ಮರಳುವಾಗ 'ಏರ್ ಫೋರ್ಸ್-1' ವಿಮಾನದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಟ್ರಂಪ್, ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಜತೆಗೆ ಇರಾನ್ ಪರಮಾಣು ಯೋಜನೆ, ಹೊರ್ಮುಜ್ ಜಲಸಂಧಿ, ತೈವಾನ್ ವಿಚಾರ ಹಾಗೂ ಅಮೆರಿಕ-ಚೀನಾ ವ್ಯಾಪಾರ ಸಂಬಂಧ ವೃದ್ಧಿ ಕುರಿತು ಹಲವು ಸುತ್ತಿನ ಮಾತುಕತೆ ನಡೆಸಿದ್ದೇನೆ ಎಂದರು. ಇರಾನ್ ಅಣ್ವಸ್ತ್ರ ಹೊಂದಬಾರದು, ಹೊರ್ಮುಜ್ ಜಲಸಂಧಿ ಎಲ್ಲರಿಗೂ ತೆರೆದಿರಬೇಕು. ಜಲಸಂಧಿ ಬಂದ್ ಮಾಡಿದರೆ ನಾವೂ ವಿರೋಧಿಸುತ್ತೇವೆ ಎಂಬುದನ್ನು ಜಿನ್‌ಪಿಂಗ್ ಕೂಡಾ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ ಎಂದೂ ಟ್ರಂಪ್ ತಿಳಿಸಿದರು.

ಅಮೆರಿಕಾ ನೌಕಾಪಡೆಯು ಹೊರ್ಮುಜ್ ಜಲಸಂಧಿ ಮೇಲೆ ದೊಡ್ಡ ಹಿಡಿತ ಹೊಂದಿದೆ. ನಾವು ಜಲಸಂಧಿ ನಿಯಂತ್ರಿಸುತ್ತಿದ್ದೇವೆ. ಕಳೆದೆರಡು ವಾರಗಳಿಂದ ಇರಾನ್ ಯಾವುದೇ ವ್ಯಾಪಾರ ನಡೆಸಿಲ್ಲ. ಅಮೆರಿಕದ ನೌಕಾ ದಿಗ್ಬಂಧನದಿಂದ ಇರಾನ್‌ಗೆ ನಿತ್ಯವೂ 50 ಕೋಟಿ ಡಾಲರ್ ನಷ್ಟವಾಗುತ್ತಿದೆ ಎಂದು ಟ್ರಂಪ್ ವಿವರಿಸಿದರು.

ತೈವಾನ್ ವಿಚಾರ: ತೈವಾನ್ ಪೂರ್ಣ ಸ್ವತಂತ್ರ ರಾಷ್ಟ್ರವಾಗುವುದನ್ನು ಚೀನಾ ಒಪ್ಪುವುದಿಲ್ಲ, ಆದರೆ, ತಮ್ಮ ಅಧಿಕಾರ ಅವಧಿಯಲ್ಲಿ ಚೀನಾ ಆಕ್ರಮಣಕಾರಿ ಕ್ರಮ ಕೈಗೊಳ್ಳುವ ಸಾಧ್ಯತೆ ಕಡಿಮೆ ಎಂದು ಟ್ರಂಪ್ ಹೇಳಿದರು. ಸೆಪ್ಟೆಂಬರ್‌ನಲ್ಲಿ ವಾಷಿಂಗ್ಟನ್‌ಗೆ ಭೇಟಿ ನೀಡುವಂತೆ ಜಿನ್‌ಪಿಂಗ್ ಅವರಿಗೆ ಆಹ್ವಾನ ನೀಡಿರುವೆ ಎಂದೂ ಟ್ರಂಪ್ ಹೇಳಿದರು.

200 ಬೋಯಿಂಗ್‌ಖರೀದಿ

ಅಮೆರಿಕ-ಚೀನಾ ಜಾಗತಿಕ ರಾಜಕೀಯ ಹಾಗೂ ಆರ್ಥಿಕತೆಯಲ್ಲಿ ನಿರ್ಣಾಯಕ ಶಕ್ತಿಗಳಾಗಿವೆ. ಹಾಗಾಗಿ ಈ ಭೇಟಿಗೆ ವಿಶೇಷ ಮಹತ್ವವಿದೆ ಎಂದರು. ಚೀನಾದೊಂದಿಗೆ ನಡೆದ ಮಾತುಕತೆಗಳು ಕೇವಲ ಭದ್ರತಾ ವಿಷಯಗಳಿಗೆ ಸೀಮಿತವಾಗಿರಲಿಲ್ಲ. ವ್ಯಾಪಾರ ಕ್ಷೇತ್ರದಲ್ಲಿಯೂ ಮಹತ್ವದ ಒಪ್ಪಂದಗಳು ನಡೆದಿವೆ. ಚೀನಾ 200 ಬೋಯಿಂಗ್ ವಿಮಾನ ಖರೀದಿಗೆ ಒಪ್ಪಿದೆ. ಭವಿಷ್ಯದಲ್ಲಿ 750 ವಿಮಾನಗಳ ಖರೀದಿಗೆ ಆಸಕ್ತಿ ತೋರಿದೆ ಎಂದರು.

ನೀಟ್: ಕುಲಕರ್ಣಿ, ಮನೀಷಾ 10ದಿನ ಸಿಬಿಐ ವಶಕ್ಕೆ

ದೆಹಲಿ: ಪಿಯುಸಿ ಬಳಿಕ ವೈದ್ಯಕೀಯ ಶಿಕ್ಷಣ ಪಡೆಯಲು ಬಯಸುವವರಿಗೆ ನಡೆಸಲಾಗುವ ಪ್ರವೇಶ ಪರೀಕ್ಷೆ 'ನ್ಯಾಷನಲ್ ಎಲೆಜಿಬಿಲಿಟಿ ಕಂ ಎಂಟ್ರನ್ಸ್ ಟೆಸ್ಟ್'(ಎನ್‌ಇಇಟಿ-ನೀಟ್)ನ ಮೇ 3ರ ಪ್ರಶ್ನೆ ಪತ್ರಿಕೆಗಳನ್ನು ಸೋರಿಕೆ ಮಾಡಿದ್ದ ಆರೋಪದಡಿ ಬಂಧಿತರಾಗಿರುವ ಕೆಮಿಸ್ಟ್ರಿ (ರಾಸಾಯನಶಾಸ್ತ್ರ) ಉಪನ್ಯಾಸಕ ಪಿ.ವಿ.ಕುಲಕರ್ಣಿ ಮತ್ತು 'ಬ್ಯೂಟಿಪಾರ್ಲರ್' ಮಾಲಕಿಯಾದ ಮನಿಷಾ ಸಂಜಯ್ ವಾಘ್ಮರೆಯನ್ನು ಸಿಬಿಐ ಬಂಧಿಸಿ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದು, ಇಬ್ಬರೂ ಪ್ರಮುಖ ಆರೋಪಿಗಳನ್ನು ನ್ಯಾಯಾಧೀಶರು 10 ದಿನಗಳವರೆಗೆ ಸಿಬಿಐ ವಶಕ್ಕೆ ಒಪ್ಪಿಸಿದ್ದಾರೆ. ಪುಣೆ ಸಸ್ಯಶಾಸ್ತ್ರ ಉಪನ್ಯಾಸಕಿ ಮನೀಷಾ ಮಂಧಾರೆಯನ್ನು 14 ದಿನಗಳ ಕಾಲ ಸಿಬಿಐ ಕಸ್ಟಡಿಗೆ ಒಪ್ಪಿಸಲಾಗಿದೆ.

ಉಪನ್ಯಾಸಕಿ ಮನೀಷಾ ಮಂಧಾರೆ

ರಾಸಾಯನಶಾಸ್ತ್ರ ಉಪನ್ಯಾಸಕ ಪಿ.ವಿ.ಕುಲಕರ್ಣಿ, ಬ್ಯೂಟಿಷಿಯನ್ ಮನೀಷಾ ವಾಘ್ಮರೆ

ಪುಣೆಯ ಸಸ್ಯಶಾಸ್ತ್ರ ಉಪನ್ಯಾಸಕಿ ಮನೀಷಾ ಮಂಧಾರೆ ಮತ್ತು ರಾಸಾಯನಶಾಸ್ತ್ರ ಉಪನ್ಯಾಸಕ ಪಿ.ವಿ.ಕುಲಕರ್ಣಿ ರಾಸಾಯನಶಾಸ್ತ್ರ ಮತ್ತು ಸಸ್ಯಶಾಸ್ತ್ರ ವಿಷಯ ತಜ್ಞರು ಎಂಬ ಕಾರಣಕ್ಕೆ 'ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ'(ಎನ್‌ಟಿಎ)ಯು 'ನೀಟ್' ಪ್ರಶ್ನೆಪತ್ರಿಕೆ ತಯಾರಿಕಾ ಕಾರ್ಯಕ್ಕೆ ನೇಮಿಸಿಕೊಂಡಿತ್ತು. ಇವರಿಬ್ಬರಿಗೂ 2026ರ 'ನೀಟ್'ನ ಪ್ರಶ್ನೆಪತ್ರಿಕೆಗಳು ಸುಲಭವಾಗಿ ಲಭ್ಯವಿದ್ದವು. ಆ ಅವಕಾಶವನ್ನೇ ಬಳಸಿಕೊಂಡಿ ಈ ಇಬ್ಬರೂ ಧನ ದಾಹಿಗಳು ಹಣದ ಆಸೆಗಾಗಿ 2026ರ 'ನೀಟ್' ಪ್ರಶ್ನೆ ಪತ್ರಿಕೆಗಳನ್ನು ವಿದ್ಯಾರ್ಥಿಗಳಿಗೆ, ಪೋಷಕರಿಗೆ ಮಾರಿಕೊಂಡಿದ್ದರು.

ಬ್ಯೂಟಿಷಿಯನ್ ಆಗಿರುವ ಮನೀಷಾ ವಾಘ್ಮರೆಯನ್ನು ಉಪನ್ಯಾಸಕ ಪಿ.ವಿ.ಕುಲಕರ್ಣಿಗೆ ಪರಿಚಯಿಸಿದ್ದೇ ಪುಣೆಯ ಉಪನ್ಯಾಸಕಿ ಮನೀಷಾ ಮಂಧಾರೆ. ಹಾಗಾಗಿಯೇ ಬ್ಯೂಟಿಷಿಯನ್ ಮನೀಷಾ ವಾಘ್ಮರೆಗೂ 'ನೀಟ್' ಪ್ರಶ್ನೆಪತ್ರಿಕೆ ಮತ್ತು ಕೀ ಉತ್ತರಗಳ ಪ್ರತಿಗಳನ್ನು ಕುಲಕರ್ಣಿ ಮಾರಾಟ ಮಾಡಿದ್ದಾನೆ. ಮೇ 3ರ ಬಳಿಕ ಇಬ್ಬರೂ ಪ್ರಶ್ನೆಪತ್ರಿಕೆ, ಕೀ ಉತ್ತರಗಳ ಪ್ರತಿಗಳನ್ನು ಸುಟ್ಟು ಹಾಕಿದ್ದಾರೆ. 'ತನಗೆ 2026ರ ನೀಟ್ ಪ್ರಶ್ನೆಪತ್ರಿಕೆಗಳನ್ನು ಮತ್ತು ಅದರ 'ಕೀ ಉತ್ತರ'ಗಳ ಪ್ರತಿಯನ್ನು 'ಎನ್‌ಟಿಎ'ಯ ಒಬ್ಬ ಅಧಿಕಾರಿಯೇ ಏಪ್ರಿಲ್ 27ರಂದು ನೀಡಿದ್ದರು. ಅವನ್ನು, ವಿದ್ಯಾರ್ಥಿಗಳಿಗೆ, ಪೋಷಕರಿಗೆ 10 ಲಕ್ಷ ರು.ಗೂ ಅಧಿಕ ಬೆಲೆಗೆ ಮಾರಾಟ ಮಾಡಿದ್ದೆ' ಎಂದು ಮನಿಷಾ ವಾಘ್ಮರೆ ಹೇಳಿರುವುದಾಗಿ ಸಿಬಿಐ ತನಿಖಾಧಿಕಾರಿಗಳು ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

ಮನೀಷಾ ವಾಘ್ಮರೆ ನೀಟ್ ಪ್ರಶ್ನೆಪತ್ರಿಕೆ ಮತ್ತು ಕೀ ಉತ್ತರಗಳ ಪ್ರತಿಗಳನ್ನು ಧನಂಜಯ ಲೋಕಂಡೆಗೆ ಲಕ್ಷಾಂತರ ರು.ಗಳಿಗೆ ಮಾರಾಟ ಮಾಡಿದ್ದಾಳೆ. ಲೋಖಂಡೆಯನ್ನೂ ಮಹಾರಾಷ್ಟ್ರದ ಅಹಿಲ್ಯಾನಗರದಲ್ಲಿ ಮೇ 13ರಂದು ಬಂಧಿಸಲಾಗಿದೆ.

ಸಚಿವ ಬಂಡಿ ಪುತ್ರ, ಪೊಲೀಸರಿಗೆ ಶರಣು

ಹೈದರಾಬಾದ್: ಕೇಂದ್ರ ಸಚಿವ ಬಂಡಿ ಸಂಜಯ್ ಕುಮಾರ್ ಅವರ ಪುತ್ರ, ಪೋಕ್ಸೋ ಪ್ರಕರಣದ ಆರೋಪಿ ಬಂಡಿ ಭಗೀರಥ ಕಡೆಗೂ ತೆಲಂಗಾಣ ಪೊಲೀಸರ ಮುಂದೆ ಶರಣಾಗಿದ್ದಾನೆ. ನಿರೀಕ್ಷಣಾ ಜಾಮೀನಿಗೆ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದ್ದರಿಂದ ಬಂಧನ ಭೀತಿಯಲ್ಲಿದ್ದ ಭಗೀರಥ, ವಿದೇಶಕ್ಕೆ ಪರಾರಿಯಾಗಬಹುದು ಎಂಬ ಶಂಕೆ ಇತ್ತು. ಹಾಗಾಗಿ, ಸೈಬರಾಬಾದ್ ಪೊಲೀಸರು ಲುಕ್ ಔಟ್ ನೋಟಿಸ್ ಹೊರಡಿಸಿದ್ದರು. ಬಳಿಕ ತಂದೆ ಬಂಡಿ ಸಂಜಯ್ ಕುಮಾರ್ ಅವರೇ ಮಗನಿಗೆ ಪೊಲೀಸರ ಮುಂದೆ ಹಾಜರಾಗಿ ತನಿಖೆಗೆ ಸಹಕರಿಸುವಂತೆ ಸೂಚನೆ ನೀಡಿದರು. ಬಳಿಕ ಭಗೀರಥ ಶರಣಾದ ಎನ್ನಲಾಗಿದೆ. ಇದೇ ವೇಳೆ, ಸಚಿವ ಬಂಡಿ 'ಕಾನೂನಿನೆದುರು ಎಲ್ಲರೂ ಸಮಾನರು. ಎಲ್ಲರೂ ಕಾನೂನು ಪಾಲಿಸಬೇಕು' ಎಂದು ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ. '17 ವರ್ಷದ ತಮ್ಮ ಮಗಳ ಮೇಲೆ ಭಗೀರಥ ಲೈಂಗಿಕ ದೌರ್ಜನ್ಯ ನಡೆಸಿದ್ದಾನೆ' ಎಂದು ಬಾಲಕಿಯ ತಾಯಿ ಮೇ 8ರಂದು ಸಲ್ಲಿಸಿದ ದೂರಿನ ಮೇರೆಗೆ 'ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ(ಪೋಕ್ಸೊ) ಕಾಯಿದೆ'ಯಡಿ ಹಾಗೂ ದಂಡ ಸಂಹಿತೆಯ ವಿವಿಧ ಕಲಂಗಳಡಿ ಅತ್ಯಾಚಾರ ಪ್ರಕರಣ ದಾಖಲಿಸಲಾಗಿದೆ.

ಮಧ್ಯಪ್ರದೇಶದ ರತ್ಲಂ ಜಿಲ್ಲೆಯಲ್ಲಿ ಸಂಚರಿಸುತ್ತಿದ್ದ ತಿರುವನಂತಪುರಂ-ಹಜರತ್ ನಿಜಾಮುದ್ದೀನ್ ರಾಜಧಾನಿ ಎಕ್ಸ್‌ಪ್ರೆಸ್‌ನ ಏರ್ ಕಂಡೀಷನ್ಡ್ ಬೋಗಿಯೊಂದರಲ್ಲಿ ಭಾನುವಾರ ಬೆಳಗ್ಗೆ 5.15ರಲ್ಲಿ ಹಠಾತ್ ಬೆಂಕಿ ಕಾಣಿಸಿಕೊಂಡಿದೆ. ತಕ್ಷಣವೇ ರೈಲು ನಿಲುಗಡೆಗೆ ತಂದು ಬೋಗಿಯಲ್ಲಿದ್ದ 68 ಪ್ರಯಾಣಿಕರನ್ನು ತಕ್ಷಣವೇ ಪಕ್ಕದ ಬೋಗಿಗೆ ಸ್ಥಳಾಂತರಿಸಿ ರಕ್ಷಿಸಲಾಗಿದೆ. ಬೆಂಕಿ ಹೊತ್ತಿ ಉರಿಯುತ್ತಿದ್ದ ಬೋಗಿಯನ್ನು ಪ್ರತ್ಯೇಕಿಸಲಾಗಿದೆ. ಯಾವುದೇ ಜೀವಹಾನಿಯಾಗಿಲ್ಲ ಎಂದು ರೈಲ್ವೆ ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಇರಾನ್ ಸಚಿವ ಅರಾಘ್ಚಿ ಭರವಸೆ

ಹೊರ್ಮುಜ್ ಜಲಸಂಧಿ: ಭಾರತಕ್ಕೆ ತೊಂದರೆ ಇಲ್ಲ

ದೆಹಲಿ: ಅಮೆರಿಕ-ಇರಾನ್ ಯುದ್ಧದಿಂದಾಗಿ ಹೊರ್ಮುಜ್ ಜಲಸಂಧಿಯಲ್ಲಿ ಬೇರೆ ದೇಶಗಳ ಹಡಗುಗಳ ಸಂಚಾರಕ್ಕೆ ಅಡೆತಡೆ ಇದ್ದರೂ ಭಾರತದ ಹಡಗುಗಳಿಗೆ ಯಾವುದೇ ತೊಂದರೆ ಆಗುವುದಿಲ್ಲ ಎಂದು ಇರಾನ್ ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಾಘ್ಚಿ ಭಾರತಕ್ಕೆ ಭರವಸೆ ನೀಡಿದ್ದಾರೆ.



ದೆಹಲಿಯಲ್ಲಿ 'ಬ್ರಿಕ್ಸ್' ಒಕ್ಕೂಟದ ಸದಸ್ಯ ದೇಶಗಳ ವಿದೇಶಾಂಗ ಸಚಿವರ ಶೃಂಗಸಭೆಯಲ್ಲಿ ಭಾಗಿಯಾದ ಬಳಿಕ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರ ಜತೆ ದ್ವಿಪಕ್ಷೀಯ ಸಭೆ ನಡೆಸಿದ ಸಚಿವ ಅರಾಘ್ಚಿ, ಸ್ನೇಹಪರ ರಾಷ್ಟ್ರಗಳು ವ್ಯಾಪಾರ ಮತ್ತು ಸಾಗಣೆಗೆ ಅಗತ್ಯ ಭದ್ರತೆ ಒದಗಿಸುವ ವಿಚಾರದಲ್ಲಿ ಇರಾನ್ ಮೇಲೆ ನಂಬಿಕೆ ಇಡಬಹುದು ಎಂದು ಹೇಳಿದರು. ಅತ್ಯಂತ ಮಹತ್ವದ ಹೊರ್ಮುಜ್ ಜಲಸಂಧಿಯಲ್ಲಿ ಸ್ನೇಹಪರ ರಾಷ್ಟ್ರಗಳ ನೌಕೆಗಳಿಗೆ ರಕ್ಷಕನಾಗಿ ಇರಾನ್ ತನ್ನ ಕರ್ತವ್ಯ ಮುಂದುವರಿಸುತ್ತದೆ ಎಂದು ಭರವಸೆ ನೀಡಿದರು. ಇದೇ ವೇಳೆ ಅಮೆರಿಕ ವಿರುದ್ಧ ವಾಗ್ದಾಳಿ ನಡೆಸಿದ ಅರಾಘ್ಚಿ, 'ದಬ್ಬಾಳಿಕೆಗೆಲ್ಲಾ ಇರಾನ್ ಮಣಿಯಲ್ಲ. ಅಮೆರಿಕದ ಒತ್ತಡಕ್ಕೆ ಇರಾನ್ ಪ್ರತಿರೋಧ ತೀವ್ರವಾಗಿರಲಿದೆ. ಇದೇ ಬಗೆಯ ಸವಾಲು ಎದುರಿಸುತ್ತಿರುವ ಬ್ರಿಕ್ಸ್ ಒಕ್ಕೂಟದ ಸದಸ್ಯ ರಾಷ್ಟ್ರಗಳು ಒಗ್ಗಟ್ಟಿನಿಂದಿರಬೇಕು ಎಂದು ಹೇಳಿದ್ದಾರೆ. ಇದಕ್ಕೂ ಮುನ್ನ ಬ್ರಿಕ್ಸ್ ಸಭೆಯ ಭಾಷಣದಲ್ಲಿ ಅರಾಘ್ಚಿ, 'ಪಾಶ್ಚಾತ್ಯ ಪ್ರಾಬಲ್ಯ ಮುರಿಯುವ ಅಗತ್ಯವಿದೆ. ಅಂತಾರಾಷ್ಟ್ರೀಯ ಸಂಸ್ಥೆಗಳು ರಾಜಕೀಯ ಹಸ್ತಕ್ಷೇಪದಿಂದ ಮುಕ್ತವಾಗಿರಬೇಕು' ಎಂದು ಕರೆ ನೀಡಿದ್ದರು.

ಪಂಜಾಬ್ ಕೊಳವೆ ಬಾವಿಗೆ ಬಿದ್ದಿದ್ದ 4ರ ಬಾಲಕನ ರಕ್ಷಣೆ

ಚಂಡೀಗಢ: ಪಂಜಾಬ್ ರಾಜ್ಯದ ಹೋಶಿಯಾರ್‌ಪುರ-ದಸುಹಾ ರಸ್ತೆಯಲ್ಲಿರುವ ಚಕ್ ಸಮಾನಾ ಗ್ರಾಮದಲ್ಲಿ ತೆರೆದ ಕೊಳವೆ ಬಾವಿಯೊಂದಕ್ಕೆ 4 ವರ್ಷದ ಬಾಲಕ ಶನಿವಾರ ಬಿದ್ದಿದ್ದು, 30 ಅಡಿ ಆಳದವರೆಗೂ ಜಾರಿಕೊಂಡು ಹೋಗಿದ್ದ. ಬಳಿಕ 9 ಗಂಟೆಗಳ ಕಾಲ ತ್ವರಿತಗತಿ ಕಾರ್ಯಾಚರಣೆ ನಡೆಸಿ ಬಾಲಕನನ್ನು ಜೀವಂತ ಹೊರತಂದು ರಕ್ಷಿಸಲಾಗಿದೆ. ಚಕ್‌ಸಮಾನಾ ಗ್ರಾಮದ ನಿವಾಸಿ ಹರಿಂದರ್ ಮತ್ತು ಆಶಾ ದಂಪತಿಯ ಪುತ್ರ 4 ವರ್ಷದ ಬಾಲಕ ಶನಿವಾರ ಮಧ್ಯಾಹ್ನ ಬಯಲಿನಲ್ಲಿ ಆಟವಾಡುತ್ತಿದ್ದವನು ಮಧ್ಯಾಹ್ನ 12.40ರ ವೇಳೆ ಸಮೀಪದಲ್ಲಿದ್ದ ಕೊಳವೆ ಬಾವಿಯೊಳಕ್ಕೆ ಜಾರಿಕೊಂಡು ಬಿದ್ದಿದ್ದಾನೆ.

ಸುದ್ದಿ ತಿಳಿದ ಕೂಡಲೇ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಪಂಜಾಬ್ ಪೊಲೀಸ್ ಮತ್ತು ಜಿಲ್ಲಾಡಳಿತದ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಒಳಗೊಂಡ 40ಕ್ಕೂ ಹೆಚ್ಚು ಮಂದಿಯ ತಂಡ ಸ್ಥಳಕ್ಕೆ ಧಾವಿಸಿ ಬಂದಿತು. ಅಗತ್ಯ ಯಂತ್ರೋಪಕರಣಗಳನ್ನು ಸ್ಥಳಕ್ಕೆ ತರಿಸಲಾಯಿತು. ರಕ್ಷಣಾ ಕಾರ್ಯಾಚರಣೆಗೆ ಸ್ಥಳೀಯ ನಿವಾಸಿಗಳೂ ತಮ್ಮಿಂದಾದ ಮಟ್ಟಿಗೆ ನೆರವಾದರು. 9 ಗಂಟೆಗಳ ಕಾಲ ನಡೆದ ಜಂಟಿ ಕಾರ್ಯಾಚರಣೆಗೆ ಕಡೆಗೂ ಯಶಸ್ಸು ಸಿಕ್ಕಿತು. ಉಪ ಆಯುಕ್ತೆ ಆಶಿಕಾ ಜೈನ್ ಮತ್ತು ಎಸ್‌ಎಸ್‌ಪಿ ಸಂದೀಪ್ ಕುಮಾರ್ ಮಲಿಕ್ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದರು. ಮೊದಲು ಕ್ಯಾಮೆರಾ ಮತ್ತು ಆಮ್ಲಜನಕ ಪೈಪನ್ನು ಕೊಳವೆ ಬಾವಿಗೆ ಇಳಿಸಲಾಯಿತು. ಕೊಳವೆ ಬಾವಿಯ ಪಕ್ಕದಲ್ಲೇ ಸಮಾನಾಂತರವಾಗಿ 30 ಅಡಿ ಆಳದವರೆಗೂ ಗುಂಡಿ ತೋಡಿದ ರಕ್ಷಣಾ ತಂಡ, ಪುಟ್ಟದಾದ ಸುರಂಗ ಕೊರೆದು ಕೊಳವೆ ಬಾವಿಯೊಳಗೆ ಪ್ರವೇಶಿಸಿ ಮಗುವನ್ನು ಸುರಕ್ಷಿತವಾಗಿ ಹೊರತಂದಿತು.

ಸಮಾಚಾರ ಸಣ್ಣದಲ್ಲ

ಇಂದಿನಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ 2 ಆರಂಭ

ಬೆಂಗಳೂರು: ರಾಜ್ಯದಲ್ಲಿ 2026 ನೇ ಸಾಲಿನ ಎಸ್ ಎಸ್ಎಲ್‌ಸಿ ಪರೀಕ್ಷೆ 2 ಸೋಮವಾರದಿಂದ ಆರಂಭ ವಾಗುತ್ತಿದ್ದು, ಈ ಬಾರಿ ಒಟ್ಟು 1,15,112 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಇದರಲ್ಲಿ 76,673 ಹುಡುಗರು ಮತ್ತು 38,439 ಹುಡುಗಿಯರು ಸೇರಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಶೇ.14.06 ವಿದ್ಯಾರ್ಥಿಗಳು ಹೆಚ್ಚುವರಿ ಉತ್ತೀರ್ಣದಿಂದ ಶೇ.94.10 ರಷ್ಟು ಫಲಿತಾಂಶ ದಾಖಲಾಗಿತ್ತು. ದ್ವಿತೀಯ ಪರೀಕ್ಷೆ 2 ಪರೀಕ್ಷೆ ಯಲ್ಲಿ ಸರಕಾರಿ ಶಾಲೆಗಳಿಂದ 55403, ಅನುದಾನಿತ ಶಾಲೆಗಳಿಂದ 31,436, ಅನುದಾನ ರಹಿತ ಶಾಲೆಗಳಿಂದ 28,273 ವಿದ್ಯಾರ್ಥಿಗಳು ನೋಂದಣೆ ಮಾಡಿಕೊಂಡಿದ್ದಾರೆ. ಅದರಲ್ಲಿ ಅಂಕ ಸುಧಾರಣೆಗೆ 11,881 ವಿದ್ಯಾರ್ಥಿಗಳು, ಪರೀಕ್ಷೆ 1 ಹಾಜರಾಗಲು ಸಾಧ್ಯವಾಗದ 7,658 ಖಾಸಗಿ ವಿದ್ಯಾರ್ಥಿಗಳು ಇದ್ದಾರೆ ಎಂದು ಅಂಕಿ ಅಂಶಗಳಿಂದ ತಿಳಿದು ಬಂದಿದೆ. ಮೇ.18 ರಿಂದ ಆರಂಭವಾಗುವ ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 ಮೇ.25 ರಂದು ಪೂರ್ಣಗೊಳ್ಳಲಿದೆ ಎಂದು ಕೆಎಸ್ಇಎಬಿ ತಿಳಿಸಿದೆ.

ರಾಡ್‌ನಿಂದ ಹೊಡೆದು ಸೆಕ್ಯೂರಿಟಿಯ ಕೊಲೆ!

ಕಲಬುರಗಿ: ಸೆಕ್ಯೂರಿಟಿ ಗಾರ್ಡ್ ಒಬ್ಬರನ್ನು ಕಬ್ಬಿಣದ ರಾಡ್‌ನಿಂದ ತಲೆಗೆ ಹೊಡೆದು ಬರ್ಬರವಾಗಿ ಕೊಲೆ ಮಾಡಿರುವ ಘಟನೆ ಭಾನುವಾರ ಕಲಬುರಗಿ ನಗರದ ರಾಮ ಮಂದಿರದ ಬಳಿ ನಡೆದಿದೆ. ನಗರದ ರಾಣೇಶಪೀರ್ ದರ್ಗಾ ಬಳಿ ನಿವಾಸಿ ರವಿಚಂದ್ರ ಖೇಡ್ (45) ಎಂಬವರರ ಕೊಲೆ ಮಾಡಲಾಗಿದೆ. ಇಲ್ಲಿನ ರಾಮ ಮಂದಿರದ ಸಮೀಪವಿರುವ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್‌ನಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ನಿರ್ವಹಿಸುತ್ತಿದ್ದರು ಎನ್ನಲಾಗಿದೆ. ದುಷ್ಕರ್ಮಿಗಳು ರವಿಚಂದ್ರ ಅವರ ತಲೆಗೆ ಕಬ್ಬಿಣದ ರಾಡ್‌ನಿಂದ ಬಲವಾಗಿ ಜಜ್ಜಿ ಹತ್ಯೆ ಮಾಡಿ ಪರಾರಿಯಾಗಿದ್ದಾರೆ. ಹತ್ಯೆಗೆ ನಿಖರ ತಿಳಿದಿ=ಲ್ಲ. ವೈಯಕ್ತಿಕ ದ್ವೇಷ ಹಿನ್ನೆಲೆ ಈ ಕೃತ್ಯ ನಡೆದಿದೆಯೇ ಅಥವಾ ಬೇರೆಏನಾದರೂ ಕಾರಣವಿದೆಯೇ ಎಂದು ತನಿಖೆ ಆರಂಭವಾಗಿದೆ. ಘಟನಾ ಸ್ಥಳಕ್ಕೆ ಸ್ಟೇಷನ್ ಬಜಾರ್ ಠಾಣೆ ಪೊಲೀಸರು ಭೇಟಿ ನೀಡಿದ್ದಾರೆ.

ಕೃಷಿ ಹೊಂಡಕ್ಕೆ ಬಿದ್ದು ಮೂವರ ದುರ್ಮರಣ

ಕೋಲಾರ: ಕೃಷಿ ಹೊಂಡದಲ್ಲಿ ಈಜಾಡಲು ಹೋದ ತಂದೆ ಹಾಗೂ ಇಬ್ಬರು ಮಕ್ಕಳು ನೀರಿನಲ್ಲಿ ಮುಳುಗಿ ಧಾರುಣವಾಗಿ ಸಾವಿಗೀಡಾದ ಘಟನೆ ಕೋಲಾರ ಜಿಲ್ಲೆ ಮಾಲೂರು ತಾಲೂಕಿನ ನಕ್ಕನಹಳ್ಳಿಯಲ್ಲಿ ನಡೆದಿದೆ. ತಂದೆ ಶ್ರೀನಿವಾಸ್ (45), ಮಕ್ಕಳಾದ ಚೇತನ್ (15), ರಾಜೇಶ್ (9) ಮೃತರು. ಮಕ್ಕಳು ರಕ್ಷಣೆಗೆ ಹೋದ ತಂದೆಯೂ ನೀರಲ್ಲಿ ಮುಳುಗಿ ಸಾವನ್ನಪ್ಪಿರಬಹುದು ಎಂದು ಶಂಕಿಸಲಾಗಿದೆ. ಬೈರಪ್ಪಗೆ ಸೇರಿದ ಕೃಷಿ ಹೊಂಡ ಇದಾಗಿದ್ದು, ಮಾಸ್ತಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸಿಡಿಲು ಬಡಿದು ಮಹಿಳೆ ಸಾವು

ಧಾರವಾಡ: ಮೇಂತೆ ಕೀಳಲು ಹೋದ ಸಂದರ್ಭದಲ್ಲಿ ಸಿಡಿಲು ಬಡಿದು ಮಹಿಳೆ ಸಾವನ್ನಪ್ಪಿರುವ ಘಟನೆ ಭಾನುವಾರ ನಡೆದಿದೆ. ತಾಲೂಕಿನ ಕವಲಗೇರಿ ಗ್ರಾಮದ ಜಯಶ್ರೀ ಹನಮಂತಪ್ಪ ಶಿರಸಂಗಿ(29) ಮೃತಪಟ್ಟ ಮಹಿಳೆ. ಹನಮಂತಪ್ಪ ಶಿರಸಂಗಿ (31) ಅವರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ವಿಶ್ವವಾಣಿ ಕ್ಲಬ್ ಹೌಸ್
18.05.2026
ಸಂಜೆ: 06.55 ರಿಂದ 08.05 ರವರೆಗೆ

ಸೋಮವಾರದ ಅತಿಥಿ
ಶ್ರೀ. ರಮೇಶ ಶೆಟ್ಟಿಗಾರ್
ವಿಷಯ
'ಪುನರ್ನವ' ಕೃತಿ ವಿಮರ್ಶೆ
vishwavani.news

ದಿನ ವಿಶೇಷ

18 ಮೇ 2026 ಸೋಮವಾರ

» ಸೂರ್ಯೋದಯ	: 5-46
» ಸೂರ್ಯಾಸ್ತ	: 6-59
» ತಿಥಿ	: ದ್ವಿತೀಯ
» ನಕ್ಷತ್ರ	: ರೋಹಿಣಿ
» ಸಂವತ್ಸರ	: ಪರಾಭವ
» ಅಯನ	: ಉತ್ತರಾಯನ
» ಋತು	: ಗ್ರೀಷ್ಮ
» ಮಾಸ	: ಅಧಿಕ ಜ್ಯೇಷ್ಠ
» ಪಕ್ಷ	: ಶುಕ್ಲಪಕ್ಷ

ಗ್ಯಾರಂಟಿ ಸರಿದೂಗಿಲು ನಿಮ್ಮ ಸರಕಾರ ಬೆಲೆ ಏರಿಕೆ ಮಾಡಲಿಲ್ಲವೇ? ರಾಜ್ಯ ಸರಕಾರಕ್ಕೆ ಕೇಂದ್ರ ಸಚಿವ ಎಚ್‌ಡಿಕೆ ಪ್ರಶ್ನೆ

ತೈಲಬೆಲೆ ಏರಿಕೆ: ಕೇಂದ್ರವನ್ನು ಟೀಕಿಸುವ ನೈತಿಕತೆ ಇಲ್ಲ

ಮೈಸೂರು: ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಸಂಬಂಧ ಕೇಂದ್ರ ಸರಕಾರವನ್ನು ಟೀಕಿಸುವ ನೈತಿಕತೆ ರಾಜ್ಯ ಸರಕಾರಕ್ಕೆ ಇಲ್ಲ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿರುಗೇಟು ನೀಡಿದರು.

ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಜನರೊಂದಿಗೆ ಜನತಾದಳ ಮತ್ತು ಸದಸ್ಯತ್ವ ಅಭಿಯಾನ ಕಾರ್ಯಕ್ರಮ ಉದ್ಘಾಟಿಸಿದ ಮಾತನಾಡಿದ ಅವರು, ಕೇಂದ್ರದ ವಿರುದ್ಧ ಅಪಪ್ರಚಾರ ನಡೆಸುತ್ತಿರುವ ಕಾಂಗ್ರೆಸ್ ನಾಯಕರು, ಕಳೆದ ಮೂರು ವರ್ಷಗಳಲ್ಲಿ ಪಂಚ ಗ್ಯಾರಂಟಿಗಳಿಗೆ ಹಣ ಹೊಂದಿಸಲು ನಿಮ್ಮ ಸರಕಾರವು ಎಷ್ಟು ಸಲ ಬೆಲೆ ಏರಿಕೆ ಮಾಡಿದೆ? ಯಾವ ಯಾವ ಬಾಬತ್ತುಗಳು ಮೇಲೆ ಎಷ್ಟೆಷ್ಟು ತೆರಿಗೆ ವಿಧಿಸಿದೆ ಎಂಬ ಬಗ್ಗೆ ಜನರಿಗೆ ಹೇಳಲಿ ಎಂದು ಪ್ರಶ್ನಿಸಿದರು.

ಕಳೆದ 3 ವರ್ಷಗಳಲ್ಲಿ ಮದ್ಯ, ಬಸ್ಸು, ವಿದ್ಯುತ್ ಸೇರಿದಂತೆ ಅನೇಕ ಬಾಬತ್ತುಗಳ ಮೇಲೆ ನಿರಂತರವಾಗಿ ತೆರಿಗೆ ವಿಧಿಸಿ, ಬೆಲೆ ಏರಿಕೆ ಮಾಡಲಾಗಿದೆ. ಒಂದೆಡೆ ಗ್ಯಾರಂಟಿಗಳನ್ನು ಕೊಡುತ್ತೇವೆ ಎಂದು ಜನರ ಮೂಗಿಗೆ ತುಪ್ಪ ಸವರುತ್ತಿರುವ ಸರಕಾರವು ಮತ್ತೊಮ್ಮೆ ಅದಕ್ಕೂ ಮೀರಿ ಬೆಲೆ ಏರಿಕೆ ಮಾಡುತ್ತಿದೆ. ಎಷ್ಟು ಬಾರಿ ತೆರಿಗೆ ಹೇರಿಕೆ, ಬೆಲೆ ಏರಿಕೆ ಮಾಡಿದ್ದೇವೆ ಎಂಬ ಬಗ್ಗೆ ಕಾಂಗ್ರೆಸ್ ಸರಕಾರ ಪಟ್ಟಿ ನೀಡಲಿ ಎಂದು ಗುಡುಗಿದರು.

ಮುಂದುವರಿದ ದೇಶ ಎಂದು ಗುರುತಿಸಿಕೊಂಡಿರುವ ಸಿಂಗಾಪುರದಲ್ಲಿ ಪೆಟ್ರೋಲ್ ಬೆಲೆ 245 ರು.ಇದೆ ಎಂಬುದನ್ನು ಕಾಂಗ್ರೆಸ್ ನಾಯಕ ಕಣ್ತೆರೆದು ನೋಡಬೇಕು. ಯುದ್ಧದಿಂದ ಜಗತ್ತಿನ ಎಲ್ಲಾ ದೇಶಗಳು ತೈಲ ಬಿಕ್ಕಟ್ಟು ಎದುರಿಸುತ್ತಿವೆ. ಯುದ್ಧ ನಡೆಯುತ್ತದೆ ಎಂದು ಯಾರಿಗಾದರೂ ಮೊದಲೇ ಕನಸು ಬಿದ್ದಿರುತ್ತದಾ? ಇದರ ಕನಸು ಬಿದ್ದಿದ್ದರೆ ಕಾಂಗ್ರೆಸ್ ನಾಯಕರು ಹೇಳಲಿ. ಒಂದು ವೇಳೆ ಇಂತಹ ಕಷ್ಟದ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿ ಇದ್ದಿದ್ದರೆ ಏನು ಮಾಡುತ್ತಿತ್ತು ಎಂದು ಕಿಡಿಕಾರಿದರು.

ಅವಿನಾಭಾವ ಸಂಬಂಧ: ಚಾಮುಂಡೇಶ್ವರಿ ಕ್ಷೇತ್ರದ ಉಪ ಚುನಾವಣೆ ಸನ್ನಿವೇಶವನ್ನು ಮೆಲುಕು ಹಾಕಿದ ಅವರು, ಅಂದು ನಮ್ಮ ನಾಯಕರು ಎಚ್ಚರಿಕೆ ವಹಿಸಿದ್ದರೆ ಈ ರಾಜ್ಯಕ್ಕೆ ಇಂತಹ ಸ್ಥಿತಿ ಬರುತ್ತಿರಲಿಲ್ಲ. ನಮ್ಮದೇ ಆದ ಕೆಲ ತಪ್ಪಿನಿಂದಲೇ ಅಂದು ಜೆಡಿಎಸ್ ಸೋಲನುಭವಿಸಿತು. ಚಾಮುಂಡೇಶ್ವರಿ ಕ್ಷೇತ್ರಕ್ಕೂ ನನಗೂ ಅವಿನಾಭಾವ ಸಂಬಂಧವಿದೆ ಎಂದರು.

75 ಕ್ಷೇತ್ರ ಗೆಲುವಿನ ಗುರಿ: ಮುಂಬರುವ ವಿಧಾನಸಭೆ ಚುನಾವಣೆಗೆ ಸಜ್ಜಾಗುವಂತೆ ಕರೆಕೊಟ್ಟ ಕುಮಾರಸ್ವಾಮಿ, ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವು 75 ಕ್ಷೇತ್ರಗಳಲ್ಲಿ ಜಯ ಗಳಿಸುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರಲ್ಲದೆ, 2028ರ ಚುನಾವಣೆಯಲ್ಲೂ ಚಾಮುಂಡೇಶ್ವರಿ ಕ್ಷೇತ್ರ ಜೆಡಿಎಸ್ ಪಾಲಾಗಲಿದೆ ಎಂದರು. ಈ ವೇಳೆ ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಎಂ. ಕೃಷ್ಣಾರೆಡ್ಡಿ, ಮಾಜಿ ಸಚಿವ ಸಾ.ರಾ. ಮಹೇಶ್, ಶಾಸಕರಾದ ಜಿ.ಡಿ. ಹರೀಶ್ ಗೌಡ, ಸಿ.ಎನ್. ಮಂಜೇಗೌಡ, ಮಾಜಿ ಶಾಸಕರಾದ ಮಹದೇವು, ಅಶ್ವಿನ್ ಕುಮಾರ್ ಸೇರಿದಂತೆ ಅನೇಕ ಹಿರಿಯ ಮುಖಂಡರು ಸಮಾವೇಶದಲ್ಲಿ ಭಾಗಿಯಾಗಿದ್ದರು.

ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಜನರೊಂದಿಗೆ ಜನತಾದಳ ಸಮಾವೇಶಕ್ಕೂ ಮುನ್ನ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ರ್‍ಯಾಲಿ ನಡೆಸಿದರು. ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಇದ್ದರು.

ಯಾವ ಪುರುಷಾರ್ಥಕ್ಕೆ ಸಾಧನಾ ಸಮಾವೇಶ

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಬಗ್ಗೆ ಮಾತನಾಡುತ್ತಿರುವ ಕಾಂಗ್ರೆಸ್ ನಾಯಕರು ರಾಜ್ಯದ ಅಭಿವೃದ್ಧಿಗೆ ಏನು ಮಾಡಿದ್ದಾರೆ ಎಂದು ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳಲಿ. ಬರುವ 19ರಂದು ಸಾಧನಾ ಸಮಾವೇಶ ಮಾಡಲು ಹೊರಟಿರುವ ಕಾಂಗ್ರೆಸ್ ನಾಯಕರು ರಾಜ್ಯದ ಅಭಿವೃದ್ಧಿಗೆ ನೀಡಿರುವ ಕೊಡುಗೆಯ ಬಗ್ಗೆ ಆಲೋಚನೆ ಮಾಡಲಿ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ರಾಜ್ಯ ಸರಕಾರದ ವಿರುದ್ಧ ಹರಿಹಾಯ್ದರು.

ನಮ್ಮ ಪಕ್ಷದಲ್ಲಿ ಯಾವುದೇ ಗೊಂದಲವಿಲ್ಲ. ಯಾವುದೇ ಒತ್ತಡಗಳಿಗೆ ಮಣಿಯು ವುದಿಲ್ಲ. ಕಾರ್ಯ ಕರ್ತರ ಭಾವನೆಗಳಿಗೆ ಬೆಲೆ ಕೊಟ್ಟು ಚಾಮುಂಡೇಶ್ವರಿ ಕ್ಷೇತ್ರ ಜೆಡಿಎಸ್ ಭದ್ರಕೋಟೆ ಎಂದು ಮನವರಿಕೆ ಮಾಡಿಕೊಡಲು ಸಮಾವೇಶ ಮಾಡಿದ್ದೇವೆ.

-ಕುಮಾರಸ್ವಾಮಿ, ಕೇಂದ್ರ ಸಚಿವ

ಬಹಳ ಜನರನ್ನು ಈ ಕ್ಷೇತ್ರದಿಂದ ಬೆಳೆಸಿ ದ್ದೀರಿ. ಸಾಮಾಜಿಕ ನ್ಯಾಯದೊಂದಿಗೆ ನಮ್ಮ ಪಕ್ಷ ರಾಜಕೀಯ ಮಾಡುತ್ತಿದೆ. ಎಲ್ಲಾ ವರ್ಗದವರಿಗೂ ಎಲ್ಲಾ ಸ್ಥಾನಮಾನ ಕೊಟ್ಟಿದೆ. ವಿರೋಧಿಗಳು ಹೇಳುವ ಮಾತಿಗೆ ಯಾರು ಧೃತಿಗೆಡಬೇಕಿಲ್ಲ. ಪಕ್ಷಕ್ಕೆ ಇನ್ನಷ್ಟು ಬಲ ತುಂಬಬೇಕು.

-ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ

2028ಕ್ಕೆ ರಾಜ್ಯದಲ್ಲಿ ಮೈತ್ರಿ ಸರಕಾರ: ನಿಖಿಲ್

ಜೆಡಿಎಸ್ ಪಕ್ಷ ಹಳೇ ಮೈಸೂರು ಭಾಗಕ್ಕೆ ಸೀಮಿತವಾಗಿಲ್ಲ. ಇಡೀ ರಾಜ್ಯದಲ್ಲಿ ಜನತಾದಳ ಪಕ್ಷ ಸುಭದ್ರವಾಗಿದೆ. ರಾಜ್ಯದ ಜನರ ಒಲವು ಜೆಡಿಎಸ್ ಪಕ್ಷದ ಮೇಲಿದೆ ಎಂದು ನಿಖಿಲ್ ಕುಮಾರಸ್ವಾಮಿ ಹೇಳಿದರು. ಜನರೊಂದಿಗೆ ಜನತಾದಳದಲ್ಲಿ ಮಾತನಾಡಿದ ಅವರು, ಜೆಡಿಎಸ್ ಕೇವಲ ಹಳೇ ಮೈಸೂರು ಪ್ರಾಂತ್ಯಕ್ಕೆ ಮಾತ್ರ ಸೀಮಿತ ಎಂದು ನಮ್ಮ ರಾಜಕೀಯ ವಿರೋಧಿಗಳು ಹೇಳುತ್ತಾರೆ. ಆದರೆ, ನಮ್ಮ ಪಕ್ಷ ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ ಸೇರಿದಂತೆ ರಾಜ್ಯದ ಉದ್ದಗಲಕ್ಕೂ ಇದೆ. ರಾಜ್ಯದ ಜನರ ಒಲವು ಜೆಡಿಎಸ್ ಮೇಲಿದೆ. 2023ರ ಚುನಾವಣೆ ಬಳಿಕ ಜನತಾದಳ ಪಕ್ಷಕ್ಕೆ 19 ಸ್ಥಾನ ಲಭಿಸಿದೆ. ಪಂಚರತ್ನ ಕಾರ್ಯಕ್ರಮಗಳ ಮೂಲಕ ಕುಮಾರಸ್ವಾಮಿ ಅವರು ಸಾಕಷ್ಟು ಪ್ರಯತ್ನ ಮಾಡಿದರೂ ಅದಕ್ಕೆ ತಕ್ಕ ಪ್ರತಿಫಲ ಸಿಗಲಿಲ್ಲ. ನಾನು ಇಡೀ ರಾಜ್ಯವ್ಯಾಪಿ ಪಕ್ಷವನ್ನು ಕಟ್ಟುವ ನಿಟ್ಟಿನಲ್ಲಿ ಹಗಲಿರುಳು ಶ್ರಮವಹಿಸುತ್ತಿದ್ದೇನೆ. 2028ಕ್ಕೆ ಬಿಜೆಪಿ-ಜೆಡಿಎಸ್ ಮೈತ್ರಿ ಸರಕಾರ ರಚನೆ ಆಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಟ್ಟಡ ಪೂರ್ಣಕ್ಕೆ ಕನಿಷ್ಠ ಮೂರರಿಂದ 6 ತಿಂಗಳು ಸಮಯಾವಕಾಶ ನೀಡಲು ಕ್ರಡೈ ಮನವಿ

ಯುದ್ಧ ಸಂಕಷ್ಟ, ಸಮಯಕ್ಕೆ ಸರಿಯಾಗಿ ಮನೆ ಕಟ್ಟಲಾಗಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಧ್ಯಪ್ರಾಚ್ಯದಲ್ಲಿ ಯುದ್ಧ ನಿಂತಿದ್ದರೂ, ಯುದ್ಧದ ಕಾವು ಆರಿಲ್ಲ, ಆದರೆ ಈ ಕಾವಿನ ನೇರ ಹೊಡೆತ ಕರ್ನಾಟಕದ ರಿಯಲ್ ಎಸ್ಟೇಟ್ ಉದ್ಯಮ ಮೇಲೆ ಬೀರಿದೆ ಎನ್ನುವ ಆತಂಕ ಶುರುವಾಗಿದೆ.

ಯುದ್ಧದಿಂದಾಗಿ ಇಂಧನ ಅಭಾವ, ಟೈಲ್ಸ್ ಸೇರಿದಂತೆ ಕಟ್ಟಡ ನಿರ್ಮಾಣಕ್ಕೆ ಅಗತ್ಯವಿರುವ ಸಲಕರಣೆಗಳ ಅಭಾವದಿಂದ ನಿರ್ಮಾಣ ವೆಚ್ಚ ಶೇ.10ರಿಂದ 15ರಷ್ಟು ಏರಿಕೆಯಾಗಿದ್ದರೆ ಮತ್ತೊಂದೆಡೆ ಕಾರ್ಮಿಕರ ಕೊರತೆಯಿಂದಾಗಿ ಭಾರಿ ಸಮಸ್ಯೆಯಾಗುತ್ತಿದೆ ಎನ್ನುವ ಆರೋಪ ಕೇಳಿಬಂದಿದೆ.

ಇದರಿಂದಾಗಿ ವಸತಿ ಸಮುಚ್ಚಯಗಳ ನಿರ್ಮಾಣ ಕಾಮಗಾರಿಗೆ ಭಾರಿ ಹೊಡೆತ ಬಿದ್ದಿದ್ದು, ಯೋಜನೆಗಳನ್ನು ನಿಗಿದಿತ ಗಡುವಿನಲ್ಲಿ ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲ. ಈ ಎಲ್ಲ ಸಮಸ್ಯೆಗಳಿಂದ ನಿರ್ಮಾಣ ಕಾಮಗಾರಿ ವಿಳಂಬವಾಗಿರುವುದರಿಂದ ಎಲ್ಲಾ ವಸತಿ ಯೋಜನೆಗಳ ಗಡುವನ್ನು ಕನಿಷ್ಠ ಮೂರರಿಂದ ಆರು ತಿಂಗಳವರೆಗೆ ವಿಸ್ತರಿಸಬೇಕು ಎನ್ನುವ ಮನವಿಯನ್ನು ಕ್ರೆಡೈ ಕೇಂದ್ರ ವಸತಿ ಇಲಾಖೆಗೆ ಮನವಿ ಮಾಡಿದೆ.

ಇಂಧನದ ಅಭಾವ, ಕಾರ್ಮಿಕರ ಕೊರತೆ, ಟೈಲ್ಸ್ ಸೇರಿದಂತೆ ಕಚ್ಚಾ ಸಾಮಗ್ರಿಗಳ ಪೂರೈಕೆಯಲ್ಲಾಗುತ್ತಿರುವ ವ್ಯತ್ಯಯ ಸೇರಿದಂತೆ ಹಲವು ಅಂಶಗಳನ್ನು ಪ್ರಸ್ತಾಪಿಸಿ, ಹಿಂದೆ ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ವಿಶೇಷ ಪ್ರಕರಣವೆಂದು ಪರಿಗಣಿಸಿ ವಸತಿ ಯೋಜನೆಗಳ ಗಡುವನ್ನು ವಿಸ್ತರಣೆ ಮಾಡಿದಂತೆ ಈಗಲೂ ವಿಸ್ತರಣೆ ಮಾಡುವ ಮೂಲಕ ಸಂಕಷ್ಟಕ್ಕೆ ಸಿಲುಕಿರುವ ರಿಯಲ್ ಎಸ್ಟೇಟ್ ಉದ್ಯಮಕ್ಕೆ ನೆರವಾಗಬೇಕು ಎಂದು ಮನವಿ ಮಾಡಿದೆ.

ಫೋರ್ಸ್ ಮಜೂರೆ ಅನ್ವಯ: ರೇರಾ ಕಾಯಿದೆ ಸೆಕ್ಷನ್ 6ರಡಿ ನೈಸರ್ಗಿಕ ಪ್ರಕೋಪ ಗಳು, ಯುದ್ಧ ಅಥವಾ ಸರಕಾರದ ನಿರ್ಬಂಧ ಗಳು, ಸಾಂಕ್ರಾಮಿಕ ಮತ್ತಿತರ ವಿಶೇಷ ಸಂದರ್ಭ ಗಳಲ್ಲಿ ಫೋರ್ಸ್ ಮಜೂರೆ (ಬಲವಂತದ ನಿರ್ಬಂಧ) ಕ್ಲಾಸ್ ಬಳಸಿ ವಸತಿ ಯೋಜನೆಗಳ ಗಡುವನ್ನು ಒಂದು ವರ್ಷದವರೆಗೆ ವಿಸ್ತರಣೆ ಮಾಡಲು ಅವಕಾಶವಿದೆ. ಈ ಹಿಂದೆ ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಇದೇ ನಿಯಮದ ಆಧಾರದಲ್ಲಿ ಎರಡು ಬಾರಿ ಆರು ತಿಂಗಳು ವಸತಿ ಯೋಜನೆಗಳ ಗಡುವು ವಿಸ್ತರಣೆ ಮಾಡಲಾಗಿತ್ತು. ಕೇಂದ್ರ ಸರಕಾರದ ನಿರ್ಧಾರ ದಂತೆ ಅಯಾ ರಾಜ್ಯಗಳ ರಿಯಲ್ ಎಸ್ಟೇಟ್ ಪ್ರಾಧಿಕಾರಗಳು ಗಡುವು ವಿಸ್ತರಣೆ ಆದೇಶ ಗಳನ್ನು ಹೊರಡಿಸಿದ್ದವು. ಈಗಲೂ ಅದೇ ರೀತಿ ವಿಶೇಷ ಸಂದರ್ಭವೆಂದು ಪರಿಗಣಿಸಿ ಗಡುವು ವಿಸ್ತರಣೆ ಮಾಡಬೇಕೆಂಬುದು ಕ್ರೆಡೈ ಆಗ್ರಹವಾಗಿದೆ.

ಸಾಮಗ್ರಿಗಳ ಕೊರತೆ

ರಿಯಲ್ ಎಸ್ಟೇಟ್ ವಲಯವು ನಿರ್ಮಾಣ ಸಾಮಗ್ರಿಗಳ ಪೂರೈಕೆ ಮತ್ತು ಕಾರ್ಮಿಕರ ಕೊರತೆ ಸೇರಿ ಹಲವು ಗಂಭೀರ ಅಡಚಣೆಗಳನ್ನು ಎದುರಿಸುತ್ತಿದೆ. ಇಂಧನ ಕೊರತೆಯಿಂದ ದೇಶದ ಟೈಲ್ಸ್ ಉತ್ಪಾದನೆಯ ಗಣನೀಯ ಪಾಲನ್ನು ಹೊಂದಿರುವ ಗುಜರಾತ್‌ನ ಮೋರ್ಬಿ ಸೆರಾಮಿಕ್ ಹಬ್ ತಾತ್ಕಾಲಿಕ ಅಡಚಣೆಗಳನ್ನು ಅನುಭವಿಸುತ್ತಿದೆ. ಅಲ್ಲಿ ಉತ್ಪಾದನೆ ಕ್ರಮೇಣ ಪುನರಾರಂಭಗೊಂಡಿದ್ದರೂ, ಹೆಚ್ಚಿದ ಇನ್‌ಪುಟ್ ಮತ್ತು ಲಾಜಿಸ್ಟಿಕ್ ವೆಚ್ಚಗಳು ಗಂಭೀರ ಪರಿಣಾಮವನ್ನು ಬೀರಿದ್ದು, ಟೈಲ್ಸ್ ಬೆಲೆಗಳ ಹೆಚ್ಚಳಕ್ಕೆ ಕಾರಣವಾಗಿದೆ. ಇದರೊಂದಿಗೆ ಸಿಮೆಂಟ್, ಉಕ್ಕು, ಕಬ್ಬಿಣ ಸೇರಿದಂತೆ ಕಟ್ಟಡ ಸಾಮಗ್ರಿಗಳ ಪೂರಕ ವ್ಯವಸ್ಥೆಯು ಇಂಧನ-ಸಂಬಂಧಿತ ಅನಿಶ್ಚಿತತೆಗಳಿಂದಾಗಿ ನಿರ್ಬಂಧಗಳನ್ನು ಎದುರಿಸುತ್ತಿದೆ. ಆದ್ದರಿಂದ ಹೆಚ್ಚುವರಿ ಸಮಯ ನೀಡಬೇಕು ಎನ್ನುವ ಮನವಿಗಳು ರಿಯಲ್ ಎಸ್ಟೇಟ್ ಉದ್ಯಮಿಗಳು ಅಭಿಪ್ರಾಯಪಟ್ಟಿದ್ದಾರೆ.

ಮಧ್ಯಪ್ರಾಚ್ಯದಲ್ಲಿ ಯುದ್ಧದಿಂದಾಗಿ ರಿಯಲ್ ಎಸ್ಟೇಟ್ ವಲಯಕ್ಕೆ ದೊಡ್ಡ ಪರಿಮಾಣ ಬೀರಿದೆ. ಬಹುತೇಕ ನಿರ್ಮಾಣ ಚಟುವಟಿಕೆಗಳು ಸ್ಥಗಿತಗೊಳ್ಳುವ ಹಂತಕ್ಕೆ ತಲುಪಿವೆ. ಆದ್ದರಿಂದ ಈ ಸಮಯವನ್ನು ವಿಶೇಷ ಸಂದರ್ಭವೆಂದು ಪರಿಗಣಿಸಿ ವಸತಿ ಯೋಜನೆಗಳ ಗಡುವು ಆರು ತಿಂಗಳು ವಿಸ್ತರಣೆ ಮಾಡುವಂತೆ ರೇರಾಗೆ ಮನವಿ ಸಲ್ಲಿಸಲಾಗಿದೆ. ಈ ಮನವಿಯನ್ನು ಪುರಸ್ಕರಿಸುವ ವಿಶ್ವಾಸವಿದೆ.

ಅಮರ್ ಮೈಸೂರು
ಅಧ್ಯಕ್ಷರು, ಕ್ರೆಡೈ ಬೆಂಗಳೂರು

ಸುಪ್ರೀಂ ಆದೇಶ ಪಾಲನೆ ರಾಜ್ಯ ಸರಕಾರದ ಕರ್ತವ್ಯ

ಕಲಬುರಗಿ: ದೇಶದಲ್ಲಿ ಒಕ್ಕೂಟ ವ್ಯವಸ್ಥೆ ಇರುವುದರಿಂದ ಕೇಂದ್ರ ಸರಕಾರ ಹಾಗೂ ಸುಪ್ರೀಂಕೋರ್ಟ್ ನೀಡಿರುವ ಆದೇಶಗಳನ್ನು ಪಾಲಿಸುವುದು ರಾಜ್ಯ ಸರಕಾರದ ಜವಾಬ್ದಾರಿ ಮತ್ತು ಕರ್ತವ್ಯವಾಗಿದೆ ಎಂದು ಸಂಸದ ಗೋವಿಂದ ಕಾರಜೋಳ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರಕಾರ ತರುವ ಕಾನೂನು ಮತ್ತು ಸುಪ್ರೀಂಕೋರ್ಟ್ ನೀಡುವ ತೀರ್ಪುಗಳು ಈ ನೆಲದ ಆದೇಶಗಳಾಗಿವೆ. ಇವುಗಳನ್ನು ಗೌರವಿಸುವುದು ಎಲ್ಲರ ಕರ್ತವ್ಯ. ಒಳಮೀಸಲಾತಿ ವಿಚಾರದಲ್ಲಿ ಸುಪ್ರೀಂಕೋರ್ಟ್ ಆದೇಶ ವಿದ್ದರೂ ಸಿಎಂ ಸಿದ್ದರಾಮಯ್ಯ ಜಾರಿಗೊಳಿಸಲಿಲ್ಲ. ಸದಾಶಿವ ಆಯೋಗ, ನಾಗಮೋಹನ್ ದಾಸ್ ಆಯೋಗ ಹಾಗೂ ಮಾಧುಸ್ವಾಮಿ ಸಮಿತಿ ವರದಿಗಳಿದ್ದರೂ ಸರಕಾರಕ್ಕೆ ಯಾವುದೇ ಬದ್ಧತೆ ಇಲ್ಲ ಎಂದು ಟೀಕಿಸಿದರು.

ದಲಿತರ ಹಣ ದುರ್ಬಳಕೆ, ವಾಗ್ದಾಳಿ: ಸಿದ್ದರಾಮಯ್ಯ ಸರಕಾರ ಬಂದ ಮೇಲೆ ರಾಜ್ಯದಲ್ಲಿ ದಲಿತ ಮಹಿಳೆಯರ ಮೇಲಿನ ಕೊಲೆ, ಅತ್ಯಾಚಾರ ಪ್ರಕರಣಗಳು ಹೆಚ್ಚಾಗಿದ್ದು, ದೇಶದಲ್ಲೇ ಕರ್ನಾಟಕ ಮುಂಚೂಣಿಯಲ್ಲಿದೆ. ತಾವೊಬ್ಬ ಅಹಿಂದ ನಾಯಕ ಎಂದು ಹೇಳಿಕೊಳ್ಳುವ ಸಿಎಂಗೆ ದಲಿತರಿಗೆ ರಕ್ಷಣೆ ನೀಡಲು ಸಾಧ್ಯವಾಗುತ್ತಿಲ್ಲ. ದಲಿತರ ಅಭಿವೃದ್ಧಿಗೆ ಮೀಸಲಿಟ್ಟಿದ್ದ 48 ಸಾವಿರ ಕೋಟಿ ರು.ಎಸ್‌ಸಿಎಸ್‌ಪಿ/ಟಿಎಸ್‌ಪಿ ಹಣವನ್ನು ಗ್ಯಾರಂಟಿ ಸೇರಿದಂತೆ ಬೇರೆ ಉದ್ದೇಶಗಳಿಗೆ ಬಳಸಲಾಗಿದೆ. ತಕ್ಷಣವೇ ಈ ಹಣವನ್ನು ವಾಪಸ್ ಪಡೆದು ದಲಿತ ಮಕ್ಕಳ ಶಿಕ್ಷಣ, ಉದ್ಯೋಗ ಹಾಗೂ ಭೂ ಒಡೆತನದ ಯೋಜನೆಗಳಿಗೆ ಬಳಸಬೇಕು ಎಂದು ಕಾರಜೋಳ ಒತ್ತಾಯಿಸಿದರು. ಈ ವೇಳೆ ಶಾಸಕ ಬಸವರಾಜ ಮತ್ತಿಮಡು ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ ಉಪಸ್ಥಿತರಿದ್ದರು.

ಸಂಪುಟ ಪುನರ್‌ರಚನೆ ಹೈಕಮಾಂಡ್ ನಿರ್ಧಾರ

ಮಂಗಳೂರು: ರಾಜ್ಯ ಸಚಿವ ಸಂಪುಟ ಪುನರ್‌ರಚನೆ ಮಾಡು ವುದು ಸಂಪೂರ್ಣವಾಗಿ ಮುಖ್ಯಮಂತ್ರಿ ಗಳು ಹಾಗೂ ಪಕ್ಷದ ಹೈಕಮಾಂಡ್‌ನ ಪರಮಾಧಿಕಾರವಾಗಿದೆ ಎಂದು ಸಚಿವ ಈಶ್ವರ ಖಂಡ್ರೆ ಹೇಳಿದರು. ಮಂಗಳೂರಿ ನಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಸಂಪುಟ ಪುನರ್ ರಚನೆ ಮಾಡುವುದು, ಬಿಡುವುದು ಹೈಕಮಾಂಡ್ ನಾಯಕರಿಗೆ ಬಿಟ್ಟ ವಿಚಾರ. ಹೈಕಮಾಂಡ್ ತೆಗೆದುಕೊಳ್ಳುವ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ. ರಾಜ್ಯ ಸರಕಾರ ಭದ್ರವಾಗಿದೆ. ಆಡಳಿತದಲ್ಲಿ ಯಾವುದೇ ಗೊಂದಲಗಳಿಲ್ಲ ಎಂದು ಅವರು ಸ್ಪಷ್ಟಪಡಿಸಿದರು. ನಾವು ಜನಪರ ಹಾಗೂ ಉತ್ತಮ ಆಡಳಿತ ನೀಡಿದ್ದರಿಂದಲೇ ಎಲ್ಲಾ ಚುನಾವಣೆಗಳಲ್ಲೂ ಜನರು ನಮ್ಮನ್ನು ಕೈಹಿಡಿದಿದ್ದಾರೆ. ಭವಿಷ್ಯದಲ್ಲೂ ನಾವೇ ಅಧಿಕಾರಕ್ಕೆ ಬರಲಿದ್ದು, ಜನಪರ ಆಡಳಿತ ಮುಂದುವರಿಸಲಿದ್ದೇವೆ. ನಾನು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿದ್ದು, ಪಕ್ಷ ನೀಡುವ ಯಾವುದೇ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುತ್ತೇನೆ. ಸದ್ಯಕ್ಕೆ ನನ್ನ ಇಲಾಖೆಯನ್ನು ಉತ್ತಮವಾಗಿ ಮುನ್ನಡೆಸುತ್ತಿದ್ದೇನೆ. ಯಾವುದೇ ಹುದ್ದೆಯೂ ಖಾಲಿ ಇಲ್ಲ ಎಂದರು.

ಬ್ಯಾಡ್ಮಿಂಟನ್ ಪಂದ್ಯಾವಳಿಗೆ ಚಾಲನೆ

ವಿಜಯಪುರ: ಐತಿಹಾಸಿಕ ಗುಮ್ಮಟ ನಗರಿ ವಿಜಯಪುರದಲ್ಲಿ ಇದೇ ಮೊದಲ ಬಾರಿಗೆ ರಾಜ್ಯಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿಗೆ ಭಾನುವಾರ ಸಚಿವ ಎಂ.ಬಿ.ಪಾಟೀಲ ಚಾಲನೆ ನೀಡಿದರು. ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಹಾಗೂ ಬಿಎಲ್‌ಡಿಇ ಸಂಸ್ಥೆಯ ಸಹಯೋಗದಲ್ಲಿ ಅನೆಕ್ಸ್ ಸನ್ ರೈಸರ್ ಟೈಟಲ್ ಕಾರ್ಡ್ ನಡಿ ಈ ಪಂದ್ಯಾವಳಿ ನಡೆಯಲಿದ್ದು, 17 ರಿಂದ ಏಳು ದಿನಗಳ ಕಾಲ ರಾಜ್ಯಮಟ್ಟದ (ಅಂಡರ್ 15 ಹಾಗೂ ಅಂಡರ್ 17) ಪಂದ್ಯಾವಳಿ ವಿಜಯಪುರದ ಡಾ.ಬಿ.ಆರ್.ಅಂಬೇಡ್ಕರ್ ಒಳಾಂಗಣ ಕ್ರೀಡಾಂಗಣದಲ್ಲಿ ಸಂಘಟಿಸಲಾಗಿದೆ. ರಾಜ್ಯದ ವಿವಿಧ ಭಾಗಗಳಿಂದ 756 ಕ್ರೀಡಾಪಟುಗಳು ನೋಂದಾಯಿಸಿಕೊಂಡಿದ್ದು, ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಆಟಗಾರರು ಪಾಲ್ಗೊಳ್ಳಲಿದ್ದಾರೆ.

ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಅಧ್ಯಕ್ಷತೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ರಾಜ್ಯಾಧ್ಯಕ್ಷ ಹಾಗೂ ಮಾಜಿ ಸಚಿವ ಕುಮಾರ ಬಂಗಾರಪ್ಪ ಯುವಜನ ಸೇವೆ ಮತ್ತು ಸಬಲೀಕರ ಇಲಾಖೆಯ ಸಹಾಯಕ ನಿರ್ದೇಶಕ ರಾಜಶೇಖರ ದೈವಾಡಿ ಮತ್ತಿತರರು ಉಪಸ್ಥಿತರಿದ್ದರು.

ವಿಜಯಪುರದಲ್ಲಿ ನಡೆದ ರಾಜ್ಯಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿಗೆ ಸಚಿವ ಎಂ.ಬಿ.ಪಾಟೀಲ ಚಾಲನೆ ನೀಡಿದರು. ಮಾಜಿ ಸಚಿವ ಕುಮಾರ ಬಂಗಾರಪ್ಪ ಹಾಜರಿದ್ದರು.

23ರಿಂದ ಸರಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾಕೂಟ

ಚಿಂತಾಮಣಿ: ರಾಜ್ಯ ಸರಕಾರಿ ನೌಕರರ 2026ನೇ ಸಾಲಿನ ರಾಜ್ಯ ಮಟ್ಟದ ಕ್ರೀಡಾಕೂಟವು ಇದೇ 23ರಿಂದ 25ರವರೆಗೆ ಮೂರು ದಿನ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದು ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಆರ್. ಅಶೋಕ ಕುಮಾರ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಕ್ರೀಡಾಕೂಟ ಆಯೋಜಿಸಲಿದೆ. ಸರ್ಕಾರಿ ನೌಕರರಿಗೆ ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು ನಡೆಯಲಿವೆ. ಜಿಲ್ಲಾ ಮಟ್ಟದಲ್ಲಿ ವಿಜೇತರಾಗಿರುವ (ಗುಂಪು ಆಟಗಳಲ್ಲಿ ಪ್ರಥಮ, ಅಥ್ಲೆಟಿಕ್ಸ್‌ನಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ) ಕ್ರೀಡಾ ಪಟುಗಳು ಮಾತ್ರ ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸ ಬಹುದು ಎಂದು ನುಡಿದರು. ಕರಕುಶಲ ವಸ್ತು ಪ್ರದರ್ಶನದಲ್ಲಿ ಸಿದ್ಧ ವಸ್ತುಗಳ ಪ್ರದರ್ಶನಕ್ಕೆ ಅವಕಾಶವಿರುವುದಿಲ್ಲ. ಮೊದಲ ದಿನ ಸ್ಥಳದಲ್ಲಿ ತಯಾರಿಸಿದ ವಸ್ತುಗಳನ್ನು ಇಡಬೇಕು. 2ನೇ ದಿನ ತೀರ್ಪುಗಾರರು ಪರಿಶೀಲಿಸುತ್ತಾರೆ. ಕ್ರೀಡಾ ಸ್ಪರ್ಧೆಗಳಲ್ಲಿ, ಸಂಗೀತ ನೃತ್ಯ, ನಾಟಕಗಳಲ್ಲಿ ಭಾಗವಹಿಸುವ ಸ್ಪರ್ಧಿಗಳು ಅಗತ್ಯವಿರುವ ಸಲಕರಣೆಗಳನ್ನು ತಾವೇ ತರಬೇಕು. ಸಂಗೀತ ಮತ್ತು ನೃತ್ಯ ಸ್ಪರ್ಧೆಗಳಲ್ಲಿ ಚಲನಚಿತ್ರ ಗೀತೆಗಳ ತುಣುಕುಗಳಿಗೆ ಅವಕಾಶವಿಲ್ಲ ಎಂದರು.

ರಾಜ್ಯ ಸರಕಾರ ಮೂರು ವರ್ಷ ಪೂರೈಕೆ | ಸಾರ್ಥಕ ಸೇವೆಯ ಸಮರ್ಪಣೆ ಕಾರ್ಯಕ್ರಮ: ಸಚಿವ ಡಾ.ಜಿ.ಪರಮೇಶ್ವರ

ತುಮಕೂರಿನಲ್ಲಿ ನಾಳೆ ಸಾಧನಾ ಸಮಾವೇಶ

ತುಮಕೂರು: ಕಾಂಗ್ರೆಸ್ ಸರಕಾರ ಮೂರು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಮೇ. 19ರಂದು ಮಂಗಳವಾರ ಹಮ್ಮಿಕೊಂಡಿರುವ ಪ್ರಗತಿಯತ್ತ ಕರ್ನಾಟಕ ಸಾರ್ಥಕ ಸೇವೆಯ ಸಮರ್ಪಣೆ ಕಾರ್ಯಕ್ರಮದಲ್ಲಿ ಜಿಲ್ಲೆಯ 152492 ಫಲಾನುಭವಿಗಳಿಗೆ ಅನುಕೂಲವಾಗಲಿದೆ ಎಂದು ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದರು.

ನಗರದ ಸರಕಾರಿ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ನಡೆಯಲಿರುವ ಸಮರ್ಪಣೆ ಕಾರ್ಯಕ್ರಮದ ಸಿದ್ಧತೆ ವೀಕ್ಷಿಸಿ ಮಾತನಾಡಿದರು. ಸಾರ್ಥಕ ಸೇವೆಯ ಸಮರ್ಪಣೆ ಕಾರ್ಯಕ್ರಮದಲ್ಲಿ ಪೌತಿ ಖಾತೆ, ಕಂದಾಯ ಗ್ರಾಮ ಹಾಗೂ ದರಖಾಸ್ತು ಪೋಡಿಗಳ ಬಗ್ಗೆ ಕಳೆದ ಒಂದು ವರ್ಷದಿಂದಲೂ ಜಿಲ್ಲಾಡಳಿತ ವಿಶೇಷವಾಗಿ ಜಿಲ್ಲಾಧಿಕಾರಿಗಳು, ಉಪ ವಿಭಾಗಾದಿಕಾರಿಗಳು, ತಹಸೀಲ್ದಾರ್ ಎಲ್ಲರೂ ಸೇರಿ 152492 ಫಲಾನುಭವಿಗಳಿಗೆ ಇದರ ಅನುಕೂಲ ಮಾಡಿಕೊಡುವ ಕಾರ್ಯಕ್ರಮ ಮಾಡಿದ್ದಾರೆ. ಇದರಿಂದ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಯೋಜನೆಗಳು ಸಾರ್ವಜನಿಕರಿಗೆ ತಲುಪಲಿವೆ ಎಂದರು. ಬಹಳ ವರ್ಷಗಳಿಂದ ಖಾತೆ ಇಲ್ಲದವರು, ಕಂದಾಯ ಗ್ರಾಮಗಳನ್ನು ಸರಕಾರ ಘೋಷಣೆ ಮಾಡಿದ್ದರೂ ಅಲ್ಲಿದ್ದವರಿಗೆ ಯಾರಿಗೂ ಹಕ್ಕು ಪತ್ರ ಇರಲಿಲ್ಲ, ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಂತಹ ಈ ಕಾರ್ಯಕ್ರಮವನ್ನು ನಮ್ಮ ಸರಕಾರ ಮಾಡುತ್ತಿದೆ. ರಾಜ್ಯದಲ್ಲಿ ಸುಮಾರು 14 ಲಕ್ಷ ಫಲಾನುಭವಿಗಳಿಗೆ ಸರಕಾರ ಮಾಡಿಕೊಟ್ಟಿದೆ ಎಂದು ಪ್ರಶಂಸಿಸಿದರು.

ವಸ್ತು ಪ್ರದರ್ಶನ ಆಯೋಜನೆ: ಜಿಲ್ಲೆಯ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗಾಗಿ ಸುಮಾರು 682 ಕೋಟಿ ರುಪಾಯಿಗಳ ಕಾಮಗಾರಿಗಳಿಗೆ ಅಡಿಗಲ್ಲು ಹಾಕಲಾಗುವುದು, ಈಗಾಗಲೇ ಮುಕ್ತಾಯಗೊಂಡಿರುವ ಕಾಮಗಾರಿಗಳನ್ನು ಉದ್ಘಾಟಿಸಲಾಗುವುದು. ವಸ್ತು ಪ್ರದರ್ಶನದಲ್ಲಿ ಒಂದು ಭಾಗ ಜಿಲ್ಲೆಗೆ ಸೀಮಿತವಾಗಿದ್ದರೆ ಮತ್ತೊಂದು ಭಾಗ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಎರಡೂ ವಸ್ತು ಪ್ರದರ್ಶನ ಆಯೋಜನೆ ಮಾಡಲಾಗುತ್ತಿದೆ ಎಂದರು. ಈ ವೇಳೆ ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್, ಜಿಪಂ ಸಿಇಒ ಬಿ.ವಿ. ಅಶ್ವಿಜ ಉಪಸ್ಥಿತರಿದ್ದರು.

ತುಮಕೂರು ನಗರದ ಸರಕಾರಿ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ನಡೆಯಲಿರುವ ಸಮರ್ಪಣೆ ಕಾರ್ಯಕ್ರಮದ ಸಿದ್ಧತೆಯನ್ನು ಗೃಹ ಸಚಿವ ಜಿ.ಪರಮೇಶ್ವರ್ ವೀಕ್ಷಿಸಿದರು.

ಸಾರ್ಥಕ ಸೇವೆಯ ಸಮರ್ಪಣೆ ಸರಕಾರಿ ಕಾರ್ಯಕ್ರಮ. ಪಕ್ಷಾತೀತವಾಗಿದ್ದು, ಎಲ್ಲ ಪಕ್ಷದಲ್ಲೂ ಫಲಾನುಭವಿಗಳಿದ್ದಾರೆ. ಸರಕಾರದ ಸವಲತ್ತು ಎಲ್ಲರಿಗೂ ಸಿಗಬೇಕು. ಅಧಿಕಾರಿಗಳು ತಮ್ಮ ಕರ್ತವ್ಯವನ್ನು ನಿಭಾಯಿಸಲು ಇದೊಂದು ಸದಾವಕಾಶ. ಎಲ್ಲ ನಿಯೋಜಿತ ಅಧಿಕಾರಿಗಳು ಹಾಗೂ ಮಾರ್ಗಾಧಿಕಾರಿಗಳು ಉತ್ತಮವಾಗಿ ಕೆಲಸ ನಿರ್ವಹಿಸಬೇಕು.

-ಡಾ.ಜಿ.ಪರಮೇಶ್ವರ್, ಜಿಲ್ಲಾ ಉಸ್ತುವಾರಿ ಸಚಿವ

ಸಮಾವೇಶಕ್ಕೆ 2 ಲಕ್ಷಕ್ಕೂ ಹೆಚ್ಚು ಜನರ ನಿರೀಕ್ಷೆ

ಸಾರಿಗೆ ನೌಕರರು ಮುಷ್ಕರಕ್ಕೆ ಕರೆ ನೀಡಿರುವ ಹಿನ್ನೆಲೆಯಲ್ಲಿ, ಸಾರ್ವಜನಿಕರಿಗೆ ಹಾಗೂ ಫಲಾನುಭವಿಗಳಿಗೆ ಸಮಾವೇಶಕ್ಕೆ ಬರಲು ತೊಂದರೆಯಾಗಬಾರದು ಎಂಬ ಉದ್ದೇಶದಿಂದ ಸಮಾವೇಶವನ್ನು ಮೇ 19 ಕ್ಕೆ ನಿಗದಿ ಪಡಿಸಲಾಗಿದೆ. ಸಮಾವೇಶಕ್ಕೆ ಸುಮಾರು 2 ಲಕ್ಷಕ್ಕೂ ಅಧಿಕ ಜನರು ಆಗಮಿಸುವ ನಿರೀಕ್ಷೆಯಿದೆ. ಸಮಾವೇಶಕ್ಕೆ ಬರುವ ಜನರಿಗೆ ಯಾವುದೇ ತೊಂದರೆಯಾಗದಂತೆ ಬಸ್ ವ್ಯವಸ್ಥೆ ಕಲ್ಪಿಸಲಾಗುವುದು. ಇದು ಕೇವಲ ಒಂದು ಕಾರ್ಯಕ್ರಮವಲ್ಲ, ತುಮಕೂರು ಜಿಲ್ಲೆಯ ಸರಕಾರಿ ಯೋಜನೆಗಳ ಫಲಾನುಭವಿಗಳನ್ನು ಒಂದೆಡೆ ಸೇರಿಸುವ ರಾಜ್ಯ ಮಟ್ಟದ ಮಾದರಿ ಕಾರ್ಯಕ್ರಮವಾಗಲಿದೆ ಎಂದು ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು.

ಸಮಾಚಾರ ಸಣ್ಣದಲ್ಲ

ಗೃಹರಕ್ಷಕ ಸದಸ್ಯತ್ವ ನೋಂದಣಿಗೆ ಆಹ್ವಾನ

ಬೆಂಗಳೂರು: ಜಿಲ್ಲಾ ಗೃಹರಕ್ಷಕ ದಳ, ಬೆಂಗಳೂರು ದಕ್ಷಿಣ ಜಿಲ್ಲೆ, ಬೆಂಗಳೂರು ಇಲ್ಲಿ ಖಾಲಿ ಇರುವ ಗೃಹರಕ್ಷಕ ಸ್ವಯಂ ಸೇವಾ ಸದಸ್ಯರ ಸ್ಥಾನಗಳನ್ನು ಭರ್ತಿ ಮಾಡಲು ಬೆಂಗಳೂರು ನಗರದ ಸ್ಥಳೀಯ ಆಸಕ್ತ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ, ಕನಿಷ್ಠ 19 ವರ್ಷ ಹಾಗೂ ಗರಿಷ್ಠ 45 ವರ್ಷಗಳ ಒಳಗಿರುವವರು ಅರ್ಜಿಸಲ್ಲಿಸಬಹುದು. ಉತ್ತಮ ಆರೋಗ್ಯ ಮತ್ತು ದೇಹದಾಢ್ಯತೆ ಹೊಂದಿರಬೇಕು. ಬೆಂಗಳೂರು ನಗರದ ಸ್ಥಳೀಯ ನಾಗರಿಕರು ವಾಸ ಸ್ಥಳದ ಅಧಿಕೃತ ದಾಖಲೆಗಳಾದ ಆಧಾರ್ ಕಾರ್ಡ್, ಬಾಡಿಗೆ/ಭೋಗ್ಯ ಕರಾರು ಪತ್ರ, ಹೊಂದಿರಬೇಕು. ಬೆಂಗಳೂರು ದಕ್ಷಿಣ ಜಿಲ್ಲಾ ಕಚೇರಿಯ ವ್ಯಾಪ್ತಿಗೆ ಒಳಪಡುವ ವಿಳಾಸದಲ್ಲಿ ವಾಸವಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ಗೃಹರಕ್ಷಕ ಸದಸ್ಯತ್ವವು ಖಾಯಂ ಹುದ್ದೆ ಆಗಿರುವುದಿಲ್ಲ. ವಿವಿಧ ಸರಕಾರಿ ಇಲಾಖೆಗಳಿಗೆ ನಿಯೋಜಿಸುವ ಕರ್ತವ್ಯಗಳಿಗೆ ದಿನಕ್ಕೆ 600 ರು. ಹಾಗೂ ಪೊಲೀಸ್ ಇಲಾಖೆಗಳ, ವಿಶೇಷ ಕರ್ತವ್ಯಕ್ಕೆ ನಿಯೋಜಿಸುವ ಕರ್ತವ್ಯಕ್ಕೆ 800 ರು. ಗಳ ದಿನದ ಕರ್ತವ್ಯ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ. ಅರ್ಜಿ ನಮೂನೆಗಳನ್ನು ಶೇಷಾದ್ರಿ ರಸ್ತೆ, ಫ್ರೀಡಂ ಪಾರ್ಕ್ ಹತ್ತಿರ ಇರುವ ಸಮಾದೇಷ್ಟರವರ ಕಚೇರಿ, ಗೃಹರಕ್ಷಕ ದಳ, ಬೆಂಗಳ'ೂರು ದಕ್ಷಿಣ ಜಿಲ್ಲೆ, ಇಲ್ಲಿ ಮೇ 30 ರವರೆಗೆ ಕೆಲಸದ ದಿನಗಳಲ್ಲಿ ಉಚಿತವಾಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ 080-22261012ನ್ನು ಸಂಪರ್ಕಿಸಬಹುದೆಂದು ಹೋಮ್ ಗಾರ್ಡ್ ಕಮಾಂಡೆಂಟ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಅಗ್ನಿವೀರರಿಗೆ ತರಬೇತಿ ವೇಳಾಪಟ್ಟಿ ಪ್ರಕಟ

ಬೆಂಗಳೂರು: ಭಾರತೀಯ ಸೇನೆಗೆ ಅಗ್ನಿವೀರರಾಗಿ ಸೇರಲು ಈಗಾಗಲೇ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ 2026 ರ ಜೂನ್ ರಲ್ಲಿ ಆನ್‌ಲೈನ್ ಸಿ.ಇ.ಇ ಪರೀಕ್ಷೆಯನ್ನು ಆಯೋಜಿಸಲಾಗಿದೆ. ಈ ಪರೀಕ್ಷೆಗೆ ಅಭ್ಯರ್ಥಿಗಳನ್ನು ಉತ್ತಮ ರೀತಿಯಲ್ಲಿ ಸಜ್ಜುಗೊಳಿಸಲು ಸೇನಾ ನೇಮಕಾತಿ ಕಚೇರಿಯ ಸೈನ್ಯಾಧಿಕಾರಿಗಳು ಉಚಿತ ಹೆಚ್ಚುವರಿ ತರಬೇತಿ ಆಯೋಜಿಸಿದ್ದಾರೆ. ಪರೀಕ್ಷೆಯ ಪೂರ್ವ ಸಿದ್ಧತೆಗಾಗಿ ಮಾದರಿ ಪ್ರಶ್ನೆ ಪತ್ರಿಕೆಗಳು ಹಾಗೂ ಮಾಕ್ ಟೆಸ್ಟ್‌ಗಳನ್ನು ಭಾರತೀಯ ಸೇನೆಯ ಅಧಿಕೃತ ವೆಬ್‌ಸೈಟ್ www.joinindianarmy.nic.in ನಲ್ಲಿ ಲಭ್ಯವಾಗುವಂತೆ ಮಾಡಲಾಗಿದೆ. ಇದರೊಂದಿಗೆ, ಅಭ್ಯರ್ಥಿಗಳ ನೆರವಿಗಾಗಿ ವಿವಿಧ ಜಿಲ್ಲೆಗಳಲ್ಲಿ ವಿಶೇಷ ತರಬೇತಿ ನಡೆಯಲಿದ್ದು, ಮೇ 20 ಮೈಸೂರು, ಮೇ 21 ಮಂಡ್ಯ, ಮೇ 22 ಕೆಂಗೇರಿ, ಮೇ 23 ಹಾಸನ, ಮೇ 25 ಮೇ ಬಳ್ಳಾರಿ, ಚಿತ್ರದುರ್ಗ, ವಿಜಯನಗರ, ಹಾಗೂ ಮೇ 26 ಮೇ ರಂದು ಕೋಲಾರ, ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ನಡೆಯಲಿದೆ. ಈ ಉಚಿತ ತರಬೇತಿಯಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವ ಅರ್ಹ ಅಭ್ಯರ್ಥಿಗಳು ಕಡ್ಡಾಯವಾಗಿ ವಾಟ್ಸ್‌ಆಪ್ ಮೂಲಕ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕಾಗುತ್ತದೆ. ವಾಟ್ಸ್‌ಆಪ್ ಸಂಖ್ಯೆ 9141197518 ಸಂದೇಶ ಕಳುಹಿಸಬಹುದು. ಸಿ.ಇ.ಇ ಪರೀಕ್ಷೆ ತೆಗೆದುಕೊಳ್ಳಲಿರುವ ಅಭ್ಯರ್ಥಿಗಳು ಸೈನ್ಯಾಧಿಕಾರಿಗಳು ನೀಡಲಿರುವ ಈ ಉಚಿತ ತರಬೇತಿಯ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೆಲೋಶಿಪ್‌ಗೆ ಅರ್ಜಿ ಆಹ್ವಾನ

ಬೆಂಗಳೂರು: ಬಂಜಾರ ಸಂಸ್ಕೃತಿ ಮತ್ತು ಭಾಷಣ ಅಕಾಡೆಮಿಯು ಬಂಜಾರ ಸಮುದಾಯದ ಸಂಶೋಧಕರಿಗೆ ಪ್ರೋತ್ಸಾಹ ಧನವನ್ನು ಪ್ರಕಟಿಸಿದೆ. ಬಂಜಾರ ಸಂಸ್ಕೃತಿ, ಕಲೆ ಹಾಗೂ ಸಾಹಿತ್ಯದ ಕುರಿತು ಪಿಎಚ್.ಡಿ ಪದವಿ ಪಡೆದಿರುವ ಬಂಜಾರ ಜನಾಂಗದ ಅಭ್ಯರ್ಥಿಗಳಿಂದ ಪುಸ್ತಕ ಪ್ರಕಟಣೆಗಾಗಿ ಧನಸಹಾಯ ನೀಡುವ ಯೋಜನೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳಿಗೆ ಪುಸ್ತಕ ಪ್ರಕಟಣೆಗಾಗಿ ತಲಾ 40,000 ರು.ಗಳ ಫೆಲೋಶಿಪ್ ನೀಡಲಾಗುವುದು ಎಂದು ಅಕಾಡೆಮಿಯ ರಿಜಿಸ್ಟ್ರಾರ್ (ಪ್ರಭಾರ) ಡಾ.ಎಚ್. ರವಿಕುಮಾರ್ ಅವರು ತಿಳಿಸಿದ್ದಾರೆ. ಅರ್ಜಿಯನ್ನು ರಿಜಿಸ್ಟ್ರಾರ್, ಬಂಜಾರ ಸಂಸ್ಕೃತಿ ಮತ್ತು ಭಾಷಣ ಅಕಾಡೆಮಿ, ಚಾಲುಕ್ಯ ವಿಭಾಗ, 1ನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - 560002 ಇವರಿಗೆ ಜೂನ್ 10 ರೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080-29917745 ಅಥವಾ ಗೆ ಇ-ಮೇಲ್: lambanibhashaa cademyg mail.com ಗೆ ಸಂಪರ್ಕಿಸಬಹುದಾಗಿದೆ. ಬಂಜಾರ ಜನಾಂಗದ ಅರ್ಹ ಪಿಎಚ್.ಡಿ ಪದವೀಧರರು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳುವಂತೆ ಪ್ರಕಟಣೆ ತಿಳಿಸಿದೆ.

ಆಭರಣ ರಫ್ತು ಶೇ.9ರಷ್ಟು ಇಳಿಕೆ

ಮುಂಬೈ : ಪಶ್ಚಿಮ ಏಷ್ಯಾ ಸಂಘರ್ಷದಿಂದ ದೇಶದ ರತ್ನ ಮತ್ತು ಆಭರಣಗಳ ರಫ್ತು ಏಪ್ರಿಲ್ ತಿಂಗಳಿನಲ್ಲಿ ಶೇ.9ರಷ್ಟು ಇಳಿಕೆ ಆಗಿದೆ ಎಂದು ರತ್ನ ಮತ್ತು ಆಭರಣ ರಫ್ತು ಉತ್ತೇಜನಾ ಮಂಡಳಿ (ಜಿಜೆಇಪಿಸಿ) ತಿಳಿಸಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ದೇಶದಿಂದ ಒಟ್ಟು 20,952 ಕೋಟಿ ರು. ಮೌಲ್ಯದ ರತ್ನ ಮತ್ತು ಚಿನ್ನಾಭರಣ ರಫ್ತಾಗಿತ್ತು. ಅದು ಈ ಬಾರಿ 20,825 ಕೋಟಿಗೆ ಇಳಿದಿದೆ ಎಂದು ಮಂಡಳಿಯ ಅಧ್ಯಕ್ಷ ಕಿರೀಟ್ ಭನ್ಸಾಲಿ ತಿಳಿಸಿದ್ದಾರೆ. ಕತ್ತರಿಸಿದ ಮತ್ತು ಪಾಲಿಶ್ ಮಾಡಿದ ವಜ್ರಗಳ ರಫ್ತಿನಲ್ಲಿ ಶೇ.19ರಷ್ಟು ಕಡಿಮೆಯಾಗಿದ್ದು, 8,550 ಕೋಟಿ ರು. ಆಗಿದೆ. ಪ್ರಯೋಗಾಲಯಗಳಲ್ಲಿ ಅಭಿವೃದ್ಧಿಪಡಿಸಿದ ವಜ್ರಗಳ ರಫ್ತು ಶೇ.15ರಷ್ಟು ಮತ್ತು ಚಿನ್ನಾಭರಣಗಳ ರಫ್ತು ಶೇ.21ರಷ್ಟು ಇಳಿದಿದೆ. ಆದರೆ ಬೆಳ್ಳಿ ಆಭರಣಗಳ ರಫ್ತಿನಲ್ಲಿ ಶೇ.444ರಷ್ಟು ಏರಿಕೆ ಆಗಿದ್ದು, 2,575 ಕೋಟಿಯಷ್ಟಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಇದು 473 ಕೋಟಿ ಆಗಿತ್ತು ಎಂದು ತಿಳಿಸಿದೆ.

ಮೂತ್ರಾಲಯಕ್ಕೆ ಉಚಿತವಿದ್ದರೂ ಹಣ ಸಂಗ್ರಹಣೆ | ಸಾರ್ವಜನಿಕ ಶೌಚಾಲಯದ ನಿರ್ವಹಣೆ ವಿರುದ್ಧ ಜನಾಕ್ರೋಶ

ಸ್ವಚ್ಛತೆಯಿಲ್ಲದಿದ್ದರೂ ಶುಲ್ಕವಂತೂ ಕೊಡಲೇಬೇಕು

ವೈಭವ ಸಿ. ಕೊಳ್ಳಿ ಬೆಂಗಳೂರು

ದೇಶದಲ್ಲಿ ಸುಲಭ ಶೌಚಾಲಯವನ್ನು ಹುಡುಕುವುದು ಕಷ್ಟವೇನಲ್ಲ. ಏಕೆಂದರೆ ಅರ್ಧ ಕಿಮೀ ದೂರದಲ್ಲಿಯೇ ದುರ್ವಾಸೆ ಎಲ್ಲಿಂದ ಬರುತ್ತಿದೆಯೋ ಅಲ್ಲಿಯೇ ಸಾರ್ವಜನಿಕ ಶೌಚಾಲಯವಿದೆ ಎನ್ನುವ ಮಾತು ತಮಾಷೆಗೆ ಅನೇಕರು ಹೇಳುತ್ತಾರೆ. ಆದರೆ ಈ ತಮಾಷೆ ಮಾತು ಸತ್ಯ ಎನ್ನುವ ರೀತಿಯಲ್ಲಿ ರಾಜಧಾನಿ ಬೆಂಗಳೂರಿನ ಅನೇಕ ಸಾರ್ವಜನಿಕ ಶೌಚಾಲಯಗಳಿವೆ ಎನ್ನುವ ಆರೋಪ ಸಾರ್ವಜನಿಕ ವಲಯದಲ್ಲಿದೆ.

ರಾಜಧಾನಿ ಬೆಂಗಳೂರಿನ ಅನೇಕ ಸಾರ್ವಜನಿಕ ಶೌಚಾಲಯದಲ್ಲಿ ಸ್ವಚ್ಛತೆಯಿಲ್ಲ, ಸರಿಯಾಗಿ ನೀರಿಲ್ಲ. ಆದರೆ ಶುಲ್ಕವನ್ನು ಪಡೆಯುವುದರಲ್ಲಿ ಮಾತ್ರ ಎಂದಿಗೂ ಹಿಂದೆ ಬಿದ್ದಿಲ್ಲ. ಬೆಂಗಳೂರಿನಲ್ಲಿರುವ ಅನೇಕ ಸಾರ್ವಜನಿಕ ಶೌಚಾಲಯದಲ್ಲಿ ಮೂತ್ರಾಲಯಗಳನ್ನು ಬಳಸಲು ಯಾವುದೇ ಶುಲ್ಕ ನೀಡಬೇಕಿಲ್ಲ ಎನ್ನುವ ಬೋರ್ಡ್ ಸಾರ್ವಜನಿಕ ಶೌಚಾಲಯಗಳ ಹೊರಗೆ ಹಾಕಿದ್ದರೂ, ಶುಲ್ಕ ಸಂಗ್ರಹಿಸಲು ಇರುವ ಸಿಬ್ಬಂದಿಗಳು ಹಣ ಪೀಕುವುದನ್ನು ಮಾತ್ರ ಬಿಡುವುದಿಲ್ಲ ಎನ್ನುವ ಆರೋಪವಿದೆ.

ನಗರದಲ್ಲಿರುವ ಅನೇಕ ಭಾಗದಲ್ಲಿ ಉಚಿತ ಸಾರ್ವಜನಿಕ ಶೌಚಾಲಯ ಎಂಬ ಬರಹವಿದ್ದರೂ, ಕೆಳಭಾಗದಲ್ಲಿ ಪೇ ಅಂಡ್ ಯೂಸ್, ನೀಟ್ ಅಂಡ್ ಕ್ಲೀನ್ ಎಂಬ ಸ್ಟಿಕರ್ ಅಂಟಿಸಿ ಮೂತ್ರ ವಿಸರ್ಜನೆಗೆ 5 ರು. ಹಾಗೂ ಮಲ ವಿಸರ್ಜನೆಗೆ 10 ರು. ಶುಲ್ಕ ವಿಧಿಸಲಾಗುತ್ತಿದೆ. ಇದರಿಂದ ಬಡವರು, ದಿನಗೂಲಿ ಕಾರ್ಮಿಕರು ಹಾಗೂ ಸಾಮಾನ್ಯ ಜನರು ಪ್ರತಿ ಸಲ ಶುಲ್ಕವನ್ನು ಕೊಟ್ಟು ಹೋಗಬೇಕಾದ ಪರಿಸ್ಥಿತಿ ಬಂದಿದೆ.

> ಮೂಲಭೂತ ಸೌಲಭ್ಯವಾಗಿರುವ ಸಾರ್ವಜನಿಕ ಶೌಚಾಲಯಕ್ಕೆ ಹಣ ವಸೂಲಿ ಮಾಡುತ್ತಿರುವುದು ಸರಿಯಲ್ಲ. ದಿನಗೂಲಿ ಕಾರ್ಮಿಕರು, ವೃದ್ಧರು ಹಾಗೂ ಬಡವರಿಗೆ ಪ್ರತಿದಿನ ಹಣ ಕೊಟ್ಟು ಶೌಚಾಲಯ ಬಳಸುವುದು ಕಷ್ಟವಾಗುತ್ತಿದೆ. ನಗರ ಪಾಲಿಕೆ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಉಚಿತ ಅಥವಾ ಕಡಿಮೆ ಶುಲ್ಕದಲ್ಲಿ ಉತ್ತಮ ಸೌಲಭ್ಯ ಒದಗಿಸಬೇಕು.
>
> **- ರಮೇಶ್,** ಕೂಲಿ ಕಾರ್ಮಿಕ

ಅನೇಕ ಸಮಯದಲ್ಲಿ ಐದು ರುಪಾಯಿ ಕೊಡಬೇಕಾಗುತ್ತದೆ ಎನ್ನುವ ಕಾರಣಕ್ಕೆ ಹಲವರು ರಸ್ತೆಬದಿಯಲ್ಲಿಯೇ ಮಾಡುತ್ತಿದ್ದಾರೆ.

ಇದರಿಂದ ನಗರದ ಸ್ವಚ್ಛತೆ ಹಾಗೂ ಸೌಂದರ್ಯಕ್ಕೆ ಧಕ್ಕೆ ಉಂಟಾಗುತ್ತದೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಇನ್ನು ಕೆಲವರು ಶುಲ್ಕ ಪಾವತಿಸಿ ಹೋಗುವ ಬದಲು ಮನೆಗೆ ಹೋಗೋಣ ಎಂದು ಮೂತ್ರ ವಿಸರ್ಜನೆಯನ್ನು ತಡೆಹಿಡಿಯುತ್ತಿದ್ದಾರೆ. ಇದರಿಂದ ಕಿಡ್ನಿ ಸ್ಟೋನ್, ಮೂತ್ರನಾಳದ ಸೋಂಕು ಸೇರಿದಂತೆ ಹಲವು ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿವೆ ಎಂದು ವೈದ್ಯರೊಬ್ಬರು ತಿಳಿಸಿದ್ದಾರೆ.

250 ಮಹಿಳಾ ಶೌಚಾಲಯ

ಮಹಿಳಾ ಶೌಚಾಲಯಗಳ ಕೊರತೆ ಮತ್ತಷ್ಟು ಗಂಭೀರ ಸಮಸ್ಯೆಯಾಗಿ ಪರಿಣಮಿಸಿದೆ. ಸುಮಾರು 1.25 ಕೋಟಿ ಜನಸಂಖ್ಯೆ ಹೊಂದಿರುವ ಐಟಿ ನಗರ ಬೆಂಗಳೂರಿನಲ್ಲಿ ಮಹಿಳೆಯರಿಗಾಗಿ ಅಂದಾಜು 250ರಷ್ಟು ಸಾರ್ವಜನಿಕ ಶೌಚಾಲಯಗಳಷ್ಟೇ ಇರುವುದಾಗಿ ಹೇಳಲಾಗುತ್ತಿದ್ದು, ಇದು ಮಹಿಳೆಯರಿಗೆ ತೀವ್ರ ತೊಂದರೆ ಉಂಟುಮಾಡುತ್ತಿದೆ. ಪ್ರಮುಖ ಬಸ್ ನಿಲ್ದಾಣಗಳು ಹಾಗೂ ಜನಸಂದಣಿ ಪ್ರದೇಶಗಳನ್ನು ಹೊರತುಪಡಿಸಿದರೆ, ನಗರದ ಬಹುತೇಕ ಭಾಗಗಳಲ್ಲಿ ಮಹಿಳಾ ಶೌಚಾಲಯಗಳ ಲಭ್ಯತೆ ಅತ್ಯಂತ ಕಡಿಮೆಯಾಗಿದೆ.ಪುರುಷರಿಗೆ ತುರ್ತು ಸಂದರ್ಭಗಳಲ್ಲಿ ಪರ್ಯಾಯ ವ್ಯವಸ್ಥೆಗಳು ದೊರೆಯುತ್ತಿದ್ದರೂ, ಮಹಿಳೆಯರಿಗೆ ಅಂತಹ ಅವಕಾಶಗಳಿಲ್ಲದ ಕಾರಣ ಪರಿಸ್ಥಿತಿ ಇನ್ನಷ್ಟು ಸಂಕೀರ್ಣವಾಗಿದೆ. ಸರಕಾರವು ಸಿಎಸ್‌ಆರ್ ಯೋಜನೆಗಳ ಮೂಲಕ ಹೊಸ ಶೌಚಾಲಯ ನಿರ್ಮಾಣದ ಭರವಸೆ ನೀಡಿದ್ದರೂ, ನೆಲಮಟ್ಟದಲ್ಲಿ ಅದರ ಪರಿಣಾಮ ಕಾಣಿಸುತ್ತಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಸ್ವಚ್ಛತೆ ಕಾಣದ ಶೌಚಾಲಯಗಳು

ಇನ್ನು ಸಾರ್ವಜನಿಕರಿಂದ ಶುಲ್ಕ ವಸೂಲಿ ಮಾಡುತ್ತಿದ್ದರೂ ಸುಲಭ ಶೌಚಾಲಯಗಳ ಸ್ಥಿತಿಯೇನು ಉತ್ತಮವಾಗಿಲ್ಲ. ಸ್ವಚ್ಛತೆ ಕೊರತೆ, ನೀರಿನ ಅಭಾವ ಹಾಗೂ ಸಮರ್ಪಕ ನಿರ್ವಹಣೆಯಿಲ್ಲದ ಕಾರಣ ಜನರು ಶೌಚಾಲಯ ಬಳಸಲು ಹಿಂಜರಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಹಣ ಕೊಟ್ಟು ಒಳಗೆ ಹೋಗಲು ಅಸಹ್ಯವಾಗುತ್ತದೆ. ಜತೆಗೆ ಶೌಚಾಲಯ ಮತ್ತು ಅದರ ಸುತ್ತಮುತ್ತಲಿನ ಪ್ರದೇಶದಲ್ಲೂ ಸಮರ್ಪಕ ಸ್ವಚ್ಛತೆ ಇಲ್ಲದಿರುವುದು, ಶುಲ್ಕ ವಿತರಣೆ ಸಮಸ್ಯೆಯಿಂದ ಜನರು ರಸ್ತೆ ಬದಿಯಲ್ಲಿ ಮೂತ್ರ ವಿಸರ್ಜನೆ ಮಾಡುವುದರಿಂದ ದುರ್ವಾಸನೆ, ಸೊಳ್ಳೆಗಳ ಹೆಚ್ಚಳ ಮತ್ತು ಆರೋಗ್ಯ ಸಮಸ್ಯೆಗಳು ಉಂಟಾಗುವ ಸಾಧ್ಯತೆ ಇದೆ ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

> ಈಗ ಯಾವ ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ಯಾವ ಶೌಚಾಲಯ ಬರುತ್ತದೆಯೋ ಅದರ ಸಂಪೂರ್ಣ ಜವಾಬ್ದಾರಿ ಆ ಕಾರ್ಪೊರೇಷ್‌ನ್‌ದ್ದಾಗಿದೆ. ಹೊಸ ಶೌಚಾಲಯ ನಿರ್ಮಾಣ, ನಿರ್ವಹಣೆ, ಟೆಂಡರ್ ಪ್ರಕ್ರಿಯೆ, ಏಜೆನ್ಸಿ ಬದಲಾವಣೆ, ಪೇ ಅಂಡ್ ಯೂಸ್ ವ್ಯವಸ್ಥೆ ಜಾರಿಗೆ ತರುವುದು ಅಥವಾ ಉಚಿತ ಸೇವೆ ನೀಡುವುದು ಸೇರಿದಂತೆ ಎಲ್ಲಾ ನಿರ್ಧಾರಗಳನ್ನು ಸ್ಥಳೀಯ ಆಯುಕ್ತರೇ ಕೈಗೊಳ್ಳುತ್ತಾರೆ.
>
> **- ಭೀಮೇಶ್ ಎಚ್.**
> ಉಪಪ್ರಧಾನ ವ್ಯವಸ್ಥಾಪಕ , ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಲಿಮಿಟೆಡ್

ಕಚ್ಚಾ ಕಾಲುವೆ ಸ್ವಚ್ಛತೆಗೆ ಸೂಚನೆ

ಬೆಂಗಳೂರು: ಬೆಂಗಳೂರು ಪೂರ್ವ ನಗರ ಪಾಲಿಕೆಯ ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ ಕಲ್ಕೆರೆ-ಹೊಯ್ಸಳನಗರ ಪ್ರದೇಶಗಳಲ್ಲಿನ ಮಳೆ ನೀರು ಕಾಲುವೆಗಳನ್ನು ಅಪರ ಆಯುಕ್ತ ಲೋಖಂಡೆ ಸ್ನೇಹಲ್ ಸುಧಾಕರ ಪರಿಶೀಲನೆ ನಡೆಸಿದರು.

ಕಲ್ಕೆರೆ ಸ್ಮಶಾನ ಸಮೀಪ, ಕಲ್ಕೆರೆ ಪೇಟೆ ಕೃಷ್ಣಪ್ಪ ಲೇಔಟ್ ಬಳಿ, ಕಲ್ಕೆರೆ ಎನ್‌ಪಿಎಸ್ ಶಾಲೆಯ ಹಿಂಭಾಗ, ಕಲ್ಕೆರೆ ಖಾನೆ ರಸ್ತೆ ಅಭಯ ಶಾಲೆ ಸಮೀಪ, ಹೊಯ್ಸಳನಗರ 3ನೇ ಮುಖ್ಯರಸ್ತೆ, ಹೊಯ್ಸಳನಗರ 13ನೇ ಕ್ರಾಸ್, ಹೊಯ್ಸಳನಗರ 13ನೇ ಎ ಕ್ರಾಸ್ ರಸ್ತೆಯ ಕಚ್ಚಾ ಮಳೆ ನೀರು ಕಾಲುವೆಗಳನ್ನ ಪರಿಶೀಲಿಸಿದರು. ಈ ವೇಳೆ ಮಳೆಗಾಲಕ್ಕೂ ಮುಂಚಿತವಾಗಿ ಕಲ್ಕೆರೆ ಹಾಗೂ ಹೊಯ್ಸಳ ನಗರ ವ್ಯಾಪ್ತಿಯ ಎಲ್ಲಾ ಕಚ್ಚಾ ಹಾಗೂ ಕಾಂಕ್ರೀಟ್ ಮಳೆ ನೀರು ಕಾಲುವೆಗಳಲ್ಲಿನ ಹೂಳು, ಮಣ್ಣು, ತ್ಯಾಜ್ಯ, ಗಿಡಗಳನ್ನು ತೆರವು ಮಾಡಿ ಕಾಲುವೆಯಲ್ಲಿ ಮಳೆ ನೀರು ಸರಾಗವಾಗಿ ಹರಿಯಲು ವ್ಯವಸ್ಥೆ ಕಲ್ಪಿಸಲು ಸೂಚಿಸಿದರು.ವಿಶ್ವಬ್ಯಾಂಕ್ ಅನುದಾನದಡಿ ಕಲ್ಕೆರೆ ಮತ್ತು ಹೊಯ್ಸಳ ನಗರ ವ್ಯಾಪ್ತಿಯಲ್ಲಿನ ಕಚ್ಚಾ ಮಳೆ ನೀರು ಕಾಲುವೆಗಳನ್ನು ಅಭಿವೃದ್ಧಿ ಪಡಿಸಲು ಈಗಾಗಲೇ ಗುರುತಿಸಿರುವ ಕಡೆಗಳಲ್ಲಿ ಕಾಮಗಾರಿಗಳನ್ನು ಆರಂಭಿಸುವಂತೆ ಹಾಗೂ ಕಾಮಗಾರಿಗೆ ವೇಗ ನೀಡುವಂತೆ ಆದೇಶಿಸಿ ದರು. ಈ ಪ್ರದೇಶದಲ್ಲಿನ ಕಾಲುವೆಗಳಲ್ಲಿ ಕೆಲವು ಕಡೆ ಕಾಲುವೆಗಳ ಒತ್ತುವರಿ ಯಾಗಿರುವುದು ಕಂಡುಬಂದಿದ್ದು, ಕಂದಾಯ ಇಲಾಖೆ ಸರ್ವೇ ನಕ್ಷೆಯಂತೆ ಕಾಲುವೆಗಳ ನೈಜ ಅಳತೆ ಪರಿಶೀಲಿಸಿ ಒತ್ತುವರಿಗಳನ್ನು ತೆರವು ಮಾಡಲು ಸೂಚನೆ ನೀಡಿದರು. ಮಳೆ ನೀರು ಕಾಲುವೆಗಳ ಸಮೀಪದಲ್ಲೇ ಬ್ಲಾಕ್ ಸ್ಪಾಟ್ ಇರುವುದು ಕಂಡುಬಂದಿದ್ದು ಇದರಿಂದಾಗಿ ಕಾಲುವೆಗಳು ಕ್ರಮೇಣ ಬ್ಲಾಕ್ ಆಗುತ್ತವೆ. ಈ ಕೂಡಲೇ ಬ್ಲಾಕ್ ಸ್ಪಾಟ್ ತೆರವು ಮಾಡಲು ಹಾಗೂ ಇನ್ನೂ ಮುಂದೆ ಬ್ಲಾಕ್ ಸ್ಪಾಟ್ ಆಗದಂತೆ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಲು ತಾಕೀತು ಮಾಡಿದರು.

ಈ ಸಂದರ್ಭದಲ್ಲಿ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಲ್ಕೆರೆ ಹಾಗೂ ಹೊಯ್ಸಳ ನಗರದ ಸ್ಥಳೀಯರು ಹಾಜರಿದ್ದರು.

ಅಲಕ್ಷಿತ ಸಮುದಾಯಗಳ ಪ್ರಗತಿಗೆ ಆದ್ಯತೆ ನೀಡಲಿ

ಬೆಂಗಳೂರು: ನಮ್ಮ ರಾಜ್ಯ ವ್ಯಾಪ್ತಿಯಲ್ಲಿರುವ ಅಲಕ್ಷಿತ ಸಮುದಾಯಗಳ ಪ್ರಗತಿಗೆ ರಾಜ್ಯ ಸರಕಾರ ಹೆಚ್ಚಿನ ಆದ್ಯತೆ ನೀಡಬೇಕಾದ ಅನಿವಾರ್ಯತೆ ಇದೆ ಎಂದು ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ತಿಳಿಸಿದರು.

ನೇಗಿಲ ಯೋಗಿ ಟ್ರಸ್ಟ್ ವತಿಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿದ್ದ ಕನ್ನಡ ಮತ್ತು ಇಂಗ್ಲೀಷ್ ಲಿಪಿಯಲ್ಲಿ ಮೊಟ್ಟಮೊದಲ ಕೊರಚ ಮಾತುಕತೆ ಮತ್ತು ದಿ ಕೊರಚಾಸ್ ಕರ್ನಾಟಕ ಅನುವಾದಿತ ಕೃತಿ ಲೋಕಾರ್ಪಣೆಗೊಳಿಸಿ

ಮಾತನಾಡಿ, ಆಧುನಿಕತೆ ಶರವೇಗದಲ್ಲಿ ಸಾಗುತ್ತಿರುವ ಸರಕಾರಗಳು ಅಲಕ್ಷಿತ ಸಮುದಾಯಗಳನ್ನು ನಿರ್ಲಕ್ಷಿಸುತ್ತಾ ಬರುತ್ತಿವೆ. ಈ ಪರಿಣಾಮ ಸಮುದಾ ಯಗಳಲ್ಲಿನ ಜನತೆ ಸಮಾಜದ ಮುಖ್ಯವಾಹಿಗೆ ಬರದಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.ಸರಕಾರಗಳು ಜಾರಿಗೆ ತಂದ ಯೋಜನೆಗಳು ಅವರಿಗೆ ಮುಟ್ಟುತ್ತಿಲ್ಲ, ಬದಲಾಗಿ ಅವರಿಗೆ ತಕ್ಕಂತೆ ಯಾವ ಕಾರ್ಯಯೋಜನೆಗಳನ್ನು ರೂಪಿಸಿ ಅನುಷ್ಠಾನ ಮಾಡಬೇಕು ಎಂಬ ಬಗ್ಗೆಯೂ ಸರಕಾರಗಳು ಹೆಚ್ಚಿನ ಆದ್ಯತೆಯನ್ನು ನೀಡುತ್ತಿಲ್ಲ. ಹೀಗೆ ಅಲಕ್ಷಿತ ಸಮುದಾಯಗಳು ವೃದ್ಧಿಗೊಂಡು ಪ್ರಾಬಲ್ಯ ಸಾಧಿಸಬೇಕಾದವು ಅಭಿವೃದ್ಧಿಯನ್ನು ಕಾಣದಂತಹ ಪರಿಸ್ಥಿತಿಗೆ ದೂಡಲ್ಪಟ್ಟಿವೆ ಎಂದರು.ಹಿರಿಯ ಸಾಹಿತಿ ಹಂಪ ನಾಗರಾಜಯ್ಯ ಮಾತನಾಡಿ, ಡಾ.ಎಚ್. ಆರ್.ಸ್ವಾಮಿ ಅವರು ಕರ್ನಾಟಕ ಸಾಂಸ್ಕೃತಿಕ ಲೋಕವನ್ನು ಒಳಗೊಂ ಡು ಇತರ ಬಗೆಯಲ್ಲಿ ನೀಡಿರುವ ಕೊಡುಗೆ ಅನನ್ಯವಾದದ್ದು. ಅವರು ಕೊರಚ ಸಮಾಜದ ಬಾಷೆ ಸಂಸ್ಕೃತಿ ಜೀವನ ಕಲೆ ಈ ವಿಷಯಗಳನ್ನು ಕುರಿತು ಬೆಲೆ ಬಾಳುವ ಕೃತಿಗಳನ್ನು ರಚಿಸಿದ್ದಾರೆ. ಮುಖ್ಯವಾಗಿ ಅಳಿವಿನಂಚಿನಲ್ಲಿರುವ ಕೊರಚ ಸಂಸ್ಕೃತಿಯನ್ನು ಮುಂದಿನ ತಲೆ ಮಾರಿಗೆ ತಿಳಿಸುವ ಕಾರ್ಯದಲ್ಲಿ ನಿರತರಾಗಿರುವ ಬಗೆಯೇ ವಿಶೇಷತೆಯಿಂದ ಕೂಡಿದೆ. ನಿವೃತ್ತಿಯ ನಂತರವು ದಂಪತಿ ಕಾರ್ಯವೈಖರಿ ವಿಭಿನ್ನವಾದದ್ದು ಎಂದರು.

> ಕೊರಚ, ಬಂಜಾರ ಸೇರಿದಂತೆ ಹಲವಾರು ಸಮುದಾಯಗಳ ಸಂಸ್ಕೃತಿ ಒಂದು ವಿಶಿಷ್ಟ ಬಗೆಯಲ್ಲಿ ಕೂಡಿದ್ದು, ಅವುಗಳನ್ನು ಕಾದಿಟ್ಟುಕೊಂಡು ಮುಂದಿನ ತಲೆಮಾರುಗಳಿಗೆ ನಿರಂತರವಾಗಿ ತಿಳಿಸುವಂತಹ ಕೆಲಸವಾಗಬೇಕಿದೆ. ಸಣ್ಣ, ಸಣ್ಣ ಸಮುದಾಯಗಳ ವೈಶಿಷ್ಟಭಾಷಾ ಸಂಸ್ಕೃತಿಯನ್ನು ಪೋಷಿಸಿ ಬೆಳೆಸುವಂತಹ ಕೆಲ ಸರಕಾರ ಆಗಬೇಕಾಗಿದೆ.
>
> **- ಅಗ್ರಹಾರ ಕೃಷ್ಣಮೂರ್ತಿ,** ಸಾಹಿತಿ

ಸ್ವಚ್ಛ, ಸುಂದರ, ಆರೋಗ್ಯಕರ ಬೆಂಗಳೂರಿಗಾಗಿ ಕೈಜೋಡಿಸಿ

ಬೆಂಗಳೂರು: ಸ್ವಚ್ಛ ಭಾರತ್ ಮಿಷನ್ ಅರ್ಬನ್ 2.0 ಅಡಿ ಬೆಂಗಳೂರು ಕೇಂದ್ರ ನಗರ ಪಾಲಿಕೆಯ ವ್ಯಾಪ್ತಿಯ ಜಲಮೂಲಗಳ ಸಂರಕ್ಷಣೆ, ತ್ಯಾಜ್ಯ ವಿಂಗಡಣೆ ಹಾಗೂ ಸಮರ್ಪಕ ನಿರ್ವಹಣೆ, ಏಕಬಳಕೆ ಪ್ಲಾಸ್ಟಿಕ್ ನಿಷೇಧ, ಪ್ಲಾಸ್ಟಿಕ್ ಮರುಬಳಕೆ, ಸಾರ್ವಜನಿಕ ಸ್ಥಳಗಳ ಸ್ವಚ್ಛತೆ ಕಾಪಾಡುವ ಕುರಿತು ಬೆಂಗಳೂರು ನಗರದ ಚರ್ಚ್ ಸ್ಟ್ರೀಟ್‌ನಲ್ಲಿ ಜನಜಾಗೃತಿ ಬೀದಿ ನಾಟಕ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮಾತನಾಡಿದ ಕೇದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಮಾತನಾಡಿ, ಸುಂದರ ಹಾಗೂ ಆರೋಗ್ಯಕರ ಬೆಂಗಳೂರು ನಗರಕ್ಕಾಗಿ ನಾಗರಿಕರ ಸಹಕಾರ ಬಹುಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಸಾರ್ವಜನಿಕರು, ಸಂಘ-ಸಂಸ್ಥೆಗಳು, ಎನ್‌ಜಿಓಗಳು ಅಪಾರ್ಟ್‌ಮೆಂಟ್ ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳು ಕೇಂದ್ರ ನಗರ ಪಾಲಿಕೆಯೊಂದಿಗೆ ಕೈಜೋಡಿಸುವಂತೆ ಮನವಿ ಮಾಡಿದರು.

ಮೂರು ಕಡೆಗಳಲ್ಲಿ ಬೀದಿನಾಟಕ: ಚಿಕ್ಕಪೇಟೆ ಕ್ಷೇತ್ರದ ಲಾಲ್‌ಬಾಗ್ ಪಶ್ಚಿಮ ದ್ವಾರ, ಸಿ.ವಿ.ರಾಮನ್ ನಗರ ವಿಧಾನಸಭಾ ಕ್ಷೇತ್ರದ ಕೆಎಫ್‌ಸಿ ಬಸ್ ನಿಲ್ದಾಣ ಹಾಗೂ ಶಾಂತಿನಗರ ಕ್ಷೇತ್ರದ ಚರ್ಚ್ ಸ್ಟ್ರೀಟ್ ಮೆಟ್ರೋ ನಿಲ್ದಾಣ ಹಿಂಭಾಗದಲ್ಲಿ ಬೀದಿ ನಾಟಕ ಆಯೋಜಿಸಲಾಗಿತ್ತು. ಈ ಮೂರು ಸ್ಥಳಗಳಲ್ಲಿ ನಾಟಕ ವೀಕ್ಷಿಸಿದ ಆಯುಕ್ತ ರಾಜೇಂದ್ರ ಚೋಳನ್, ನಮ್ಮ ಮನೆಗಳು ಸೇರಿದಂತೆ ಸಾರ್ವಜನಿಕ ಸ್ಥಳಗಳ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಸ್ವಚ್ಛ, ಸುಂದರ ಹಾಗೂ ಆರೋಗ್ಯಕರ ನಗರ, ನಿರ್ಮಾಣಕ್ಕೆ ನಾವು ಬದಲಾಗೋಣ, ಬೆಂಗಳೂರು ಸ್ವಚ್ಛತೆಯೆಡೆಗೆ ಬದಲಾಯಿಸೋಣ ಎಂಬ ದೃಢ ಸಂಕಲ್ಪದ ಬೋಧನೆ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಕಂದಾಯ ಅಪರ ಆಯುಕ್ತದ ಕೆ.ರಂಗನಾಥ್, ಡಿಜಿಎಂ ಭೀಮೇಶ್ ನಾಯಕ್, ಎಜಿಎಂಗಳು, ಮಾರ್ಷಲ್ ಗಳು ಹಾಜರಿದ್ದರು

ಕಲೆ, ತಂತ್ರಜ್ಞಾನದ ಸಂಗಮ ಕಲೋತ್ಸವ ಯಶಸ್ವಿ

ಬೆಂಗಳೂರು: ವಿಜಯನಗರದ ವಾಸವಿ ಜ್ಞಾನಪೀಠ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳ ಸಹಯೋಗದೊಂದಿಗೆ ಕಲೆ, ಸಂಸ್ಕೃತಿ, ಸಂಗೀತ, ತಂತ್ರಜ್ಞಾನದ ಸಂಗಮ ಕಲೋತ್ಸವವನ್ನು ಅತ್ಯಂತ ಅದ್ದೂರಿಯಾಗಿ ಆಚರಿಸಲಾಯಿತು.

ವಿವಿಧ 8 ಕಾಲೇಜುಗಳ ವಿದ್ಯಾರ್ಥಿಗಳು ಈ ಉತ್ಸವದಲ್ಲಿ ಭಾಗವಹಿಸಿದ್ದರು. ಪ್ರತಿಭೆಗಳನ್ನು ಗುರುತಿಸುವ ಮಹತ್ವದ ವೇದಿಕೆಯಲ್ಲಿ ಕಾಲೇಜು ವಿದ್ಯಾರ್ಥಿಗಳು ವೈವಿಧ್ಯಮ ಸಂಗೀತ, ನೃತ್ಯ, ನಾಟಕ ಪ್ರದರ್ಶಿಸಿ ಸಂಭ್ರಮಿಸಿದರು. ಜತೆಗೆ ವಿದ್ಯಾರ್ಥಿಗಳಿಗೆ ಆಧುನಿಕ ಕೌಶಲ್ಯವಾದ ವೆಬ್ ಡಿಸೈನಿಂಗ್, ಬ್ಯಾನರ್, ಪೋಸ್ಟರ್ ವಿನ್ಯಾಸ, ವ್ಯಾಪಾರ ವಲಯ ಕುರಿತ ರಸ ಪ್ರಶ್ನೆ, ಮಾರುಕಟ್ಟೆ ಸವಾಲುಗಳು, ವ್ಯಾಪಾರ ಕ್ಷೇತ್ರದ ಪ್ರಾತ್ಯಕ್ಷಿಕೆಗಳನ್ನು ಪ್ರದರ್ಶಿಸಿ ತಮ್ಮೊಳಗೆ ಅಡಗಿರುವ ಪ್ರತಿಭೆಯನ್ನು ವಿದ್ಯಾರ್ಥಿಗಳು ಅನಾವರಣ ಗೊಳಿಸಿ ದರು. ವಾಸವಿ ಸಮೂಹ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಿ.ಆರ್.ವಿಜಯ ಸಾರಥಿ ಮಾತನಾಡಿ, ಕಲೋತ್ಸವ ಅತ್ಯಂತ ವಿನೂತನವಾಗಿ ಮೂಡಿ ಬಂತು. ಮಹಾಭಾರತದ ನಾಟಕ ಪ್ರದರ್ಶಿಸಿದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು. ಈ ವರ್ಷ ವಾಸವಿ ಕಾಲೇಜಿನ 616 ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಮೂಲಕ ಉದ್ಯೋಗ ದೊರಕಿಸಿ ಕೊಡಲಾಗಿದೆ. ಜತೆಗೆ ಕ್ರೀಡೆಗೆ ಆದ್ಯತೆ ನೀಡುವ ದೃಷ್ಟಿ ಯಿಂದ ಜೂನ್ ಇಲ್ಲವೆ ಜುಲೈನಲ್ಲಿ ಅಂತರ್ ಕಾಲೇಜು ವಾಸವಿ ಕಪ್ ಕ್ರಿಕೆಟ್ ಟೂರ್ನಿ ಆಯೋಜಿ ಸಲಾಗು ವುದು. ಗೆದ್ದ ತಂಡಕ್ಕೆ 1 ಲಕ್ಷ ರು., ರನ್ನರ್ ಅಪ್ ತಂಡಕ್ಕೆ 50 ಸಾವಿರ ರು. ನಗದ ಬಹುಮಾನ ನೀಡಲಾಗುವುದು. ಕೆ.ಜಿಯಿಂದ ಪಿಜಿವರೆಗೆ ಉತ್ತಮ ಶಿಕ್ಷಣದ ಜತೆಗೆ ಸ್ವಾಲಂಬಿ ಬದುಕು ರೂಪಿಸಲು ಒತ್ತು ನೀಡಲಾಗಿದೆ ಎಂದರು. ಪದವಿ ಕಾಲೇಜು ಪ್ರಾಂಶು ಪಾಲರಾದ ಪದ್ಮ, ಡಾ. ರಂಗ ಸ್ವಾಮಿ, ಪಿಯು ಕಾಲೇಜು ಪ್ರಾಂಶುಪಾಲರು, ಶಿಕ್ಷಕರು, ಸಿಬ್ಬಂದಿ ಉಪಸ್ಥಿತರಿದ್ದರು.

ಸಂಗಮ ಕಲೋತ್ಸವವನ್ನು ಅತ್ಯಂತ ಅದ್ದೂರಿಯಾಗಿ ಆಚರಿಸಲಾಯಿತು. ವಾಸವಿ ಸಮೂಹ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಿ.ಆರ್.ವಿಜಯ ಸಾರಥಿ ಇದ್ದರು.

ಮುಸ್ಲಿಂ ಮಹಿಳೆಯರ ಬಗ್ಗೆ ಅನೇಕ ಪೂರ್ವಗ್ರಹಳಿವೆ

ಬೆಂಗಳೂರು: ಸಮಾಜದಲ್ಲಿ ಮುಸ್ಲಿಂ ಮಹಿಳೆಯರ ಬಗ್ಗೆ ಅನೇಕ ಪೂರ್ವಗ್ರಹಗಳಿದ್ದು, ಅವರನ್ನು ಕೇವಲ ಉಡುಪುಗಳಿಂದ ಗುರುತಿಸಲಾಗುತ್ತಿದೆ. ಅವರ ಧ್ವನಿಯನ್ನು ಕೇಳದೇ ತೀರ್ಪು ನೀಡಲಾಗುತ್ತದೆ. ಅವರ ಸಾಮರ್ಥ್ಯ ಅಳೆಯುವುದನ್ನು ಬಿಟ್ಟು ಅನುಮಾನ ವ್ಯಕ್ತಪಡಿಸಲಾಗುತ್ತದೆ ಎಂದು ಲೇಖಕಿ ಬಾನು ಮುಷ್ತಾಕ್ ಹೇಳಿದರು.

ಜಕ್ಕೂರಿನ ಅಹಮದೀಯಾ ಮುಸ್ಲಿಂ ಕಮ್ಯುನಿಟಿ ಭಾನುವಾರ ಆಯೋಜಿಸಿದ್ದ 'ರಾಷ್ಟ್ರ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ' ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿ, ಮುಸ್ಲಿಂ ಮಹಿಳೆಯರು ಬಹಳ ಕೊಳಕಾಗಿರುತ್ತಾರೆ, ಅನೇಕ ಮಕ್ಕಳನ್ನು ಹೆರುತ್ತಾರೆ, ಅವಿದ್ಯಾ ವಂತರಾಗಿದ್ದಾರೆ, ಭಯೋತ್ಪಾದಕರು, ಅವರು ಸರಿಯಲ್ಲ, ಬುರ್ಕಾ ಧರಿಸಿ ನಮ್ಮ ಪಕ್ಕ ಕುಳಿತುಕೊಂಡರೆ ನಮಗೆ ಹೆದರಿಕೆ ಆಗುತ್ತದೆ ಎಂಬ ಅನೇಕ ಪೂರ್ವಗ್ರಹಗಳಿವೆ ಎಂದರು.

> ಇಲ್ಲಿ ಮಾಧ್ಯಮ ಹಾಗೂ ಸಮಾಜದ ಪೂರ್ವಗ್ರಹಗಳಿಗೆ ಮುಸ್ಲಿಂ ಮಹಿಳೆಯರು ಎಷ್ಟು ಹೊಣೆಗಾರರಾಗಿದ್ದಾರೋ, ನಾವು ಅಷ್ಟೇ ಕಾರಣ ಆಗಿದ್ದೇವೆ ಎಂಬ ಆತ್ಮವಿಮರ್ಶೆ ಮಾಡಿಕೊಳ್ಳಬೇಕು.
>
> **- ಬಾನು ಮುಷ್ತಾಕ್,** ಲೇಖಕಿ

ಕನಿಷ್ಠ ವೇತನ ಸಲಹಾ ಮಂಡಳಿ ಪುನಾರಚನೆ

ಬೆಂಗಳೂರು: ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯನ್ನು ಮುಂಬರುವ ಎರಡು ವರ್ಷಗಳ ಅವಧಿಗೆ ಪುನರ್ ರಚಿಸಿ ಸರಕಾರ ಅಧಿಕೃತ ಆದೇಶ ಹೊರಡಿಸಿದೆ. ಕಾರ್ಮಿಕ ಇಲಾಖೆಯ ಪೀಠಾಧಿಕಾರಿ ಹೇಮಾವತಿ ಬಿ. ಅವರು ಅಧಿಸೂಚನೆ ಹೊರಡಿಸಿದ್ದು, ಮಂಡಳಿಯ ಅವಧಿಯು ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಎರಡು ವರ್ಷಗಳು ಅಥವಾ ಮುಂದಿನ ಆದೇಶದವರೆಗೆ ಜಾರಿಯಲ್ಲಿರಲಿದೆ ಎಂದು ತಿಳಿಸಲಾಗಿದೆ.

ಹಿಂದೆ 16.11.2023 ರಂದು ಎರಡು ವರ್ಷಗಳ ಅವಧಿಗೆ ರಚನೆಗೊಂಡಿದ್ದ ಮಂಡಳಿಯ ಅವಧಿಯು 15.11.2025ಕ್ಕೆ ಮುಕ್ತಾಯಗೊಂಡಿತ್ತು. ಪ್ರಸ್ತುತ ಜಾರಿಯಲ್ಲಿರುವ ದಿ ಕೋಡ್ ಆನ್ ವೇಜಸ್, 2019 ರ ಸೆಕ್ಷನ್ 42ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರಕಾರ ಈ ಹೊಸ ಮಂಡಳಿಯನ್ನು ಪುನರ್ ರಚಿಸಿದೆ. ಮಂಡಳಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಟಿ.ಎಂ. ಶಾಹೀದ್ ತೆಕ್ಕಿಲ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದು, ಸದಸ್ಯರಾಗಿ ಕಾರ್ಮಿಕ ಆಯುಕ್ತರು, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರು ಸೇರಿದಂತೆ ಇತರ ಅಧಿಕಾರಿಗಳು ಸೇರಿದ್ದಾರೆ. ಕಾರ್ಮಿಕರ ಪ್ರತಿನಿಧಿಗಳಾಗಿ ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್, ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್, ಹಿಂದ್ ಮಜ್ದೂರು ಕಿಸಾನ್ ಪಂಚಾಯತ್ ನ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು ಸೇರಿದಂತೆ ಇನ್ನಿತರರು ಸದಸ್ಯರಾಗಿರುತ್ತಾರೆ. ಆಡಳಿತ ವರ್ಗದ (ಮಾಲೀಕರ) ಪ್ರತಿನಿಧಿಗಳಾಗಿ, ಫೆಡರೇಷನ್ ಆಫ್ ಕರ್ನಾಟಕ ಛೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್, ಕರ್ನಾಟಕ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಅಸೋಸಿಯೇಷನ್, ಕರ್ನಾಟಕ ಪ್ರದೇಶ ಹೋಟೆಲ್ ಮತ್ತು ರೆಸ್ಟೋರೆಂಟ್ ಅಸೋಸಿಯೇಷನ್ ನ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು ಸೇರಿದಂತೆ ಇನ್ನಿತರರು ಸದಸ್ಯರಾಗಿರುತ್ತಾರೆ. ರಾಜ್ಯದ ವಿವಿಧ ವಲಯಗಳ ಕಾರ್ಮಿಕರ ಹಿತರಕ್ಷಣೆ ಮತ್ತು ಕನಿಷ್ಠ ವೇತನ ನಿಗದಿಗೆ ಸಂಬಂಧಿಸಿದಂತೆ ಈ ಸಮಿತಿಯು ಮುಂಬರುವ ದಿನಗಳಲ್ಲಿ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಆರ್ಟ್ ಆಫ್ ಗಿವಿಂಗ್‌ನ 13ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ನ್ಯಾ.ಕೃಷ್ಣ ದೀಕ್ಷಿತ್

ಪ್ರೀತಿ, ತ್ಯಾಗವೇ ಸಮಾಜ ಉಳಿಸುವ ನಿಜವಾದ ಶಕ್ತಿ

ಬೆಂಗಳೂರು: ಮನುಷ್ಯನ ಬದುಕಿನ ಅರ್ಥ ತೆಗೆದುಕೊಳ್ಳುವುದರಲ್ಲಿ ಅಲ್ಲ, ಕೊಡುವುದರಲ್ಲಿ ಇದೆ. ಪ್ರೀತಿ, ತ್ಯಾಗ, ಸೇವೆ ಮತ್ತು ಜವಾಬ್ದಾರಿಯೇ ಸಮಾಜವನ್ನು ಉಳಿಸುವ ನಿಜವಾದ ಶಕ್ತಿ ಎಂದು ಒಡಿಶಾ ಹೈಕೋರ್ಟ್‌ನ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ತಿಳಿಸಿದರು.

ನಗರದ ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಆರ್ಟ್ ಆಫ್ ಗಿವಿಂಗ್‌ನ 13ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಪಂಚದ ಅನೇಕ ನಾಗರಿಕತೆಗಳು ನಶಿಸಿ ಹೋಗಿದ್ದರೂ ಭಾರತೀಯ ನಾಗರಿಕತೆ ಉಳಿದಿದೆ. ಅದರ ಮೂಲ ಕಾರಣ ಹಂಚಿಕೊಳ್ಳುವ ಸಂಸ್ಕೃತಿ. ಪ್ರೀತಿ, ಮಮತೆ, ಹೊಣೆಗಾರಿಕೆ ಇಲ್ಲದಿದ್ದಾಗ ಸಮಾಜ ಕುಸಿಯುತ್ತದೆ.

ನಾವು ವಿದ್ಯಾವಂತರಾಗಿದ್ದರೂ ಪ್ರೀತಿ ಕಳೆದುಕೊಂಡರೆ ಯಾವ ಪ್ರಯೋಜನವಿಲ್ಲ. ಪ್ರೀತಿ ಎಂದರೆ ಜವಾಬ್ದಾರಿ, ಸೇವೆ, ತ್ಯಾಗ ಮತ್ತು ಕ್ಷಮೆ.

ಸಂಘ ಜೀವನದಿಂದ ನಾವು ಸ್ವಾರ್ಥದ ಬದುಕಿನತ್ತ ಸಾಗುವಲ್ಲಿ ಎಲ್ಲವೂ ನನಗೆ ಬೇಕು ಎಂಬ ಮನೋಭಾವ ಸಮಾಜವನ್ನು ದುರ್ಬಲಗೊಳಿಸುತ್ತದೆ. ಕೊಡು-ಕೊಳ್ಳುವ ಮನೋಭಾವ ಇರುವ ಸಮಾಜವು ಯಾವಾಗಲೂ ಉಳಿಯುತ್ತದೆ ಎಂದರು.

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಅಧ್ಯಕ್ಷ ರಾಕೇಶ್ ಸಿಂಗ್ ಮಾತನಾಡಿ, ಆರ್ಟ್ ಆಫ್ ಗಿವಿಂಗ್ ಮೂಲಕ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ಕೊಡುವ ಮನೋಭಾವವೇ ಸಮಾಜ ಸುಂದರಗೊಳಿಸುತ್ತದೆ. ಸಂವೇದನೆ, ಕರುಣೆ ಮತ್ತು ಪರರ ಬಗ್ಗೆ ಕಾಳಜಿ ಇರುವಾಗ ಮಾತ್ರ ಉತ್ತಮ ಜಗತ್ತು ನಿರ್ಮಾಣವಾಗುತ್ತದೆ. ಪ್ರೊ. ಅಚ್ಯುತ ಸಮಂತಾ ಅವರ ಸಾಮಾಜಿಕ ಚಿಂತನೆ ಮತ್ತು ಸೇವಾ ಧೋರಣೆಗಳು ಶ್ಲಾಘನೀಯ. ನಾವು ಕೊಡುವ ಕಲೆ ಬಗ್ಗೆ ಮಾತನಾಡಬೇಕಾದ ಪರಿಸ್ಥಿತಿಗೆ ಬಂದಿರುವುದು ನೋವುಂಟು ಮಾಡುತ್ತದೆ. ಈ ಚಿಂತನೆ ಎಲ್ಲೆಡೆ ಹರಡಿದರೆ ಬದುಕು ಎಷ್ಟು ಸುಂದರವಾಗಬಹುದು ಎಂಬುದನ್ನು ಊಹಿಸಬಹುದು ಎಂದರು.

ಆರ್ಟ್ ಆಫ್ ಗಿವಿಂಗ್‌ನ 13ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಒಡಿಶಾ ಹೈಕೋರ್ಟ್‌ನ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಅಧ್ಯಕ್ಷ ರಾಕೇಶ್ ಸಿಂಗ್, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೋಡೇ ಪಿ.ಕೃಷ್ಣ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

> ಕೊಡುವ ಮನಸ್ಸು ಮನುಷ್ಯನನ್ನು ಎತ್ತರಕ್ಕೆ ಕರೆದೊಯ್ಯುತ್ತದೆ. ಪರಿಸರಕ್ಕೆ ಹಾನಿಯಾಗದಂತೆ ಬದುಕುವುದಕ್ಕಿಂತ ದೊಡ್ಡ ಕೊಡುಗೆ ಮತ್ತೊಂದಿಲ್ಲ. ನಾವು ಭಾರತೀಯರು ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಆದರ್ಶದಲ್ಲಿ ದಾನಿಗಳಾಗಿ, ಕೊಡುವ ಮನಸ್ಸಿನವರಾಗಿ ಬದುಕಬೇಕು.
>
> **- ಡಾ. ವೋಡೇ ಪಿ. ಕೃಷ್ಣ,** ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ

ವಿಶ್ವವಾಣಿ ಬೆಂಗಳೂರು 18-05-2026 ಸೋಮವಾರ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ನಿನ್ನೆಯಿಂದ (ಮೇ 17) ಅಧಿಕ ಮಾಸ ಆರಂಭವಾಗಿದೆ. ಯಾವುದನ್ನು ಅಧಿಕ ಮಾಸ ಎನ್ನುತ್ತಾರೆ? ಅದರ ಲೆಕ್ಕಾಚಾರ, ಮಹತ್ವ ಏನು? ವಿವರ ನೀಡುವ ಲೇಖನ ಇಲ್ಲಿದೆ.

ಅಧಿಕ ಮಾಸ ಏಕೆ ಬರುತ್ತದೆ?

● ಎನ್.ಎಸ್. ಶ್ರೀಧರ ಮೂರ್ತಿ

ನಿನ್ನೆಯಿಂದ (ಮೇ 17) ಭಾರತೀಯ ಪಂಚಾಗದಲ್ಲಿ ಜ್ಯೇಷ್ಠ ಮಾಸವು ಅಧಿಕವಾಗಿದೆ. ನಾವು ಗ್ರಿಗೋರಿಯನ್ ಕ್ಯಾಲೆಂಡನರ್‌ಲ್ಲಿ ಫೆಬ್ರವರಿಯಲ್ಲಿ ಒಂದು ದಿನವನ್ನು ಅಧಿಕವಾಗಿ ಸೇರಿಸುತ್ತೇವೆ. ಇಲ್ಲೇಕೆ ಮಾಸವೇ ಅಧಿಕವಾಗುತ್ತದೆ ಎನ್ನುವುದು ಕುತೂಹಲಕರ ಪ್ರಶ್ನೆ.

ಭಾರತೀಯ ಪಂಚಾಗ ಗಣಿತದ ವಿಶೇಷವೆಂದರೆ ಚಂದ್ರ ಮತ್ತು ಸೂರ್ಯನ ಚಲನೆ ಎರಡನ್ನೂ ಲೆಕ್ಕ ಹಿಡಿ ಯುವುದು. ಇದು ಕ್ರಿ.ಶ ಐದನೇ ಶತಮಾನದ ಆರ್ಯ ಭಟನ ಲೆಕ್ಕಾಚಾರಗಳಲ್ಲಿಯೇ ಕಂಡು ಬರುತ್ತದೆ. ಅಧಿಕ ಮಾಸದ ಕಲ್ಪನೆಯನ್ನು ಕಂಡು ಹಿಡಿದ ಆರಂಭಿಕರಲ್ಲಿ ಭಾರತೀಯರು ಪ್ರಮುಖರಾದವರು. ಕ್ರಾಂತಿ ವೃತ್ತ ವನ್ನು ಹನ್ನೆರಡು ಭಾಗಗಳಾಗಿ ವಿಭಾಗಿಸಿ ಪ್ರತಿ ಭಾಗಕ್ಕೂ ಮಾಸದ ಹೆಸರು ಕೊಡುವುದು ಸೌರಮಾನ. ಸೌರ ಮಾನದ ಪ್ರಕಾರ ವರ್ಷದ ಅವಧಿ 365.256363 ಇದು ಗ್ರಿಗೋರಿಯನ್ ಕ್ಯಾಲೆಂಡರ್ ಲೆಕ್ಕಾಚಾರವನ್ನೇ ಹೋಲುತ್ತದೆ. ಅದರಂತೆ ಭೂಮಿಯಿಂದ ನೋಡಿದಾಗ ಸೂರ್ಯ ಮತ್ತು ಚಂದ್ರರ ಸ್ಥಾನಾಂಶಗಳು ಒಂದೇ ಆಗಿದ್ದು ಈ ಕಾರಣದಿಂದ ಚಂದ್ರನು ಭೂಮಿಗೆ ಅಗೋಚರನಾಗುವ ಪ್ರಕ್ರಿಯೆ ಅಮಾವಾಸ್ಯೆ. ಇದರ ಮರುದಿನದಿಂದ ಅಂದರೆ ಶುಕ್ಲ ಪಾಡ್ಯದಿಂದ ಚಂದ್ರ ಮಾಸ ಆರಂಭ. ಅಲ್ಲಿಂದ ಹುಣ್ಣಿಮೆಯವರೆಗೆ ಶುಕ್ಲ ಪಕ್ಷ ಮತ್ತೆ ಪಾಡ್ಯ ಆರಂಭವಾಗಿ ಅಮಾವಾಸ್ಯೆವರೆಗೂ ಕೃಷ್ಣ ಪಕ್ಷ. ಒಂದು ಚಾಂದ್ರಮಾಸದಲ್ಲಿ 354. 36707 ದಿನ ಗಳಿರುತ್ತವೆ. ಚಂದ್ರನ ಚಲನೆಯನ್ನು ಮಾತ್ರ ಲೆಕ್ಕ ಹಾಕುವ ಪದ್ಧತಿಗಳಲ್ಲಿ ಚಂದ್ರನ ಚಲನೆ ಸೂರ್ಯನ ಚಲನೆಗಿಂತಲೂ ನಿರಂತರವಾಗಿ ಹಿಂದೆ ಹೋಗುತ್ತಿರುತ್ತದೆ. ಭಾರತೀಯ ಪಂಚಾಗದಲ್ಲಿ ಹೀಗಾಗುವುದಿಲ್ಲ, ಅದನ್ನು ಸರಿದೂಗಿಸುತ್ತಾ ಬರಲಾಗುತ್ತದೆ.

ಸೌರ ಮತ್ತು ಚಾಂದ್ರ ಮಾಸದ ನಡುವಿನ ವ್ಯತ್ಯಾಸ 10.88929 ಆಗಿರುವುದರಿಂದ ಮೂರು ವರ್ಷಕ್ಕೊಮ್ಮೆ ಒಂದು ಚಾಂದ್ರಮಾಸವನ್ನು ಸೇರಿಸಿ ಅಂದರೆ ಮೂವತ್ತು ದಿನಗಳನ್ನು ಸೇರಿಸಿ ಅದನ್ನು ಸರಿದೂಗಿಸಲಾಗುತ್ತದೆ. ಮೂರು ವರ್ಷಗಳಿಗೆ ಆಗಿರುವ ವ್ಯತ್ಯಾಸ ಸರಿಸುಮಾರು 32 ದಿನಗಳಾಗಿದ್ದರಿಂದ ಎರಡು ಅಧಿಕ ಮಾಸಗಳನ್ನು 28 ತಿಂಗಳುಗಳಿಗೂ ಮತ್ತು ಮೂರನೆಯ ಅಧಿಕ ಮಾಸವನ್ನು32 ತಿಂಗಳುಗಳಿಗೂ ಸೇರಿಸಲಾಗುತ್ತದೆ. ಈ ವ್ಯತ್ಯಾಸದ ಬಗ್ಗೆ ನಿರಂತರವಾಗಿ ಗಮನ ಇಡುವುದರಿಂದ ಈ ಅಂತರ ವ್ಯತ್ಯಾಸವಾಗುತ್ತಲೇ ಇರುತ್ತದೆ. ಗ್ರೀಕರು, ಚೀನಿಯರು, ಬ್ಯಾಬಿಲೋನಿಯರಂತೆ ಭಾರತೀಯರು ಎಂಟು ವರ್ಷದ, ಹದಿನಾರು ವರ್ಷಗಳ ಚಕ್ರಗಳ ಪದ್ಧತಿಯನ್ನು ಬಳಸಲಿಲ್ಲ. ವ್ಯತ್ಯಾಸ ಬಹಳ ದಿನಗಳವರೆಗೆ ಮುಂದುವರೆಯದಂತೆ ಒಳಚಕ್ರಗಳನ್ನು ಬಳಸಿದರು.

ಅಧಿಕ ಮಾಸದ ಪತ್ತೆ ಹೇಗೆ?

ಯಾವುದೇ ಚಾಂದ್ರ ಮಾಸ ಅಧಿಕ ಮಾಸ ಆಗಿದೆ ಎನ್ನುವುದನ್ನು ತಿಳಿಯುವುದು ಹೇಗೆ? ಭಾರತೀಯ ಚಾಂದ್ರ ಮಾಸದ ಲೆಕ್ಕಾಚಾರದಲ್ಲಿ ಒಂದು ವಿಶಿಷ್ಟವಾದ ಮಾಪಕವಿದೆ. ಚಾಂದ್ರಮಾಸ ಎಂದು ಕರೆಯಲು ಹುಣ್ಣಿಮೆ ಮತ್ತು ಅಮಾವಾಸ್ಯೆಗಳಂತೆ ಸಂಕ್ರಮಣ ಕೂಡ ಬರಬೇಕು. ಯಾವ ಚಾಂದ್ರ ಮಾಸದಲ್ಲಿ ಸಂಕ್ರಮಣ ಬರುವುದಿಲ್ಲವೋ ಅದು ಅಧಿಕವಾಗಿದೆ ಎಂದು ಅರ್ಥ. ಆಗ ಚಂದ್ರನ ದಿನಗಳ ಲೆಕ್ಕಾಚಾರ ಸೂರ್ಯನ ದಿನಗಳ ಲೆಕ್ಕಾಚಾರಕ್ಕಿಂತಲೂ ಮುಂದೆ ಹೋಗಿರುತ್ತದೆ. ಅದನ್ನು ಸರಿದೂಗಿಸಲು ಅದನ್ನು ಅಧಿಕ ಮಾಸ ಎಂದು ಪರಿಗಣಿಸಲಾಗುತ್ತದೆ. ಪ್ರತಿ ಅಧಿಕ ಮಾಸದ ನಂತರ ನಿಜ ಮಾಸ ಬಂದೇ ಬರುತ್ತದೆ. ಆ ವರ್ಷದ ಚಾಂದ್ರ ವರ್ಷದಲ್ಲಿ ಅಂದರೆ ಸಂವತ್ಸರದಲ್ಲಿ ಹದಿಮೂರು ತಿಂಗಳುಗಳು ಇರುತ್ತವೆ. ಅಧಿಕ ಮಾಸದಲ್ಲಿ ಹಬ್ಬ-ವ್ರತಗಳನ್ನು ಆಚರಿಸುವುದಿಲ್ಲ. ಷೋಡಷ ಸಂಸ್ಕಾರಗಳನ್ನು ಆಚರಿಸು ವುದಿಲ್ಲ. ನಿತ್ಯ ಕರ್ಮಗಳು, ಸಂವತ್ಸರಿಕ ಶ್ರಾದ್ಧಗಳನ್ನು ಆಚರಿಸಬಹುದು. ಅದನ್ನು ನಿಜದಲ್ಲಿಯೂ ಆಚರಿಸಬೇಕಾಗುತ್ತದೆ. ಅಧಿಕ ಮಾಸಕ್ಕೆ ಪ್ರತ್ಯೇಕ ವ್ರತಗಳನ್ನು ಹೇಳಲಾಗಿದೆ.

ಒಂದು ಚಾಂದ್ರಮಾಸದಲ್ಲಿ ಎರಡು ಸಂಕ್ರಮಣಗಳು ಬಂದರೆ ಸೂರ್ಯನ ಚಲನೆ, ಚಂದ್ರನ ಚಲನೆಗಿಂತಲೂ ಮುಂದೆ ಹೋಗಿದೆ ಎಂದು ಅರ್ಥ. ಆಗ ಅದನ್ನು ಕ್ಷಯಮಾಸ ಎಂದು ಕರೆದು ಸಾಂವತ್ಸರಿಕ ಲೆಕ್ಕಾಚಾರದಿಂದ ಹೊರಗಿಡಲಾಗುತ್ತದೆ. ಒಂದು ಕ್ಷಯ ಮಾಸದ ಹಿಂದೆ ಮತ್ತು ಮುಂದೆ ಹೀಗೆ ಎರಡು ಅಧಿಕ ಮಾಸಗಳು ಬರುತ್ತವೆ. ಆ ಸಂವತ್ಸರದ ಮಾಸದ ಲೆಕ್ಕಾಚಾರವನ್ನೂ ಹದಿಮೂರು ಎಂದೇ ಪರಗಣಿಸಬೇಕು. ಕ್ಷಯ ಮಾಸವು 141 ವರ್ಷಗಳಿಗೊಮ್ಮೆ, ಅಪರೂಪಕ್ಕೆ 19 ವರ್ಷಗಳಿಗೊಮ್ಮೆ ಬರುತ್ತದೆ. ಕಾರ್ತಿಕ, ಮಾರ್ಗ ಶಿರ, ಪುಷ್ಯ ಮಾಸಗಳು ಮಾತ್ರ ಅಧಿಕಮಾಸ ವಾಗಿರುತ್ತವೆ. ಅಧಿಕ ಮಾಸ ಎನ್ನುವುದು ಹೀಗೆ ಭಾರತೀಯ ಪಂಚಾಂಗ ಗಣಿತದ ವೈಜ್ಞಾನಿಕತೆಯನ್ನು ತಿಳಿಸಿ ಕೊಡುವಂತಹ ವಿಶೇಷ ವಿದ್ಯಮಾನವಾಗಿದೆ.

ಚಾಂದ್ರ ಮತ್ತು ಸೌರ ಯುಗಾದಿ ಒಂದೇ ದಿನ!

2029ರಲ್ಲಿ ಒಂದು ವಿಶಿಷ್ಟ ಖಭೌತಿಕ ವಿದ್ಯಮಾನ ಅಧಿಕಮಾಸಕ್ಕೆ ಸಂಬಂಧಿಸಿದಂತೆ ಸಂಭವಿಸಿಲಿದೆ. 2029-30ರ ಸಾಲಿನ ಶ್ರೀ ಸೌಮ್ಯನಾಮ ಸಂವತ್ಸರದ ಚೈತ್ರವೇ ಅಧಿಕವಾಗಿದೆ. 2029ರ ಮಾರ್ಚ 16ರಂದು ಅಧಿಕ ಚೈತ್ರದ ಪಾಡ್ಯ ಬಂದಿದೆ. ಏಪ್ರಿಲ್ 14ಕ್ಕೆ ನಿಜ ಚೈತ್ರದ ಪಾಡ್ಯ ಬಂದಿದೆ. ಅವತ್ತು ರಾತ್ರಿ 3.58ರವರೆಗೂ ಪಾಡ್ಯದ ವ್ಯಾಪ್ತಿ ಇದೆ. ಅದು ಸೌರ ಯುಗಾದಿಯ ದಿನ ಕೂಡ ಹೌದು. ಅಂದರೆ ಸೂರ್ಯಸ್ಪುಟ ಮತ್ತು ಚಂದ್ರಸ್ಪುಟ ಕರಾರುವಕ್ಕಾಗಿ ಸೇರಿಕೊಂಡಿದೆ. ಹೀಗಾಗುವುದು 144 ವರ್ಷಗಳಿಗೆ ಒಮ್ಮೆ ಮಾತ್ರ. ಯುಗಾದಿ ಏಪ್ರಿಲ್ 13ಕ್ಕೆ ಬಂದ ಉದಾಹಣೆ ಇದೆ. 2021ರಲ್ಲಿಯೇ ಏಪ್ರಿಲ್ 13ಕ್ಕೆ ಬಂದಿತ್ತು. ಆದರೆ 14ಕ್ಕೇ ಬರಲು ಪಂಚಗ್ರಹಗಳ ಸ್ಪುಟಗಳು ಹೊಂದಾಣಿಕೆ ಆಗಬೇಕು. 1945-46ರ ಶ್ರೀ ಪಾರ್ಥಿವ ನಾಮ ಸಂವತ್ಸರದಲ್ಲಿ ಚೈತ್ರ ಅಧಿಕ ಬಂದಿದೆ. ಆದರೆ ಆಗ ಮಾರ್ಚ 15ರಂದೇ ಅಧಿಕ ಚೈತ್ರ ಬಂದಿದ್ದರೂ ನಿಜ ಚೈತ್ರ ಏಪ್ರಿಲ್ 13ಕ್ಕೇ ಬಂದಿದೆ. ಅಂದರೆ ಸೌರ ಯುಗಾದಿಗೆ ಚಾಂದ್ರ ಯುಗಾದಿ ಸೇರಿರಲಿಲ್ಲ. ಹೀಗಾಗಿ 2029-30ರ ಶ್ರೀ ಸೌಮ್ಯನಾಮ ಸಂವತ್ಸರ ನಮ್ಮ ಕಾಲದಲ್ಲಿ ಘಟಿಸುವ ಪಂಚಾಂಗೀಯ ಅದ್ಭುತವಾಗಲಿದೆ.



ಮುಂಬರುವ ಅಧಿಕ ಮಾಸಗಳು

ವರ್ಷ	ಸಂವತ್ಸರ	ಅಧಿಕ ಆಗುವ ಮಾಸ	ಆರಂಭ ಆಗುವದಿನ
2026	ಶ್ರೀ ಪರಾಭವ	ಜ್ಯೇಷ್ಠ	ಮೇ 17
2029	ಶ್ರೀ ಸೌಮ್ಯ	ಚೈತ್ರ	ಮಾರ್ಚ16
2031	ಶ್ರೀ ವಿರೋಧಿಕೃತ್	ಭಾದ್ರಪದ	ಆಗಸ್ಟ್ 19
2034	ಶ್ರೀ ಆನಂದ	ಆಷಾಢ	ಜುಲೈ 17
2037	ಶ್ರೀ ಪಿಂಗಳ	ಜ್ಯೇಷ್ಠ	ಮೇ 16

ಭಾವುಕತೆ

ಇಲ್ಲಿ ಕೇಳು

ಝೆನ್ ಗುರು ಕ್ಯೊಕುಯು ತುಂಬಾ ಬುದ್ಧಿವಂತರೆಂದು ಹೆಸರು ಮಾಡಿದ್ದರು. ರಾಜರು, ಮಂತ್ರಿಗಳು ಅವರಲ್ಲಿಗೆ ಉಪದೇಶ ಕೇಳಿ ಬರುತ್ತಿದ್ದರು.



ಒಮ್ಮೆ ಕ್ಯೋಟೋದಿಂದ ಒಬ್ಬ ದುರಾಸೆಯ ಶ್ರೀಮಂತ ಕ್ಯೊಕುಯುನಲ್ಲಿಗೆ ಆಗಮಿಸಿದ. ಗುರುವಿನ ಬುದ್ಧಿವಂತಿಕೆ ಪರೀಕ್ಷಿಸುವ ಇರಾದೆಯೂ ಆತನಲ್ಲಿತ್ತು. 'ಗುರುವೇ, ಮುಂದಿನ ಕ್ಷಣ ಏನಾಗುತ್ತದೆ ಎಂಬುದು ನಿನಗೆ ಗೊತ್ತೆ?' ಎಂದು ಕೇಳಿದ. ಗುರು ಏನು ಹೇಳಿದರೂ ಅದಕ್ಕೆ ಉಲ್ಟಾ ಹೊಡೆಯಬೇಕು ಎಂಬುದು ಅವನ ಯೋಚನೆಯಾಗಿತ್ತು. ಗುರು ಮಗುಳ್ನಕ್ಕು, ತನ್ನನ್ನು ಹಿಂಬಾಲಿಸಲು ಅವನಿಗೆ ಹೇಳಿ ಮುಂದೆ ನಡೆದ. ಸಂತೆ ದಾಟಿ, ಊರು ದಾಟಿ, ಸ್ಮಶಾನಕ್ಕೆ ಬಂದ. ಅಲ್ಲಿ ಗೋರಿಗಳ ನಡುವೆ ನಿಂತು ಹೇಳಿದ- ಆ ಪ್ರಶ್ನೆ ನೀನು ಇಲ್ಲಿ ಯಾರನ್ನಾದರೂ ಕೇಳುವುದು ಒಳ್ಳೆಯದು!'

ಸುತ್ತ ಮುತ್ತ

ಮ್ಯಾಂಗೋ ಸಿಟಿ

ಮಾವಿನ ಸೀಸನ್ನಿನಲ್ಲಿ ನಮ್ಮ ರಾಮನಗರ, ಕೋಲಾರ, ಎಲ್ಲವೂ ಮಾವಿನ ಊರುಗಳಾಗಿಬಿಡುತ್ತವೆ. ಆದರೆ ನಿಜಕ್ಕೂ 'ಭಾರತದ ಮಾವಿನ ನಗರ' ಅಥವಾ 'ಮ್ಯಾಂಗೋ ಸಿಟಿ' ಎಂದು ಹೇಳುವುದು ಯಾವುದನ್ನು ಗೊತ್ತೆ? ಅದು ಪಶ್ಚಿಮ ಬಂಗಾಳದ ಮಾಲ್ಡಾ ನಗರ. ಗಂಗಾ ಮತ್ತು ಮಹಾನಂದಾ ನದಿಗಳ ನಡುವೆ ಇರುವ ಈ ಜಿಲ್ಲೆಯ ಮಣ್ಣು ಇದನ್ನು ಮಾವು ಬೆಳೆಯಲು ತಕ್ಕ ಫಲವತ್ತಾಗಿಸಿದೆ. ನೂರಾರು ತಳಿಯ ಮಾವು ಇಲ್ಲಿ ಬೆಳೆದು ದೇಶಾದ್ಯಂತ ರಫ್ತಾಗುತ್ತದೆ. ಫಸ್ಲಿ, ಹಿಮಸಾಗರ, ಲಂಗ್ರಾ, ಲಕ್ಷ್ಮಂಬೋಗ್ ಮಾವುಗಳು ಇಲ್ಲಿ ಮೊಗಲರ ಕಾಲದಿಂದಲೂ ಬೆಳೆಯುತ್ತವೆ.

ಹನಿ ಹನಿ ಕವಿತೆ

ಚಿಂತೆ

ಬಡ ರೈತನಿಗೆ
ಹೊಟ್ಟೆಯ ಚಿಂತೆ
ಮತ್ತೆ ಮತ್ತೆ ನೋಡುತ್ತಾನೆ ಮೋಡ
ಸಿರಿವಂತನಿಗೂ
ಹೊಟ್ಟೆಯ ಚಿಂತೆ
ಮತ್ತೆ ಮತ್ತೆ ಕುಡಿಯುತ್ತಾನೆ ಸೋಡ

● ನಾರಾಯಣ ಪೊಸ್ಥಿತ್ತು

ಗೀತೆ ಮಾತು

ಕೆಲವರಿಗೆ ಯಾವ ಕೆಲಸ ಮಾಡಲೂ ಹಿಂಜರಿಕೆ. ಆತ್ಮವಿಶ್ವಾಸ ಇರೊಲ್ಲ. ಹೀಗಾದರೆ ಹೇಗೆ, ಸೋತರೆ ಏನು ಗತಿ ಎಂದೇ ಅವರ ಚಿಂತನೆ. ಗೆಲುವಾಗಬಹುದು ಎಂಬ ಚಿಂತನೆಯೂ ಮಾಡುವುದಿಲ್ಲ. ಅರ್ಜುನನಿಗೆ ಶ್ರೀಕೃಷ್ಣ ಗೀತೆಯಲ್ಲಿ ಹೇಳುವ ಈ ಮಾತು ಅಂಥವರಿಗೆ ಪಾಠ- 'ಕ್ಲೈಬ್ಯಂ ಮಾ ಸ್ಮ ಗಮಃ ಪಾರ್ಥ ನ ಏತತ್ ತ್ವಯಿ ಉಪಪದ್ಯತೇ/ ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ'

ಈ ಹೃದಯದ ದುರ್ಬಲತೆಯನ್ನು ಬಿಟ್ಟು ಎದ್ದು ನಿಲ್ಲು. ಭಯ ಬಂದರೂ ನಿಲ್ಲಬೇಡ, ಸಂಕಷ್ಟ ಬಂದರೂ ಕುಗ್ಗಬೇಡ. ನಿನ್ನೊಳಗಿನ ಶಕ್ತಿಯನ್ನು ನೆನಪು ಮಾಡಿಕೋ. ಕೃಷ್ಣನ ಪ್ರಕಾರ ಆತ್ಮವಿಶ್ವಾಸ ಎಂದರೆ ಅಹಂಕಾರ ಅಲ್ಲ, ನನ್ನೊಳಗೆ ದೈವಶಕ್ತಿ ಇದೆ, ಎಲ್ಲವನ್ನೂ ಅದು ನಡೆಸುತ್ತದೆ, ನಾನು ನಿಮಿತ್ತ ಮಾತ್ರ ಎಂಬ ನಂಬಿಕೆ. ಹೃದಯ ದೌರ್ಬಲ್ಯವನ್ನು ಕೃಷ್ಣ 'ಕ್ಲೈಬ್ಯ' ಎಂದು ಕರೆಯುತ್ತಾನೆ.

ಕೃಷಿ ಸಂಸ್ಕೃತಿಯ ಪ್ರತೀಕ ಹಕ್ಕಿಮನೆ

● ಹೊಸ್ಮನೆ ಮುತ್ತು

ಭಾರತೀಯ ಕೃಷಿ ಪದ್ಧತಿಯಲ್ಲಿ ರೈತನ ಕಾಯಕ ಕೇವಲ ಬಿತ್ತನೆ ಮಾಡುವುದಕ್ಕಷ್ಟೇ ಸೀಮಿತವಾಗಿಲ್ಲ; ಬೆಳೆ ಕೈಗೆ ಬರುವವರೆಗೂ ಅದನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಯಬೇಕಾಗುತ್ತದೆ. ಮಲೆನಾಡಿನಲ್ಲಿ ಗದ್ದೆ-ತೋಟಗಳು ಕಾಡಿನ ಸೆರಗಲ್ಲೇ ಇರುವುದರಿಂದ ಕಾಡುಪ್ರಾಣಿಗಳ ಉಪಟಳ ಸರ್ವೇಸಾಮಾನ್ಯ. ಬೆಳೆ ರಕ್ಷಿಸಲು ರೈತ ಕಾವಲು ಕಾಯುವುದು ಅನಿವಾರ್ಯ. ಇಂತಹ ಸಂದರ್ಭದಲ್ಲಿ ಅನ್ನದಾತನಿಗೆ ಆಸರೆಯಾಗಿ ನಿಲ್ಲುವ ರಚನೆಯೇ 'ಹಕ್ಕಿಮನೆ' ಅಥವಾ 'ಅಟ್ಟಣಿಗೆ'.

ಇದು ಪರಿಸರ ಸ್ನೇಹಿ ಕಾವಲು ಗೋಪುರ. ತುಸು ಎತ್ತರದ ಪ್ರದೇಶದಲ್ಲಿ ನಾಲ್ಕು ಗಟ್ಟಿಮುಟ್ಟಾದ ಕಂಬ ನೆಟ್ಟು, ಎಳೆಂಟು ಅಡಿ ವಿಸ್ತೀರ್ಣದ ಅಟ್ಟಣಿಗೆ ಸಿದ್ಧಪಡಿಸಲಾಗುತ್ತದೆ. ಒಳಗೆ ಕೂರಲು ಮತ್ತು ಮಲಗಲು ಅನುಕೂಲವಾಗುವಂತೆ ಅಡಿಕೆ ದಬ್ಬೆ ಇಲ್ಲಾ ಬಿದಿರಿನ ಬೊಂಬಿನ ನೆಲಹಾಸು. ಮೇಲ್ಹಾವಣಿಯಾಗಿ ಅಡಿಕೆ ಸೋಗೆ ಅಥವಾ ಒಣ ಹುಲ್ಲನ್ನು ಹೊದಿಸಿ, ಎತ್ತರಕ್ಕೆ ಹತ್ತಲು ಬಿದಿರಿನ ಏಣಿಯ ವ್ಯವಸ್ಥೆ. ಬಿಸಿಲು-ಮಳೆಯಿಂದ ರಕ್ಷಣೆ ಪಡೆಯಲು ಮತ್ತು ಮಧ್ಯಾಹ್ನದ ವಿಶ್ರಾಂತಿಗೆ ಇದು ಸುಂದರ ತಾಣ. ಗದ್ದೆಯಲ್ಲಿ ಬೆಳೆ ಹೇಗೆ ಬೆಳೆಯುತ್ತಿದೆ ಎಂಬುದನ್ನು ಒಂದೇ ಕಡೆ ನಿಂತು ವೀಕ್ಷಿಸಲು ವೇದಿಕೆ ನೆರವಾಗುತ್ತದೆ. ಅಟ್ಟಣಿಗೆಯ ಮೇಲೆ ನಿಂತರೆ ಸುತ್ತಮುತ್ತ ಸ್ಪಷ್ಟವಾಗಿ ಕಾಣಿಸುವುದರಿಂದ, ಯಾವುದೇ ಮೂಲೆಯಿಂದ ಪ್ರಾಣಿಗಳು ಬಂದರೂ ತಕ್ಷಣ ಗುರುತಿಸಬಹುದು. ರಾತ್ರಿಯ ವೇಳೆ 'ಹೊಡಚಲು' (ಬೆಂಕಿ) ಹಾಕಿಕೊಂಡು, ಡಬ್ಬ ಬಡಿಯುತ್ತಾ ಕಾಡುಮೃಗಗಳನ್ನು ಬೆದರಿಸುವ ರೈತನಿಗೆ ಇದು 'ಬೆಳೆ ಕಾಯುವ ಸೌಧ'ವೇ ಸರಿ.

ಶುಶ್ರೂಷಕರು ಕರುಣೆಯ ಕರಗಳು

● ಜಿ.ಡಿ.ಧನ್ನೂರ ಜಮಖಂಡಿ

ರೋಗಗಳ ವಿರುದ್ಧ ಹಗಲಿರುಳು ತನ್ನ ನೋವುಗಳನ್ನು ಮನಸ್ಸಿನಲ್ಲಿ ತುಂಬಿಕೊಂಡು ನಿರಂತರವಾಗಿ ಮುಗುಳ್ನಗೆಯೊಂದಿಗೆ ಕೆಲಸ ಮಾಡಬೇಕಾದಾಗ ವೈದ್ಯರ ಸಲಹೆ, ಆರೋಗ್ಯ ಶಿಕ್ಷಣ, ಸ್ವಚ್ಛತೆ ಅರಿವು ಅವಶ್ಯಕವಾಗಿ ತಿಳಿದುಕೊಂಡು ಪ್ರತಿಯೊಂದು ಹೆಜ್ಜೆಯನ್ನು ಹಾಕುತ್ತಿರುವ ವರು ಶುಶ್ರೂಷಕರು.

ಪ್ರತಿಯೊಂದು ಆಸ್ಪತ್ರೆಯಲ್ಲಿ ವೈದ್ಯರ ಸೇವೆಯ ನಂತರ ಅಮೂಲ್ಯವಾದ ಸೇವೆ ಶುಶ್ರೂಷಕರದು. ಈ ವೃತ್ತಿಯಲ್ಲಿ ಹಲವಾರು ಒತ್ತಡಗಳು, ದಿನ ಹೊಸ ರೋಗಿಗಳ ಪರಿಚಯ, ಸಾರ್ವಜನಿಕರ ಒತ್ತಡ ಮತ್ತು ರೋಗಿಗಳ ಸಂಬಂಧಿಕರು ಪ್ರತಿಕ್ಷಣ ಕೇಳುವ ಪ್ರಶ್ನೆಗಳಿಗೆ ಉತ್ತರ ನೀಡುವಷ್ಟರಲ್ಲಿ ನಿಟ್ಟಿಸಿರು ಬಿಡಬೇಕಾಗುತ್ತದೆ. ಯಾಕೆಂದರೆ ಅದೇ ಸಂದರ್ಭದಲ್ಲಿ ಬೇರೆ ರೋಗಿಗಳ ಸಂಬಂಧಿಕರು ಚಿಕಿತ್ಸೆ ಕೊಡಲು ಬನ್ನಿ ಎಂದು ಕರೆಯುತ್ತಿರುತ್ತಾರೆ. ಇವರುಗಳ ಮಧ್ಯೆ ವೈದ್ಯರ ಸಲಹೆ ಸೂಚನೆಗಳನ್ನು ಚಾಚು ತಪ್ಪದೇ ಪಾಲಿಸಬೇಕು, ವಾರ್ಡಿಗೆ ಬೇಕಾದ ಔಷಧಿಗಳನ್ನು, ರೋಗಿಗಳ ಹಾಸಿಗೆಗಳ ಸ್ವಚ್ಛತೆಯ ಜವಾಬ್ದಾರಿ ಕೂಡಾ ಶುಶ್ರೂಷಕರ ಮೇಲಿರುತ್ತದೆ.

ಕೆಲವು ಸಂದರ್ಭಗಳಲ್ಲಿ ಒಬ್ಬ ಶುಶ್ರೂಷಕ 30ರಿಂದ 40 ರೋಗಿಗಳಿಗೆ ಚಿಕಿತ್ಸೆ ನೀಡಬೇಕಾಗುತ್ತದೆ ತನ್ನ ಕರ್ತವ್ಯ. ಸಮಯದಲ್ಲಿ ಎಲ್ಲಾ ರೋಗಿಗಳಿಗೆ ನೀಡಬೇಕಾದ ಚಿಕಿತ್ಸೆ ನೀಡಿಯೇ ಚಾರ್ಜ್ ಕೊಡಬೇಕಾಗುತ್ತದೆ. ಇಲ್ಲವಾದರೆ ಮುಂದೆ ಬರುವ ಶುಶ್ರೂಷಕರಿಗೆ ತೊಂದರೆ ಆಗುತ್ತದೆ. ಇಂತಹ ಸಂದರ್ಭಗಳಲ್ಲಿ ಕೆಲಸದ ಅತಿಯಾದ ಒತ್ತಡದಿಂದ ಸಿಟ್ಟಾಗುವುದು, ಕೋಪ ಬರುವುದು ಸಹಜ ಆವಾಗ ಶುಶ್ರೂಷಕರು ಅಸಭ್ಯವಾಗಿ ವರ್ತಿಸುತ್ತಾರೆ. ಎಂದು ಕೆಲವರ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ.

ಅವರವರ ಮನಸ್ಥಿತಿಯ ಭಾವನೆಗೆ ತಕ್ಕಂತೆ ಈಡೇರದಿದ್ದಾಗ ಸಮಸ್ಯೆ ಬರುವುದು ಸಹಜ. ಹೇಗೆಂದರೆ ಒಂದು ಕಡೆ ಡ್ಯೂಟಿ. ಇನ್ನೊಂದು ಕಡೆ ಗಂಡ/ಹೆಂಡತಿ ಮಕ್ಕಳು ಸರಿಯಾದ ಸಮಯಕ್ಕೆ ಮನೆಗೆ ಹೋಗದಿದ್ದಾಗ ಮನೆಯಲ್ಲಿ ಬೈಸಿಕೊಳ್ಳುವುದು. ಸರಿಯಾದ ಸಮಯಕ್ಕೆ ಚಾರ್ಜ್ ಕೊಟ್ಟು ಹೋಗಲು ಆಗುವುದಿಲ್ಲ. ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿ ಮನೆಯಲ್ಲಿಯೂ ಗೃಹಿಣಿಯಾಗಿ ಯಶಸ್ವಿಯಾಗುವುದು ತುಂಬಾ ಕಷ್ಟ. ಆದರೂ ಗಾಣದ ಎತ್ತಿನಂತೆ ಜೀವನ ನಡೆಯುತ್ತದೆ. ವರ್ಗಾವಣೆಗೊಂಡ ಶುಶ್ರೂಷಾ ಧಿಕಾರಿಗಳ ಜೀವನ ತುಂಬಾ ಕಷ್ಟಕರವಾಗಿದೆ. ನಿವೃತ್ತಿ ಐದು ಆರು ವರ್ಷ ಇದ್ದಾಗ ವರ್ಗಾವಣೆಯಾದಾಗ ಗಂಡ/ ಹೆಂಡತಿ ಮಕ್ಕಳು ಒಂದು ಕಡೆ, ಮನೆಯನ್ನು ವರ್ಗಾವಣೆಯಾದ ಕಡೆ ಶಿಫ್ಟ್ ಮಾಡೋದು ತುಂಬಾ ಕಷ್ಟ. 100 ಕಿಲೋಮೀಟರ್ ಒಳಗಡೆ ವರ್ಗಾವಣೆಯಾಗಿದ್ದರೆ ಪ್ರತಿದಿನ ನಾಲ್ಕು ಗಂಟೆಗೆ ಎದ್ದು, ಮನೆ ಕೆಲಸ ಮಾಡಿ, ಅಡುಗೆ ಮಾಡಿ, ಸರಿಯಾದ ಸಮಯಕ್ಕೆ ಬಸ್ ಸ್ಟ್ಯಾಂಡಿಗೆ ಹೋಗಿ ಬಸ್ ಹಿಡಿದು ಡ್ಯೂಟಿಗೆ ಹೋಗಬೇಕಾಗುತ್ತದೆ. ಒಂದು ವೇಳೆ ಬಸ್ ತಪ್ಪಿದರೆ ಆಸ್ಪತ್ರೆಯಲ್ಲಿ ಬೈಗುಳದ ಮಹಾಪೂರವೇ ಮೈಮೇಲೆ ಬಂದುಬಿಡುತ್ತದೆ.

'ನೀವು ನೀಡಿದ ಚಿಕಿತ್ಸೆಯಿಂದ ನಾನು ಸಂಪೂರ್ಣವಾಗಿ ಗುಣವಾಗಿದ್ದೇನೆ' ಎಂದು ರೋಗಿ ಹೇಳಿದಾಗ ಶುಶ್ರೂಷಕರ ಕಣ್ಣಲ್ಲಿ ಆನಂದ ಭಾಷ್ಪ!

ಪರರ ಸೇವೆ ಪರಮವೆಂದು ನೊಂದ ಜೀವ ತನ್ನದೆಂದು ಹಗಲಿರುಳು ಸೇವೆ ಮಾಡಿ ಎಷ್ಟೇ ತನ್ನ ನೋವುಗಳಿದ್ದರೂ ಬೇರೆಯವರಿಗೆ ಹೇಳದೆ ನುಂಗಿ ಸದಾ ಮಂದಹಾಸ ನಗೆ ಬೀರುವ ಜೀವ ಶುಶ್ರೂಷಕರದು. ರೋಗಿಗಳ ಮುಖವನ್ನು ನೋಡಿ ಅವರು ದುಃಖದಲ್ಲಿ ಇದ್ದಾರೆ ಅಂದಾಗ, ತಂದೆಯಾಗಿ, ತಾಯಿಯಾಗಿ, ಅಕ್ಕಳಾಗಿ, ತಂಗಿಯಾಗಿ, ಅಣ್ಣನಾಗಿ, ತಮನಾಗಿ, ಮಗಳಾಗಿ, ಮಗನಾಗಿ ಧೈರ್ಯ ತುಂಬುವ ಸಾಹಸಕ್ಕೆ ಇಳಿಯುವವರು ಹೃದಯವಂತ ಶುಶ್ರೂಷಕರು. ಒಬ್ಬ ರೋಗಿ ಗುಣಮುಖವಾಗಿ ಎಷ್ಟೋ ದಿನಗಳ ನಂತರ ಆಸ್ಪತ್ರೆಗೆ ಬಂದಾಗ, ಶುಶ್ರೂಷಕರನ್ನ ನೋಡಿ 'ನೀವು ನೀಡಿದ ಚಿಕಿತ್ಸೆಯಿಂದ ನಾನು ಸಂಪೂರ್ಣವಾಗಿ ಗುಣವಾಗಿದ್ದೇನೆ' ಅಂದಾಗ ಕಣ್ಣಲ್ಲಿ ಆನಂದ ಭಾಷ್ಪ. ರೋಗಿ ಹುಷಾರಾಗಿದ್ದೇನೆ ಅಂದಾಗ ಅದು ಎಲ್ಲ ಪ್ರಶಸ್ತಿಗಿಂತಲೂ ಆ ಒಂದು ಮಾತು ಸಾಕು, ಅದೇ ಶುಶ್ರೂಷಕರ ಜೀವಕ್ಕೆ ದೊಡ್ಡದು.

ಪ್ರಕೃತಿಯ ಮಡಿಲಲ್ಲಿದೆ ಮೌನ ನೆಮ್ಮದಿ

● ಅಂಜಲಿ ಶ್ರೀನಿವಾಸ್

ಸಮುದ್ರದ ಅಲೆಗಳ ಮುಂದೆ ಕುಳಿತುಕೊಳ್ಳುವುದು ಪ್ರಕೃತಿಯ ಅತಿದೊಡ್ಡ ಅದ್ಭುತಗಳಲ್ಲಿ ಒಂದು. ಈ ಕ್ಷಣವು ಮನಸ್ಸಿಗೆ ಶಾಂತಿ, ಆಲೋಚನೆಗಳಿಗೆ ಆಳ ಮತ್ತು ಜೀವನದ ಕ್ಷಣಿಕತೆಯ ಅರಿವನ್ನು ನೀಡುತ್ತದೆ. ಸಮುದ್ರದ ಘರ್ಜಿಸುವ ಅಲೆಗಳು ಬಂಡೆಗಳಿಗೆ ಅಪ್ಪಳಿಸಿದಾಗ, ಪ್ರಕೃತಿಯ ಶಕ್ತಿಯನ್ನು ಪ್ರದರ್ಶಿಸುತ್ತದೆ. ಅಲೆಗಳು ದಡಕ್ಕೆ ಬಂದು ಪಾದಗಳನ್ನು ತೊಳೆಯುವಾಗ, ಪ್ರಶಾಂತತೆಯನ್ನು ನೀಡುತ್ತದೆ. ನಿರಂತರವಾಗಿ ಬಂದು ಹೋಗುವ ಅಲೆಗಳನ್ನು ನೋಡುವುದರಿಂದ ಮನಸ್ಸಿನ ಒತ್ತಡ ಕಡಿಮೆಯಾಗುವುದು. ಸಮುದ್ರದ ಅಲೆಗಳು ಯಾರಿಗೂ ಕಾಯುವುದಿಲ್ಲ. ಸಮುದ್ರ ತೀರದಲ್ಲಿ ನಿಂತಲ್ಲೆ ನಿಂತರೆ ನಿಧಾನವಾಗಿ ಕುಸಿಯುತ್ತ ಹೋಗುತ್ತೇವೆ. ಪ್ರಕೃತಿ ನಮಗೆ ಸಂದೇಶ ನೀಡುತ್ತದೆ. ನಿಂತಲ್ಲೇ ನಿಲ್ಲದಿರು ಎಂದು. ಈ ಗಾಳಿ ಬೆಳಕು ಜಲ ನೆಲ ಗಿಡ ಮರ ಮನುಕುಲಕ್ಕೆ ಅನೇಕ ಜೀವಿಗಳಿಗೆ ಆಶ್ರಯ ನೀಡಿ ಅದೆಷ್ಟು ಮೌನವಾಗಿದೆ. ಪ್ರಕೃತಿಗಿಲ್ಲದ ಭೇದ ಭಾವ ಮನುಷ್ಯನಲ್ಲಿ ಏಕಿದೆ?

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ದೆಹಲಿ, ಹಿಮಾಚಲ ಪ್ರದೇಶ ಮೊದಲಾದೆಡೆ ಹರಿಯುವ ಗಂಗಾ ನದಿಯ ಅತಿದೊಡ್ಡ ಉಪನದಿ (3)
4. ಕಣ್ಣಿಗೆ ಹಚ್ಚಿಕೊಳ್ಳುವ ಕಾಡಿಗೆ (3)
6. ಹೊಂದಾಣಿಕೆ ಇಲ್ಲದ ಹಲವು ವಸ್ತುಗಳ ಮಿಶ್ರಣ (5)
9. ಈ ವೇಗವು ರಸದ ನಡುವೆ ಇದೆ (3)
11. ಹೆತ್ತಮ್ಮನ ಮನೆಗೆ ಹೋಗುವಾಗ ಕಂಡಿದೆ ಒಂದು ಬಗೆಯ ಲೋಹ (3)
13. ಚುನಾವಣೆಯ ದಿನ ನೆರವೇರಿಸಬೇಕಾದ ಕರ್ತವ್ಯ (4)
15. ಮೃದುವಾದ ಮಾತುಗಳಿಂದ ಮನವೊಲಿಸುವುದು (4)
16. ಬಾಯಾರಿಕೆಯಿಲ್ಲಿ ತಿರುಗಿ ಬಂದಿದೆ (4)
17. ವಿಷ್ಣುವಿಗೆ ಮತ್ತೊಂದು ಹೆಸರಾದೀತು (4)
19. ಹೊಡೆಯುವುದನ್ನು ಹೇಳುವ ಮತ್ತೊಂದು ಪದ ಇಲ್ಲಿ ಅಸ್ತವ್ಯಸ್ತವಾಗಿ ಬಂದಿದೆ (3)

ಮೇಲಿಂದ ಕೆಳಕ್ಕೆ

1. ಅತಿಯಾದ ತೂಕವನ್ನು ಹೇಳುವಾಗ ಮೃತ್ಯು ದೇವನೂ ಬಂದಿದ್ದಾನೆ (4)
2. ಎರಡಕ್ಷರದ ಇನ್ನೊಂದು ಸ್ವರ್ಗವಿದು (2)
3. ಭೀಷ್ಮರ ಮೇಲಿನ ದ್ವೇಷಕ್ಕಾಗಿ ಶಿಖಂಡಿಯ ರೂಪದಲ್ಲಿ ಮರುಜನ್ಮ ಪಡೆದಾಕೆ (2)
4. ಸಂಖ್ಯೆಯಂತೆ ಕಾಣುವ ಹತೋಟಿ (2)
5. ಅಮೆರಿಕಾ ಮತ್ತು ಕೆನಡಾ ದೇಶಗಳ ನಡುವೆ ಇರುವ ಬೃಹತ್ ಜಲಪಾತ (4)
7. ನಾಚಿಕೆಗೆ ಮತ್ತೊಂದು ಹೆಸರು (2)
8. ದೇಹದಲ್ಲಿ ಹರಿಯುವ ನೆತ್ತರು (2)
10. ಶ್ರೀರಾಮನ ಪಾದುಕೆಗಳನ್ನೇ ಇಟ್ಟುಕೊಂಡು ರಾಜ್ಯಭಾರ ಮಾಡಿದವನು (3)
12. ವನದಲ್ಲಿ ದಾನ ಹುಡುಕಲು ಹೋದಾಗ ಕಂಡ ಮುಖ (3)
14. ಈ ಬೆಣ್ಣೆಯು ಹೊಸತಾಗಿ ಬಂದಿದೆ (4)
15. ಒಂದು ಭಾಷೆಯಿಂದ ಮತ್ತೊಂದಕ್ಕೆ ಮಾಡುವ ತರ್ಜುಮೆ (4)
16. ನುಣುಪಾದ ಕಪೋಲ (2)
18. ಕುಗ್ಗುವಿಕೆಯು ಒಂದು ರೋಗದಂತೆ ಕಾಣುತ್ತಿದೆ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1. ಯಮುನಾ 4. ಅಂಜನ 6. ಕಲಬೆರಕೆ 9. ರಭಸ 11. ತವರ 13. ಮತದಾನ 15. ಅನುನಯ 16. ಕೆಡಿರನೀ 17. ವಾರಿಜಾಕ್ಷಿ 19. ತಕುದ

ಮೇಲಿಂದ ಕೆಳಕ್ಕೆ
1. ಯಮಭಾರ 2. ನಾಕ 3. ಅಂಬೆ 4. ಅಂಕೆ 5. ನಯಾಗಾರ 7. ಲಜ್ಜೆ 8. ರಕ್ತ 10. ಭರತ 12. ವದನ 14. ನವನೀತ 15. ಅನುವಾದ 16. ಕೆನ್ನೆ 18. ಕ್ಷಯ

ಆರ್. ಕೆ. ನಾರಾಯಣರ ಮಾಲ್ಗುಡಿ ಡೇಸ್ ಹುಟ್ಟಿದ ಕಥೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಆ ಕಹಿ ಘಟನೆಯನ್ನು ನೆನೆದಾಗಲೆಲ್ಲಾ 18 ವರ್ಷದ ಆ ಹುಡುಗನ ಕಣ್ಣುಗಳು ತೇವವಾಗುತ್ತಿದ್ದವು. ಇಂಗ್ಲಿಷ್ ವಿಶ್ವವಿದ್ಯಾಲಯದ ಪ್ರವೇಶ ಪರೀಕ್ಷೆಯ ಫಲಿತಾಂಶ ಬಂದಿತ್ತು. ಇಂಗ್ಲಿಷ್ ವಿಷಯದಲ್ಲೇ ಆತ ಫೇಲಾಗಿದ್ದ! ಇಡೀ ಜಗತ್ತೇ ತನ್ನನ್ನು ನೋಡಿ ನಗುತ್ತಿರುವಂತೆ ಆತನಿಗೆ ಭಾಸವಾಗಿತ್ತು. ಆ ದಿನ ಸೋತು ತಲೆತಗ್ಗಿಸಿ ನಿಂತಿದ್ದ ಆ ಹುಡುಗನೇ ರಾಶಿಪುರಂ ಕೃಷ್ಣಸ್ವಾಮಿ ಅಯ್ಯರ್ ನಾರಾಯಣಸ್ವಾಮಿ... ಮುಂದೆ ಜಗತ್ತು ಕೊಂಡಾಡಿದ ನಮ್ಮ ಹೆಮ್ಮೆಯ ಆರ್. ಕೆ. ನಾರಾಯಣ್.

ಆದರೆ, ವಿಧಿಯ ಆಟವೇ ಬೇರೆಯಾಗಿತ್ತು.

ಫೇಲಾದ ನಂತರ ಸಿಕ್ಕ ಬಿಡುವಿನ ದಿನಗಳಲ್ಲಿ ನಾರಾಯಣ್ ಮೈಸೂರಿನ ಬೀದಿಗಳಲ್ಲಿ ಅಲೆಯುತ್ತಿದ್ದರು. ಕಣ್ಣಿಗೆ ಕಂಡ ಮನುಷ್ಯರನ್ನು, ಅವರ ನಡವಳಿಕೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಮನೆಯ ಲೈಬ್ರರಿಯಲ್ಲಿ ಕುಳಿತು ಕಥೆಗಳ ಅದ್ಭುತ ಲೋಕದಲ್ಲಿ ಮುಳುಗುತ್ತಿದ್ದರು. ಆ ಒಂಟಿತನವೇ ಅವರನ್ನು ಒಳಗಣ್ಣಿನಿಂದ ಜಗತ್ತನ್ನು ನೋಡುವಂತೆ ಮಾಡಿತು. ಮುಂದೆ ಅವರು ಲಕ್ಷ್ಮೀಪುರಂಗೆ ಸ್ಥಳಾಂತರಗೊಂಡು, ಚನ್ನಪಟ್ಟಣದಲ್ಲಿ ಇಂಗ್ಲಿಷ್ ಶಿಕ್ಷಕರಾಗಿ ಕೆಲಸಕ್ಕೆ ಸೇರಿದರು. ಆದರೆ, ನಾಲ್ಕೇ ದಿನಗಳಲ್ಲಿ ಆ ಕೆಲಸಕ್ಕೆ ಬೇಸತ್ತು ಮೈಸೂರಿಗೇ ಮರಳಿದರು. ಬರವಣಿಗೆಯೇ ಅವರ ಉಸಿರಾಗಿತ್ತು. ಕಾಲೇಜು ದಿನಗಳಲ್ಲಿ ಸ್ಥಳೀಯ ಕೆಫೆಗಳಲ್ಲಿ ಸ್ನೇಹಿತರೊಂದಿಗೆ ಚಹಾದ ಹಬೆಯ ನಡುವೆ ತಾವು ಬರೆದ ಕಥೆಗಳನ್ನು ಹಂಚಿಕೊಳ್ಳುತ್ತಿದ್ದರು. ಆ ಹರಿದ ಕಾಗದದ ತುಂಡುಗಳು ಮುಂದೆ ಸಾಹಿತ್ಯದ ಇತಿಹಾಸ ಸೃಷ್ಟಿಸುತ್ತವೆ ಎಂದು ಆಗ ಯಾರಿಗೂ ತಿಳಿದಿರಲಿಲ್ಲ.

ಹಲವು ವರ್ಷಗಳ ಪರಿಶ್ರಮದ ನಂತರ ಹುಟ್ಟಿಕೊಂಡಿದ್ದೇ 'ಸ್ವಾಮಿ ಅಂಡ್ ಫ್ರೆಂಡ್ಸ್' ಹಸ್ತಪ್ರತಿ. ಆದರೆ, ಭಾರತದಲ್ಲಿ ಅದನ್ನು ಪ್ರಕಟಿಸಲು ಯಾರೂ ಒಪ್ಪಲಿಲ್ಲ. ಬೇಸತ್ತ ನಾರಾಯಣ್, ಬ್ರಿಟನ್‌ನಲ್ಲಿದ್ದ ತಮ್ಮ ಸ್ನೇಹಿತನಿಗೆ ಆ ಪ್ರತಿಯನ್ನು ಕಳುಹಿಸಿ, ಯಾರಾದರೂ ಪ್ರಕಾಶಕರು ಸಿಕ್ಕರೆ ನೋಡು, ಇಲ್ಲದಿದ್ದರೆ ಅದನ್ನು ಥೇಮ್ಸ್ ನದಿಗೆ ಎಸೆದುಬಿಡು ಎಂದು ಹತಾಶೆಯಿಂದ ಬರೆದಿದ್ದರು. ಆದರೆ, ಕಥೆಯಲ್ಲಿದ್ದ ಮಣ್ಣಿನ ವಾಸನೆ ಥೇಮ್ಸ್ ನದಿಗೆ ಸೇರಬೇಕಾಗಿರಲಿಲ್ಲ, ಅದು ಇಡೀ ಜಗತ್ತನ್ನು ಆವರಿಸಬೇಕಿತ್ತು. ಆ ಹಸ್ತಪ್ರತಿ ಪ್ರಸಿದ್ಧ ಸಾಹಿತಿ ಗ್ರಹಾಂ ಗ್ರೀನ್ ಅವರ ಕೈ ಸೇರಿತು. ಸ್ವಾಮಿಯ ಮುಗ್ಧತೆಗೆ ಮನಸೋತ ಗ್ರೀನ್, 1935ರಲ್ಲಿ ಅದನ್ನು ಪ್ರಕಟಿಸಲು ನೆರವಾದರು. ಅಲ್ಲಿಗೆ ಮಾಲ್ಗುಡಿ ಎಂಬ ಮಾಂತ್ರಿಕ ಲೋಕದ ಹೆಬ್ಬಾಗಿಲು ತೆರೆಯಿತು!

ಆದರೆ, ಯಶಸ್ಸಿನ ಬೆನ್ನಲ್ಲೇ ವಿಧಿ ಅವರಿಗೆ ಸಾಲು ಸಾಲು ಆಘಾತಗಳನ್ನು ನೀಡಿತು. 1937ರಲ್ಲಿ ತಂದೆಯ ನಿಧನವಾಯಿತು. ಅದಾಗಿ ಎರಡೇ ವರ್ಷಗಳಲ್ಲಿ, ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸಿದ್ದ ಪತ್ನಿ ರಾಜಂ ಡೆಂಗ್ಯೂ ಜ್ವರದಿಂದ ಕೊನೆಯುಸಿರೆಳೆದರು. ಮನೆಯ ಮೌನ, ಶೂನ್ಯತೆ ಅವರನ್ನು ಕಾಡತೊಡಗಿತು. ಆದರೆ, ಅವರು ಆ ನೋವಿಗೆ ಶರಣಾಗಲಿಲ್ಲ. ತಮ್ಮ ಹೃದಯದ ಅಪಾರ ದುಃಖ ಮತ್ತು ವಿರಹವನ್ನು ಬರವಣಿಗೆಯ ಶಾಹಿಯಾಗಿಸಿಕೊಂಡರು.



ಆ ಒಂಟಿತನ ಮತ್ತು ಮೌನದಿಂದ ಮೂಡಿ ಬಂದಿದ್ದೇ ಭಾರತೀಯ ಸಾಹಿತ್ಯದ ಸಾರ್ವಕಾಲಿಕ ಶ್ರೇಷ್ಠ ಕೃತಿಗಳು. 1942ರಲ್ಲಿ ಬಿಡುಗಡೆಯಾದ 'ಮಾಲ್ಗುಡಿ ಡೇಸ್' ಕಥಾ ಸಂಕಲನ, ಸಾಮಾನ್ಯ ಜನರ ಅಸಾಮಾನ್ಯ ಜೀವನ ವನ್ನು ಜಗತ್ತಿಗೆ ಪರಿಚಯಿಸಿತು. ಮುಂದೆ ದೂರ ದರ್ಶನದಲ್ಲಿ ಮೂಡಿಬಂದ ಇದರ ಧಾರಾವಾಹಿ ಪ್ರತಿಯೊಬ್ಬ ಭಾರತೀಯನ ಬಾಲ್ಯದ ಮಧುರ ನೆನಪಾಯಿತು. ತದನಂತರ ಬಂದ 'ದ ಗೈಡ್' ಕಾದಂಬರಿಗೆ 1960ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಒಲಿಯಿತು. ಒಮ್ಮೆ ಇಂಗ್ಲಿಷ್‌ನಲ್ಲೇ ಫೇಲಾಗಿದ್ದ ಹುಡುಗ, ಅದೇ ಇಂಗ್ಲಿಷ್ ಭಾಷೆಯಲ್ಲಿ ಭಾರತದ ಸುಂದರ ಹಳ್ಳಿಗಳ, ಮುಗ್ಧ ಜನರ ಕಥೆಗಳನ್ನು ಜಗತ್ತಿಗೆ ಸಾರಿ ಅತ್ಯಂತ ಪ್ರಭಾವಶಾಲಿ ಬರಹಗಾರನಾಗಿ ಬೆಳೆದು ನಿಂತಿದ್ದ.

ಕೆಲವೊಮ್ಮೆ ಸೋಲು ನಮ್ಮ ಆತ್ಮವಿಶ್ವಾಸವನ್ನೇ ಕರಗಿಸಿ ಹೈರಾಣಾಗಿಸುತ್ತದೆ. ಪ್ರಪಂಚಕ್ಕೆ ಇರಲಿ ನಮಗೆ ನಮ್ಮ ಬಗ್ಗೆ ವಿಶ್ವಾಸ ಹೊರಟು ಹೋಗುತ್ತದೆ. ಅಂತಹ ಸಮಯದಲ್ಲೂ ಕೂಡ ಧೈರ್ಯ ತಂದುಕೊಂಡು ಪ್ರಯತ್ನಗಳನ್ನು ಮಾಡುತ್ತಾ ದೃಢವಾಗಿ ಮುಂದೆ ಹೆಜ್ಜೆ ಇರಿಸಿದಾಗ ಮಾತ್ರ ಬೆಳಕಿನ ಆಶಾಕಿರಣ ಬದುಕಿನಲ್ಲಿ ಮೂಡಲು ಸಾಧ್ಯ. ನಡೆಯುವವರು ಎಡುವುದು ಸಹಜ, ಆದರೆ ಪ್ರಯತ್ನವನ್ನೇ ಪಡದೆ ಹೋದರೆ ಗುರಿಯೆಡೆಗೆ ತಲುಪಲು ಸಾಧ್ಯವೇ ಆಗುವುದಿಲ್ಲ.

ನೀವೂ ಬರೆಯಬಹುದು

ನಮ್ಮ ವಿಳಾಸ

ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

ಐಪಿಎಲ್ ಹಬ್ಬ 2026

ಆರೆಂಜ್ ಕ್ಯಾಪ್ — ಸಾಯಿ ಸುದರ್ಶನ್ ಗುಜರಾತ್

ಪರ್ಪಲ್ ಕ್ಯಾಪ್ — ಭುವನೇಶ್ವರ್ ಕುಮಾರ್ ಆರ್‌ಸಿಬಿ

IPL T20 2026

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
ಬೆಂಗಳೂರು	13	9	4	18
ಗುಜರಾತ್	13	8	5	16
ಹೈದರಾಬಾದ್	12	7	5	14
ಪಂಜಾಬ್	13	6	6	13
ಚೆನ್ನೈ	12	6	6	12
ರಾಜಸ್ಥಾನ್	12	6	6	12
ಡೆಲ್ಲಿ	13	6	7	12
ಕೋಲ್ಕತಾ	12	5	6	11
ಮುಂಬೈ	12	4	8	8
ಲಖನೌ	12	4	8	8

ಸಮಾಚಾರ ಸಣ್ಣದಲ್ಲ

ಕೊಹ್ಲಿಯಿಂದ ಇನ್ನೇನು ಸಾಧನೆ ನಿರೀಕ್ಷಿಸುವಿರಿ?

ದೆಹಲಿ: ಭಾರತ ತಂಡದಲ್ಲಿ ಇಷ್ಟೊಂದು ವರ್ಷಗಳ ಕಾಲ ಆಡಿ ಸಾಲು ಸಾಲು ಪಂದ್ಯಗಳನ್ನು ಗೆದ್ದುಕೊಟ್ಟ ನಂತರವೂ ಅವರು ಇನ್ನೂ ಯಾರಿಗೆ ಏನನ್ನು ಸಾಬೀತು ಪಡಿಸಬೇಕು? ಎಂದು ಮಾಜಿ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಪ್ರತಿಕ್ರಿಯಿಸಿದ್ದಾರೆ. ತಮ್ಮನ್ನು ಪದೇಪದೆ ಪ್ರಶ್ನಿಸುವ ವಾತಾವರಣದಲ್ಲಿ ಇರಲು ತಮಗೆ ಇಷ್ಟವಿಲ್ಲ ಎಂಬ ಕೊಹ್ಲಿ ಅವರ ಹೇಳಿಕೆಯನ್ನು ಬೆಂಬಲಿಸಿ ಈ ಮಾತನ್ನು ಅವರು ಹೇಳಿದ್ದಾರೆ. ತಮ್ಮ ಯೂಟ್ಯೂಬ್ ಚಾನಲ್‌ನಲ್ಲಿ ಮಾತನಾಡಿದ ಅಶ್ವಿನ್ ಅವರು, ಇಷ್ಟು ಸಾಧನೆ ಮಾಡಿರುವ ಆಟ ಗಾರನನ್ನು ಇನ್ನೂ ಪ್ರಶ್ನಿಸುವುದು ಸರಿಯಲ್ಲ ಎಂದಿದ್ದಾರೆ. ವಿರಾಟ್ ಕೊಹ್ಲಿ ಅವರು ತಾನು ಯಾರಿಗೂ ಏನನ್ನೂ ಸಾಬೀತುಪಡಿಸುವ ಅಗತ್ಯ ವಿಲ್ಲ ಎಂದು ಹೇಳುತ್ತಿರುವುದು ನೂರಕ್ಕೆ ನೂರು ನಿಜ. ಅವರು ಅಂತಾರಾಷ್ಟ್ರೀಯ ಕ್ರಿಕೆಟ್ನಲ್ಲಿ ಈಗಾ ಗಲೇ ಎಲ್ಲವನ್ನೂ ಸಾಧಿಸಿದ್ದಾರೆ. ನನ್ನ ಆಲೋಚನಾ ವಿಧಾನವೂ ಇದೇ ಆಗಿದೆ. ಭಾರತಕ್ಕಾಗಿ ಇಷ್ಟೊಂದು ವರ್ಷ ಆಡಿ, ಸಾಲು ಸಾಲು ಪಂದ್ಯಗಳನ್ನು ಗೆದ್ದು ಕೊಟ್ಟ ನಂತರವೂ ಅವರು ಇನ್ನೂ ಏನನ್ನು ಯಾರಿಗೆ ಸಾಬೀತುಪಡಿಸಬೇಕು? ಎಂದು ಖಾರವಾಗಿ ಪ್ರಶ್ನಿಸಿ ದ್ದಾರೆ. ವಿರಾಟ್ ಕೊಹ್ಲಿ ಅವರು ಅಂತಾರಾಷ್ಟ್ರೀಯ ಕ್ರಿಕೆಟ್, ಭಾರತ ತಂಡದ ವಾತಾವರಣ ಮತ್ತು 2027ರ ಏಕದಿನ ವಿಶ್ವಕಪ್ನಲ್ಲಿ ತಮ್ಮ ಸಂಭಾವ್ಯ ಭಾಗವಹಿಸು ವಿಕೆಯ ಬಗ್ಗೆ ತಮ್ಮ ಪ್ರಸ್ತುತ ದೃಷ್ಟಿಕೋನವನ್ನು ಹಂಚಿಕೊಂಡಿದ್ದರು. ತಾವು ಇನ್ನೂ ಕ್ರಿಕೆಟ್ ಆಡುವು ದನ್ನು ಆನಂದಿಸುತ್ತಿರು ವುದಾಗಿ ಮತ್ತು 2027ರ ವಿಶ್ವಕಪ್‌ನಲ್ಲಿ ಆಡಲು ಮುಕ್ತ ವಾಗಿರುವುದಾಗಿ ಸ್ಪಷ್ಟಪಡಿಸಿದ ಕೊಹ್ಲಿ, ಅದೇ ಸಮಯದಲ್ಲಿ ತಂಡದಲ್ಲಿ ತಮ್ಮ ಸ್ಥಾನದ ಬಗ್ಗೆ ಯಾವುದೇ ಅನಿಶ್ಚಿತತೆ ಅಥವಾ ಗೊಂದಲದ ಸಂಕೇತಗಳನ್ನು ಬಯಸುವುದಿಲ್ಲ ಎಂದು ಹೇಳಿದ್ದರು.

ಮೊಹ್ಸಿನ್ ನಖ್ವಿಗಿಲ್ಲ ಐಪಿಎಲ್‌ಗೆ ಆಹ್ವಾನ

ದೆಹಲಿ: ಇಂಡಿಯನ್ ಪ್ರೀಮಿಯರ್ ಲೀಗ್ ಫೈನಲ್ ದಿನವೇ ಐಸಿಸಿ ಸಭೆ ಅಹಮದಾಬಾದ್‌ನಲ್ಲಿ ಆಯೋಜಿಸಲಾಗಿದೆ. ಸಭೆಯ ಬಳಿಕ ಫೈನಲ್ ಪಂದ್ಯ ವೀಕ್ಷಣೆಗೆ ಹಲವು ದೇಶದ ಕ್ರಿಕೆಟ್ ಮಂಡಳಿಯ ಮುಖ್ಯಸ್ಥರಿಗೆ ಬಿಸಿಸಿಐ ಆಹ್ವಾನ ನೀಡಿದೆ. ಆದರೆ ಪಾಕಿಸ್ತಾನ ಕ್ರಿಕೆಟ್ ಬೋರ್ಡ್ ಅಧ್ಯಕ್ಷ ಮೊಹ್ಸಿನ್ ನಖ್ವಿಗೆ ಮಾತ್ರ ಆಹ್ವಾನ ನೀಡಿಲ್ಲ ಎಂದು ತಿಳಿದುಬಂದಿದೆ. ನಖ್ವಿ ಹೊರತುಪಡಿಸಿ ಐಸಿಸಿ ಸಭೆಗೆ ಹಾಜರಾಗಲಿರುವ ಇತರ ವಿದೇಶಗಳ ಪ್ರತಿನಿಧಿಗಳನ್ನು ಐಪಿಎಲ್ ಫೈನಲ್‌ಗೆ ಆಹ್ವಾನಿಸಲಾಗಿದೆ. ಐಸಿಸಿ ಸಭೆ ಹೋದ ತಿಂಗಳು ದೋಹಾದಲ್ಲಿ ಆಯೋಜಿಸಬೇಕಿತ್ತು. ಆದರೆ ಪಶ್ಚಿಮ ಏಷ್ಯಾದಲ್ಲಿ ಸಂಘರ್ಷವಿರುವ ಕಾರಣಕ್ಕೆ ಮುಂದೂಡಲಾಯಿತು. ಅದರಿಂದಾಗಿ ಭಾರತಕ್ಕೆ ಆತಿಥ್ಯ ವಹಿಸುವ ಅವಕಾಶ ದೊರೆಯಿತು. ನಖ್ವಿ ಅವರೊಂದಿಗೆ ಇನ್ನೂ ಮೂರು ಮಂಡಳಿಗಳ ಪ್ರತಿನಿಧಿಗಳು ಕೂಡ ವರ್ಚುವಲ್ ಸಭೆಯಲ್ಲಿ ಭಾಗವಹಿಸುವರು ಎಂದು ಮೂಲಗಳು ತಿಳಿಸಿವೆ.

ಆರ್‌ಸಿಬಿ ಪ್ಲೇಆಫ್ ಪ್ರವೇಶಿಸಿದ ಮೊದಲ ತಂಡ | ವೆಂಕಿ, ಕೊಹ್ಲಿ ಅರ್ಭಟ | ಭುವಿ, ರಸಿಕ್ ಬೌಲ್‌ಗೆ ತಲೆಬಾಗಿದ ಪಂಜಾಬ್ | ಸತತ 6ನೇ ಪಂದ್ಯವನ್ನೂ ಸೋತು ಪ್ಲೇಆಫ್ ರೇಸ್ ಕಠಿಣವಾಗಿಸಿಕೊಂಡ ಕಿಂಗ್ಸ್

ಕಿಂಗ್ಸ್ ಮಣಿಸಿ ಟಾಪರ್ ಆದ ಆರ್‌ಸಿಬಿ

ಧರ್ಮಶಾಲಾ: ಐಪಿಎಲ್‌ನ 19ನೇ ಆವೃತ್ತಿಯ 13ನೇ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಅನ್ನು ಮಣಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರುವುದರೊಂದಿಗೆ ಪ್ಲೇಆಫ್‌ನಲ್ಲಿ ಸ್ಥಾನವನ್ನು ಆರ್‌ಸಿಬಿ ಖಚಿತಪಡಿಸಿಕೊಂಡಿದೆ.

ಭಾನುವಾರ ಧರ್ಮಶಾಲದಲ್ಲಿ ನಡೆದ ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ 23ರನ್‌ಗಳ ಭರ್ಜರಿ ಗೆಲುವನ್ನು ಆರ್‌ಸಿಬಿ ದಾಖಲಿಸಿದ್ದರೆ, ಇನ್ನೊಂದೆಡೆ ಆರಂಭಿಕ ಪಂದ್ಯದಲ್ಲಿ ಭರ್ಜರಿ ಪ್ರದರ್ಶನದ ಮೂಲಕ ಅಂಕಪಟ್ಟಿಯಲ್ಲಿ ಮೊದಲ ಸ್ಥಾನಕ್ಕೆ ಏರಿಸಿದ್ದ ಪಂಜಾಬ್ ಸತತ ಆರನೇ ಸೋಲಿನ ಮೂಲಕ ನಾಲ್ಕರ ಘಟ್ಟದ ರೇಸ್‌ನಿಂದಲೇ ಹೊರ ಬೀಳುವ ಆತಂಕದಲ್ಲಿದೆ. ಸತತ ಆರನೇ ಪಂದ್ಯವನ್ನು ಸೋಲುವ ಮೂಲಕ ಬೇರೆ ತಂಡಗಳ ಫಲಿತಾಂಶಗಳ ಮೇಲೆ ಪಂಜಾಬ್ ಭವಿಷ್ಯ ನಿಂತಿದೆ.

ವೆಂಕಟೇಶ್ ಅಯ್ಯರ್.

ಧರ್ಮಶಾಲಾದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ, ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 224 ರನ್‌ಗಳ ಬೃಹತ್ ಮೊತ್ತ ಕಲೆಹಾಕಿತು. ಆರಂಭಿಕ ಆಟಗಾರ ಜೆಕಬ್ ಬೆಥೆಲ್ ಬೇಗನೇ ಪೆವಿಲಿಯನ್‌ಗೆ ಮರಳಿದರು, ವಿರಾಟ್ ಕೊಹ್ಲಿ ಮತ್ತು ದೇವದತ್ ಪಡಿಕ್ಕಲ್ ಪಂಜಾಬ್ ಬೌಲರ್‌ಗಳ ಮೇಲೆ ಸವಾರಿ ಮಾಡಿದರು. ಪಡಿಕ್ಕಲ್ 25 ಎಸೆತಗಳಲ್ಲಿ 4 ಫೋರ್ ಮತ್ತು 3 ಸಿಕ್ಸ್ ಸಹಿತ 45 ರನ್ ಬಾರಿಸಿ ಔಟಾದರೆ, ಕಿಂಗ್ ಕೊಹ್ಲಿ 37 ಎಸೆತಗಳಲ್ಲಿ 4 ಫೋರ್ ಮತ್ತು 3 ಸಿಕ್ಸ್ ಸಹಿತ 57 ರನ್ ಬಾರಿಸಿ ನಿರ್ಗಮಿಸಿದರು.

ಗೆಲುವಿನ ಸಂಭ್ರಮದಲ್ಲಿ ಆರ್‌ಸಿಬಿ ತಂಡ.

ರಜತ್ ಪಟೀದಾರ್ ಬದಲಿಗೆ ಮೈದಾನಕ್ಕಿಳಿದ ವೆಂಕಟೇಶ್ ಅಯ್ಯರ್ ಕೇವಲ 40 ಎಸೆತಗಳಲ್ಲಿ 8 ಫೋರ್ ಮತ್ತು 4 ಸಿಕ್ಸ್ ಸಹಿತ 73 ರನ್ ಬಾರಿಸುವ ಮೂಲಕ ತಂಡದ ಮೊತ್ತ ಹಿಗ್ಗುವಂತೆ ನೋಡಿಕೊಂಡರು. ಇನ್ನೊಂದೆಡೆ ಬಿಗ್ ಹಿಟ್ಟರ್ ಟಿಮ್ ಡೇವಿಡ್ ಕೂಡ ಮಿಂಚಿದರು. ಪಂಜಾಬ್ ಪರ ಹರ್‌ಪ್ರೀತ್ ಬ್ರಾರ್ 2 ವಿಕೆಟ್ ಕಬಳಿಸಿದರೆ, ಚಹಲ್ ಮತ್ತು ವೇಗಿ ಅರ್ಶ್‌ದೀಪ್ ಸಿಂಗ್ ಮತ್ತು ತಲಾ ಒಂದು ವಿಕೆಟ್ ಪಡೆದುಕೊಂಡರು.

ಆರಂಭದಲ್ಲಿಯೇ ವಿಕೆಟ್ ಕೊಟ್ಟ ಪಂಜಾಬ್: 223 ರನ್‌ಗಳ ದೊಡ್ಡ ಗುರಿ ಬೆನ್ನತ್ತಿದ್ದ ಪಂಜಾಬ್‌ಗೆ ಉತ್ತಮ ಆರಂಭ ಸಿಗಲಿಲ್ಲ. 4 ಓವರ್ ಮುಗಿಯುವುದರೊಳಗೆ ಆರಂಭಿಕ ಬ್ಯಾಟರ್‌ಗಳು ಪೆವಿಲಿಯನ್ ಸೇರಿದರು. ಒಂದು ಹಂತದಲ್ಲಿ ಪಂಜಾಬ್ 93 ರನ್‌ಗೆ 5 ವಿಕೆಟ್ ಕಳೆದುಕೊಂಡು ತೀವ್ರ ಸಂಕಷ್ಟಕ್ಕೆ ಸಿಲುಕಿತ್ತು. ಆದರೆ, ಮಾರ್ಕಸ್ ಸ್ಟೋಯಿನಿಸ್ ಮತ್ತು ಶಶಾಂಕ್ ಸಿಂಗ್, ಆರ್‌ಸಿಬಿ ಬೌಲರ್‌ಗಳನ್ನು ದಂಡಿಸುವ ಮೂಲಕ ಗೌರವಯುತ ರನ್ ಕಲೆಹಾಕಿದರು. ಅದರಲ್ಲೂ ಶಶಾಂಕ್ ಸಿಂಗ್ ಬೌಂಡರಿ, ಸಿಕ್ಸರ್‌ಗಳ ಮೂಲಕ ಶರವೇಗದಲ್ಲಿ ರನ್ ಬಾರಿಸಿದರು. ಆ ಮೂಲಕ ಆರ್‌ಸಿಬಿ ಪಾಳಯದಲ್ಲಿ ನಡುಕ ಹುಟ್ಟಿಸಿದರು. ಆದರೆ ನಿರ್ಣಾಯ ಹಂತದಲ್ಲಿ ವೇಗಿ ಜಾಶ್ ಹೇಜಲ್‌ವುಡ್ ಸ್ಟೋಯಿನಿಸ್ ಪೆವಿಲಿಯನ್‌ಗೆ ಕಳುಹಿಸುವ ಮೂಲಕ ಪಂಜಾಬ್ ಸೋಲಿಗೆ ಷರ ಬರೆದರು. ಶಶಾಂಕ್ ಸಿಂಗ್ (27 ಬಾಲ್ 56 ರನ್ 4 ಫೋರ್, 4 ಸಿಕ್ಸ್) ಕೊನೆಯ ವರೆಗೂ ಹೋರಾಡಿದರೂ ತಂಡಕ್ಕೆ ಗೆಲುವು ತಂದು ಕೊಡಲು ಸಾಧ್ಯವಾಗಲಿಲ್ಲ. ಅಂತಿಮವಾಗಿ ಪಂಜಾಬ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 199 ರನ್ ಗಳಿಸಿತು. 23 ರನ್‌ಗಳಿಂದ ಸೋಲಿಗೆ ಶರಣಾಯಿತು. ಆರ್‌ಸಿಬಿ ಪರ ರಸಿಕ್ ಸಲಾಂದಾರ್ ಮೂರು ವಿಕೆಟ್ ಪಡೆದುಕೊಂಡರೆಮ ಭುವನೇಶ್ವರ್ ಕುಮಾರ ಎರಡು ವಿಕೆಟ್, ಜಾಶ್ ಹೇಜಲ್‌ವುಡ್, ಸುಯಶ್ ಶರ್ಮಾ ಮತ್ತು ರೊಮಾರಿಯೋ ಶೆಫರ್ಡ್ ತಲಾ ಒಂದು ವಿಕೆಟ್ ಕಬಳಿಸಿದರು. ನಾಯಕ ರಜತ ಪಾಟೀದಾರ್ ಗಾಯಕ್ಕೆ ತುತ್ತಾಗಿದ್ದರಿಂದ ಜಿತೇಶ್ ಶರ್ಮಾ ಆರ್‌ಸಿಬಿ ತಂಡವನ್ನು ಮುನ್ನಡೆಸಿದರು.

ಕೊಹ್ಲಿ 500 ರನ್ ದಾಖಲೆ

ಪ್ರಸಕ್ತ ಐಪಿಎಲ್‌ನಲ್ಲಿ ಅದ್ಭುತ ಫಾರ್ಮ್‌ನಲ್ಲಿರುವ ಕೊಹ್ಲಿ ಪಂಜಾಬ್ ಕಿಂಗ್ಸ್ ವಿರುದ್ಧವೂ ಅರ್ಧಶತಕ ಬಾರಿಸಿದರು. ಅಲ್ಲದೇ ಟೂರ್ನಿಯಲ್ಲಿ 500 ರನ್ ಗಡಿ ತಲುಪಿದರು. ಈ ಆವೃತ್ತಿಯಲ್ಲಿ 13 ಇನ್ನಿಂಗ್ಸ್‌ಗಳಲ್ಲಿ ಬ್ಯಾಟ್ ಬೀಸಿರುವ ಕೊಹ್ಲಿ 54.20ರ ಸರಾಸರಿ ಮತ್ತು 164.74ರ ಸ್ಟ್ರೈಕ್‌ರೇಟ್‌ನಲ್ಲಿ ಒಂದು ಶತಕ ಮತ್ತು 4 ಅರ್ಧಶತಕ ಸಹಿತ 542 ರನ್‌ಗಳಿಸಿದ್ದಾರೆ.

ಸ್ಕೋರ್ ಬೋರ್ಡ್

ಆರ್‌ಸಿಬಿ 224/4 — 20 ಓವರ್

		ರನ್	ಎಸೆತ	4s	6s
ಬೆಥೆಲ್	ಬಿ ಬ್ರಾರ್	11	7	2	0
ಕೊಹ್ಲಿ	ಸಿ ಪ್ರಿಯಾಂಶ್ ಆರ್ಯ ಬಿ ಚಹಲ್	58	37	4	3
ಪಡಿಕ್ಕಲ್	ಸಿ ಶ್ರೇಯಸ್ ಬಿ ಬ್ರಾರ್	45	25	4	3
ವೆಂಕಟೇಶ್ ಅಯ್ಯರ್	ನಾಟ್‌ಔಟ್	73	40	8	4
ಟಿಮ್ ಡೇವಿಡ್	ನಾಟ್‌ಔಟ್	28	12	2	2

ಬೌಲಿಂಗ್ ಪಂಜಾಬ್ ಕಿಂಗ್ಸ್

	ಓವರ್	ರನ್	ಮೆಡನ್	ವಿಕೆಟ್
ಅರ್ಶ್‌ದೀಪ್ ಸಿಂಗ್	4	43	0	1
ಅಜ್ಮತುಲಾ ಒಮರ್‌ಝಾಯಿ	4	38	0	0
ಹರ್‌ಪ್ರೀತ್ ಬ್ರಾರ್	4	35	0	2
ಲಾಕಿ ಫರ್ಗೂಸನ್	3	43	0	0
ಚಹಲ್	3	42	0	1
ಶಶಾಂಕ್ ಸಿಂಗ್	2	20	0	0

ವಿಕೆಟ್ ವಿಕೆಟ್: 21/1, 97/2, 157/3, 222/4

ಪಂಜಾಬ್ 199/8 — 20 ಓವರ್

		ರನ್	ಎಸೆತ	4s	6s
ಪ್ರಿಯಾಂಶ್ ಆರ್ಯ	ಸಿ ಶೆಫರ್ಡ್ ಬಿ ಭುವನೇಶ್ವರ್	0	3	0	0
ಪ್ರಭ್‌ಸಿಮ್ರನ್ ಸಿಂಗ್	ಸಿ ಪಡಿಕ್ಕಲ್ ಬಿ ಭುವನೇಶ್ವರ್	2	5	0	0
ಕಾನೋಲಿ	ಸಿ ಬೆಥೆಲ್ ಬಿ ಶೆಫರ್ಡ್	37	22	3	3
ಶ್ರೇಯಸ್ ಅಯ್ಯರ್	ಸಿ ಜಿತೇಶ್ ಬಿ ರಸಿಕ್ ಸಲಾಂದಾರ್	1	3	0	0
ಸೂರ್ಯಾಂಶ್ ಶೆಡ್ಗೆ	ಸಿ ವಿರಾಟ್ ಬಿ ಸುಯಶ್ ಶರ್ಮಾ	35	22	2	2
ಸ್ಟೋಯಿನಿಸ್	ಎಲ್‌ಬಿಡಬ್ಲ್ಯೂ ಹೇಜಲ್‌ವುಡ್	37	25	5	0
ಶಶಾಂಕ್ ಸಿಂಗ್	ಸಿ ವಿರಾಟ್, ಬಿ ರಸಿಕ್ ಸಲಾಂದಾರ್	56	27	4	4
ಅಜ್ಮತುಲ್ಲಾ	ಸಿ ಡೇವಿಡ್ ರಸಿಕ್ ಸಲಾಂದಾರ್	14	10	1	1

ಬೌಲಿಂಗ್ ಆರ್‌ಸಿಬಿ

	ಓವರ್	ರನ್	ಮೆಡನ್	ವಿಕೆಟ್
ಭುವನೇಶ್ವರ್	4	38	0	2
ಹೇಜಲ್‌ವುಡ್	4	36	0	1
ರಸಿಕ್ ಸಲಾಂದಾರ್	4	36	0	3
ಸುಯಶ್ ಶರ್ಮಾ	4	50	0	1
ಶೆಫರ್ಡ್	1	8	0	1
ಕೃನಾಲ್ ಪಾಂಡ್ಯ	3	27	0	0

ವಿಕೆಟ್ ಪತನ :1/1, 18/2, 19/3, 62/4, 93/5, 160/6, 194/7, 199/8

ಪ್ಲೇಯರ್ ಆಫ್ ದಿ ಮ್ಯಾಚ್ ▶▶ ವೆಂಕಟೇಶ್ (ಆರ್‌ಸಿಬಿ)

ಗೆದ್ದ ಡೆಲ್ಲಿ: ಪ್ಲೇಆಫ್ ರೇಸ್ ರೋಚಕ

ದೆಹಲಿ: ನಿರ್ಣಾಯಕ ಪಂದ್ಯದಲ್ಲಿ ರಾಜಸ್ತಾನ ರಾಯಲ್ಸ್ ವಿರುದ್ಧ ಡೆಲ್ಲಿ ಕ್ಯಾಪಿಟಲ್ಸ್ ಐದು ವಿಕೆಟ್‌ಗಳ ಜಯ ಸಾಧಿಸುವ ಮೂಲಕ ಪ್ಲೇಆಫ್ ರೇಸ್ ಮತ್ತಷ್ಟು ರೋಚಕಗೊಂಡಿದೆ.

ದೆಹಲಿಯಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಆರ್.ಆರ್. ನೀಡಿದ್ದ 194 ರನ್‌ಗಳ ಗುರಿಯನ್ನು ಬೆನ್ನಟ್ಟಿದ ದೆಹಲಿ ನಾಲ್ಕು ಎಸೆತ ಬಾಕಿಯಿರುವಂತೆಯೇ ಜಯಗಳಿಸುವ ಮೂಲಕ ಪ್ಲೇಆಫ್ ಕನಸನ್ನು ಜೀವಂತವಾಗಿಸಿಕೊಂಡಿದೆ. ಡೆಲ್ಲಿ ಆರಂಭಿಕರಾದ ಅಭಿಷೇಕ್ ಪೋರೆಲ್ ಹಾಗೂ ಕೆ.ಎಲ್. ರಾಹುಲ್ ಅರ್ಧಶತಕ ಹಾಗೂ ನಾಯಕ ಅಕ್ಸರ್ ಪಾಟೀಲ್ ಅವರ ಅಜೇಯ 34 ರನ್‌ಗಳಿಂದ ಡೆಲ್ಲಿ ಗೆಲುವಿನ ದಡ ಸೇರಿತು. ಈ ಸೋಲಿನ ಮೂಲಕ ರಾಯಲ್ಸ್ 5ನೇ ಸ್ಥಾನಕ್ಕೆ ಕುಸಿದಿದೆ. **ಮಧ್ಯಮ ಕ್ರಮಾಂಕದಲ್ಲಿ ಕುಸಿದ ಆರ್‌ಆರ್:** ಇದಕ್ಕೂ ಮೊದಲು ಬ್ಯಾಟ್ ಮಾಡಿದ ರಾಜಸ್ಥಾನ ರಾಯಲ್ಸ್ ಆರಂಭ ಉತ್ತಮವಾಗಿರಲಿಲ್ಲ. ಆರಂಭಿಕ ಆಟ ಗಾರ ಜೈಸ್ವಾಲ್ 12 ರನ್‌ಗೆ ಔಟಾದರು. ಬಳಿಕ ವೈಭವ್ ಸೂರ್ಯವಂಶಿ ಜತೆಗೆ ಜುರೆಲ್ ಆರ್‌ಆರ್ ತಂಡವನ್ನು ಆರಂಭಿಕ ಆಘಾತದಿಂದ ಹೊರ ತಂದರು. 21 ಎಸೆತ ದಲ್ಲಿ 46 ರನ್ ಗಳಿ ಸಿದ್ದ ವೈಭವ್ ಔಟಾದ ಬಳಿಕ ಜುರೆಲ್ ಜತೆಯಾದ ನಾಯಕ ಪರಾಗ್ ಜವಾಬ್ದಾರಿಯುತ ಆಟವಾಡಿ ಉತ್ತಮ ಮೊತ್ತ ಕಲೆಹಾಕುವ ಮುನ್ಸೂಚನೆ ನೀಡಿದರು. ಈ ವೇಳೆ 14ನೇ ಓವರ್‌ನಲ್ಲಿ ದಾಳಿಗಿಳಿದ ಮಿಚಲ್ ಸ್ಟಾರ್ಕ್ ಒಂದೇ ಓವರ್‌ನಲ್ಲಿ ರಿಯಾನ್ ಪರಾಗ್, ಫೆರೇರಾ ಹಾಗೂ ರವಿ ಸಿಂಗ್ ವಿಕೆಟ್ ಪಡೆಯುವ ಮೂಲಕ ಮಧ್ಯಮ ಕ್ರಮಾಂಕವನ್ನು ಪೆವಿಲಿಯನ್‌ಗೆ ಗಳಿಸಿದರು. ಈ ಆಘಾತದ ಹೊರತಾಗಿಯೂ ಬಾಲಂಗೋಚಿಗಳು ತಂಡದ ಮೊತ್ತವನ್ನು 193ಕ್ಕೆ ತಂದು ನಿಲ್ಲಿಸಿದರು.

ಚೆನ್ನೈ-ಹೈದರಾಬಾದ್‌ಗೆ ನಿರ್ಣಾಯಕ ಪಂದ್ಯ

ಚೆನ್ನೈ: ಪ್ರಸಕ್ತ ಸಾಲಿನ ಐಪಿಎಲ್ ಲೀಗ್ ಹಂತದ ಪಂದ್ಯಗಳ ಕೊನೆಯ ಹಂತಕ್ಕೆ ಬರು ತ್ತಿರುವ ಹೊಸ್ತಿಲಿನಲ್ಲಿಯೇ ಕ್ವಾಲಿಫೈಯರ್ ರೇಸ್‌ನಲ್ಲಿ ಚೆನ್ನೈ ಹಾಗೂ ಹೈದರಾಬಾದ್ ಪೈಕಿ ಯಾರು ಉಳಿಯಲಿದ್ದಾರೆ ಎನ್ನುವುದು ಸೋಮವಾರ ಸಂಜೆ ನಿರ್ಧಾರವಾಗಲಿದೆ.

ಲೀಗ್ ಹಂತದ 13ನೇ ಪಂದ್ಯವನ್ನು ಎದುರಿಸುತ್ತಿರುವ ಐದು ಬಾರಿಯ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ಚೆನ್ನೈನ ಚಿದಂಬರಂ ಕ್ರೀಡಾಂಗಣದಲ್ಲಿ ಎದುರಾಗ ಲಿವೆ. ಸಿಎಸ್‌ಕೆ ತಂಡ 12 ಪಂದ್ಯಗಳಲ್ಲಿ ಆರು ಗೆಲುವುಗಳು ಮತ್ತು ಅಷ್ಟೇ ಸೋಲು ಗಳೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ 6ನೇ ಸ್ಥಾನದಲ್ಲಿದ್ದಾರೆ. ಕಳೆದ ಪಂದ್ಯದಲ್ಲಿ ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧ ಹೀನಾಯ ಸೋಲು ತಂಡದ ಪ್ಲೇ-ಆಫ್ ಲೆಕ್ಕಾಚಾರವನ್ನು ತಲೆಕೆಳಗೆ ಮಾಡಿತ್ತು. ಸ್ಪರ್ಧೆಯಲ್ಲಿ ಜೀವಂತ ವಾಗಿರಲು ಈ ನಿರ್ಣಾಯಕ ಪಂದ್ಯದಲ್ಲಿ ಅವರಿಗೆ ಗೆಲುವು ಅಗತ್ಯವಾಗಿದೆ. ಮತ್ತೊಂದೆಡೆ ಅಬ್ಬರದ ಆಟದ ಹೊರ ತಾಗಿಯೂ 12 ಪಂದ್ಯಗಳಲ್ಲಿ ಏಳು ಗೆಲುವು ಗಳೊಂದಿಗೆ ಅವರು ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದ್ದಾರೆ. ಸಿಎಸ್‌ಕೆ ವಿರುದ್ಧದ ಪಂದ್ಯದಲ್ಲಿ ಅವರು ಗೆದ್ದರೆ, ಅವರ ಅರ್ಹತೆ ಪಡೆಯುವ ಸಾಧ್ಯತೆಗಳು ಗಮನಾರ್ಹವಾಗಿ ಹೆಚ್ಚಾಗುತ್ತವೆ. ಇಲ್ಲದೇ ಹೋದರೆ, ಇತರೆ ತಂಡಗಳ ಫಲಿತಾಂಶದ ಮೇಲೆ ಅಲವಂಬಿತರಾಗಬೇಕಾದ ಸ್ಥಿತಿ ತಲುಪಲಿದೆ.

ಪಿಚ್ ರಿಪೋರ್ಟ್: ಚೆನ್ನೈನ ಐಕಾನಿಕ್ ಎಂಎ ಚಿದಂಬರಂ ಕ್ರೀಡಾಂಗಣವು ಐಪಿಎಲ್ 2026 ರಲ್ಲಿ ಇದುವರೆಗೆ ಆರು ಪಂದ್ಯಗಳನ್ನು ಆಯೋಜಿಸಿದೆ ಮತ್ತು ಪಂದ್ಯಗಳು ಸಾಕಷ್ಟು ಹೆಚ್ಚಿನ ಸ್ಕೋರಿಂಗ್ ಆಗಿವೆ. ಆರು ಪಂದ್ಯ ಗಳಲ್ಲಿ, ನಾಲ್ಕು ಪಂದ್ಯಗಳನ್ನು ಚೇಸಿಂಗ್ ತಂಡವು ಗೆದ್ದಿದೆ. ಇಲ್ಲ ಆಟ ಸಾಗಿದಂತೆ ಪಿಚ್ ಬ್ಯಾಟಿಂಗ್ಗೆ ಉತ್ತಮಗೊಳ್ಳುತ್ತದೆ. ಹೀಗಾಗಿ ಟಾಸ್ ಕೂಡ ನಿರ್ಣಾಯಕ. ಇತ್ತಂಡಗಳು ಈವರೆಗೆ ಐಪಿಎಲ್ ಟೂರ್ನಿಯಲ್ಲಿ 24 ಬಾರಿ ಮುಖಾಮುಖಿಯಾಗಿವೆ. ಈ ಪೈಕಿ ಸಿಎಸ್ಕೆ ತಂಡ 16 ಬಾರಿ ಗೆಲುವು ಸಾಧಿಸಿದೆ. ಹೈದರಾ ಬಾದ್ 8 ಪಂದ್ಯ ಗೆದ್ದಿದೆ. ಆದರೆ ಈ ಬಾರಿ ಸಿಎಸ್ಕೆಗಿಂತ ಹೈದರಾಬಾದ್ ಬಲಿಷ್ಠವಾಗಿದೆ.

ವಿಟಾಕೀಸ್

ಬೇಲ್‌ಗಾಗಿ ಹೊಸ ಅವತಾರ ತಾಳಿದ ಶಿವಣ್ಣ

ಕೆವಿಎನ್ ನಿರ್ಮಾಣ ಮಾಡುತ್ತಿರುವ ಬೇಲ್ ಶೀರ್ಷಿಕೆಯಲ್ಲಿ ಗಮನ ಸೆಳೆದಿದೆ. ಪವನ್ ಒಡೆಯರ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಬೇಲ್ ಚಿತ್ರದಲ್ಲಿ ಶಿವಣ್ಣ ನಾಯಕರಾಗಿ ನಟಿಸುತ್ತಿದ್ದು, ಈ ಚಿತ್ರಕ್ಕಾಗಿ ಹೊಸ ಅವತಾರ ತಾಳಿದ್ದಾರೆ. ಸದ್ಯ ಕೊನೆಯ ಹಂತದ ಶೂಟಿಂಗ್‌ನಲ್ಲಿ ಬ್ಯುಸಿಯಾಗಿರುವ ಚಿತ್ರತಂಡ ಇದೀಗ ಬೇಲ್ ಸಿನಿಮಾದ ಫಸ್ಟ್‌ಲುಕ್ ಬಿಡುಗಡೆ ಮಾಡಿದೆ. ಬೇಲ್ ಸಿನಿಮಾದಲ್ಲಿ ಶಿವಣ್ಣ ಹೊಸ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ಸಾಲ್ಟ್ ಅಂಡ್ ಪೆಪ್ಪರ್ ಲುಕ್‌ನಲ್ಲಿ ದರ್ಶನ ಕೊಟ್ಟಿರುವ ಹ್ಯಾಟ್ರಿಕ್ ಹೀರೊ, ವಿಜಿ ಎಂಬ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಕೊಡೆ ಹಿಡಿದು ಸಾಕು ನಾಯಿಯ ಜತೆ ಶಿವಣ್ಣ ನಡೆದು ಬರುವ ಸ್ಟೈಲ್ ಅದ್ಭುತವಾಗಿದೆ. ಶಿವಣ್ಣ ಹಾಗೂ ಸಾಯಿ ಕುಮಾರ್ ಡೈಲಾಗ್ ಜುಗಲ್ ಬಂದಿಯಂತೂ ಸಿನಿಮಾ ಮೇಲಿನ ಕುತೂಹಲ ಹೆಚ್ಚುವಂತೆ ಮಾಡಿದೆ.

ಜೋರಾಗಿ ಸುರಿಯುತ್ತಿರುವ ಮಳೆ, ನಿಧಾನವಾಗಿ ನಾಯಿಗೆ ಬಿಸ್ಕೆಟ್ ತಿನ್ನುಸುತ್ತಿರುವ ವಿಜಿ ದರ್ಶನವಾಗುತ್ತದೆ. ಆ ಲುಕ್ ನೋಡುವುದೇ ಖುಷಿ. ಫೋನ್ ಕರೆ ಸ್ವೀಕರಿಸುವ ವಿಜಿಗೆ ಅತ್ತ ಕಡೆಯಿಂದ ಬಹುಪರಾಕ್ ಶುರುವಾಗುತ್ತದೆ. ನೀನು ಹಚ್ಚಿರುವ ಬೆಂಕಿ ಬರೀ ಊರನ್ನು ಅಲ್ಲ, ದೇಶವನ್ನು ಸುಡುತ್ತಿದೆ ಎಂದು ಅತ್ತ ಕಡೆಯಿಂದ ದನಿ ಕೇಳುತ್ತದೆ. ಇದನ್ನೆಲ್ಲಾ ಮಾಡಿ ಹೇಗೆ ಸೈಲೆಂಟ್ ಇದ್ದೀಯಾ ಎಂದಾಗ ಕೆಲವು ಸ್ವಭಾವಕ್ಕೆ ಧೈರ್ಯದ ಅಭಾವ ಯಾವಾಗ್ಲೂ ಆಗಲ್ಲ ಎಂಬ ಶಿವಣ್ಣ ಅವರ ಖಡಕ್ ಡೈಲಾಗ್ ಮನಸೆಳೆಯುತ್ತದೆ.

ಪವನ್ ಒಡೆಯರ್ ಸತ್ಯ ಘಟನೆಗಳನ್ನು ಆಧರಿಸಿ ಬೇಲ್ ಸಿನಿಮಾವನ್ನು ನಿರ್ದೇಶನ ಮಾಡುತ್ತಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ವೈದ್ಯ ಛಾಯಾಗ್ರಹಣ ಶಶಾಂಕ್ ನಾರಾಯಣ್ ಸಂಕಲನ ಬೇಲ್ ಚಿತ್ರಕ್ಕಿದೆ. ಸ್ಟಾರ್ ಹೀರೋಗಳಿಗೆ ವಿಭಿನ್ನ ಬಗೆಯ ಸಿನಿಮಾ ಮಾಡಿರುವ ಪವನ್ ಒಡೆಯರ್ ಈಗ ಶಿವಣ್ಣ ಅವರಿಗಾಗಿ ಒಳ್ಳೆಯ ಕಥೆ ಹೆಣೆದಿದ್ದಾರೆ. ವರ ಮಹಾಲಕ್ಷ್ಮಿ ಹಬ್ಬದಂದು ಬೇಲ್ ಸಿನಿಮಾ ಅದ್ದೂರಿಯಾಗಿ ತೆರೆಗೆ ಬರಲಿದೆ.

ಕಾನ್ಸ್‌ನಲ್ಲಿ ಪ್ರಿಯಾಂಕಾ

ಫ್ರಾನ್ಸ್‌ನಲ್ಲಿ ಎಪ್ಪತ್ತೊಂಬತ್ತನೇ ಕಾನ್ಸ್ ಫಿಲಂ ಫೆಸ್ಟಿವಲ್ ನಡೆಯುತ್ತಿದೆ. ಈ ಫೆಸ್ಟಿವಲ್‌ನ ರೆಡ್ ಕಾರ್ಪೆಟ್ ಮೇಲೆ ನಟಿ ಪ್ರಿಯಾಂಕಾ ಉಪೇಂದ್ರ ಹೆಜ್ಜೆ ಹಾಕಿದ್ದಾರೆ. ಕರೆನ್ ಕ್ಷಿತಿ ಸುವರ್ಣ ಕೂಡ ಪ್ರಿಯಾಂಕಾ ಅವರಿಗೆ ಸಾಥ್ ನೀಡಿದ್ದಾರೆ. ಕರೆನ್ ಕ್ಷಿತಿ ಸುವರ್ಣ ನಿರ್ದೇಶನದ ಸೆಪ್ಟೆಂಬರ್ 21 ಚಿತ್ರ ಕಾನ್ಸ್ ಫಿಲಂ ಫೆಸ್ಟಿವಲ್‌ನಲ್ಲಿ ಪ್ರದರ್ಶನ ಕಾಣುತ್ತಿದೆ. ಈ ಚಿತ್ರದಲ್ಲಿ ಪ್ರಿಯಾಂಕಾ ಉಪೇಂದ್ರ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದು, ಡಿ ಗ್ಲಾಮರ್ ರೋಲ್‌ನಲ್ಲಿ ಮಿಂಚಿದ್ದಾರೆ.

ಮರೆವಿನ ಕಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಯ ಜೀವನ ಹೇಗಿರುತ್ತದೆ ಎಂಬುದನ್ನು ಈ ಚಿತ್ರದಲ್ಲಿ ಹೇಳಲಾಗುತ್ತಿದೆ. ಅಲ್ಜೈಮರ್ಸ್ ಖಾಯಿಲೆಗೆ ತುತ್ತಾದವರ ಮತ್ತು ಅವರನ್ನು ಹಗಲಿರುಳು ಆರೈಕೆ ಮಾಡುವವರ ಒಳಗಿನ ತಳಮಳವನ್ನು ಈ ಚಿತ್ರದಲ್ಲಿ ಅತ್ಯಂತ ನೈಜವಾಗಿ ಚಿತ್ರಿಸಲಾಗಿದೆ. ಜತೆಗೆ ಕಳೆದು ಹೋಗುತ್ತಿರುವ ನೆನಪುಗಳ ನೋವನ್ನು ಮೌನವಾಗಿ ಅನುಭವಿಸುವಂತೆ ಮಾಡುತ್ತದೆ. ಇದು ಕೇವಲ ಸಿನಿಮಾವಲ್ಲ, ಒಂದು ಭಾವನಾತ್ಮಕ ಪಯಣ ಎಂಬ ಭರವಸೆಯೂ ಟೀಸರ್‌ನಲ್ಲಿ ವ್ಯಕ್ತವಾಗುತ್ತದೆ. ಕ್ಷಿತಿ ಸುವರ್ಣ ಅನಗತ್ಯ ಅಬ್ಬರಕ್ಕೆ ಮೊರೆ ಹೋಗದೆ ಕಥೆಯ ಭಾವಕ್ಕೆ ಹೆಚ್ಚಿನ ಒತ್ತು ನೀಡಿದ್ದಾರೆ.

ಪ್ರವೀಣ್ ಸಿಂಗ್ ಸಿಸೋಡಿಯಾ ಮರೆಗುಳಿತನದಿಂದ ತನ್ನ ಅಸ್ತಿತ್ವವನ್ನೇ ಮರೆಯುತ್ತಿರುವ ವ್ಯಕ್ತಿಯ ಪಾತ್ರದಲ್ಲಿ ನಟಿಸಿದ್ದು, ಅವರಿಗೆ ಆಸರೆಯಾಗಿ ನಿಲ್ಲುವ ಪಾಲಕಿಯಾಗಿ ಪ್ರಿಯಾಂಕಾ ಉಪೇಂದ್ರ ಅಭಿನಯಿಸಿದ್ದಾರೆ. ಹಿರಿಯ ನಟಿ ಜರೀನಾ ವಹಾಬ್, ಅಮಿತ್ ಬೆಹ್ಲ್, ಅಜಿತ್ ಶಿಧಾಯೆ, ಸಚಿನ್ ಪಟೇಕರ್ ಮತ್ತು ರಿಕಿ ರುದ್ರ ಮುಂತಾದ ಕಲಾವಿದರು ತಾರಾಗಣದಲ್ಲಿದ್ದಾರೆ. ವಿಸಿಕಾ ಫಿಲಂಸ್ ಮತ್ತು ಎಫ್.ಎಂ.ಡಿ ಪ್ರೊಡಕ್ಷನ್ಸ್‌ನಲ್ಲಿ ಚಿತ್ರ ನಿರ್ಮಾಣವಾಗಿದೆ.

ಜೂನ್‌ನಲ್ಲಿ ಮೋಡ ಕವಿದ ವಾತಾವರಣ

ಸಿಂಪಲ್ ಸುನಿ ಸಾರಥ್ಯದಲ್ಲಿ ಮೂಡಿಬಂದಿರುವ ಮೋಡ ಕವಿದ ವಾತಾವರಣ ಸಿನಿಮಾ ತೆರೆಗೆ ಸಿದ್ಧವಾಗಿದ್ದು, ಜೂನ್ 26 ರಂದು ತೆರೆಗೆ ಬರಲಿದೆ. ಮೋಡ ಕವಿದ ವಾತಾವರಣ ಚಿತ್ರಕ್ಕೆ ಸೆನ್ಸಾರ್ ಮಂಡಳಿ ಅಸ್ತು ಎಂದಿದ್ದು ಯು/ಎ ಪ್ರಮಾಣ ಪತ್ರ ನೀಡಿದೆ. ಸುನಿ ಅವರ ಗರಡಿಯಲ್ಲಿ ಪಳಗಿರುವ ನಟ ಶೀಲಮ್ ಈ ಸಿನಿಮಾದ ನಾಯಕನಾಗಿ ನಟಿಸಿದ್ದಾರೆ. ಶೀಲಮ್ ಈ ಹಿಂದೆ ಹಲವು ಸಿನಿಮಾಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದರು. ಈಗ ಮೋಡ ಕವಿದ ವಾತಾವರಣದ ಮೂಲಕ ಪೂರ್ಣ ಪ್ರಮಾಣದ ನಾಯಕನಾಗಿ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಶೀಲಮ್‌ಗೆ ಜೋಡಿಯಾಗಿ ಸಾತ್ವಿಕಾ ಹಾಗೂ ಮೋಕ್ಷಾ ಕುಶಾಲ್ ನಟಿಸಿದ್ದಾರೆ. ಒಂದು ಸರಳ ಪ್ರೇಮ ಕಥೆ ಸಿನಿಮಾ ನಿರ್ಮಾಣ ಮಾಡಿದ್ದ ರಾಮ್ ಮೂವೀಸ್ ಅವರೆ ಈ ಸಿನಿಮಾ ನಿರ್ಮಾಣ ಮಾಡಿದೆ. ಮೋಡ ಕವಿದ ವಾತಾವರಣ ಸಿನಿಮಾಗೆ ಸಂತೋಷ್ ರೈ ಪಾತಾಜೆ ಛಾಯಾಗ್ರಹಣವಿದ್ದು, ಜೂಡಾ ಸ್ಯಾಂಡಿ ಸಂಗೀತ ನಿರ್ದೇಶನ ಮಾಡಿದ್ದು, ಆದಿತ್ಯ ಕಶ್ಯಪ್ ಸಂಕಲನದ ಜವಾಬ್ದಾರಿ ನಿರ್ವಹಿಸಿದ್ದಾರೆ. ಈಗಾಗಲೇ ಸಂಜಿತ್ ಹೆಗಡೆ ಹಾಡಿರುವ ನನ್ನೆದೆಯ ಹಾಡೊಂದನು ಸಿನಿಪ್ರಿಯರ ಮನಗೆದ್ದಿದೆ.